ಶಿವಮೊಗ್ಗ
ಮಂಗಳವಾರ, 17 ಮಾರ್ಚ್ 2026
ಸಂಪುಟ 16, ಸಂಚಿಕೆ 324, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
RNI: KAR KAN 2010/64051
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಮುರ್ಮು ಭೇಟಿಗಾಗಿ ಟಿಎಂಸಿ ಮತ್ತೆ ಮನವಿ | ೦೭ | ಬೆಂಕಿ ಅವಘಡ: 10 ರೋಗಿಗಳ ಸಾವು | ೦೭ | ಮಮತಾ ವಿರುದ್ಧ ಸುವೇಂದು ಸ್ಪರ್ಧೆ | ೦೭

ಸಚಿವರಿಂದ ಸಿಗದ ಉತ್ತರ | ಸದನದಿಂದ ಹೊರನಡೆದ ಖಾದರ್

ಸ್ಪೀಕರ್ ಸಭಾತ್ಯಾಗ

• **ವಿಧಾನಸಭೆ:** ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಸರ್ಕಾರದ ಸಚಿವರು ಸೂಕ್ತವಾಗಿ ಉತ್ತರಿಸುತ್ತಿಲ್ಲವೆಂದು ಬೇಸರಗೊಂಡು ವಿಧಾನಸಭಾಧ್ಯಕ್ಷರೇ ಸದನ ಮುಂದೂಡಿ, ಸಭಾತ್ಯಾಗ ಮಾಡಿರುವ ಅಪರೂಪದ ಪ್ರಸಂಗಕ್ಕೆ ರಾಜ್ಯ ವಿಧಾನಸಭೆ ಅಧಿವೇಶನ ಸಾಕ್ಷಿಯಾಯಿತು.

ಅಷ್ಟೇ ಅಲ್ಲ, ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಸ್ಪಷ್ಟನೆ ನೀಡುವವರೆಗೂ ಸದನಕ್ಕೆ ಬರುವುದಿಲ್ಲ ಎಂದು ಎಚ್ಚರಿಕೆಯನ್ನೂ ನೀಡಿದರು. ಸೋಮವಾರ ಪ್ರಶ್ನೋತ್ತರ ಕಲಾಪ ಮುಕ್ತಾಯವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಲಿಖಿತ ಉತ್ತರಗಳ ಮೂಲಕ ನೀಡುವ ಪ್ರಶ್ನೆಗಳ ಪಟ್ಟಿ ಮಂಡನೆಗೆ ಅವಕಾಶ ನೀಡಿದರು. ಈ ವೇಳೆ ಗೃಹ ಸಚಿವ ಡಾ. ಪರಮೇಶ್ವರ ಅವರು ಲಿಖಿತ ಮೂಲಕ ಉತ್ತರಿಸುವ 245 ಪ್ರಶ್ನೆಗಳ ಪೈಕಿ 87 ಪ್ರಶ್ನೆಗಳಿಗೆ ಉತ್ತರ ಮಂಡಿಸಿದರು.

ಈ ವೇಳೆ ಪ್ರತಿಪಕ್ಷ ನಾಯಕ ಆರ್. ಅಶೋಕ ಎದ್ದು ನಿಂತು, ಈ ಸರ್ಕಾರ ಸತ್ತು ಹೋಗಿದೆ. ತಿಥಿ ಮಾಡಬೇಕು. ತಿಥಿ ಮಾಡಿದರೂ ಉಪಯೋಗವಾಗುವುದಿಲ್ಲ. ಈವರೆಗೆ ನಾಲ್ಕು ಬಾರಿ ಎಚ್ಚರಿಸಿದರೂ ಸಭಾಧ್ಯಕ್ಷರ ಮಾತಿಗೂ ಎಚ್ಚೆತ್ತುಕೊಂಡಿಲ್ಲ. ಆದರೂ ಶೇ.50ರಷ್ಟು ಪ್ರಶ್ನೆಗಳಿಗೂ ಉತ್ತರ ನೀಡದೆ ನಿಯಮ ಪಾಲಿಸಿಲ್ಲ. ದೇವರ ಹಾಗೆ ಬಂದು ಕುಳಿತುಕೊಳ್ಳುತ್ತದೆ. 5ನೇ ಬಾರಿಗೆ ಎಚ್ಚರಿಸಿ ಎಂದು ಸಭಾಧ್ಯಕ್ಷರನ್ನು ಮನವಿ ಮಾಡಿದರು.

ನಾಲ್ಕು ಬಾರಿ ಎಚ್ಚರಿಕೆ: ದಿನಕ್ಕೆ ಕೇವಲ 15 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಲು ಸಾಧ್ಯವಿದೆ. ಉಳಿದ ಪ್ರಶ್ನೆಗಳಿಗೆ ನಿಯಮಾವಳಿ ಪ್ರಕಾರ, ಲಿಖಿತ ಉತ್ತರ ನೀಡುವುದು ಸರ್ಕಾರದ ಕರ್ತವ್ಯ. ಗಮನಸೆಳೆಯುವ ಸೂಚನೆಯಲ್ಲಿಯೂ 15ಕ್ಕಿಂತ ಹೆಚ್ಚು ತೆಗೆದುಕೊಳ್ಳದಂತೆ ಮನವಿ ಮಾಡುತ್ತೀರಿ. ಆದರೆ, ಶಾಸಕರ ಪ್ರಶ್ನೆಗಳಿಗೆ ಉತ್ತರಿಸುವ ಸಚಿವರು, ಅಧಿಕಾರಿಗಳು ಅತ್ಯಂತ ನಿರ್ಲಕ್ಷ್ಯ ವಹಿಸಿದ್ದಾರೆ. ಈ ಪೀಠದಿಂದ ನಾಲ್ಕು ಬಾರಿ ಎಚ್ಚರಿಸಲಾಗಿತ್ತು ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಎಷ್ಟು ಹೇಳಿದರೂ ಏನೂ ಸುಧಾರಣೆ ಆಗುವುದಿಲ್ಲ. ಸರಿಯಾದ ಸಮಯಕ್ಕೆ ಸಚಿವರು ಸದನಕ್ಕೆ ಬರುವುದಿಲ್ಲ. ಒಟ್ಟು 245 ಲಿಖಿತ ಪ್ರಶ್ನೆಗಳ ಪೈಕಿ ಸರ್ಕಾರವು ಕೇವಲ 87 ಪ್ರಶ್ನೆಗಳಿಗೆ ಮಾತ್ರ ಉತ್ತರ ನೀಡಿದೆ. ಅಂದರೆ, ಅರ್ಧಕ್ಕಿಂತ ಹೆಚ್ಚು ಪ್ರಶ್ನೆಗಳಿಗೆ ಉತ್ತರವನ್ನೇ ನೀಡಿಲ್ಲ. ಸರ್ಕಾರದ ಈ ವರ್ತನೆ ಸರಿಯಲ್ಲ. ಹೀಗಾದರೆ ಸದನ ನಡೆಸುವುದು ಹೇಗೆ? ಸಂಬಂಧಪಟ್ಟ ಸಚಿವರು ಮತ್ತು ಕಾರ್ಯದರ್ಶಿಗಳು ನನಗೆ ಸ್ಪಷ್ಟೀಕರಣ ನೀಡುವವರೆಗೆ ನಾನು ಸದನವನ್ನು ನಡೆಸುವುದಿಲ್ಲ ಎಂದು ಪೀಠದಿಂದ ಎದ್ದು ಹೊರನಡೆದರು.



ಶಾಸಕರಿಗಾಗಿ ಅಧಿವೇಶನ

ಸಭಾಧ್ಯಕ್ಷರು ಮಾತನಾಡಿ, ಅಧಿವೇಶನ ಎನ್ನುವುದು ಜನರ ಸಮಸ್ಯೆಗಳನ್ನು ಚರ್ಚಿಸಲು ಇರುವ ವೇದಿಕೆ. ಈ ಸದನ ನಡೆಯುವುದು ಸಚಿವರಿಗಾಗಿ ಅಲ್ಲ, ಶಾಸಕರಿಗಾಗಿ ನಡೆಯುತ್ತದೆ. ಮೂರು ತಿಂಗಳಿಗೊಮ್ಮೆ ಶಾಸಕರು ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೊತ್ತು ಇಲ್ಲಿಗೆ ಬರುತ್ತಾರೆ. ಶಾಸಕರು ಇಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು ಸರ್ಕಾರದ ಕರ್ತವ್ಯ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸಭಾಧ್ಯಕ್ಷರ ಜತೆ ಸಂಧಾನ ಸಭೆ

ಸದನ ನಡೆಸುವುದಿಲ್ಲ ಎಂದು ಹೊರನಡೆದ ಸಭಾಧ್ಯಕ್ಷ ಯು.ಟಿ.ಖಾದರ್ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಹಾಗೂ ಪ್ರತಿಪಕ್ಷ ನಾಯಕರು ಸಂಧಾನ ಸಭೆ ನಡೆಸಿದರು. ಸಭಾಧ್ಯಕ್ಷರನ್ನು ಸಮಾಧಾನಪಡಿಸಿದ ನಾಯಕರು, ಸೂಕ್ತ ರೀತಿಯಲ್ಲಿ ಸದನ ನಡೆಸಲು ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಅಲ್ಲದೇ ಶಾಸಕರ ಪ್ರಶ್ನೆಗಳಿಗೆ ಉತ್ತರ ಕೊಡಿಸುವುದಾಗಿ ಹಾಗೂ ಸದನಕ್ಕೆ ಉತ್ತರ ನೀಡದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದರು. ಜೊತೆಗೆ ಭೋಜನ ವಿರಾಮದ ಬಳಿಕ ಸರ್ಕಾರ ಉತ್ತರ ನೀಡುವುದಾಗಿ ಹೇಳಿದರು. ಮುಖ್ಯಮಂತ್ರಿಗಳ ಭರವಸೆ ತರುವಾಯ ಸದನ ನಡೆಸಲು ಸಭಾಧ್ಯಕ್ಷರು ಒಪ್ಪಿಕೊಂಡರು. ಆ ಬಳಿಕ ಕಲಾಪವನ್ನು ಭೋಜನ ವಿರಾಮಕ್ಕೆ ಮುಂದೂಡಲಾಯಿತು.

3 ಅಧಿಕಾರಿಗಳ ಅಮಾನತಿಗೆ ಕ್ರಮ: ಪರಮೇಶ್ವರ್



ಸಭಾಧ್ಯಕ್ಷರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ, ನೋಟಿಸ್ ನೀಡುವಂತೆ ಮುಖ್ಯಕಾರ್ಯದರ್ಶಿಗೆ ಹೇಳಿದ್ದು, ತುಂಬಾ ಪ್ರಶ್ನೆಗಳು ಅವರಲ್ಲೇ ಉಳಿದುಕೊಂಡಿದ್ದರೆ ಅವರನ್ನು ಅಮಾನತು ಮಾಡಿ ಎಂದು ಹೇಳಿದ್ದಾರೆ ಎಂದು ಸಚಿವ ಡಾ. ಜಿ.ಪರಮೇಶ್ವರ್ ತಿಳಿಸಿದರು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ, ಕಂದಾಯ ಇಲಾಖೆಯ 91 ಪ್ರಶ್ನೆಗಳಲ್ಲಿ 29 ಉತ್ತರಗಳು ಮಾತ್ರ ಬಂದಿವೆ. ಮುಂದೆ ಇಂತಹ ಬೆಳವಣಿಗೆ ನಡೆಯದಂತೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಿದೆ ಎಂದು ಸರ್ಕಾರದ ಪರವಾಗಿ ಭರವಸೆ ನೀಡಲಾಗುವುದು ಎಂದರು.

ನಾವಿಕರೆಲ್ಲ ಸುರಕ್ಷಿತ: ರಾಜೇಶ್‌ಕುಮಾರ್

ದೇಶಕ್ಕಿಂದು ಎಲ್ಪಿಜಿ, ತೈಲ ಹೊತ್ತ 2 ನೌಕೆ



• **ಹೊಸದಿಲ್ಲಿ:** ಯುಎಇಯ ಫುಜೈರಾ ಟರ್ಮಿನಲ್ ಮೇಲೆ ಇತ್ತೀಚೆಗೆ ನಡೆದ ಮಿಲಿಟರಿ ದಾಳಿಯ ನಡುವೆಯೂ ಅಲ್ಲಿಂದ ಸುರಕ್ಷಿತವಾಗಿ ಹೊರಬಂದಿರುವ ಭಾರತದ ಜಗ್ ಲಾಡ್ಕಿ ಕಚ್ಚಾ ತೈಲ ಟ್ಯಾಂಕರ್ ಮಂಗಳವಾರ ಭಾರತದ ಮುಂದ್ರಾ ಬಂದರು ತಲುಪುವ ನಿರೀಕ್ಷೆಯಿದೆ. ಇದೇ ವೇಳೆ ಇಂಧನ ಹೊತ್ತ ಶಿವಾಲಿಕ್ ಈಗಾಗಲೇ ಗುಜರಾತ್ ತಲುಪಿದ್ದು, ನಂದಾದೇವಿ ಮಂಗಳವಾರ ಕಾಂಡ್ಲಾ ಬಂದರನ್ನು ತಲುಪುವ ನಿರೀಕ್ಷೆಯಿದೆ

ಜಗ್ ಲಾಡ್ಕಿ ನೌಕೆ ಸುಮಾರು 80,800 ಟನ್ ಮುರ್ಬನ್ ಕಚ್ಚಾ ತೈಲವನ್ನು ಹೊತ್ತು ತರುತ್ತಿದೆ. ಹಡಗಿನಲ್ಲಿರುವ ಎಲ್ಲಾ 22 ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಎಂದು ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಸೋಮವಾರ ಖಚಿತಪಡಿಸಿದ್ದಾರೆ. ಮಾ.14ರಂದು ಫುಜೈರಾ ತೈಲ ಟರ್ಮಿನಲ್ ಮೇಲೆ ದಾಳಿ ನಡೆದ ನಂತರ, ಈ ನೌಕೆ ಭಾನುವಾರ ಬೆಳಗ್ಗೆ ಅಲ್ಲಿಂದ ಪ್ರಯಾಣ ಬೆಳೆಸಿತ್ತು.

ಸಿಕ್ಕಿಬಿದ್ದ ಹಡಗುಗಳು: ಸಂಘರ್ಷಪೀಡಿತ ಪ್ರದೇಶದಿಂದ ಸುರಕ್ಷಿತವಾಗಿ ಹೊರಬಂದಿರುವ 28 ಭಾರತೀಯ ಹಡಗುಗಳಲ್ಲಿ ಜಗ್ ಲಾಡ್ಕಿ ನಾಲ್ಕನೆಯದ್ದು. ಇದರೊಂದಿಗೆ, ಒಟ್ಟು 92,712 ಟನ್ ಇಂಧನವನ್ನು ಹೊತ್ತಿರುವ ಶಿವಾಲಿಕ್ ಮತ್ತು ನಂದಾ ದೇವಿ ಎಂಬ ಎರಡು ಎಲ್‌ಪಿಜಿ ವಾಹಕ ನೌಕೆಗಳು ಹಾರ್ಮುಜ್ ಜಲಸಂಧಿ ದಾಟಿವೆ. ➡ಪುಟ ೪

ಹಾರ್ಮುಜ್ ಬಗ್ಗೆ ಅಮೆರಿಕ ಜತೆ ಚರ್ಚಿಸಿಲ್ಲ: ಭಾರತ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಹಡಗುಗಳ ಸುರಕ್ಷಿತ ಸಂಚಾರವನ್ನು ಖಚಿತಪಡಿಸಿಕೊಳ್ಳಲು ಭಾರತ ಅಮೆರಿಕದೊಂದಿಗೆ ಯಾವುದೇ ದ್ವಿಪಕ್ಷೀಯ ಮಾತುಕತೆಯಲ್ಲಿ ತೊಡಗಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸ್ಪಷ್ಟಪಡಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಂತಾರಾಷ್ಟ್ರೀಯ ನೌಕಾ ಹಸ್ತಕ್ಷೇಪಕ್ಕೆ ಕರೆನೀಡಿದ ಬೆನ್ನಲ್ಲೇ, ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಈ ಹೇಳಿಕೆ ನೀಡಿದ್ದಾರೆ.

ಈ ವಿಷಯದ ಕುರಿತು ವಿವಿಧ ಪಾಲುದಾರರೊಂದಿಗೆ ಚರ್ಚೆಗಳು ನಡೆಯುತ್ತಿದ್ದರೂ, ವಾಷಿಂಗ್ಟನ್ ಜತೆ ಯಾವುದೇ ನಿರ್ದಿಷ್ಟ ದ್ವಿಪಕ್ಷೀಯ ಮಾತುಕತೆ ನಡೆದಿಲ್ಲ ಎಂದು ಅವರು ಹೇಳಿದ್ದಾರೆ. ಭಾರತದ ಧ್ವಜ ಹೊಂದಿರುವ ಹಡಗುಗಳ ಸುರಕ್ಷಿತ ಸಂಚಾರಕ್ಕಾಗಿ ಇರಾನ್‌ನೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳಲಾಗಿದೆ. ➡ಪುಟ ೪

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಶತಭಿಷೆ

ದಿನದ ಮಾತು

ದಿನದ ಒಂದು ಗಂಟೆ ಪುಸ್ತಕ ಓದುವುದಕ್ಕೆ ಸಮರ್ಪಿಸಿ. ನೀವು ಕೆಲವೇ ವರ್ಷಗಳಲ್ಲಿ ಜ್ಞಾನದ ಕೇಂದ್ರವಾಗಿ ಬದಲಾಗುವಿರಿ.

▲ ಎ.ಪಿ.ಜೆ. ಅಬ್ದುಲ್ ಕಲಾಂ

ವಜ್ರದ ವ್ಯಾಪಾರಿಯ ಅಪ್ರತಿಮ ಗೋಸೇವೆ

ಧರಣಿ ಮಂಡಲ


• ಕೆ.ಎನ್. ಶೈಲೇಶ್ ಹೊಳ್ಳ

• ಪುಟ ೬

ಕಿರುಸುದ್ದಿ

ಎಲ್‌ಪಿಜಿ ಗ್ರಾಹಕರಿಗೆ ಇ- ಕೆವೈಸಿ ಕಡ್ಡಾಯ

• **ಹೊಸದಿಲ್ಲಿ:** ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರಿಗೆ



ಇ-ಕೆವೈಸಿ ಕಡ್ಡಾಯಗೊಳಿಸಿದೆ. ಎಂಒಪಿಎನ್‌ಜಿ ತಮ್ಮ ಎಕ್ಸ್ ಖಾತೆಯಲ್ಲಿ, ಎಲ್ಲಾ ದೇಶೀಯ ಎಲ್‌ಪಿಜಿ ಗ್ರಾಹಕರು ಬಯೋಮೆಟ್ರಿಕ್ ಆಧಾರ ದೃಢೀಕರಣವನ್ನು (ಇ-ಕೆವೈಸಿ) ಪೂರ್ಣಗೊಳಿಸಬೇಕಾಗುತ್ತದೆ ಎಂದು ಹೇಳಿದೆ. ➡ಪುಟ ೪

ರಾಷ್ಟ್ರ ಸೇವಿಕಾ ಸಮಿತಿ ಹಿರಿಯ ಪ್ರಚಾರಿಕಾ ರೇಖಾ ರಾಜೆ ನಿಧನ

• **ಹೊಸದಿಲ್ಲಿ:** ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಪ್ರಚಾರಿಕಾ ಮತ್ತು ಮಾಜಿ ಅಖಿಲ ಭಾರತೀಯ



ಸಹ-ಸರಕಾರ್ಯವಾಹಿಕಾ ರೇಖಾ ರಾಜೆ (ರೇಖಾತಾಯಿ) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ದಿಲ್ಲಿಯ ಏಮ್ಸ್‌ನಲ್ಲಿ ನಿಧನರಾದರು. ರೇಖಾ ರಾಜೇ ಅವರು ಕಾನ್ಪುರದಲ್ಲಿ ಜನಿಸಿದರು. ಎಳೆಯ ವಯಸ್ಸಿನಿಂದಲೇ ಸಾಮಾಜಿಕ ಮತ್ತು ರಾಷ್ಟ್ರೀಯತಾವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

• ಪುಟ ೪

ಮೋದಿ ಇಸ್ರೇಲ್ ಭೇಟಿಗೂ ಸಮರಕ್ಕೂ ಸಂಬಂಧವಿಲ್ಲ

• ಪುಟ ೭

ಜೆಫ್ರಿ ಎಪ್ಸ್ಟೀನ್: ಪುರಿ ಪುತ್ರಿಯಿಂದ ಮಾನನಷ್ಟ ಕೇಸ್

• ಪುಟ ೭

4,300ಕ್ಕೂ ಹೆಚ್ಚು ವಿಮಾನಗಳು ರದ್ದು

• ಪುಟ ೭

ದುಬೈ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ

• ಪುಟ ೭

ರಾಜ್ಯದಲ್ಲಿ ಆಲಿಕಲ್ಲು ಮಳೆ, ಸಿಡಿಲಿಗೆ ಬಾಲಕ ಬಲಿ

• ಪುಟ ೪

ಡಿಕೆಶಿ ನೇತೃತ್ವದಲ್ಲಿ ರಾಜ್ಯ ನೀರಾವರಿ ಯೋಜನೆ ಬಗ್ಗೆ ಚರ್ಚೆ

ಸಚಿವರು, ಸಂಸದರ ಸಭೆ ಇಂದು

• **ಬೆಂಗಳೂರು:** ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುವ ರಾಜ್ಯ ನೀರಾವರಿ ಯೋಜನೆಗಳ ಬಗ್ಗೆ ಮಂಗಳವಾರ (ಮಾ.17) ಮಹತ್ವದ ಸಭೆ ನಡೆಯಲಿದೆ. ಈ ಸಭೆಯಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಯಲಿದೆ.



ರಾಜ್ಯದ ನೀರಾವರಿ ವಿಚಾರವಾಗಿ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರಕರಣಗಳ ಕುರಿತು ಚರ್ಚೆ ಹಾಗೂ ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುವ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹಿರಿಯ ವಕೀಲರು ಹಾಗೂ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವರು ಹಾಗೂ ಸರ್ವ ಪಕ್ಷಗಳ ಸಂಸದರ ಜತೆಗೆ ಸಭೆ ನಡೆಸಲಿದ್ದಾರೆ. ಹೀಗಾಗಿ ಈ ಸಭೆ ತೀರಾ ಮಹತ್ವ ಪಡೆದಿದೆ. ➡ಪುಟ ೪

ಆಂಧ್ರ, ಮಹಾರಾಷ್ಟ್ರದ ವಿರುದ್ಧ ಧ್ವನಿ ಎತ್ತಲು ಮನವಿ

ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಲ್ಲಿ ಒಂದಾದ ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು ಎಂದು ನೆರೆಯ ಆಂಧ್ರ ಪ್ರದೇಶದವರು ಕೇಂದ್ರ ಸರ್ಕಾರಕ್ಕೆ ಆಕ್ಷೇಪಣಾ ಪತ್ರ ಬರೆದಿದೆ. ಅಲ್ಲದೇ, ಮಹಾರಾಷ್ಟ್ರ ಸರ್ಕಾರ ಕೂಡ ಕೇಂದ್ರಕ್ಕೆ ಪತ್ರ ಬರೆದು ಈ ಯೋಜನೆ ಜಾರಿಯಾಗಬಾರದು ಎಂದು ಕೇಂದ್ರಕ್ಕೆ ಮನವಿ ಮಾಡಿದೆ. ಈ ವಿಚಾರವಾಗಿ ಕೇಂದ್ರ ಸರ್ಕಾರ ನಮಗೆ ಪತ್ರ ಬರೆದು ಸ್ಪಷ್ಟನೆ ಕೇಳಿದೆ. ➡ಪುಟ ೪

ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆಗೆ ದೇವೇಗೌಡ ಬೇಸರ

ಸಂಸತ್ತಲ್ಲಿ ಕಾಂಗ್ರೆಸ್ ಸದಸ್ಯರ ವರ್ತನೆ ಸೋನಿಯಾ ಗಾಂಧಿಗೆ ಎಚ್‌ಡಿಡಿ ಪತ್ರ

• **ಹೊಸದಿಲ್ಲಿ:** ಸಂಸತ್ ಅಧಿವೇಶನದಲ್ಲಿ ವಿಪಕ್ಷಗಳಿಂದ, ಅದರಲ್ಲಿಯೂ ವಿಶೇಷವಾಗಿ ಕಾಂಗ್ರೆಸ್ ಸದಸ್ಯರು ತೋರಿಸುತ್ತಿರುವ ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆ ಬಗ್ಗೆ ರಾಜ್ಯಸಭಾ ಸದಸ್ಯ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ತೀವ್ರ ಆತಂಕ, ಕಳವಳ ವ್ಯಕ್ತಪಡಿಸಿದ್ದು, ಈ ಬಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಬಜೆಟ್ ಅಧಿವೇಶನದ ವೇಳೆ ಪ್ರತಿಪಕ್ಷಗಳ ಸದಸ್ಯರು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದು, ಪ್ರಮುಖವಾಗಿ ಕಾಂಗ್ರೆಸ್ ಸಂಸದರು ಸಂಸತ್ತಿನ ಒಳಗೆ ಹಾಗೂ ಸಂಸತ್ತಿನ ಆವರಣದಲ್ಲಿ ಘೋಷಣೆ ಕೂಗುವುದು, ಫಲಕ ಪ್ರದರ್ಶನ ಮಾಡುವುದು, ನಿರ್ದಿಷ್ಟವಾಗಿ ಹೆಸರು ಕೂಗುವುದು, ಧರಣಿ ಮತ್ತು ಕಲಾಪ ಸ್ಥಗಿತ ಆಗುವಂತೆ ಮಾಡುತ್ತಿದ್ದಾರೆ. ➡ಪುಟ ೪



ಪ್ರತಿಪಕ್ಷದ ಹೊಣೆಗಾರಿಕೆ ಹಾಗೂ ಜವಾಬ್ದಾರಿಗಳ ಬಗ್ಗೆ ತಮಗೆ ಅರಿವಿದೆ. ವಿರೋಧ ಪಕ್ಷಗಳು ತಮ್ಮ ವಿರೋಧವನ್ನು ತೋರಿಸಬಹುದು. ಆದರೆ ಅದು ನಿಯಮಗಳು, ಸಂಪ್ರದಾಯಗಳು ಮತ್ತು ಘನತೆಗೆ ಧಕ್ಕೆ ತರುವಂತಿರಬಾರದು.

■ ಎಚ್.ಡಿ.ದೇವೇಗೌಡ, ರಾಜ್ಯಸಭಾ ಸದಸ್ಯ

ನಿತಿನ್, ನಿತೀಶ್ ಸೇರಿ ಎಂಟು ಎನ್‌ಡಿಎ ಅಭ್ಯರ್ಥಿಗಳಿಗೆ ಜಯ

• **ಹೊಸದಿಲ್ಲಿ:** ಬಿಹಾರ ಮತ್ತು ಒಡಿಶಾದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಗೆ ಮಹತ್ವದ ಜಯ ದೊರೆತಿದೆ. ಬಿಜೆಪಿ ಬೆಂಬಲಿತ ಬಿಹಾರದಲ್ಲಿ ಐವರು ಮತ್ತು ಒಡಿಶಾದಲ್ಲಿ ಮೂವರು ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಹಾರದಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೇರಿ ಐವರು ಎನ್‌ಡಿಎ ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಚುನಾವಣಾಧಿಕಾರಿ ಖ್ಯಾತಿ ಸಿಂಗ್ ಪ್ರಕಟಿಸಿದಂತೆ, ಕೇಂದ್ರ ಸಚಿವ ರಾಮನಾಥ್ ಠಾಕೂರ್(ಜೆಡಿಯು), ಬಿಜೆಪಿ ನಾಯಕ ಶಿವೇಶ್ ಕುಮಾರ್ ಮತ್ತು ರಾಷ್ಟ್ರೀಯ ಲೋಕ ಮೋರ್ಚಾ ಅಧ್ಯಕ್ಷ ಉಪೇಂದ್ರ ಕುಶ್ವಾಹಾ ಕೂಡ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ➡ಪುಟ ೪

ಬಿಹಾರ, ಒಡಿಶಾ ರಾಜ್ಯಸಭೆ ಚುನಾವಣೆ ಫಲಿತಾಂಶ

ಸರ್ಕಾರದ ಕ್ರಮದ ಬಗ್ಗೆ ಸಚಿವ ಮುನಿಯಪ್ಪ ಮಾಹಿತಿ

ಎಲ್ಪಿಜಿ ವಿತರಣೆಗೆ ಹೊಸ ನೀತಿ


• **ಬೆಂಗಳೂರು:** ಕೊಲ್ಲಿ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಉಂಟಾಗಿರುವ ಎಲ್‌ಪಿಜಿ ಕೊರತೆ ನೀಗಿಸಲು ಹಾಗೂ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ವಿತರಣೆಯನ್ನು ಸುಗಮಗೊಳಿಸಲು ರಾಜ್ಯ ಸರಕಾರ ಹೊಸ ನೀತಿ ಪ್ರಕಟಿಸಿದೆ.

ಐದು ಹಂತದಲ್ಲಿ ವರ್ಗೀಕರಣ: ಈ ನೀತಿ ಅನ್ವಯ, ಎಲ್‌ಪಿಜಿ ಪೂರೈಕೆ ಪ್ರಮಾಣ ಮೊದಲಿನ ಹಂತಕ್ಕೆ ತಲುಪುವವರೆಗೂ ಆದ್ಯತೆ ಮೇರೆಗೆ, ಅಗತ್ಯ ಸೇವೆಗಳಿಗಷ್ಟೇ ಸಿಲಿಂಡರ್ ಪೂರೈಸಲು ಕ್ರಮ ಕೈಗೊಂಡಿದೆ. ಇದೇ ಮಾದರಿಯಲ್ಲಿ ಎಲ್‌ಪಿಜಿ ಪೂರೈಸುವ ಎಲ್ಲ ಸಂಸ್ಥೆಗಳಿಗೂ ರಾಜ್ಯ ಸರಕಾರ ಸೂಚನೆ ನೀಡಿದ್ದು, ಪೂರೈಕೆಯನ್ನು ಐದು ಹಂತಗಳಲ್ಲಿ ವರ್ಗೀಕರಣ ಮಾಡಲಾಗಿದೆ.

ಒಟ್ಟು ಪ್ರತಿನಿತ್ಯ 7 ಸಾವಿರ ವಾಣಿಜ್ಯ ಸಿಲಿಂಡರ್‌ಗಳ ಪೈಕಿ ಶಾಲಾ-ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಆಸ್ಪತ್ರೆಗಳು ಮತ್ತು ಇತರ ಅತ್ಯಗತ್ಯ ಸಂಸ್ಥೆಗಳಿಗೆ ಹೆಚ್ಚಿನ ಆದ್ಯತೆ ಮೇರೆಗೆ ಪ್ರತಿದಿನ 4,200 ಸಿಲಿಂಡಗರ್‌ಗಳನ್ನು ಪೂರೈಸಬೇಕಿದೆ. ಸರಕಾರಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳು, ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿರುವ ಕ್ಯಾಂಟೀನ್‌ಗಳು, ಕೆಎಂಎಫ್ (ನಂದಿನಿ) ಮತ್ತು ಇಂದಿರಾ ಕ್ಯಾಂಟೀನ್‌ಗಳಿಗೆ ಪ್ರತಿದಿನ 1,200 ಸಿಲಿಂಡರ್‌ಗಳು ಪೂರೈಕೆಯಾಗಲಿವೆ. ➡ಪುಟ ೪

ಅಗತ್ಯಕ್ಕಿಂತ ಹೆಚ್ಚು ಬುಕಿಂಗ್: ಮುನಿಯಪ್ಪ

ಎಲ್ಪಿಜಿ ಸಿಲಿಂಡರ್ ಸರಬರಾಜಿನ ಸ್ಥಿತಿಗತಿ ಕುರಿತು ಸೋಮವಾರ ನಡೆದ ಸಭೆ ಬಳಿಕ ಸಚಿವ



ಕೆ.ಎಚ್.ಮುನಿಯಪ್ಪ ಮಾಧ್ಯಮಗಳೊಂದಿಗೆ ಮಾತನಾಡಿದರು. ರಾಜ್ಯದಲ್ಲಿ ಎಲ್ಪಿಜಿ ಸಿಲಿಂಡರ್ ಕೊರತೆ ಇಲ್ಲದೆ ಸರಬರಾಜು ನಿಯಮಿತವಾಗಿ ನಡೆಯುತ್ತಿದೆ. ಕೆಲವೆಡೆ ಜನರು ಆತಂಕದಿಂದ ಅಗತ್ಯಕ್ಕಿಂತ ಹೆಚ್ಚು ಬುಕ್ಕಿಂಗ್ ಮಾಡುತ್ತಿರುವುದರಿಂದ ಗೊಂದಲ ಉಂಟಾಗಿದೆ ಎಂದರು. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ 25ರಿಂದ 30 ದಿನಗಳಿಗೆ ಒಂದು ಸಿಲಿಂಡರ್ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 45 ದಿನಗಳಿಗೆ ಒಂದು ಸಿಲಿಂಡರ್ ಬಳಕೆಯಾಗುತ್ತದೆ. ಇದಕ್ಕೆ ಅನುಗುಣವಾಗಿ ಸರಬರಾಜು ನಡೆಯುತ್ತಿದೆ.

ಪಶ್ಚಿಮ ಬಂಗಾಳ ಏಳು ಹಿರಿಯ ಅಧಿಕಾರಿಗಳ ವರ್ಗ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಸರ್ಕಾರದ ಅಂದಾದುಂದಿ ಆಡಳಿತ ಮುಂದುವರಿದಿರುವಂತೆಯೇ, ಚುನಾವಣಾ ಆಯೋಗ ಆ ರಾಜ್ಯದಲ್ಲಿ ಹಿಂಸಾಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಾತ್ರಿಪಡಿಸುವುದಕ್ಕಾಗಿ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಮತ್ತು ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಅವರ ಸ್ಥಾನದಿಂದ ಪದಚ್ಯುತಗೊಳಿಸಿ ಅವರ ಸ್ಥಾನಗಳಿಗೆ ದಕ್ಷ, ಅನುಭವೀ ಅಧಿಕಾರಿಗಳನ್ನು ನಿಯೋಜಿಸಿದೆ.

• ಪುಟ ೭

ಕಿರುಸುದ್ದಿ

ವಿಶ್ವ ಗ್ರಾಹಕರ ದಿನಾಚರಣೆ

ಚಿಕ್ಕಮಗಳೂರು: ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಮಾರ್ಚ್ 17 ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ತಾಲ್ಲೂಕು ಪಂಚಾಯಿತಿ ಕಚೇರಿ ಆವರಣದ ಸಾಮರ್ಥ್ಯ ಸೌಧದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ-2026 ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಗ್ರಾಹಕರ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಸುರಕ್ಷಿತ ಉತ್ಪನ್ನಗಳು-ಆತ್ಮವಿಶ್ವಾಸದ ಗ್ರಾಹಕರು ಘೋಷವಾಕ್ಯದಡಿ ನಡೆಯುವ ಈ ಕಾರ್ಯಕ್ರಮವನ್ನು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎನ್.ಆರ್.ಚೆನ್ನಕೇಶವ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ ಅವರು ವಹಿಸುವರು. ಹಿರಿಯ ಸಿವಿಲ್ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ವಿ.ಹನುಮಂತಪ್ಪ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಈ.ಪ್ರೇಮ ಹಾಗೂ ಡಾ.ಮಂಜುನಾಥ್ ಎಂ. ಬಮ್ಮನಕಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಜಿಲ್ಲಾ ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

ಚಿಕ್ಕಮಗಳೂರು: ಮಾರ್ಚ್ 20 ರಂದು ಬೆಳಗ್ಗೆ 11 ಗಂಟೆಗೆ ನಿಗದಿಯಾಗಿದ್ದ 2025-26ನೇ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳನ್ನೊಳಗೊಂಡಂತೆ) ಜಿಲ್ಲಾ ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ (ಕೆ.ಡಿ.ಪಿ.) ಸಭೆಯನ್ನು ಮುಂದೂಡಲಾಗಿದ್ದು, ಏ.1 ಕ್ಕೆ ಮುಂದೂಡಲಾಗಿದೆ. ಅಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಾನ್ಯ ಇಂಧನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಜೆ.ಜಾರ್ಜ್ ಅವರ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಲಿದೆ ಎಂದು ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೆಚ್.ಎಸ್.ಕೀರ್ತನಾ ತಿಳಿಸಿದ್ದಾರೆ.

ಉದ್ಯೋಗ ಮೇಳ

ಚಿಕ್ಕಮಗಳೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಐಡಿಎಸ್‌ಜಿ ಕಾಲೇಜು ಸಹಭಾಗಿತ್ವದಲ್ಲಿ ಮಾರ್ಚ್ 23 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ನಗರದ ಐಡಿಎಸ್‌ಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಏರ್ಪಡಿಸಲಾಗಿದೆ.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಯಾವುದೇ ಪದವೀಧರರು ಭಾಗವಹಿಸಬಹುದು. ಉಚಿತ ಪ್ರವೇಶವಿದ್ದು, 18 ವರ್ಷ ಮೇಲ್ಪಟ್ಟ ಅಭ್ಯರ್ಥಿಗಳು ರೆಸ್ಯೂಮ್‌ಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದು. ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ಬಯಸುವವರು ಉದ್ಯೋಗಕ್ಕೆ ಸಂಬಂಧಿಸಿದಂತೆ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಿದೆ. ಜಿಲ್ಲೆಯ ಯುವನಿಧಿ ಫಲಾನುಭವಿಗಳು ಉದ್ಯೋಗ ಮೇಳದಲ್ಲಿ ಕಡ್ಡಾಯವಾಗಿ ಹಾಜರಾಗಿ ಮಾರ್ಚ್-2026ರ ಮಾಹೆಯ ಸ್ವಯಂ ಘೋಷಣೆಯನ್ನು ಸ್ಥಳದಲ್ಲಿ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ (ದೂರವಾಣಿ ಸಂಖ್ಯೆ: 08262-295538, 9945198500, 9964851195) ವನ್ನು ಸಂಪರ್ಕಿಸಬಹುದು.

ಯುಗಾದಿ ಕಾರ್ಯಕ್ರಮ

ಶೃಂಗೇರಿ: ನಾದಸಿರಿ ಸುಗಮ ಸಂಗೀತ ವೃಂದದಿಂದ ಪರಾಭವ ಸಂವತ್ಸರದ ನಾದ ವಸಂತ ಕಾರ್ಯಕ್ರಮವು ಮೆಣಸೆ ಗ್ರಾಮ ಪಂಚಾಯಿತಿ ಮಸಿಗೆ ಸರಕಾರಿ ಶಾಲೆಯಲ್ಲಿ ಮಾ.19 ರಂದು ಸಂಜೆ 5.30ಕ್ಕೆ ಏರ್ಪಡಿಸಲಾಗಿದೆ. ಹಿರಿಯ ಕೃಷಿಕ ಅಜ್ಜಲಸು ನಾಗಭೂಷಣಯ್ಯ ಅಧ್ಯಕ್ಷತೆಯಲ್ಲಿ ವಾಗ್ಮಿ ತೇಜಶಂಕರ ಸೋಮಾಯಾಜಿ ಉಪನ್ಯಾಸ ನೀಡಲಿದ್ದಾರೆ. ಯಕ್ಷಗಾನ ಕಲಾವಿದರಾದ ನಾಗೇಶ್ ಕಾಮತ್, ತಬಲ ವಾದಕ ಸುಂದರಚಾರ್ಯರನ್ನು ಗೌರವಿಸಲಾಗುವುದು. ವೈಕುಂಠಪುರ ಮುರುಳಿಧರ ಭಟ್ ಪಂಚಾಂಗ ಶ್ರವಣ ಮಾಡಲಿದ್ದಾರೆ. ನಂತರ ಗಾನ ವಸಂತದಲ್ಲಿ ಬೆಳಂದೂರು ಗಣೇಶ ಪ್ರಸಾದ್, ಕೊಪ್ಪ ರಂಜಿತಾ, ಎಸ್.ಗೋಪಾಲಕೃಷ್ಣರಿಂದ ಸುಗಮ ಸಂಗೀತ ನಡೆಯಲಿದೆ. ಕುಂಚ ವಸಂತದಲ್ಲಿ ರಾಜಗೋಪಾಲ್, ಜಯ ಶ್ರೀಗಣೇಶ್ ಪಾಲ್ಗೊಳ್ಳಲಿದ್ದಾರೆ.

ಬಾಳೆಹೊನ್ನೂರು: ಬಿರುಗಾಳಿ ಗುಡುಗು ಸಹಿತ ಭಾರೀ ಮಳೆ

ಬಾಳೆಹೊನ್ನೂರು: ಸುತ್ತಮುತ್ತ ಮಾ.15ರ ಸಂಜೆ ಬಿರುಗಾಳಿ ಗುಡುಗು ಸಹಿತ ಭಾರೀ ಮಳೆಯಾಗಿದೆ. ಕಣತಿ, ಬಸರವಳ್ಳಿ, ಜೇನುಗದ್ದೆ, ಸಂಗಮೇಶ್ವರಪೇಟೆ, ಖಾಂಡ್ಯ, ಕಡಬಗೆರೆ, ಶಾಂತಿಪುರ, ಬಂಡಿಹೊಳೆ, ಗಡಿಗೇಶ್ವರ, ಆಡುವಳ್ಳಿ, ದಾವಣ, ಆಡುವಳ್ಳಿ, ದೂಬ್ಳ, ಕಟ್ಟಿನಮನೆ, ಹಿರೇಗದ್ದೆ, ಸೇರಿದಂತೆ ಸುತ್ತಮುತ್ತ ಭಾರಿ ಮಳೆಯಾಗಿದೆ. ಆದರೆ ಬಾಳೆಹೊನ್ನೂರು ಪಟ್ಟಣದಲ್ಲಿ ಸಿಡಿಲು, ಗುಡುಗು ಆರ್ಭಟಿಸಿದ್ದು, ಬಿರುಗಾಳಿಯಿಂದ ಮಳೆ ಹಾರಿ ಹೋಯಿತು.



ಪತ್ರಕರ್ತರ ಸಂಘದಿಂದ ಕ್ರಿಕೆಟ್ ಪಂದ್ಯಾವಳಿ

ಮೂಡಿಗೆರೆ: ಕ್ರೀಡೆಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸುವ ಜತೆಗೆ ಪರಸ್ಪರ ಸೌಹಾರ್ದ ಬೆಸೆಯಲು ಸಹಕಾರಿಯಾಗುತ್ತದೆ ಎಂದು ವಿಧಾನ ಪರಿಷತ್ ಉಪಸಭಾಪತಿ ಎಂ.ಕೆ. ಪ್ರಾಣೇಶ್ ಹೇಳಿದರು.

ಅವರು ಭಾನುವಾರ ಪಟ್ಟಣದ ಹೊಯ್ಸಳ ಕ್ರೀಡಾಂಗಣದಲ್ಲಿ ಪತ್ರಕರ್ತರ ಸಂಘದ ವತಿಯಿಂದ ವಿವಿಧ ರಾಜಕೀಯ ಪಕ್ಷ, ಸರಕಾರಿ ನೌಕರರು ಹಾಗೂ ಪತ್ರಕರ್ತರಿಗೆ ಏರ್ಪಡಿಸಿದ್ದ ಸೌಹಾರ್ದ ಕ್ರಿಕೇಟ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದರು.

ಪತ್ರಕರ್ತರು, ರಾಜಕಾರಣಿಗಳು, ಸರಕಾರಿ ನೌಕರರ ನಡುವೆ ನಾನಾ ಕಾರಣದಿಂದ ವೈಮನಸ್ಸು ಉಂಟಾಗುತ್ತಿರುತ್ತದೆ. ಅದನ್ನೆಲ್ಲಾ ಮರೆತು ಎಲ್ಲರೂ ಸೇರಿ ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ಸಾಮರಸ್ಯ ಮೂಡಿಸುವ ವಾತಾವರಣ ನಿರ್ಮಾಣವಾಗುತ್ತದೆ ಎಂದು ಹೇಳಿದರು.

ಪಂದ್ಯಾವಳಿಯಲ್ಲಿ ಬಿಜೆಪಿ ಪ್ರಥಮ, ಜೆಡಿಎಸ್ ದ್ವಿತೀಯ, ಅರಣ್ಯ ಇಲಾಖೆ ತಂಡ ತೃತೀಯ ಸ್ಥಾನ ಪಡೆದಿದ್ದು, ಉತ್ತಮ ಎಸೆತಗಾರನಾಗಿ ಅರಣ್ಯ ಇಲಾಖೆ ತಂಡದ ಪ್ರವೀಣ್, ಉತ್ತಮ ಹೊಡೆತಗಾರ ಬಿಜೆಪಿ ತಂಡದ ಭರತ್, ಪಂದ್ಯಶ್ರೇಷ್ಠವನ್ನು ಬಿಜೆಪಿ ತಂಡದ ದರ್ಶನ್ ಪಡೆದರು.

ಅಧ್ಯಕ್ಷತೆಯನ್ನು ಪತ್ರಕರ್ತರ ಸಂಘದ ಅಧ್ಯಕ್ಷ ಪ್ರಸನ್ನ ಕುಮಾರ್ ವಹಿಸಿದ್ದರು. ಟಿಎಪಿಸಿಎಂಎಸ್ ನಿರ್ದೇಶಕರಾದ ಮಂಜುನಾಥ್, ಪ್ರಸನ್ನಕುಮಾರ್, ಅರಣ್ಯ ಇಲಾಖೆ ತಂಡದ ನಾಯಕ ರಂಜಿತ್, ಬಿಜೆಪಿ ಮುಖಂಡರಾದ ಗಜೇಂದ್ರ ಕೊಟ್ಟಿಗೆಹಾರ, ಜೆ.ಎಸ್. ರಘು, ಸುಷ್ಮಾ ವಿಭಾ, ಜೆಡಿಎಸ್ ಮುಖಂಡ ಲೋಹಿತ್, ಕಾಂಗ್ರೆಸ್ ಮುಖಂಡ ಪ್ರಹ್ಲಾದ್ ಕಾರ್ಬೈಲ್, ಪತ್ರಕರ್ತರ ಸಂಘದ ಸದಸ್ಯರು ಉಪಸ್ಥಿತರಿದ್ದರು.



ಬಾಳೆಹೊನ್ನೂರಿನ ಜ್ಯೋತಿಷಿ ನಾರಿ ಕೊಳಲು ಕಾಮಚಂದ್ರ ಕಾರಂತ್ ಅವರನ್ನು ಇತ್ತೀಚೆಗೆ ಶ್ರೀ ಜಗದ್ಗುರು ರಂಭಾಪುರಿ ಶ್ರೀಗಳು ಗುರು ರಕ್ಷೆ ನೀಡಿ ಗೌರವಿಸಿದರು.

ಸಿಲಿಂಡರ್‌ಗಳಿಗೆ ಅಭಾವ | ಮೆನುವಿನಲ್ಲಿ ಬದಲಾವಣೆ

ಸೌದೆ ಒಲೆ ಮೊರೆ

ಚಿಕ್ಕಮಗಳೂರು: ಮಧ್ಯ ಪ್ರಾಚ್ಯ ದೇಶಗಳ ಯುದ್ಧದಿಂದ ವಾಣಿಜ್ಯ ಅನಿಲ ಸಿಲಿಂಡರ್‌ಗಳಿಗೆ ಅಭಾವ ತಲೆದೋರಿರುವ ಪರಿಣಾಮ ನಗರದ ಪ್ರಮುಖ ಹೋಟೆಲ್‌ಗಳು ಸೌದೆ ಒಲೆಯ ಮೊರೆ ಹೋಗುತ್ತಿದ್ದು, ಮೆನುವಿನಲ್ಲಿ ಭಾರೀ ಬದಲಾವಣೆ ಮಾಡಿಕೊಂಡಿವೆ.

ನಗರದಲ್ಲಿ ಸುಮಾರು 60ಕ್ಕೂ ಹೆಚ್ಚು ಸಸ್ಯಾಹಾರಿ ಹಾಗೂ ಮಾಂಸಾಹಾರಿ ಹೋಟೆಲ್‌ಗಳಿವೆ. ಈ ಪೈಕಿ ಸಸ್ಯಾಹಾರಿ ಹೋಟೆಲ್‌ಗಳು ಮತ್ತು ಬೀದಿ ಬದಿ ತಿಂಡಿ ಗಾಡಿಗಳಿಗೆ ಗ್ಯಾಸ್ ಸಿಲಿಂಡರ್ ಅಭಾವದ ಬಿಸಿ ಹೆಚ್ಚಾಗಿ ತಟ್ಟಿದೆ.

ಉಳಿದಂತೆ ಜನರ ಹಸಿವನ್ನು ತಣಿಸುತ್ತಿರುವ ಬೇಕರಿ, ರೆಸ್ಟೋರೆಂಟ್, ತಳ್ಳುಗಾಡಿಗಳು ಸಣ್ಣಪುಟ್ಟ ಹೋಟೆಲ್‌ಗಳು ಸಿಲಿಂಡರ್‌ಗಳ ಕೊರತೆಯಿಂದ ಭಾರೀ ಸಂಕಷ್ಟಕ್ಕೆ ಸಿಲುಕಿವೆ. ಬೆರಳೆಣಿಕೆಯಷ್ಟು ಮಂದಿ ಮಾತ್ರ ಸೌದೆ ಒಲೆಯಂತಹ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಉಳಿದವರು ಅನ್ಯ ಮಾರ್ಗವಿಲ್ಲದೆ ವಹಿವಾಟು ಬಂದ್ ಮಾಡಲು ತೀರ್ಮಾನಿಸಿದ್ದಾರೆ.

ನಗರದ ಮಯೂರ ಹೋಟೆಲ್‌ಗೆ ಪ್ರತಿ ದಿನ ನಾಲ್ಕರಿಂದ ಐದು ವಾಣಿಜ್ಯ ಬಳಕೆಯ ಸಿಲಿಂಡರ್ ಅವಶ್ಯಕತೆ ಇದೆ. ಆದರೆ ಈಗ ದಿನಕ್ಕೆ ಎರಡು ಸಿಲಿಂಡರ್‌ಗಳನ್ನು ಹೊಂದಿಸಿಕೊಳ್ಳುವುದು ಸಹ ಕಷ್ಟವಾಗುತ್ತಿದೆ. ಈ ಕಾರಣಕ್ಕೆ ಪರ್ಯಾಯವಾಗಿ ಸೌದೆ ಒಲೆಯ ಮೊರೆ ಹೋಗಿದ್ದಾರೆ. ಜೊತೆಗೆ ಮೆನುವಿನಲ್ಲೂ ಬದಲಾವಣೆ ಮಾಡಿಕೊಂಡಿದ್ದಾರೆ.

ಹೆಚ್ಚು ಪ್ರಮಾಣದ ಅನಿಲ ಖರ್ಚಾಗುವ ತಿನಿಸುಗಳಾದ ದೋಸೆ, ಪೂರಿ, ಚೈನಿಸ್ ಫುಡ್, ಉತ್ತರ ಭಾರತೀಯ ಮತ್ತು ದಕ್ಷಿಣ ಭಾರತೀಯ ತಿನಿಸುಗಳ ತಯಾರಿಕೆಯನ್ನು ಕಡಿತಗೊಳಿಸಲಾಗಿದೆ. ಇಡ್ಲಿ, ರವೆ ಇಡ್ಲಿ ಸೇರಿದಂತೆ ಕಡಿಮೆ ಅನಿಲ ಬಳಕೆಯ ತಿನಿಸುಗಳನ್ನು ಮಾತ್ರ ತಯಾರಿಸಲಾಗುತ್ತಿದೆ.

ನಗರದ ದಂಟರಮಕ್ಕಿ ಕನಕ ವೃತ್ತದಲ್ಲಿರುವ ಅರಮನೆ ಹೋಟೆಲ್‌ನಲ್ಲಿ ದೋಸೆ, ಪೂರಿಯಂತಹ ತಿನಿಸುಗಳ ತಯಾರಿಕೆಯನ್ನು ನಿಲ್ಲಿಸಲಾಗಿದೆ. ಗ್ರ್ಯಾಂಡ್ ಮಹಾರಾಜ ಹೋಟೆಲ್‌ನಲ್ಲಿ ಮೆನು ಬದಲಾವಣೆಯ ಜತೆಗೆ ಸೌದೆ ಒಲೆಯನ್ನು ಬಳಕೆ ಮಾಡಲಾಗುತ್ತಿದೆ. ನಗರದ ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಬಳಿ ಇರುವ ಇಂದಿರಾ ಕ್ಯಾಟೀನ್‌ನಲ್ಲಿ ಸೌದೆ ಒಲೆಯಲ್ಲಿ ಅಡುಗೆ ತಯಾರಿಸಿ ಗ್ರಾಹಕರಿಗೆ ಪೂರೈಸಲಾಗುತ್ತಿದೆ.



> ಗ್ಯಾಸ್ ಕೊರತೆಯಿಂದ ಸೌದೆ ಒಲೆಯ ಮೊರೆ ಹೋಗುತ್ತಿರುವುದು ನನ್ನ ಅನುಭವದಲ್ಲಿ ಇದೆ ಮೊದಲು. ಇದಕ್ಕೆ ಜಾಗದ ಸಮಸ್ಯೆ ಇದೆ. ಜತೆಗೆ ಹೊಗೆ ಆವರಿಸುತ್ತದೆ. ಮೆನು ಕಡಿತಗೊಳಿಸಿರುವುದರಿಂದ ಗ್ರಾಹಕರ ಸಂಖ್ಯೆಯೂ ಇಳಿಮುಖವಾಗಿದ್ದು, ಕಾರ್ಮಿಕರ ಸಮಸ್ಯೆ ಎದುರಾಗಲಿದೆ. ಉದ್ಯಮದ ಮೇಲೆ ಬಾರಿ ಹೊಡೆತ ಬೀಳಲಿದೆ.
>
> ■ ಹರೀಶ್, ಮಾಲೀಕರು, ಮಯೂರ ಹೋಟೆಲ್

ದೊಡ್ಡ ಹೋಟೆಲ್‌ಗಳಲ್ಲಿ ಸೌದೆ ಒಲೆಯ ಮೂಲಕವಾದರೂ ಒಂದಷ್ಟು ದಿನ ಗ್ರಾಹಕರಿಗೆ ಸೀಮಿತ ಪ್ರಮಾಣದ ಆಹಾರ ಒದಗಿಸಲು ಸಾಧ್ಯವಿದೆ. ಆದರೆ ಸಣ್ಣ ಪುಟ್ಟ ಕ್ಯಾಂಟೀನ್‌ಗಳು, ಹೋಟೆಲ್‌ಗಳ ಸ್ಥಿತಿ ಚಿಂತಾಜನಕವಾಗಿದ್ದು, ಆದಾಯಕ್ಕೂ ಪೆಟ್ಟು ಬೀಳುತ್ತಿದೆ.

ಇದರ ನಡುವೆ ಅಡುಗೆ ತಯಾರಿಸಲು ಬಳಸುವ ಸೌದೆಗೂ ಕೊರತೆ ಉಂಟಾಗುತ್ತಿರುವುದು ಚಿಂತೆಗೆ ಕಾರಣವಾಗುತ್ತಿದೆ. ಹಿಂದೆ ಮನೆ ಬಾಗಿಲಿಗೆ ಸೌದೆ ತಲುಪುತ್ತಿತ್ತು. ಇಂದು ಸೌದೆ ಮಾರಾಟಗಾರರೇ ಇಲ್ಲದಿರುವುದು ಮತ್ತೊಂದು ತಲೆ ನೋವಾಗಿದೆ.

ಜಿಲ್ಲಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ

ಸಿಲಿಂಡರ್ ಅಭಾವ ಕೇಂದ್ರ ವಿಫಲ

ಚಿಕ್ಕಮಗಳೂರು: ಮಧ್ಯಪ್ರಾಚ್ಯದಲ್ಲಿ ಸಂಭವಿಸಿರುವ ಯುದ್ಧದ ಪರಿಸ್ಥಿತಿಯಿಂದ ತಲೆದೋರಿರುವ ಅಡುಗೆ ಅನಿಲ ಸಿಲಿಂಡರ್ ಅಭಾವವನ್ನು ನಿವಾರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಆಜಾದ್ ಪಾರ್ಕ್ ಸರ್ಕಲ್‌ನಲ್ಲಿ ಸೌದೆ ಒಲೆ ಹಚ್ಚಿ ಕಾಫಿ ತಯಾರಿಸುವ ಮೂಲಕ ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಲ್ಲದೆ, ಅನಿಲ ಅಭಾವದಿಂದ ಜನರು ಎದುರಿಸುತ್ತಿರುವ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಅಂಶುಮಂತ್ ಮಾತನಾಡಿ, ಕಳೆದ 12 ವರ್ಷಗಳಿಂದ ಕೇಂದ್ರ ಸರ್ಕಾರ ಕೊಟ್ಟ ಮಾತಿಗೆ ತಪ್ಪಿ ನಡೆದುಕೊಳ್ಳುತ್ತಿದೆ. ಸಾಮಾನ್ಯ ಜನರ ಬದುಕು ಅಸಾಧ್ಯವಾಗುತ್ತಿದೆ. ಒಂದು ಹಂತದಲ್ಲಿ ಬ್ಯಾಂಕ್‌ಗಳ ಮುಂದೆ ಸರತಿಯಲ್ಲಿ ಹಿರಿಯರು ನಿಲ್ಲುವಂತೆ ಮಾಡಲಾಗಿತ್ತು. ಇಂದು ಗ್ಯಾಸ್‌ಗಾಗಿ ಮಹಿಳೆಯರು, ಸಾರ್ವಜನಿಕರು ಸಾಲಿನಲ್ಲಿ ನಿಲ್ಲಬೇಕಿದೆ ಎಂದು ದೂರಿದರು.

ದೇಶಕ್ಕೆ ಆತಂಕದ ಸ್ಥಿತಿ ನಿರ್ಮಾಣವಾದ ಸಂದರ್ಭದಲ್ಲಿ ಅದನ್ನು ನಿವಾರಣೆ ಮಾಡಬೇಕಿರುವ ಕೇಂದ್ರ ಸರ್ಕಾರ ಅದರಲ್ಲಿ ವಿಫಲವಾಗಿದೆ. ರಾಜ್ಯದ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಹೋಟೆಲ್‌ಗಳು ಗ್ಯಾಸ್ ಇಲ್ಲದೆ ಮುಚ್ಚಲ್ಪಡುತ್ತಿದೆ. ಕೇಂದ್ರದ ಅವೈಜ್ಞಾನಿಕ ನಿಲುವುಗಳೇ ಇದಕ್ಕೆ ಕಾರಣವಾಗಿದೆ ಎಂದರು.

ಕೇಂದ್ರ ಸರ್ಕಾರದ ರಾಜತಾಂತ್ರಿಕ ವ್ಯವಸ್ಥೆ, ವಿದೇಶಿ ನೀತಿಗಳು ಅಸಮರ್ಪಕವಾಗಿರುವುದರಿಂದ ದೇಶ ತೊಂದರೆ ಅನುಭವಿಸುತ್ತಿದೆ. ಅಲ್ಲದೆ ದೇಶದ ಸ್ನೇಹಿತ ರಾಷ್ಟ್ರಗಳ ವಿರೋಧ ಕಟ್ಟಿಕೊಳ್ಳುವಂತಾಗಿದೆ. ಅಮೇರಿಕಾದ ಟ್ರಂಪ್ ಮಾತು ಕೇಳುವುದಕ್ಕಾಗಿ ನಮ್ಮ ವಿದೇಶಿ ನೀತಿಗಳನ್ನು ಬಲಿಕೊಡಲಾಗುತ್ತಿದೆ. ಇದು ದೇಶವಾಸಿಗಳ ಬದುಕಿಗೆ ಆತಂಕವನ್ನು ತಂದಿಟ್ಟಿದೆ ಎಂದು ಆರೋಪಿಸಿದರು.

ಅಡಿಗೆ ಅನಿಲ, ಇಂಧನ ಬೆಲೆ ಏರಿಕೆ ವಿಚಾರದಲ್ಲಿ ಜನತೆಯನ್ನು ಕೇಂದ್ರ ಸರ್ಕಾರ ಹಾಗೂ ಬಿಜೆಪಿ ಮುಖಂಡರು ದಿಕ್ಕು ತಪ್ಪಿಸುವ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಜನರ ಬದುಕಿನ ಬಗ್ಗೆ ಅವರಿಗೆ ಕಾಳಜಿ ಇಲ್ಲ ಎಂದು ಆರೋಪಿಸಿದರು.



> ಕೇಂದ್ರ ಸರ್ಕಾರವು ಎಲ್‌ಪಿಜಿ ಸಿಲಿಂಡರ್‌ಗಳನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡಲು ಕುಮ್ಮಕ್ಕು ನೀಡುತ್ತಿದೆ. ದೇಶದ ಪ್ರತಿಯೊಬ್ಬ ನಾಗರೀಕರಿಗೆ ಮೂಲ ಸೌಕರ್ಯಗಳನ್ನು ಒದಗಿಸುವಲ್ಲಿ ನರೇಂದ್ರ ಮೋದಿ ಸರ್ಕಾರ ವಿಫಲವಾಗಿದೆ.
>
> ■ ಎಚ್.ಪಿ. ಮಂಜೇಗೌಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಪಿ. ಮಂಜೇಗೌಡ ಮಾತನಾಡಿ, ಅಮೇರಿಕಾ ಅಧ್ಯಕ್ಷ ಟ್ರಂಪ್ ತಾಳಕ್ಕೆ ನಮ್ಮ ಪ್ರಧಾನಿ ಕುಣಿಯುತ್ತಿದ್ದಾರೆ. ಜನರು ಅಡುಗೆ ಅನಿಲವಿಲ್ಲದೆ ಸೌದೆ ಒಲೆಗೆ ಮರಳುವ ಮೂಲಕ ಪರಿಸರ ಹಾನಿಗೂ ಪ್ರಧಾನಿ ಕಾರಣರಾಗುತ್ತಿದ್ದಾರೆ ಎಂದು ದೂರಿದರು.

ಹಿಂದೆ ಕಾಂಗ್ರೆಸ್ ಪ್ರಧಾನಿಗಳು ನೆರೆ ಹೊರೆ ದೇಶಗಳೊಂದಿಗೆ ಇಟ್ಟುಕೊಂಡಿದ್ದ ವಿಶ್ವಾಸವನ್ನು ಉಳಿಸಿಕೊಳ್ಳುವಲ್ಲಿ ನರೇಂದ್ರ ಮೋದಿ ಅವರು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ಎಚ್.ಎಚ್. ದೇವರಾಜ್, ಶಿವಾನಂದ ಸ್ವಾಮಿ, ಮಲ್ಲೇಶ್ ಸ್ವಾಮಿ, ನಗರಸಭೆ ಸದಸ್ಯರು ಸೇರಿದಂತೆ ಪಕ್ಷದ ವಿವಿಧ ನಾಯಕರು ಭಾಗವಹಿಸಿದ್ದರು.

ಸಮ್ಮೇಳನದ ಆಹ್ವಾನ ಪತ್ರಿಕೆ ಬಿಡುಗಡೆ


ತರೀಕೆರೆ: ಉಪ ವಿಭಾಗಾಧಿಕಾರಿ ಎನ್.ವಿ. ನಟೇಶ್ ಪಟ್ಟಣದಲ್ಲಿ ಮಾ. 17 ರಂದು ನಡೆಯಲಿರುವ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಕನ್ನಡ, ನಾಡು ನುಡಿಯ ಪ್ರತೀಕವಾದ ಈ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಎಲ್ಲರ ಸಹಕಾರದಿಂದ ಮಾಡೋಣ. ಈಗಾಗಲೇ ಸಮ್ಮೇಳನದ ಪೂರ್ವ ಸಿದ್ಧತೆಗಳು ಭರದಿಂದ ಸಾಗಿದ್ದು, ಸಮ್ಮೇಳನವು ಪ್ರತಿಯೊಬ್ಬರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುವಂತೆ ಎಲ್ಲ ಸಮಿತಿ ಪದಾಧಿಕಾರಿಗಳು, ಸಾರ್ವಜನಿಕರ ಸಹಕಾರದಿಂದ ಯಶಸ್ವಿಗೊಳಿಸೋಣ ಎಂದರು.

ಕನ್ನಡಶ್ರೀ ಭಗವಾನ ಮಾತನಾಡಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಅಪಾರ ಅನುಭವ ಪಡೆದು ಉನ್ನತ ಧ್ಯೇಯವನ್ನು ಹೊಂದಿರುವ ಸಮ್ಮೇಳನಾಧ್ಯಕ್ಷ ಎ.ಎಸ್. ಶಂಕರನಾರಾಯಣ ಅವರು ಅಪಾರ ಸಾಹಿತ್ಯ, ಸಂಸ್ಕೃತಿ ಅನುಭವ ಹೊಂದಿರುವ ಶ್ರೇಷ್ಠ ವ್ಯಕ್ತಿತ್ವ ಉಳ್ಳವರಾಗಿದ್ದು, ಇವರ ಸರ್ವಾಧ್ಯಕ್ಷತೆಯಲ್ಲಿ ಸಮ್ಮೇಳನ ಅತ್ಯಂತ ಅರ್ಥಪೂರ್ಣವಾಗಿ ಮೂಡಿ ಬರಲಿ ಎಂದು ತಿಳಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಪ್ರಕಾಶ್‌ವರ್ಮ ಮಾತನಾಡಿ, ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಕನ್ನಡ ಭವನ ನಿರ್ಮಾಣಕ್ಕೆ ಸಂಪೂರ್ಣ ಸಹಾಯ ಮತ್ತು ಸಹಕಾರ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ತಾ.ಪಂ. ಇಓ ಡಾ. ದೇವೇಂದ್ರಪ್ಪ, ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿ.ಆರ್. ಆನಂತಪ್ಪ, ಡಾ. ಮರುಳಸಿದ್ಧಯ್ಯ ಪಟೇಲ್, ಕೆ.ಎಸ್. ಶಿವಣ್ಣ, ಟಿ.ಸಿ. ದರ್ಶನ್, ಸುನೀತಾ ಕಿರಣ್, ಶಂಕ್ರಪ್ಪ, ವಿಶ್ವನಾಥಚಾರಿ, ಹೆಚ್.ಸಿ. ಗೋಪಾಲಕೃಷ್ಣ, ಡಿ. ಮಂಜುನಾಥ್, ಶೇಖರಪ್ಪ, ಮತ್ತಿತರರಿದ್ದರು.



ಶ್ರೀ ಭಾರತೀತೀರ್ಥ ಸ್ವಾಮೀಜಿಗಳ 77ನೇ ವರ್ಧಂತಿ ಮಹೋತ್ಸವ

ಶೃಂಗೇರಿ: ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿಗಳ 77ನೇ ವರ್ಧಂತಿ ಮಹೋತ್ಸವ ಮಾ. 24 ರಂದು ಏರ್ಪಡಿಸಲಾಗಿದೆ.

ವರ್ಧಂತಿ ಅಂಗವಾಗಿ ಶ್ರೀ ಶಾರದಾ ಪೀಠದಲ್ಲಿ ಹಲವಾರು ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಮಾ. 19 ರಂದು ಬೆಳಿಗ್ಗೆ 8 ಕ್ಕೆ ಶ್ರೀ ಮಠದ ಯಾಗ ಮಂಟಪದಲ್ಲಿ ಸಹಸ್ರ ಮೋದಕ ಗಣಪತಿ ಹೋಮ, ಅತಿರುದ್ರ ಪುರಶ್ಚರಣಾ ಮಹಾಸಂಕಲ್ಪ,ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸಭಾ ಭವನದಲ್ಲಿ ಸಹಸ್ರಚಂಡಿಕಾ ಮಹಾಸಂಕಲ್ಪ ಕಾರ್ಯಕ್ರಮ ನಡೆಯಲಿದೆ.

ಮಾ. 20 ರಂದು ಮಧ್ಯಾಹ್ನ 12 ಕ್ಕೆ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಮಹಾ ಸ್ವಾಮೀಜಿಗಳ ಆರಾಧನಾ ಮಹೋತ್ಸವದ ಅಂಗವಾಗಿ ಜಗದ್ಗುರುಗಳಿಂದ ವಿಶೇಷ ಪೂಜೆ ನೆರವೇರಲಿದೆ.ಮಾ. 21 ರಂದು ಬೆಳಿಗ್ಗೆ 9 ಕ್ಕೆ ಋಕ್‌ಸಂಹಿತಾ ಯಾಗದ ಸಂಕಲ್ಪ ನರಸಿಂಹವನದಲ್ಲಿ ನಡೆಯಲಿದೆ. ಮಾ. 22 ರಂದು 12.30ಕ್ಕೆ ನರಸಿಂಹಯಾಗದ ಮಂಟಪದಲ್ಲಿ ಸಹಸ್ರ ನಾರಿಕೇಳ ಗಣಪತಿ ಹೋಮದ ಪೂರ್ಣಾಹುತಿ ಜರುಗಲಿದೆ.ಮಾ. 23 ರಂದು ಮಧ್ಯಾಹ್ನ 11.30 ಕ್ಕೆ ಈಶ್ವರಗಿರಿ ಶ್ರೀ ಮಲಹಾನಿಕರೇಶ್ವರ ಸ್ವಾಮಿಯ ವಿಶೇಷ ಪೂಜೆಯನ್ನು ಜಗದ್ಗುರುಗಳು ನೆರವೇರಿಸಲಿದ್ದಾರೆ.

ಮಾ. 24ರ ಬೆಳಿಗ್ಗೆ 7 ಕ್ಕೆ ಗುರುನಿವಾಸದಲ್ಲಿ ಜಗದ್ಗುರುಗಳ ಆಹ್ನಿಕ ದರ್ಶನ,ಮಧ್ಯಾಹ್ನ 12 ಕ್ಕೆ ಶ್ರೀ ಶಾರದಾಂಬೆಗೆ ಜಗದ್ಗುರುಗಳಿಂದ ವಿಶೇಷ ಪೂಜೆ, 12.30ಕ್ಕೆ ಸಹಸ್ರ ಚಂಡಿಕಾ ಮಹಾಯಾಗದ ಪೂರ್ಣಹುತಿ,ಸಂಜೆ 6ಕ್ಕೆ ಗುರುನಿವಾಸದಲ್ಲಿ ಗುರುವಂದನಾ ಕಾರ್ಯಕ್ರಮ ಹಾಗೂ ಜಗದ್ಗುರುಗಳಿಂದ ಅನುಗ್ರಹ ಭಾಷಣ ಜರುಗಲಿದೆ. ಮಾ. 27 ರಂದು ಮಧ್ಯಾಹ್ನ ಶ್ರೀ ರಾಮನವಮಿ ಪ್ರಯುಕ್ತ ಗುರುನಿವಾಸದಲ್ಲಿ ವಿಶೇಷ ಪೂಜೆ ಜರುಗಲಿದೆ. ಮಾ.28ರಂದು ಮಧ್ಯಾಹ್ನ 12ಕ್ಕೆ ಋಕ್ ಸಂಹಿತಾಯಾಗದ ಪೂರ್ಣಾಹುತಿ ನರಸಿಂಹವನದಲ್ಲಿ ನೆರವೇರಲಿದೆ. ಮಾ.30ಕ್ಕೆ ಮಧ್ಯಾಹ್ನ 12.30ಕ್ಕೆ ಅತಿರುದ್ರ ಯಾಗದ ಪೂರ್ಣಾಹುತಿ ನೆರವೇರಲಿದೆ. ಉಭಯ ಜಗದ್ಗುರುಗಳಾದ ಶ್ರೀ ಭಾರತೀತೀರ್ಥ ಸ್ವಾಮೀಜಿ ಹಾಗೂ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದಾರೆ.

ರೋಟರಿ ಕ್ಲಬ್‌ನಿಂದ ಟ್ರ್ಯಾಕ್ ಸೂಟ್ ವಿತರಣೆ

ಬಾಳೆಹೊನ್ನೂರು: ಜಿಪಂ ಮಾಜಿ ಸದಸ್ಯ ಮಹಮ್ಮದ್ ಇಫ್ತಿಕರ್ ಆದಿಲ್, ಹಿರಿಯ ಕ್ರೀಡಾಪಟು ಸ್ಟೀಫನ್ ಓಡಿ ಹಾಗೂ ಮಹಮ್ಮದ್ ಹನೀಫ್‌ರವರ ಸಹಕಾರದಿಂದ ಸೀಗೋಡಿನ ಸರ್ಕಾರಿ ಪ್ರಾಥಮಿಕ ಶಾಲೆಗೆ ರೋಟರಿ ಕ್ಲಬ್‌ನವರು ಟ್ರಾಕ್ ಸೂಟ್ ವಿತರಿಸಲಾಯಿತು.

ರೋಟರಿ ಕ್ಲಬ್ ಅಧ್ಯಕ್ಷ ಎಂ. ವಿ. ತಿಮ್ಮಯ್ಯ ಗೌಡ, ಕಾರ್ಯದರ್ಶಿ ಸೈಯದ್ ಫಾಜಿಲ್ ಹುಸೇನ್, ಸಿ .ಪಿ. ರಮೇಶ್, ಮುಖ್ಯ ಶಿಕ್ಷಕಿ ಭಾಗ್ಯಜ್ಯೋತಿ ಸೇರಿದಂತೆ ರೋಟರಿ ಸದಸ್ಯರು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಗರ್ಭಕಂಠದ ಕ್ಯಾನ್ಸರ್ ತಡೆಗೆ ಲಸಿಕೆ ಹಾಕಿಸುವುದು ಅಗತ್ಯ: ಡಾ. ಎಸ್. ಸೀಮಾ

ಹೆಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ

ಚಿಕ್ಕಮಗಳೂರು: ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಗರ್ಭಕಂಠದ ಕ್ಯಾನ್ಸರ್ ತಡೆಗೆ ಸಂಬಂಧಿಸಿದಂತೆ 14 ವರ್ಷ ವಯಸ್ಸಿನ ಹೆಣ್ಣು ಮಕ್ಕಳು ಹೆಚ್.ಪಿ.ವಿ. ಲಸಿಕೆ ಹಾಕಿಸಿಕೊಳ್ಳುವುದು ಅಗತ್ಯವೆಂದು ತಾಲೂಕು ಆರೋಗ್ಯಾಧಿಕಾರಿ ಡಾ. ಎಸ್. ಸೀಮಾ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯಿಂದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಎ.ನಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆ ಸಂಬಂಧ ಹಮ್ಮಿಕೊಂಡಿದ್ದ ಹೆಚ್‌ಪಿವಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

14 ವರ್ಷ ತುಂಬಿದ ಮತ್ತು 15 ವರ್ಷದೊಳಗಿನ ಎಲ್ಲ ಹೆಣ್ಣು ಮಕ್ಕಳಿಗೂ ಈ ಲಸಿಕೆ ಹಾಕಬೇಕು. ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಂದ ನಿಗದಿತ ವಯೋಮಾನದ ಮಕ್ಕಳ ಮಾಹಿತಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಹೆಚ್.ಪಿ.ವಿ. ಎಂದರೆ ಹೂಮನ್ ಪ್ಯಾಪಿಲೋಮ ವೈರಸ್. ಇದು ಜನನಾಂಗದ ಸೋಂಕುಗಳಿಗೆ ಕಾರಣವಾಗುವ ಸಾಮಾನ್ಯ ವೈರಸ್ ಆಗಿದ್ದು,



ಮಹಿಳೆಯರಲ್ಲಿ ಕಂಡು ಬರುವ ಗರ್ಭಕಂಠದ ಕ್ಯಾನ್ಸರ್‌ಗೆ ಹೆಚ್ಚಾಗಿ ಇದೇ ವೈರಸ್ ಕಾರಣವಾಗಿದೆ. ಭಾರತೀಯ ಮಹಿಳೆಯರಲ್ಲಿ ಕಂಡು ಬರುವ ಕ್ಯಾನ್ಸರ್‌ಗಳಲ್ಲಿ ಗರ್ಭ ಕಂಠದ ಕ್ಯಾನ್ಸರ್ ಎರಡನೇ ಸ್ಥಾನದಲ್ಲಿದೆ. 2024ರ ಅಂದಾಜಿನ ಪ್ರಕಾರ ದೇಶದಲ್ಲಿ ಸುಮಾರು 78,499 ಹೊಸ ಪ್ರಕರಣಗಳು ಪತ್ತೆಯಾಗಿವೆ ಹಾಗೂ 42,392 ಸಾವುಗಳು ಸಂಭವಿಸಿವೆ. ಈ ಮಾರಣಾಂತಿಕ ಕಾಯಿಲೆಯನ್ನು ತಡೆಗಟ್ಟಲು ಲಸಿಕೆಯೊಂದೇ ಪ್ರಮುಖ ಮಾರ್ಗವಾಗಿದೆ ಎಂದು ಮಾಹಿತಿ ನೀಡಿದರು.

ದೇಶಾದ್ಯಂತ ನಡೆಯುತ್ತಿರುವ ಈ ಅಭಿಯಾನದಲ್ಲಿ ರಾಜ್ಯದಲ್ಲಿ ಮುಖ್ಯವಾಗಿ 14 ವರ್ಷದ ಹೆಣ್ಣು ಮಕ್ಕಳಿಗೆ ಹೆಚ್.ಪಿ.ವಿ. ಲಸಿಕೆ ನೀಡುವ ಗುರಿ ಹೊಂದಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ತಜ್ಞರ ಪ್ರಕಾರ ಲಸಿಕೆ ಮತ್ತು ನಿಯಮಿತ ತಪಾಸಣೆಯಿಂದ ಸಾವು ಮತ್ತು ಕ್ಯಾನ್ಸರ್ ಪ್ರಕರಣಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು ಎಂದು ಹೇಳಿದರು.

ಲಸಿಕೆ ಸಂಪೂರ್ಣ ಸುರಕ್ಷಿತವಾಗಿದೆ. ಲಸಿಕೆಯ ಸುರಕ್ಷತೆಯ ಬಗ್ಗೆ ಸಾರ್ವಜನಿಕರಲ್ಲಿರುವ ಆತಂಕಗಳು ನಿರಾಧಾರ. ಈ ಲಸಿಕೆಯು ಬಂಜೆತನ, ಗರ್ಭಪಾತ ಅಥವಾ ಜನ್ಮದಾರಭ್ಯ ದೋಷಗಳಿಗೆ ಕಾರಣವಾಗುತ್ತದೆ ಎಂಬುದು ಕೇವಲ ವದಂತಿ, ವೈಜ್ಞಾನಿಕ ಸಮೀಕ್ಷೆಗಳು ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ಲಸಿಕಾ ಸುರಕ್ಷತಾ ಸಮಿತಿಯು ದತ್ತಾಂಶಗಳನ್ನು ಪರಿಶೀಲಿಸಿ ಈ ಲಸಿಕೆ ಸಂಪೂರ್ಣ ಸುರಕ್ಷಿತ ಎಂದು ದೃಢಪಡಿಸಿದೆ ಎಂದರು.

ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ. ದಿವ್ಯಶ್ರೀ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜೆ.ಎನ್. ಬೇಬಿ, ಆಶಾ ಮೇಲ್ವಿಚಾರಕಿ ಸಿ.ಎಂ. ಕಲಾಧರೆ ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳಾದ ರುಖಿಯಾ ಮತ್ತು ಗೀತಾ, ಕಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾತಾಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಪೋಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಬ್ಯಾನರ್ ಹಾಕುವುದನ್ನು ತಡೆಯುವಲ್ಲಿ ಮೂಡಿಗೆರೆ ಪಪಂ ವಿಫಲ

ಫ್ಲೆಕ್ಸ್‌ಗಳಿಂದ ಅಪಘಾತದ ಭಯ

» ಆನಂದ ಕಣಚೂರು

ಮೂಡಿಗೆರೆ : ಪಟ್ಟಣದ ಬಸ್ ನಿಲ್ದಾಣದ ಮುಂಭಾಗದಲ್ಲಿ ಬ್ಯಾನರ್ ಫ್ಲೆಕ್ಸ್‌ಗಳನ್ನು ಕಂಡ ಕಂಡಲ್ಲಿ ಹಾಕುವುದನ್ನು ತಡೆಯುವಲ್ಲಿ ಪಟ್ಟಣ ಪಂಚಾಯಿತಿ ಸಂಪೂರ್ಣ ವಿಫಲವಾಗಿದೆ.

ಬಸ್ ಸ್ಟಾಂಡ್ ಮುಂಭಾಗದಲ್ಲಿ ಹೆಚ್ಚು ಫ್ಲೆಕ್ಸ್‌ಗಳನ್ನು ತಿಂಗಳನ್ನುಗಟ್ಟಲ್ಲೇ ಕಟ್ಟಿ ಬಿಡುವುದರಿಂದ ಬಸ್ ಸ್ಟಾಂಡ್ ಕಾಣುವುದಿಲ್ಲ. ಬಸ್‌ಗಳು ಬರುವುದು ಗೊತ್ತಾಗುವುದಿಲ್ಲ, ಎಲ್ಲರೂ ವಯಕ್ತಿಕ ಪ್ರಚಾರದ ಗೋಜಿನಲ್ಲಿ ಎಲ್ಲೆಂದರಲ್ಲಿ ಫ್ಲೆಕ್ಸ್ ಕಟ್ಟುವುದರಿಂದ ಸಾಮಾನ್ಯ ಜ್ಞಾನ ಇಲ್ಲದಂತಾಗಿದೆ. ಲಯನ್ಸ್ ವೃತ್ತದ ಸುತ್ತ ಫ್ಲೆಕ್ಸ್ ಹಾಕುವುದರಿಂದ ಕೆಎಂ ರಸ್ತೆಯಿಂದ ಎಂಜಿ ರಸ್ತೆ ಕಡೆ ಹೋಗುವ ವಾಹನಗಳಿಗೆ ಎದುರಿನಿಂದ ಬರುವ ವಾಹನ ಕಾಣುವುದಿಲ್ಲ, ಇದರಿಂದ ಅಪಘಾತ ಆಗುವ ಸಂಭವ ಹೆಚ್ಚು, ಎಲ್ಲೇ ಫ್ಲೆಕ್ಸ್ ಹಾಕುವಾಗ ಪಟ್ಟಣ ಪಂಚಾಯಿತಿಯಿಂದ ಎಷ್ಟು ದಿನಗಳವರೆಗೆ ಫ್ಲೆಕ್ಸ್ ಹಾಕುವುದು ಎಂದು ಶುಲ್ಕ



ಪಾವತಿಸಿ ಅನುಮತಿ ಪಡೆದು ಯಾವ ಸ್ಥಳದಲ್ಲಿ ಕಟ್ಟುವುದು ಎಂದು ತಿಳಿಸಬೇಕು.

ಆದರೆ ಮೂಡಿಗೆರೆ ಪಟ್ಟಣ ಪಂಚಾಯಿತಿಯಲ್ಲಿ ಅಧಿಕಾರಿಗಳಿಗೆ ಮಾಮೂಲಿ ಬಂದರೆ ಸಾಕು ಎನ್ನುವಂತೆ ಕಾನೂನು ಗಾಳಿಗೆ ತೂರಿ ತಮಗೆ ಇಷ್ಟ ಬಂದಲ್ಲಿ ಬ್ಯಾನರ್ ಫ್ಲೆಕ್ಸ್ ಕಟ್ಟುವುದು ರೂಢಿಯಾಗಿದೆ. ಇದಕ್ಕೆ ಪಪಂ ಬ್ರೇಕ್ ಹಾಕಬೇಕು. ಫ್ಲೆಕ್ಸ್ ಕಟ್ಟುವುದು ಯಾವ ಮಟ್ಟಕ್ಕೆ ಇಳಿದಿದೆ ಎಂದರೆ ದೇಶದ ಗಡಿ ಪ್ರದೇಶದಲ್ಲಿ ಹಗಲು ರಾತ್ರಿ ಮಳೆ ಬಿಸಿಲು ಚಳಿ ಎನ್ನದೆ ದಿನಾಂಪ್ರತಿ ತಮ್ಮ ಎಲ್ಲಾ ಆಸೆಗಳನ್ನು ಬದಿಗೊತ್ತಿ ರಾಷ್ಟ ಕಾಯುವ ಯೋಧರಿಗೆ ದೇಶವಾಸಿಗಳು ಸದಾ ಗೌರವ ಕೊಡುವುದನ್ನು ಮರೆಯಬಾರದು. ಆದರೆ ಇಲ್ಲಿ ಸೈನ್ಯದಲ್ಲಿ ಹುತಾತ್ಮ ಯೋಧರಿಗೆ ಗೌರವ ರಕ್ಷೆಯಾಗಿರುವ ಅಮರ್ ಜವಾನ್ ಪುತ್ಥಳಿಯನ್ನು ಕಾಣದಂತೆ ಫ್ಲೆಕ್ಸ್ ಹಾಕುವುದು ಎಷ್ಟು ಸರಿ? ಇದು ಹುತಾತ್ಮ ಯೋಧರಿಗೆ ಅಗೌರವ ತರುತ್ತಿರುವುದು ಸರಿಯೇ?

ಪಟ್ಟಣ ಪಂಚಾಯಿತಿ ಮುಂಭಾಗದಲ್ಲೇ ಇರುವ ಅಮರ್ ಜವಾನ್ ಪುತ್ಥಳಿಗೆ ಅಡ್ಡವಾಗಿ ಬ್ಯಾನರ್ ಹಾಕಿರುವುದಕ್ಕೆ ಪಟ್ಟಣ ಪಂಚಾಯಿತಿ ಅಧಿಕಾರಿಗಳೇ ನೇರ ಕಾರಣ. ಜಿಲ್ಲೆಯ ಯಾವುದೇ ತಾಲೂಕಿನಲ್ಲಿ ಅಮರ್ ಜವಾನ್ ಪುತ್ಥಳಿ ಇಲ್ಲ, ಇಲ್ಲಿ ಇದ್ದರೂ ಅದಕ್ಕೆ ಸಾರ್ವಜನಿಕರಿಂದ ಹಾಗೆ ಅಧಿಕಾರಿಗಳಿಂದ ಪ್ರತಿ ಸಲ ಅಗೌರವ ಆಗುತ್ತಲೇ ಇದೆ. ಇನ್ನಾದರೂ ಅಧಿಕಾರಿಗಳು ಆ ಸ್ಥಳದಲ್ಲಿ ಯಾವುದೇ ಬ್ಯಾನರ್ ಫ್ಲೆಕ್ಸ್ ಹಾಕದಂತೆ ಒಂದು ವೇಳೆ ಹಾಕಿದಲ್ಲಿ ಅವರಿಗೆ ದಂಡವನ್ನು ನಿಗದಿಪಡಿಸಿ ಕ್ರಮ ಕೈಗೊಳಬೇಕು.

ಕಿರುಸುದ್ದಿ

ಯುಗಾದಿ ಹಬ್ಬದಲ್ಲಿ ಜೂಜು ಆಡಿದರೆ ಕಾನೂನು ಕ್ರಮ

ನಾಯಕನಹಟ್ಟಿ: ಯುಗಾದಿ ಹಬ್ಬದಲ್ಲಿ ನಾಯಕನಹಟ್ಟಿ ಹೋಬಳಿಯಲ್ಲಿ ಸಾರ್ವಜನಿಕರು ಜೂಜಾಟ ಆಡಿದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ನಾಯಕನಹಟ್ಟಿ ಪೊಲೀಸ್ ಠಾಣೆಯ ಪಿಎಸ್‌ಐ ಜಿ.ಪಾಂಡುರಂಗಪ್ಪ. ತಿಳಿಸಿದ್ದಾರೆ. ಯುಗಾದಿ ಹಬ್ಬದಲ್ಲಿ ನಾಯಕನಹಟ್ಟಿ ಹೋಬಳಿಯಾದ್ಯಂತ ಯಾವುದೇ ಗ್ರಾಮದಲ್ಲಿ ಇಸ್ಪೀಟ್ ಜೂಜಾಟ ಹಾಗೂ ಇತರೆ ಬಗೆಯ ಜೂಜಾಟಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಜೂಜಾಟ ಕಾನೂನು ಬಾಹಿರವಾಗಿದ್ದು ಸರ್ಕಾರ ರದ್ದು ಮಾಡಿರುತ್ತದೆ ಆದ್ದರಿಂದ ಸಾರ್ವಜನಿಕರು ಯಾವುದೇ ಅಂಗಡಿ ಶಾಮಿಯಾನಾ, ಮನೆಗಳಲ್ಲಿ ತೋಟದ ಮನೆ ಹೋಟೆಲುಗಳಲ್ಲಿ ಹಾಗೂ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಬೇರೆ ಯಾವುದೇ ಸ್ಥಳದಲ್ಲಿ ಇಸ್ಪೀಟ್ ಆಡುವಂತಿಲ್ಲ ಇಸ್ಪೀಟ್ ಆಟ ಆಡಲು ಕುಮ್ಮಕ್ಕು ಅಥವಾ ಸಹಕರಿಸಿದ ಯಾವುದೇ ಅಂಗಡಿ ಮನೆ ತೋಟದಮನೆ ಹೋಟೆಲ್ ಮಾಲೀಕರನ್ನು ಆರೋಪಿಗಳನ್ನಾಗಿ ಕಾನೂನು ಕ್ರಮ ಜಗಿಸಲಾಗುವುದು. ಸಾರ್ವಜನಿಕರಿಗೆ ಇಸ್ಪೀಟ್ ಆಟ ಆಡುವುದು ಕಂಡು ಬಂದಲ್ಲಿ ತುರ್ತು ಸಹಾಯವಾಣಿ 112 ಹಾಗೂ ಪಿಎಸ್‌ಐ ಮೊಬೈಲ್ ಸಂಖ್ಯೆ9480803158ಗೆ ಕರೆ ಮಾಡಿ ತಿಳಿಸಲು ಕೋರಿದ್ದಾರೆ.

ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ

ಮೊಳಕಾಲ್ಮೂರು: ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದು ಕರ್ನಾಟಕ ದ್ರಾಕ್ಷಾರಸ ಮಂಡಳಿ ಅಧ್ಯಕ್ಷ ಡಾ.ಬಿ.ಯೋಗೀಶ್ ಬಾಬು ತಿಳಿಸಿದರು. ಸೋಮವಾರ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿ, ಸರ್ಕಾರದ ಜನಪರ ಆಡಳಿತ ವೈಖರಿ ಮತ್ತು ಅಭಿವೃದ್ಧಿ ಮಾದರಿಯನ್ನು ಇಂದು ಇಡೀ ವಿಶ್ವವೇ ಶ್ಲಾಘಿಸುತ್ತಿದೆ ಸರ್ಕಾರದ ಸಾಧನೆಗಳು ಹಾಗೂ ತಾಲೂಕಿನ ಅಭಿವೃದ್ಧಿ ಯೋಜನೆಗಳ ಕುರಿತು ಪ್ರಮುಖ ಅಂಶಗಳನ್ನು ಹಂಚಿಕೊಂಡರು. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಸರ್ಕಾರವು ಗ್ಯಾರಂಟಿ ಯೋಜನೆಗಳನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ ಇದರಿಂದಾಗಿ ರಾಜ್ಯದ ಬಡವರು,ರೈತರು ಮತ್ತು ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಿಸಿದೆ ಎಂದರು. ಕ್ಷೇತ್ರದಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆಗಳು ಪತ್ರಿಕಾ ವರದಿಗಳ ಮೂಲಕ ಗಮನಕ್ಕೆ ಬಂದ ತಕ್ಷಣ, ಯಾವುದೇ ಫಲಪೇಕ್ಷೆ ಇಲ್ಲದೆ ನೇರವಾಗಿ ನೆರವಿಗೆ ಧಾವಿಸುವುದು ನಮ್ಮ ಕರ್ತವ್ಯವಾಗಿದೆ. ಜನರ ಆಶೀರ್ವಾದದಿಂದ ಕ್ಯಾಬಿನೆಟ್ ದರ್ಜೆಯ ಸ್ಥಾನ ಲಭಿಸಿದ್ದು ಇದಕ್ಕೆ ಪ್ರತಿಯಾಗಿ ತಾಲೂಕಿನ ಪ್ರತಿ ಹಳ್ಳಿ ಸಮಸ್ಯೆ ಪರಿಹಾರಕ್ಕಾಗಿ ಹೆಚ್ಚಿನ ಒತ್ತು ನೀಡುವೆ, ಪಟ್ಟಣದ ನೂತನ ಬಸ್ ನಿಲ್ದಾಣ ಹಾಗೂ ರಾಯಾಪುರ ಬಳಿಯ ಘಟಕದ ಲೋಕಾರ್ಪಣೆ ಕುರಿತು ಈಗಾಗಲೇ ಸಂಬಂಧಪಟ್ಟ ಸಚಿವರೊಂದಿಗೆ ಚರ್ಚಿಸಲಾಗಿದೆ ಶೀಘ್ರದಲ್ಲೇ ಉದ್ಘಾಟಿಸಿ ಜನರಿಗೆ ಅನುಕೂಲ ಕಲ್ಪಿಸಲಾಗುವುದೆಂದು ತಿಳಿಸಿದರು. ಹಿಂದಿನ ಸರ್ಕಾರದಲ್ಲಿ ಸಚಿವರಾದವರು ತಾಲೂಕಿನ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ್ದರು. ವಿರೋಧ ಪಕ್ಷದ ಮುಖಂಡರು ನಮ್ಮ ಆಡಳಿತವನ್ನು ಟೀಕಿಸುವ ಮೊದಲು, ತಾವು ಅಧಿಕಾರದಲ್ಲಿದ್ದಾಗ ತಾಲೂಕಿಗೆ ನೀಡಿದ ಕೊಡುಗೆ ಏನು ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಲಿ ಆಧಾರರಹಿತ ನಿಂದನೆಗಳು ಅವರ ವ್ಯಕ್ತಿತ್ವಕ್ಕೆ ಶೋಭೆ ತರುವುದಿಲ್ಲ ಎಂದು ಕಿಡಿಕಾರಿದರು.

ಇದೇ ವೇಳೆ ಸರ್ಕಾರಿ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆ ಮಾಡುವ ತಾಲೂಕಿನ ಅಧಿಕಾರಿಗಳ ನಡೆಯ ವಿರುದ್ಧ ಕೆಂಡಾಮಂಡಲವಾದ ಯೋಗೇಶ್ ಬಾಬು ಅಧಿಕಾರಿಗಳು ವರ್ತನೆ ಸರಿಪಡಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸುವುದಾಗಿ ಎಚ್ಚರಿಸಿದರು. ಪಾಲಯ್ಯ, ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ನಬಿಲ್, ಗ್ರಾಮ ಪಂಚಾಯತಿ ಸದಸ್ಯ ಕುಮಾರಸ್ವಾಮಿ, ಶರತ್ ಕುಮಾರ ಇದ್ದರು.

ಯುಗಾದಿ ಹಾಗೂ ರಂಜಾನ್ ಹಬ್ಬದ ಅಂಗವಾಗಿ ಶಾಂತಿಸಭೆ

ಹಿರಿಯೂರು: ಚಿತ್ರದುರ್ಗ ಜಿಲ್ಲಾ ಪೊಲೀಸ್ ಹಿರಿಯೂರು ಉಪ ವಿಭಾಗ ವತಿಯಿಂದ ಯುಗಾದಿ ಹಾಗೂ ರಂಜಾನ್ ಹಬ್ಬದ ಅಂಗವಾಗಿ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆ ಆವರಣದಲ್ಲಿ ಶಾಂತಿ ಸಭೆ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಪೊಲೀಸ್ ವೃತ್ತ ನಿರೀಕ್ಷಕರುಗಳಾದ ಆನಂದ, ಗುಡ್ಡಪ್ಪ, ಮಹಮದ್ ಸಿರಾಜ್, ಅನುಸೂಯಮ್ಮ, ರಾಮಚಂದ್ರ, ಲಕ್ಷ್ಮಣ್ ರಾವ್, ಸಾಧಿಕ್, ತಿಮ್ಮರಾಜ್, ಫಾಟ್ ಚಂದ್ರಪ್ಪ, ತಿಪ್ಪೇಸ್ವಾಮಿ ಪಾಲ್ಗೊಂಡಿದ್ದರು

ಇಂದು ಮಹಿಳಾ ದಿನಾಚರಣೆ ಕಾರ್ಯಕ್ರಮ

ಚಿತ್ರದುರ್ಗ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಮಾರ್ಚ್ 17 ರಂದು ಬೆಳಿಗ್ಗೆ 11ಕ್ಕೆ ಚಿತ್ರದುರ್ಗ ನಗರದ ಸ್ಟೇಡಿಯಂ ಹತ್ತಿರದ ಜಿಲ್ಲಾ ಬಾಲಭವನದಲ್ಲಿ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಹಿರಿಯೂರು ತಾಲೂಕಿನ ಗೂಳ್ಯ ಗ್ರಾಮದಲ್ಲಿ ಚೆಕ್ ಡ್ಯಾಂ ಕಾಮಗಾರಿಗೆ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಅಭಿವೃದ್ಧಿ ಕುರಿತು ಅಮಿತ್‌ಶಾ ಜೊತೆ ಕಾರಜೋಳ ಚರ್ಚೆ

ಚಿತ್ರದುರ್ಗ: ನವದೆಹಲಿಯಲ್ಲಿ ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್‌ಶಾ ಅವರನ್ನು ಭೇಟಿ ಮಾಡಿ ಲೋಕಸಭಾ ಕ್ಷೇತ್ರ ಚಿತ್ರದುರ್ಗ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಪ್ರಮುಖ ವಿಷಯಗಳನ್ನು ಚರ್ಚಿಸಲಾಯಿತು ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಈ ಸಂದರ್ಭದಲ್ಲಿ ಮುಖ್ಯವಾಗಿ ಭದ್ರಾ ಮೇಲ್ದಂಡೆ ಯೋಜನೆ ಕುರಿತು ಚರ್ಚಿಸಲಾಯಿತು. ಈ ಮಹತ್ವದ ನೀರಾವರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಲಾಯಿತು. ಈ ಯೋಜನೆ ಜಾರಿಯಾದಲ್ಲಿ ಚಿತ್ರದುರ್ಗ ಸೇರಿದಂತೆ ಮಧ್ಯ ಕರ್ನಾಟಕದ ಹಲವು ಜಿಲ್ಲೆಗಳ ರೈತರಿಗೆ ಮಹತ್ತರ ಪ್ರಯೋಜನವಾಗಲಿದೆ.



ಚಿತ್ರದುರ್ಗ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ಹೆಚ್ಚುವರಿ ಏಕಲವ್ಯ ಮಾದರಿ ವಸತಿ ಶಾಲೆ ಸ್ಥಾಪಿಸಲು ಬುಡಕಟ್ಟು ವ್ಯವಹಾರಗಳ ಸಚಿವಾಲಯಕ್ಕೆ ಶಿಫಾರಸು ಮಾಡುವಂತೆ ವಿನಂತಿಸಲಾಯಿತು. ಚಿತ್ರದುರ್ಗದ ಇತಿಹಾಸ ಪ್ರಸಿದ್ಧ ವೀರನಾದ ಮದಕರಿ ನಾಯಕ ಅವರ ಸ್ಮರಣಾರ್ಥ ಚಿತ್ರದುರ್ಗದಲ್ಲಿ 'ಮದಕರಿ ನಾಯಕ ಥೀಮ್ ಪಾರ್ಕ್' ಸ್ಥಾಪನೆ ಮಾಡುವ ಕುರಿತು ಮನವಿ ಮಾಡಲಾಯಿತು. ಈ ಯೋಜನೆ ಜಾರಿಯಾದಲ್ಲಿ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನ ದೊರೆಯಲಿದೆ.

ಇದರ ಜೊತೆಗೆ ನನ್ನ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಕಾರ್ಯಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಕುರಿತು ವಿವರವಾಗಿ ಚರ್ಚೆ ನಡೆಸಲಾಯಿತು. ನನ್ನ ಮನವಿಗಳನ್ನು ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಅಮಿತ್‌ಶಾ ಅವರು ಸಕಾರಾತ್ಮಕವಾಗಿ ಪರಿಗಣಿಸಿ ಅಗತ್ಯ ಕ್ರಮಕೈಗೊಳ್ಳುವ ಭರವಸೆ ನೀಡಿದರು ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾಯಾಧೀಶ ಎಂ.ವಿಜಯ್

ಆನ್‌ಲೈನ್ ವಂಚನೆ ಎಚ್ಚರ

ಚಿತ್ರದುರ್ಗ: ಇಂದು ಆನ್‌ಲೈನ್ ಶಾಪಿಂಗ್ ವ್ಯಾಪಕವಾಗಿದ್ದು, ಅದರೊಂದಿಗೆ ಗ್ರಾಹಕರು ವಂಚನೆಗೊಳಗಾಗುವ ಸಾಧ್ಯತೆಗಳೂ ಹೆಚ್ಚಿವೆ. ಹೀಗಾಗಿ ಪ್ರತಿಯೊಬ್ಬ ಗ್ರಾಹಕನೂ ಜಾಗೃತನಾಗಿರುವುದು ಇಂದಿನ ಅಗತ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ವಿಜಯ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ,ಕಾನೂನುಮಾಪನಾಶಾಸ್ತ್ರಇಲಾಖೆ,ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಅಡುಗೆ ಅನಿಲ ವಿತರಕರು, ಸರ್ಕಾರಿ ಕಲಾ ಕಾಲೇಜು ಸಂಯುಕ್ತಾಶ್ರಯದಲ್ಲಿ 'ಸುರಕ್ಷಿತ ಉತ್ಪನ್ನಗಳು, ಆತ್ಮವಿಶ್ವಾಸದ ಗ್ರಾಹಕರು' ಎಂಬ ಘೋಷವಾಕ್ಯದೊಂದಿಗೆ ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ವಿಶ್ವ ಗ್ರಾಹಕರ ದಿನಾಚರಣೆ' ಉದ್ಘಾಟಿಸಿ ಅವರು ಮಾತನಾಡಿದರು.

ಹತ್ತು ವರ್ಷಗಳ ಹಿಂದೆ ಜನರು ನೇರವಾಗಿ ಅಂಗಡಿಗಳಿಗೆ ಭೇಟಿ ನೀಡಿ, ವಸ್ತುವಿನ ಗುಣಮಟ್ಟ ಪರಿಶೀಲಿಸಿ ಖರೀದಿ ಮಾಡುತ್ತಿದ್ದರು. ಆದರೆ ಆನ್‌ಲೈನ್ ವ್ಯವಹಾರದಿಂದ ವಂಚನೆಗಳು ಹೆಚ್ಚುತ್ತಿವೆ. ಆನ್‌ಲೈನ್ ವೇದಿಕೆಗಳಲ್ಲಿ ವಂಚನೆಗೊಳಗಾದ ಸಂದರ್ಭದಲ್ಲಿ ಗ್ರಾಹಕರು ಎದೆಗುಂದದೆ ಗ್ರಾಹಕರ ವೇದಿಕೆಗೆ ದೂರು ಸಲ್ಲಿಸಬೇಕು. ಪ್ರಸ್ತುತ ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೆ, ಆನ್‌ಲೈನ್ ಮೂಲಕವೂ ದೂರನ್ನು ದಾಖಲಿಸುವ ಸೌಲಭ್ಯಗಳು ಲಭ್ಯವಿವೆ ಎಂದರು.

ಯಾವುದೇ ಉತ್ಪನ್ನ ಕೊಳ್ಳುವ ಮೊದಲು ಅದರ ಗುಣಮಟ್ಟ, ಸೇವೆ ಹಾಗೂ ಬಾಳಿಕೆಯ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಮಾರುಕಟ್ಟೆಯಲ್ಲಿ ಲಭ್ಯವಿರುವ ನಕಲಿ ಬ್ಯಾಂಡ್‌ಗಳ ಬಗ್ಗೆ ಎಚ್ಚರದಿಂದಿರಬೇಕು. ಗ್ರಾಹಕರು ಕಾನೂನಿನ ಅರಿವು ಹೊಂದಿದ್ದರೆ ಮಾತ್ರ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಾಧ್ಯ. ವಿದ್ಯಾರ್ಥಿಗಳು ಇಂತಹ ಮಾಹಿತಿಗಳನ್ನು ಪಡೆದು ಸಮಾಜದಲ್ಲಿ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.



ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಹೆಚ್.ಎಸ್.ಮಹೇಶ್ವರಪ್ಪ ಮಾತನಾಡಿ, ಗ್ರಾಹಕರಿಗೆ ವಂಚನೆಯಾದಲ್ಲಿ ನ್ಯಾಯ ಪಡೆಯಲು ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಕಚೇರಿಯಲ್ಲಿ ಕೇಸ್ ದಾಖಲಿಸಬಹುದು. ಕೇವಲ ನಷ್ಟವಾದ ಹಣ ಮಾತ್ರವಲ್ಲದೆ, ಅದಕ್ಕೆ ತಗಲುವ ಬಡ್ಡಿ ಮತ್ತು ಪರಿಹಾರವನ್ನು ಪಡೆಯಲು ಗ್ರಾಹಕರು ಅರ್ಹರಾಗಿರುತ್ತಾರೆ. ಯುವಜನತೆಯೇ ದೇಶದ ಭವಿಷ್ಯವಾಗಿದ್ದು, ವಿದ್ಯಾರ್ಥಿಗಳು ಗ್ರಾಹಕ ಹಕ್ಕುಗಳ ಬಗ್ಗೆ ಜಾಗೃತಿ ಬೆಳೆಸಿಕೊಂಡು ಜವಾಬ್ದಾರಿಯುತ ನಾಗರಿಕರಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

> **ಇಂದಿನ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಗ್ರಾಹಕರು ಕೇವಲ ವಸ್ತುಗಳನ್ನು ಖರೀದಿಸುವವರಾಗದೆ, ತಮ್ಮ ಹಕ್ಕುಗಳ ಬಗ್ಗೆ ಸಂಪೂರ್ಣ ಅರಿವುಳ್ಳವರಾಗಿರಬೇಕು.**
> ■ **ಹೆಚ್.ಎಸ್.ಮಹೇಶ್ವರಪ್ಪ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ**

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಬಿ.ಹೆಚ್.ಯಶೋಧ ಮಾತನಾಡಿದರು. ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕ ಶಿದ್ರಾಮ ಮಾರಿಹಾಳ, ಕಾನೂನು ಮಾಪನಾ ಶಾಸ್ತ್ರ ಸಹಾಯಕ ನಿಯಂತ್ರಕ ಚನ್ನಬಸಪ್ಪ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ಯು.ಬಿ.ಗೀತಾ ಹಾಜರಿದ್ದರು.

ಸಾಂಪ್ರದಾಯಿಕ ಕೃಷಿಯಿಂದ ಹೊರಬನ್ನಿ

ಕೃಷಿ ಕ್ಷೇತ್ರಕ್ಕೆ ಮಹತ್ವ



ಚಿತ್ರದುರ್ಗ: ಮುಂಬರುವ ದಿನಗಳಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ಸಿಗಲಿದ್ದು, ರೈತರು ಸಮಗ್ರ ಕೃಷಿ ವಿಧಾನಗಳ ಜೊತೆಗೆ ನೀರಾವರಿ ಸೌಲಭ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಆರ್ಥಿಕವಾಗಿ ಸಶಕ್ತರಾಗಬೇಕು ಎಂದು ಲೋಕೋಪಯೋಗಿ ಇಲಾಖೆಯ ವಿಶ್ರಾಂತ ಮುಖ್ಯಕಾರ್ಯದರ್ಶಿ ಡಾ.ಕೆ.ಎಸ್.ಕೃಷ್ಣಾರೆಡ್ಡಿ ಹೇಳಿದರು.

ಚಿತ್ರದುರ್ಗ ತಾಲ್ಲೂಕಿನ ಬೆಳಗಟ್ಟದ ಅಕ್ಕಮ್ಮ ದೇವಸ್ಥಾನದ ಬಳಿ ಭಾನುವಾರ ಬೆಳಗಟ್ಟ, ಕಾಸವರಹಟ್ಟಿ, ಬಚ್ಚಬೋರನಹಟ್ಟಿ ಹಾಗೂ ಹಾಯ್ಕಲ್ ಗ್ರಾಮಸ್ಥರು ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಎಲ್ಲರೂ ಬೆಳೆಯುವ ಸಾಂಪ್ರದಾಯಿಕ ಬೆಳೆಗಳನ್ನೇ ಬೆಳೆಯಬೇಡಿ. ಮಾರುಕಟ್ಟೆಯ ಬೇಡಿಕೆ ಗಮನಿಸಿ ಅಡಕೆ ಪ್ರಮಾಣ ಕಡಿಮೆ ಮಾಡಿ. ಆಧುನಿಕ ಹೂವು ಹಾಗೂ ಹಣ್ಣಿನ ಕೃಷಿ ಮಾಡಿ. ನೂತನ ಕೃಷಿ ಕೌಶಲಗಳನ್ನು ಬೆಳೆಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಬೆಳಗಟ್ಟ, ಬಚ್ಚಬೋರನಹಟ್ಟಿ ಸೇರಿದಂತೆ ಈ ಭಾಗದ ಸಾವಿರಾರು ರೈತರು ರಸ್ತೆ ಸೌಲಭ್ಯವಿಲ್ಲದೆ ದಶಕಗಳಿಂದ ಅನುಭವಿಸುತ್ತಿದ್ದ ನೋವು ನನ್ನ ಗಮನದಲ್ಲಿತ್ತು. ಸೇವೆಯಲ್ಲಿದ್ದಾಗ ನನಗೆ ಸಿಕ್ಕ ಅವಕಾಶ ಬಳಸಿಕೊಂಡು ಸಂಪರ್ಕ ರಸ್ತೆಗೆ ಬೇಕಾದ ಅನುದಾನ ಹಾಗೂ ಮಂಜೂರಾತಿ ಕೊಡಿಸಿದ್ದೇನೆ. ಇದು ನನ್ನ ಕರ್ತವ್ಯ ಎಂದು ಸ್ಮರಿಸಿದರು.

ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ನೀರಿನ ಹಂಚಿಕೆ ಬಹಳ ಕಡಿಮೆ ಇತ್ತು. ಬದ್ಧತೆಯ ಕೆಲಸಗಾರರಾಗಿದ್ದ ಚೀಫ್ ಎಂಜಿನಿಯರ್ ಚೆಲುವರಾಜ್ ಅವರು ಕೇಂದ್ರೀಯ ಜಲ ಆಯೋಗಕ್ಕೆ ಸೂಕ್ತ ದಾಖಲೆ ಹಾಗೂ ಅಂಕಿ-ಅಂಶಗಳನ್ನು ಮಂಡಿಸಿ ಮನವರಿಕೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಯೋಜನೆ ಜಾರಿಯಲ್ಲಿ ಅವರ ಪ್ರಯತ್ನ ಮಹತ್ವದ್ದು ಎಂದು ಶ್ಲಾಘಿಸಿದರು.

ಭದ್ರಾ ಮೇಲ್ದಂಡೆ ಯೋಜನೆಯ ನಿವೃತ್ತ ಚೀಫ್ ಎಂಜಿನಿಯರ್ ಆರ್.ಚೆಲುವರಾಜ್, ಪಿ.ಹೆಚ್.ಮಾರುತೇಶ್ ರೆಡ್ಡಿ, ರಾಜೇಂದ್ರರೆಡ್ಡಿ, ಖಾಸಾ ತಿಮ್ಮಾರೆಡ್ಡಿ, ಕಂದಿ ಸಂಜೀವರೆಡ್ಡಿ, ಕೋಟ್ಲಾ ವೆಂಕಟೇಶರೆಡ್ಡಿ, ರವಿಶಂಕರ್ ರೆಡ್ಡಿ, ಟಿ.ಎಸ್. ಮಲ್ಲಿಕಾರ್ಜುನ್, ಎ.ಇ.ಮಂಜುನಾಥ್ ಇದ್ದರು.

ಸಿದ್ದರಾಮೇಶ್ವರ ಪ್ರೌಢಶಾಲೆಯಲ್ಲಿ ಪುರಸ್ಕಾರ

ಚಿಕ್ಕಜಾಜೂರು: ಸಿದ್ದರಾಮೇಶ್ವರ ಪ್ರೌಢಶಾಲೆಯಲ್ಲಿ ಪ್ರತಿಭಾ ಪುರಸ್ಕಾರ, ಶಾರದಾ ಪೂಜೆ, ಹತ್ತನೆಯ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅತಿಥಿ ಮೋಹನ್ ಮಾತನಾಡಿ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಸಂಸ್ಕಾರ ರೂಡಿಸಿಕೊಳ್ಳಬೇಕು. ಗುರುಹಿರಿಯರಿಗೆ ಗೌರವ ಕೊಡುವ ಸದ್ಗುಣದ ಗಣಿಗಳಾಗಬೇಕು. ಇತ್ತೀಚಿನ ದಿನಗಳಲ್ಲಿ ಸಮೂಹ ಮಾಧ್ಯಮ ಮತ್ತು ಮೊಬೈಲ್ ಗೀಳಿನಿಂದಾಗಿ ವಿದ್ಯಾರ್ಥಿಗಳಲ್ಲಿ ಓದುವ ಅಭಿರುಚಿ ಕುಂಠಿತವಾಗಿದೆ ವಿದ್ಯಾರ್ಥಿಗಳು ಕೇವಲ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳುವುದು ಮುಖ್ಯ ಗುರಿಯಾಗದೆ ಸ್ವಯಂ ಉದ್ಯೋಗ ಸೃಷ್ಟಿಸುವ ನಿಟ್ಟಿನಲ್ಲಿ ಪ್ರತಿಭಾವಂತರಾಗಿ ಹೊರಹೊಮ್ಮಬೇಕು ಎಂದರು.



ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅಂಜಲಿ ಮೋಹನ್ ಮಾತನಾಡಿ, ವಿದ್ಯಾರ್ಥಿಗಳು ವಿದ್ಯೆಯನ್ನು ಆರಂಭಿಸುವ ಮುನ್ನ ಸರಸ್ವತಿ ದೇವಿಯನ್ನು ಭಕ್ತಿಯಿಂದ ಆರಾಧಿಸಿ ವಿದ್ಯಾರಂಭ ಮಾಡಬೇಕು ಎಂದರು

ಕಾರ್ಯಕ್ರಮದಲ್ಲಿ ನಯಾಜ್ ಉರ್ ರೆಹಮಾನ್, ವೀಣಾ, ಬಾಣಗೆರೆ ಬಸವರಾಜಪ್ಪ, ಶಿಕ್ಷಕಿ ವನಜಾಕ್ಷಿ, ಮಾರುತೇಶ, ಬಸಮ್ಮ ಮಂಜುನಾಥ್ ಇದ್ದರು.

ಬೀಸನಹಳ್ಳಿಯಲ್ಲಿ ಕರಿಯಮ್ಮ ದೇವಿಯ ಬಂಡಿ ಸಿಡಿ ಉತ್ಸವ

ಹೊಸದುರ್ಗ: ತಾಲೂಕಿನ ಕಸಬಾ ಹೋಬಳಿಯ ಬೀಸನಹಳ್ಳಿ ಗ್ರಾಮದಲ್ಲಿ ಕರಿಯಮ್ಮ ದೇವಿಯ ಬಂಡಿ ಸಿಡಿ ಉತ್ಸವ ವಿಜೃಂಭಣೆಯಿಂದ ನೆರವೇರಿತು. ಮಂಗಳವಾರದಿಂದ ಆರಂಭವಾದ ಜಾತ್ರೆಯಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಮಂಗಳವಾರ ಮದವಣಗಿತ್ತಿ ಶಾಸ್ತ್ರ, ಬುಧವಾರ ಬೇವಿನ ಸೀರೆ ಕಾರ್ಯಕ್ರಮ, ಗುರುವಾರ ದುರ್ಗಾಂಬಿಕಾ ದೇವಿ ಹಾಗೂ ಕರಿಯಮ್ಮ ದೇವಿಯ ರಾಜಬೀದಿ ಉತ್ಸವ ನೆರವೇರಿತು. ಬಳಿಕ ಶನಿವಾರ ಬೆಳಿಗ್ಗೆ ಗ್ರಾಮದ ಹಿರಿಯರು ಮತ್ತು ಗುಡಿಗೌಡರ ಸಮ್ಮುಖದಲ್ಲಿ ದೇವಿಯನ್ನು ತೇರಿನಲ್ಲಿ ಕೂರಿಸಿ ತೇರನ್ನು ಎಳೆಯುವ ಮೂಲಕ ಅದ್ದೂರಿಯಾಗಿ ರಥೋತ್ಸವ ಆಚರಿಸಲಾಯಿತು.

ಈ ಜಾತ್ರೆಯ ವಿಶೇಷತೆಯೆಂದರೆ ಚೋಮನ ಕುಣಿತ. ಜಾತ್ರೆಯ ಎಲ್ಲಾ ಕಾರ್ಯಕ್ರಮಗಳು ಚೋಮನ ಅಪ್ಪಣೆಯಂತೆ ನಡೆಯುತ್ತವೆ. ಭಾನುವಾರ ಸಂಜೆ 5 ಗಂಟೆಯಿಂದ



ದೂರದ ಮಾವಿನಕಟ್ಟೆ ಕಣಿವೆಯಿಂದ ಸಿಡಿ ಕಟ್ಟುವ ಕಾರ್ಯ ಪ್ರಾರಂಭವಾಗುತ್ತದೆ. ಸುಮಾರು 2 ಕಿ.ಮೀ ದೂರದಿಂದ ಉಪವಾಸ ವ್ರತ ಮಾಡಿಕೊಂಡು ಸಂಬಂಧಪಟ್ಟವರನ್ನು ದೇವಿಗೆ ಸಿಡಿ ಕಟ್ಟಲಾಗುತ್ತದೆ.

ಬೀಸನಹಳ್ಳಿ, ಲಂಬಾಣಿಹಟ್ಟಿ, ಮಾವಿನಕಟ್ಟೆ, ತುಂಬಿನಕೆರೆ, ನಾಗರಕಟ್ಟೆ, ಕಬ್ಬಳ, ಹೆಬ್ಬಳ್ಳಿ, ಹೇರೂರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕರಿಯಮ್ಮ ದೇವಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುತ್ತಾರೆ.



ಹಿರಿಯೂರುತಾಲೂಕಿನಅಬ್ಬಿನಹೊಳೆಗ್ರಾಮದಎಸ್.ಸಿ.ಕಾಲೋನಿಯಲ್ಲಿ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಹೊರಗುತ್ತಿಗೆ ನೌಕರರ ಮುಷ್ಕರ ಮುಂದೂಡಿಕೆ

ಚಿತ್ರದುರ್ಗ: ಆರೋಗ್ಯ ಇಲಾಖೆಯ ಹೊರಗುತ್ತಿಗೆ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಹಮ್ಮಿಕೊಂಡಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆ ವಿವಿಧ ವೃಂದದ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಅಕ್ಷಯ್ ಡಿ.ಎಂ. ಗೌಡ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆಯುಷ್ ಇಲಾಖೆ ವ್ಯಾಪ್ತಿಯಲ್ಲಿ ರಾಜ್ಯಾದ್ಯಂತ ಸುಮಾರು 25 ಸಾವಿರ ಸಂಖ್ಯೆಯ ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರಿಗೆ ಸಕಾಲದಲ್ಲಿ ವೇತನ ದೊರೆಯುತ್ತಿಲ್ಲ, ಕಾಲ ಕಾಲಕ್ಕೆ ಸಿಗಬೇಕಾದ ಸೌಲಭ್ಯಗಳು ದೊರೆಯುತ್ತಿಲ್ಲ ಎಂದರು.

ಈ ಕುರಿತು ಸರ್ಕಾರಕ್ಕೆ ಅನೇಕ ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ, ಹಾಗಾಗಿ 2026 ಜನವರಿ 04 ರಂದು ತುಮಕೂರಿನ ಸಿದ್ದಗಂಗಾ ಮಠದಲ್ಲಿ ಸರ್ವ ಸದಸ್ಯರ ಸಭೆ ನಡೆಸಿ ನೌಕರರ ಅಭಿಪ್ರಾಯ ಸಂಗ್ರಹಿಸಲಾಯಿತು. ಅದರಂತೆ ಪ್ರತಿ ಜಿಲ್ಲೆಯಲ್ಲಿ ಸಾಂಕೇತಿಕವಾಗಿ ಮುಷ್ಕರ ನಡೆಸುವುದು. ಬಳಿಕ ಮಾ.23 ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವ ಕುರಿತು ತೀರ್ಮಾನಿಸಲಾಯಿತು. ಅದರಂತೆ ಹಾಸನ ಹಾಗೂ ತುಮಕೂರು ಜಿಲ್ಲೆಯಲ್ಲಿ ಸಾಂಕೇತಿಕವಾಗಿ ಮುಷ್ಕರ ಕೈಗೊಂಡು ಸರ್ಕಾರಕ್ಕೆ ಎಚ್ಚರಿಕೆ ನೀಡಲಾಯಿತು. ಉಳಿದ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡುವ ಮೂಲಕ ನೌಕರರ ಸಮಸ್ಯೆಗಳನ್ನು ಸರ್ಕಾರಕ್ಕೆ ತಲುಪಿಸಿದರು. ಈ ಎಲ್ಲಾ ಬೆಳವಣಿಗೆ ಗಮನಿಸಿದ ರಾಜ್ಯ ಕಾರ್ಮಿಕ ಇಲಾಖೆ ಮಾ.12 ರಂದು ಸಂಧಾನ ಸಭೆ ನಿಗಧಿಪಡಿಸಿತು. ಸಂಧಾನ ಸಭೆಯಲ್ಲಿ ಕಾರ್ಮಿಕ ಇಲಾಖೆ ನಮ್ಮ ಸಮಸ್ಯೆಗಳಿಗೆ ಸ್ಪಂದಿಸಿದ ಕಾರಣ ತಾತ್ಕಾಲಿಕವಾಗಿ ಮುಷ್ಕರ ಮುಂದೂಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಮಂಜುಳಾ, ಸಂಘಟನಾ ಕಾರ್ಯದರ್ಶಿ ಬಿ.ಟಿ.ಪ್ರಕಾಶ್, ಜಂಟಿ ಕಾರ್ಯದರ್ಶಿ ಪ್ರತಿಭಾ, ಸಂಘದ ನಿರ್ದೇಶಕರಾದ ಬಿ.ಸಿದ್ದಪ್ಪ, ಜೆ.ಬಿ.ಯೋಗೇಶ್, ದಯಾನಂದ ಹಾಜರಿದ್ದರು.

ಟ್ರೆಕ್ಕಿಂಗ್ ಶಿಬಿರದ ಸಮಾರೋಪ | ಇನ್‌ಸ್ಪೆಕ್ಟರ್ ಬಾಲಚಂದ್ರನಾಯ್ಕ ಸಲಹೆ

ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಅರಿವು ನೀಡಬೇಕು

ಚಿತ್ರದುರ್ಗ: ವಿದ್ಯಾರ್ಥಿಗಳು ಮಾದಕ ವ್ಯಸನಗಳಿಗೆ ಬಲಿಯಾಗುತ್ತಿರುವುದು ದುಃಖಕರ ಸಂಗತಿ. ಈ ನಿಟ್ಟಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ನೆರೆಯ ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಮಾದಕ ವ್ಯಸನದಿಂದಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವಂತೆ ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಬಾಲಚಂದ್ರನಾಯ್ಕ ತಿಳಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾಸಂಸ್ಥೆಯಿಂದ ಚಂದ್ರವಳ್ಳಿಯಲ್ಲಿ ಮೂರು ದಿನಗಳ ಕಾಲ ನಡೆದ ಬ್ಯಾಡ್ಜ್ ವರ್ಕ್ ತರಬೇತಿಯ ಟ್ರೆಕ್ಕಿಂಗ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶಿಕ್ಷಣದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳುವುದರಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯ. ಜೀವನದಲ್ಲಿ ಸಿಟ್ಟಿಗಿಂತ ಶಿಸ್ತು ಮುಖ್ಯ. ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಶಿಕ್ಷಣವನ್ನು ಪಡೆದುಕೊಂಡು ಸಮಾಜದಲ್ಲಿ ಸತ್ಪ್ರಜೆಗಳಾಗಬೇಕು ಎಂದರು.



ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಮಿತಿ ಸದಸ್ಯ ಬಸವರಾಜಪ್ಪ ಮಾತನಾಡಿ, ಶಿಸ್ತಿನ ಸಂಸ್ಥೆಯಲ್ಲಿ ಸೇರ್ಪಡೆಗೊಂಡು ಶಿಕ್ಷಣ ಪಡೆಯುತ್ತಿರುವ ನೀವುಗಳು ನಿಜಕ್ಕೂ ಪುಣ್ಯವಂತರು. ವಾಸವಿ ಶಾಲೆಯ ಸ್ಕೌಟ್ ಮಾಸ್ಟರ್ ಸುರೇಶ್‌ಬಾಬು ನಿರಂತರವಾಗಿ ಸೇವೆ ಸಲ್ಲಿಸುತ್ತಿರುವುದು ಖುಷಿ ತಂದಿದೆ. ಇಡಿ ವಿಶ್ವವೇ ಕೋವಿಡ್‌ನಿಂದ ತಲ್ಲಣಿಸುತ್ತಿದ್ದ ಸಮಯದಲ್ಲಿ ಇವರು ಅನುಪಮ ಸೇವೆ ಸಲ್ಲಿಸಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಅವರ ಸುದೀರ್ಘ ಸೇವೆಯನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಅರ್ಥಪೂರ್ಣ. ಮುಂದೆ ನೀವುಗಳು ಇದೆ ರೀತಿ ಪರೋಪಕಾರದ ಗುಣ ಮೈಗೂಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದರು.

ಜಿಲ್ಲಾ ಸ್ಥಾನಿಕ ಆಯುಕ್ತರಾದ ಪಿ.ವೈ.ದೇವರಾಜ್ ಪ್ರಸಾದ್, ಶಿಕ್ಷಕರಾದ ರವಿ, ವಿಶ್ವನಾಥ, ಮುರುಗೇಶ್, ಲಿಂಗರಾಜ್, ಶೇಖರ್‌ನಾಯ್ಕ, ಸ್ವಾಮಿ, ಕಾಂತರಾಜ್ ಇನ್ನು ಅನೇಕರು ಈ ಸಂದರ್ಭದಲ್ಲಿ ಹಾಜರಿದ್ದರು.

ಜಿಲ್ಲಾ ಸ್ವಯಂ ಸಂಸ್ಥೆಗಳ ಒಕ್ಕೂಟ ರಚನೆ ಕಾರ್ಯಕ್ರಮದಲ್ಲಿ ತಿಪ್ಪೇಸ್ವಾಮಿ

ಅಭಿವೃದ್ಧಿ ನೆಪದಲ್ಲಿ ಮರಗಳ ಮಾರಣ ಹೋಮ

ಚಿತ್ರದುರ್ಗ: ಅಭಿವೃದ್ಧಿ ನೆಪದಲ್ಲಿ ಮರಗಳನ್ನು ಕಡಿದು ಪರಿಸರ ಹಾನಿ ಮಾಡುವುದು ಸರಿಯಲ್ಲ, ಬದಲಾಗಿ ಖಾಲಿ ಜಾಗದಲ್ಲಿ ಅಭಿವೃದ್ಧಿ ಕೆಲಸ ಮಾಡಬೇಕು. ಆ ಮೂಲಕ ಚಿತ್ರದುರ್ಗ ನಗರವನ್ನು ಗಾರ್ಡನ್ ಸಿಟಿ ಮಾಡಲು ಜಿಲ್ಲಾಡಳಿತ ಮುಂದಾಗಲಿ ಎಂದು ಸಮಾಜ ಪರಿವರ್ತನಾ ಸ್ವಯಂ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಕೆ.ತಿಪ್ಪೇಸ್ವಾಮಿ ಒತ್ತಾಯಿಸಿದರು.

ಚಿತ್ರದುರ್ಗ ನಗರದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಚಿತ್ರದುರ್ಗ ಜಿಲ್ಲಾ ಸ್ವಯಂ ಸಂಸ್ಥೆಗಳ ಒಕ್ಕೂಟ ರಚನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜಿಲ್ಲಾಧಿಕಾರಿ ಕಚೇರಿಗೆ ನೂತನ ಕಟ್ಟಡ ನಿರ್ಮಿಸಲು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಜಮೀನು ಪಡೆಯುವುದು ಸರಿಯಲ್ಲ, ಅದರಂತೆ ಸರ್ಕಾರಿ ವಿಜ್ಞಾನ ಕಾಲೇಜಿನ ಆವರಣದಲ್ಲಿನ ಮರಗಳನ್ನು ಕಡಿದು ಮಹಿಳಾ ಕಾಲೇಜು ನಿರ್ಮಾಣ ಮಾಡುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂದರು.

ಹೊಳಲ್ಕೆರೆ ಪೂಜಾ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಹೆಚ್.ಡಿ.ಸವಿತಾರಾಣಿ ಮಾತನಾಡಿ, ಪರಿಸರ ಸಂರಕ್ಷಣೆ ಬಗ್ಗೆ, ಮರ ಉಳಿಸುವುದರ ಬಗ್ಗೆ ಅಧಿಕಾರಿಗಳು ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಹೆಚ್ಚುತ್ತಿರುವ ಬಿಸಿಲಿನ ತಾಪಮಾನ ಕಡಿಮೆಗೊಳಿಸಲು ಮತ್ತು ಜನರಿಗೆ ಕುಡಿಯುವ ನೀರಿನ ಅಭಾವ ತಪ್ಪಿಸಲು, ಮಳೆಯ ಸಾಂಧ್ರತೆಯನ್ನು ಹೆಚ್ಚಿಸಲು ಪರಿಸರ ಅವಶ್ಯಕತೆಯಾಗಿದೆ ಎಂದು ಹೇಳಿದರು.

ಕರ್ನಾಟಕಜ್ಞಾನವಿಜ್ಞಾನಸಮಿತಿಯಡಾ.ಹೆಚ್.ಕೆ.ಎಸ್.ಸ್ವಾಮಿಮಾತನಾಡಿ,



ಪರಿಸರ ಸಂರಕ್ಷಣೆಗಾಗಿ ಜನರು, ನಾಗರೀಕರು ಹೆಚ್ಚಿನ ಭಾಗವಹಿಸಿಕೆಯನ್ನು ತೋರಿಸಬೇಕಾಗುತ್ತದೆ. ಬಿಸಿಲಿನ ತಾಪವನ್ನು ಸಹಿಸಿಕೊಳ್ಳಲಾರದೆ ಜನರು ಪರದಾಡುತ್ತಿದ್ದಾರೆ. ಶ್ರೀಮಂತರಾದರೆ ಹವಾನಿಯಂತ್ರಿತ ಕಾರುಗಳಲ್ಲಿ, ಹವಾನಿಯಂತ್ರಿತ ಬಂಗಲೆಗಳಲ್ಲಿ ವಾಸ ಮಾಡುತ್ತಾರೆ. ಬಡವರಿಗಾದರೂ ನಾವು ಮರಗಳನ್ನು ಉಳಿಸಿಕೊಳ್ಳಬೇಕಾಗಿದೆ ಎಂದರು.

ನಿವೃತ್ತ ಮುಖ್ಯಶಿಕ್ಷಕ ಜಯಪ್ಪ, ಸಂಗೀತ ನಿರ್ದೇಶಕ ಚಂದ್ರಣ್ಣ, ರೈನ್ ಟ್ರಸ್ಟ್‌ನ ಮುಖ್ಯಸ್ಥ ಮಂಜುನಾಥ, ಕಾರ್ಯದರ್ಶಿ ಅಂಬಿಕಾ ಪ್ರಸನ್ನ ಕುಮಾರ್, ಆಶ್ರಮಧಾಮ ಅನಾಥಾಶ್ರಮ ಪ್ರಸಾರ ಟ್ರಸ್ಟ್ ನರಸಿಂಹಮೂರ್ತಿ, ಹರ್ಷವರ್ಧನ ಟ್ರಸ್ಟ್, ಮದರ್ ತೆರೇಸಾ ಟ್ರಸ್ಟ್‌ನ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಿರುಸುದ್ದಿ

ಇಂದಿನಿಂದ ದೇವಸ್ಥಾನ ಉದ್ಘಾಟನೆ ಕಾರ್ಯಕ್ರಮ

ದಾವಣಗೆರೆ: ನಗರದ ಎಂ.ಬಿ ಕೇರಿಯಲ್ಲಿ ನಿರ್ಮಾಣಗೊಂಡಿರುವ ಶ್ರೀಅಶ್ವತ್ಥ ನಾರಾಯಣ ಮಹಾಗಣಪತಿ ದೇವಸ್ಥಾನದ ಉದ್ಘಾಟನೆ ಹಾಗೂ ನಾಗರ ಶಿಲಾಮೂರ್ತಿಯ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮಗಳು ಮಾರ್ಚ್ 17ರಿಂದ 19ರವರೆಗೆ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ. ಮಾರ್ಚ್ 17ರಂದು ಸಂಜೆ 6.30ರಿಂದ ಗಣಪತಿ ಪೂಜೆ, ಗೋಪೂಜೆ, ಆಲಯ ಪ್ರವೇಶ, ಆಲಯ ಪ್ರತಿಷ್ಠೆ, ಆಲಯ ಹುದ್ದಿ, ಪೀಠ ಪೂಜೆ, ವಾಸ್ತು ಹೋಮ, ವಾಸ್ತು ರಾಷ್ಟೋಘ್ನ ಹೋಮ, ಮಹಾಮಂಗಳಾರತಿ ಹಾಗೂ ತೀರ್ಥಪ್ರಸಾದ ವಿನಿಯೋಗ ಇರುತ್ತದೆ. ಮಾ.18ರಂದು ಬೆಳಗ್ಗೆ 7.30ರಿಂದ 8.30ರವರೆಗೆ ಅಧಿವಾಸ, ಕಳಶಗಳ ಪ್ರತಿಷ್ಠಾಪನೆ ಹಾಗೂ ನಾಗರ ಪ್ರತಿಷ್ಠಾಪನೆ, ಸಂಜೆ 7.30ಕ್ಕೆ ಪ್ರತಿಷ್ಠಾಪನಾ ಪೂಜೆ ಮತ್ತು ಹೋಮ ಜರುಗಲಿದೆ. ಮಾ.19ರಂದು ಬೆಳಗ್ಗೆ 7.30ರಿಂದ 8.15ರ ಶುಭ ಮುಹೂರ್ತದಲ್ಲಿ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ, ಪ್ರತಿಷ್ಠಾಪನಾ ಹೋಮ, ಮೂಲ ಮಂತ್ರ ಹವನ, ಶಿಖರ ಪ್ರತಿಷ್ಠಾಪನೆ, ಕಳಸಾರೋಹಣ, ಮಹಾಮಂಗಳಾರತಿ ಹಾಗೂ ಪೂರ್ಣಾಹುತಿಯೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಸಂಪನ್ನಗೊಳ್ಳಲಿವೆ.

ಉಚಿತ ಬ್ಯೂಟಿ ಪಾರ್ಲರ್ ತರಬೇತಿಗೆ ಆಹ್ವಾನ

ದಾವಣಗೆರೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲೂಕು ಸೊಣ್ಣಹಳ್ಳಿಪುರದಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಏಪ್ರಿಲ್ 1ರಿಂದ ಬ್ಯೂಟಿ ಪಾರ್ಲರ್ ಕುರಿತ 35 ದಿನಗಳ ಉಚಿತ ತರಬೇತಿಗೆ ನೇರ ಸಂದರ್ಶನ ಆಯೋಜಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಮಾರ್ಚ್ 23ರಂದು ಬೆಳಗ್ಗೆ 10 ಗಂಟೆಗೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಸೊಣ್ಣಹಳ್ಳಿಪುರ, ಹಸಿಗಾಳ(ಅಂಚೆ), ಹೊಸಕೋಟೆ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನಡೆಯುವ ತರಬೇತಿಗೆ ನೇರವಾಗಿ ವಿದ್ಯಾರ್ಹತೆ ಮತ್ತು ವಿಳಾಸ ದಾಖಲಾತಿಗಳೊಂದಿಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗಾಗಿ ದೂ:89704 76050, 63631 39123, 95915 14154 ಸಂಪರ್ಕಿಸುವಂತೆ ತಿಳಿಸಿದ್ದಾರೆ.

ರಾಮಕೃಷ್ಣ ವಿದ್ಯಾಶಾಲೆ 8ನೇ ತರಗತಿ ಪ್ರವೇಶಕ್ಕೆ ಅರ್ಜಿ

ದಾವಣಗೆರೆ: ಪ್ರಸಕ್ತ ಸಾಲಿನ ಪರಿಶಿಷ್ಟ ಜಾತಿ ಹಾಗೂ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಪೋಷಕರ ಪ್ರತಿಭಾವಂತ ಗಂಡು ಮಕ್ಕಳಿಗೆ ಶ್ರೀರಾಮಕೃಷ್ಣ ವಿದ್ಯಾಶಾಲೆ, ಮೈಸೂರು ಇಲ್ಲಿ 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಏಪ್ರಿಲ್ 15ರಂದು ಬೆಳಗ್ಗೆ 10 ಗಂಟೆಗೆ ಶ್ರೀರಾಮಕೃಷ್ಣ ವಿದ್ಯಾಶಾಲಾ, ಯಾದವಗಿರಿ. ಮೈಸೂರು-570020 ಇಲ್ಲಿ ಆಯ್ಕೆಯ ಪ್ರವೇಶ ಪರೀಕ್ಷೆ ಇರುತ್ತದೆ. ಅರ್ಜಿಯನ್ನು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. ಕೊಠಡಿ ಸಂಖ್ಯೆ:37. ಮೊದಲನೇ ಮಹಡಿ, ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಕಚೇರಿಗೆ ಮಾರ್ಚ್ 23ರೊಳಗಾಗಿ ಸಲ್ಲಿಸಬೇಕೆಂದು ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಮಾ.23ಕ್ಕೆ ಅಂಚೆ ವಿಭಾಗೀಯ ಡಾಕ್- ಅದಾಲತ್

ದಾವಣಗೆರೆ: ದಾವಣಗೆರೆ ಅಂಚೆ ವಿಭಾಗೀಯ ಡಾಕ್-ಅದಾಲತ್ ಮಾರ್ಚ್ 23 ರಂದು ಮಧ್ಯಾಹ್ನ 4ಗಂಟೆಗೆ ದಾವಣಗೆರೆ ಅಂಚೆ ಅಧೀಕ್ಷಕರ ಕಚೇರಿ, ಪ್ರಧಾನ ಅಂಚೆ ಕಚೇರಿಯ ಮೊದಲನೇ ಮಹಡಿ, ಗಡಿಯಾರದ ಕಂಬದ ಹತ್ತಿರ, ಮಂಡಿಪೇಟೆ ಇಲ್ಲಿ ನಡೆಸಲಾಗುವುದು. ಸಾರ್ವಜನಿಕರು ಮತ್ತು ಅಂಚೆ ಗ್ರಾಹಕರು ಅಂಚೆ ಸೇವೆಗಳಿಗೆ ಸಂಬಂಧಿಸಿದ ದೂರುಗಳನ್ನು ಮತ್ತು ಸಲಹೆಗಳನ್ನು ಮಾರ್ಚ್ 23 ಅಥವಾ ಅದಕ್ಕಿಂತ ಮುಂಚಿತವಾಗಿ ಅಂಚೆ ಅಧೀಕ್ಷಕರ ಕಚೇರಿಗೆ ಮುಂದಿನ ಕ್ರಮಕ್ಕಾಗಿ ತಲುಪಿಸುವಂತೆ ತಿಳಿಸಿದ್ದಾರೆ.



ಮಲೇಬೆನ್ನೂರು ಪಟ್ಟಣದ ಆರಕ್ಷಕ ಠಾಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜನಾಂಗದ ಕುಂದುಕೊರತೆ ಸಭೆ ವೃತ್ತ ನಿರೀಕ್ಷಕ ಸುರೇಶ್ ಸಗರಿ ಅಧ್ಯಕ್ಷತೆಯಲ್ಲಿ ಜರುಗಿತು. ಈ ವೇಳೆ ಪಿಎಸ್ಐ ಹಾರೂನ್ ಅಕ್ತರ್, ಶ್ರೀಪತಿ ಗಿನ್ನಿ, ನಾಗರಿಕರು ಭಾಗವಹಿಸಿದ್ದರು.

ಮಾ.20ಕ್ಕೆ ಗಡ್ಡೆ ರಾಮೇಶ್ವರದಲ್ಲಿ ಬ್ರಹ್ಮ ರಥೋತ್ಸವ

ನ್ಯಾಮತಿ: ತಾಲೂಕಿನ ಕುರುವ ಗ್ರಾಮದ ಪುರಾಣ ಪ್ರಸಿದ್ಧ ಗಡ್ಡೆ ಶ್ರೀರಾಮೇಶ್ವರ ದೇಗುಲದಲ್ಲಿ ಪ್ರತಿವರ್ಷ ಯುಗಾದಿ ಹಬ್ಬದ ಮಾರನೇ ದಿನದಂದು ಬ್ರಹ್ಮ ರಥೋತ್ಸವ ನಡೆಯಲಿದೆ. ಈ ಬಾರಿ ಮಾರ್ಚ್ 19ರ ಗುರುವಾರದಿಂದ ಮಾರ್ಚ್ 20ರ ಶುಕ್ರವಾರದವರೆಗೆ ಬ್ರಹ್ಮ ರಥೋತ್ಸವ, ಚಂದ್ರ ದರ್ಶನ ನಡೆಯಲಿದೆ.

ಶ್ರೀರಾಮೇಶ್ವರ ದೇಗುಲದ ಆವರಣದಲ್ಲಿ ಶ್ರೀಗಣಪತಿ, ದುರ್ಗಮ್ಮ ದೇವಿ, ಶ್ರೀವೀರ ಭದ್ರೇಶ್ವರ ಸ್ವಾಮಿ, ಶ್ರೀಕಾಲ ಭೈರವೇಶ್ವರ ಸ್ವಾಮಿ, ಕುರುಹು ಬಸವಣ್ಣ ವಿಗ್ರಹಗಳಿವೆ. ಇದು ಮುಜರಾಯಿ ಇಲಾಖೆಗೆ ಒಳಪಟ್ಟಿದ್ದು, ಸುಮಾರು 25 ಎಕರೆ ವಿಶಾಲ ಜಾಗದ ಮಧ್ಯೆ ದೇಗುಲವಿದೆ.

ಕುರುವ ಗಡ್ಡೆ ರಾಮೇಶ್ವರ ರಥೋತ್ಸವ ಅಂಗವಾಗಿ ಮಾರ್ಚ್ 19ರ ಗುರುವಾರ ಬೆಳಗ್ಗೆ ಪುಣ್ಯಾಹ, ಪಂಚಾಮೃತ ಸಹಿತ ರುದ್ರಾಭಿಷೇಕ, ಕಂಕಣಧಾರಣೆಉಬ್ಬಾಯ, ಮಾರ್ಚ್ 20ರ ಶುಕ್ರವಾರ ಬೆಳಗ್ಗೆ ರಥಾ ದಿವಾಸ ಹೋಮ, ಬಲಿ ಹಾಗೂ ಬ್ರಹ್ಮರಥೋತ್ಸವ ಸಂಜೆ ಹಿರೇಬಾಸೂರು ಶ್ರೀಆಂಜನೇಯ ಸ್ವಾಮಿ ದೇವರ ಸಮ್ಮುಖದಲ್ಲಿ ಗೆಡ್ಡೆರಾಮೇಶ್ವರ ರಥೋತ್ಸವ, ಚಂದ್ರದರ್ಶನ, ಮಾರ್ಚ್ 21ರ ಶನಿವಾರ ಬೆಳಗ್ಗೆ ಓಕಳಿ, ಸುತ್ತಮುತ್ತಲಿನ ದೇವರುಗಳ ಗೆಡ್ಡೆ ರಾಮೇಶ್ವರ ದೇಗುಲಕ್ಕೆ ಆಗಮನ ಸಂಜೆ ರಾಂಪುರ ಹಾಲಸ್ವಾಮೀಜಿಮಠದಶ್ರೀಸದ್ಗುರುಶಿವಯೋಗಿ ಹಾಲಸ್ವಾಮೀಜಿ ಪಲ್ಲಕ್ಕಿ ಉತ್ಸವದೊಂದಿಗೆ ಕಾರ್ಣಿಕ ಭವಿಷ್ಯವಾಣಿ ರೊಟ್ಟಿ ಬುತ್ತಿ ಹಂಚಿಕೆ ಕಾರ್ಯಕ್ರಮ, ಮಾರ್ಚ್ 22ರ ಭಾನುವಾರ ಕುರುವ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಂದ ಶ್ರೀದುರ್ಗಾದೇವಿಗೆ ಉಡಕ್ಕಿ ಸಮರ್ಪಣೆ ನಡೆಯಲಿದೆ.



ದಾವಣಗೆರೆ ನಗರದ ವಚನಾಮೃತ ಬಳಗದ ವತಿಯಿಂದ ಇತ್ತೀಚೆಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ದೇಶದ ನಾನಾ ರಾಜ್ಯಗಳ ಸಾಂಪ್ರದಾಯಿಕ ಉಡುಗೆ ತೊಟ್ಟು, ಆಯಾ ಪ್ರಾಂತ್ಯಗಳ ಸಾಂಸ್ಕೃತಿಕ ವಿಶೇಷತೆ ವಿವರಿಸುವ ಮೂಲಕ ಮಹಿಳೆಯರು ಗಮನ ಸೆಳೆದರು. ಬಳಗದ ಸೌಮ್ಯ ಸತೀಶ್, ರಾಜಶ್ರೀ, ದೀಪ, ಸುರೇಖಾ, ಸರೋಜ, ಭಾರತಿ, ಸುಮಾ, ಕಾತ್ಯಾಯಿನಿ, ರೇಖಾ, ಸೌಮ್ಯ ಶಿವಕುಮಾರ್, ಕವಿತಾ, ರಾಜೇಶ್ವರಿ ಪಾಲ್ಗೊಂಡಿದ್ದರು.

ಪರಿಶೀಲನೆಗೆ 12 ಚೆಕ್‌ಪೋಸ್ಟ್ ಸ್ಥಾಪನೆ | ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ

ಮಾರ್ಚ್ 15ರಿಂದಲೇ ನೀತಿ ಸಂಹಿತೆ ಜಾರಿ

ದಾವಣಗೆರೆ: ಕೇಂದ್ರ ಚುನಾವಣಾ ಆಯೋಗವು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಿರುವ ಹಿನ್ನೆಲೆಯಲ್ಲಿ ಮಾರ್ಚ್ 15ರಿಂದಲೇ ಮಾದರಿ ನೀತಿಸಂಹಿತೆ ಜಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಪ್ರಕ್ರಿಯೆಗಳ ಕುರಿತು ಮಾಹಿತಿ ನೀಡಿದ ಅವರು, ಮಹಾನಗರ ಪಾಲಿಕೆಯ ಮುಖ್ಯ ಕಾರ್ಯಾಲಯದಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣಾಧಿಕಾರಿ ಕಚೇರಿ ಸ್ಥಾಪಿಸಲಾಗಿದ್ದು, ಅಲ್ಲಿಯೇ ನಾಮಪತ್ರ ಸ್ವೀಕರಿಸಲಾಗುವುದು. ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳೊಂದಿಗೆ ಹೆಚ್ಚಿನ ಸಂಖ್ಯೆಯ ವಾಹನ ಮತ್ತು ಬೆಂಬಲಿಗರು ಆಗಮಿಸುವ ಸಂಭವ ಇರುವುದರಿಂದ ಸಾರ್ವಜನಿಕ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸುತ್ತಮುತ್ತಲಿನ 100 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ ಎಂದರು.

ಚುನಾವಣಾ ಘೋಷಣೆಯಾದ ಮಾರ್ಚ್ 15ರಿಂದ ನೀತಿಸಂಹಿತೆ ಜಾರಿಯಲ್ಲಿದ್ದು, ಮೇ 6ರವರೆಗೆ ಜಾರಿಯಲ್ಲಿರುತ್ತದೆ. ದಾವಣಗೆರೆ ಮಹಾನಗರ ಪಾಲಿಕೆ ಮತ್ತು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಮಾತ್ರ ನೀತಿಸಂಹಿತೆ ಸೀಮಿತವಾಗಿದೆ. ಚುನಾವಣಾ ಕರಪತ್ರ, ಪೋಸ್ಟರ್ ಪ್ರಕಟಣೆ ಕುರಿತು ಪ್ರಿಂಟಿಂಗ್ ಪ್ರೆಸ್ ಮಾಲೀಕರು ಅನುಮತಿ ಪಡೆಯುವುದು ಕಡ್ಡಾಯ. ನಗರದಲ್ಲಿರುವ ರಾಜಕೀಯ ವ್ಯಕ್ತಿಗಳ ಫ್ಲೆಕ್ಸ್, ಬ್ಯಾನರ್ ಹಾಗೂ ಸರ್ಕಾರಿ ಜಾಹೀರಾತುಗಳನ್ನು 24 ಗಂಟೆಯೊಳಗೆ ತೆರವುಗೊಳಿಸಲು ಈಗಾಗಲೇ ತಂಡ ರಚಿಸಲಾಗಿದೆ ಎಂದು ಅವರು ವಿವರಿಸಿದರು.

ನೀತಿಸಂಹಿತೆ ಜಾರಿಯಲ್ಲಿರುವುದರಿಂದ ಒಬ್ಬ ವ್ಯಕ್ತಿ 50 ಸಾವಿರ ರೂ.ವರೆಗೆ ನಗದು ಸಾಗಣೆ ಮಾಡಬಹುದು. ಅದಕ್ಕಿಂತಲೂ ಹೆಚ್ಚಿನ ನಗದು ಸಾಗಣೆ ಮಾಡಬೇಕಾದಲ್ಲಿ ಅಗತ್ಯ ದಾಖಲೆ ಇರಬೇಕು. ದಾಖಲೆಗಳಿಲ್ಲದೆ ನಗದು ಸಾಗಣೆ ಮಾಡಿದಲ್ಲಿ ವಶಪಡಿಸಿಕೊಳ್ಳಲಾಗುತ್ತದೆ. ನಾಮಪತ್ರ ಸಲ್ಲಿಸಿದ ದಿನದಿಂದ ಫಲಿತಾಂಶ ಘೋಷಣೆಯಾಗುವವರೆಗೆ ಎಲ್ಲಾ ವೆಚ್ಚಗಳ ಲೆಕ್ಕಪತ್ರವನ್ನು ಕಡ್ಡಾಯವಾಗಿ ನಿರ್ವಹಿಸಬೇಕು. ಪ್ರತಿ ಅಭ್ಯರ್ಥಿಯು ಚುನಾವಣಾವೆಚ್ಚಕ್ಕಾಗಿಪ್ರತ್ಯೇಕಬ್ಯಾಂಕ್ ಖಾತೆಯನ್ನು ತೆರೆಯಬೇಕು. ಅಭ್ಯರ್ಥಿಗಳ ಗರಿಷ್ಠ ವೆಚ್ಚದ ಮಿತಿಯನ್ನು 40 ಲಕ್ಷ ರೂ.ಗಳಿಗೆ ನಿಗದಿಪಡಿಸಿದ್ದು, ಅಭ್ಯರ್ಥಿಗಳು ತಮ್ಮ ವೆಚ್ಚದ ವಿವರ ನೋಡಿಕೊಳ್ಳಲು ಒಬ್ಬ ಚುನಾವಣಾ ವೆಚ್ಚ ಏಜೆಂಟ್ ನ್ನು ನೇಮಿಸಿಕೊಳ್ಳಬಹುದು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೆಚ್.ಟಿ. ಶೇಖರ್ ಮಾತನಾಡಿ, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಿದ್ದು, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದೆ. 12 ಚೆಕ್ ಪೋಸ್ಟ್ ತೆರೆಯಲಾಗಿದೆ. 10 ಮೊಬೈಲ್‌ಸ್ಕ್ವಾಡ್ ನಿಯೋಜಿಸಲಾಗಿದೆ. ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಸೂಕ್ತ ಕ್ರಮ ವಹಿಸಲಾಗಿದೆ. ರೌಡಿಶೀಟರ್ ಗಳನ್ನು ಗುರುತಿಸಿ, ಬಾಂಡ್ ಓವರ್ ಮತ್ತು ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಜಿಪಂ ಸಿಇಒ ಗಿತ್ತೆ ಮಾಧವ ವಿಠಲರಾವ್, ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್ ಉಪಸ್ಥಿತರಿದ್ದರು.



- ಚುನಾವಣೆ ಉಸ್ತುವಾರಿಗಾಗಿ 3 ಅಧಿಕಾರಿಗಳ 8 ಫ್ಲೈಯಿಂಗ್ ಸ್ಕ್ವಾಡ್ ತಂಡ, ವಿಡಿಯೋ ಸರ್ವೆಲೆನ್ಸ್ ತಂಡ, ವೀಡಿಯೋ ವೀಕ್ಷಕರ ತಂಡ, ಲೆಕ್ಕಪತ್ರ ತಂಡ ರಚನೆ
- ಎಪಿಕ್ ಕಾರ್ಡ್ ಜೊತೆಗೆ ಮತದಾರರ ಪಟ್ಟಿಯಲ್ಲಿ ಹೆಸರು ಇರುವುದು ಕಡ್ಡಾಯ.
- ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ/ ತಿದ್ದುಪಡಿಗೆ ಅರ್ಜಿ ಸಲ್ಲಿಸಲು ಮಾರ್ಚ್ 24ರವರೆಗೆ ಅವಕಾಶ.
- ಚುನಾವಣೆಗೆ ಸಂಬಂಧಿಸಿದಂತೆ ಅಕ್ರಮಗಳ ಬಗ್ಗೆ ಟೋಲ್ ಫ್ರೀ ಸಂಖ್ಯೆ 1950ಕ್ಕೆ ಕರೆ ಮಾಡಿ ದೂರು ನೀಡಬಹುದು.
- ಸಿವಿಜಿಲ್ ಆಪ್ ಬಳಸಿಯೂ ಚುನಾವಣಾ ಅಕ್ರಮ ತಡೆಗೆ ಸಾರ್ವಜನಿಕರು ಸಹಕರಿಸಲು ಮನವಿ.
- ಅನಧಿಕೃತ ಅಥವಾ ಸುಳ್ಳು ಸುದ್ದಿ ಹರಡುವ ಯೂಟ್ಯೂಬರ್ಸ್‌ಗಳ ವಿರುದ್ಧ ಕಠಿಣ ಕಾನೂನು ಕ್ರಮ.
- ಮಹಾನಗರ ಪಾಲಿಕೆಯ ಕೇಂದ್ರ ಕಚೇರಿಯಲ್ಲಿ 24★7 ವಾರ್ ರೂಂ, ಚುನಾವಣೆ ಕಚೇರಿ ಕಾರ್ಯ ನಿರ್ವಹಣೆ.

ಮಾರ್ಚ್ 23 – ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ.

ಮಾರ್ಚ್ 24 – ನಾಮಪತ್ರಗಳ ಪರಿಶೀಲನೆ.

ಮಾರ್ಚ್ 26 – ನಾಮಪತ್ರ ಹಿಂಪಡೆಯಲು ಕೊನೆಯ ದಿನ.

ಏಪ್ರಿಲ್ 9 – ಮತದಾನ, ಬೆಳಗ್ಗೆ 7ರಿಂದ ಸಂಜೆ 6ರವರೆಗೆ.

ಮೇ 4 – ಫಲಿತಾಂಶ

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಒಟ್ಟು 284 ಮತಗಟ್ಟೆಗಳಿದ್ದು, ಇದರಲ್ಲಿ 234 ನಗರ ವ್ಯಾಪ್ತಿಯಲ್ಲಿದ್ದರೆ, 50 ಗ್ರಾಮೀಣ ಭಾಗದಲ್ಲಿವೆ. ಪುರುಷ 1,13,654, ಮಹಿಳೆಯರು 1,17,986, ತೃತೀಯ ಲಿಂಗಿಗಳು 43 ಸೇರಿ ಒಟ್ಟಾರೆ 2,31,683 ಮತದಾರರಿದ್ದಾರೆ. ಇವರಲ್ಲಿ ಪುರುಷರು 1,452 ಪುರುಷ, 1,322 ಮಹಿಳಾ ಸೇರಿ ಒಟ್ಟು 2,774 ಯುವ ಮತದಾರರು ಸೇರಿದ್ದಾರೆ. ಪುರುಷರು 1,379, ಮಹಿಳೆಯರು 1,139 ಸೇರಿ ಒಟ್ಟು 2,518 ವಿಶೇಷಚೇತನ ಮತದಾರರಿದ್ದಾರೆ. 85 ವರ್ಷಕ್ಕಿಂತ ಹೆಚ್ಚು ವಯೋಮಾನದ 928 ಪುರುಷರು, 1,138 ಮಹಿಳೆಯರು ಸೇರಿ ಒಟ್ಟು 2,066 ಮತದಾರರಿದ್ದಾರೆ. ಇವರುಗಳಿಗೆ ಮನೆಯಿಂದಲೇ ಅಂಚೆ ಮತದಾನ ಮಾಡಲು ವ್ಯವಸ್ಥೆ ಕಲ್ಪಿಸಲಾಗುತ್ತದೆ.

■ ಜಿ.ಎಂ. ಗಂಗಾಧರಸ್ವಾಮಿ, ಡಿಸಿ



ದಾವಣಗೆರೆ ನಗರದ ಜಿಎಂ ವಿಶ್ವವಿದ್ಯಾಲಯದಲ್ಲಿ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಉನ್ನತ್ ಭಾರತ್ ಅಭಿಯಾನ್ ಪ್ರಾದೇಶಿಕ ಸಮನ್ವಯ ಸಂಸ್ಥೆ ಸಹಯೋಗದಲ್ಲಿ ಯೋಜನೆಯಡಿ ಸಂಭಾವ್ಯ ಸಂಸ್ಥೆಗಳಿಗಾಗಿ ಒಂದು ದಿನದ ಓರಿಯಂಟೇಶನ್ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಹರಪನಹಳ್ಳಿ: ವಾತ್ಸಲ್ಯ ಮನೆ ಹಸ್ತಾಂತರ

ಹರಪನಹಳ್ಳಿ: ತಾಲೂಕಿನ ಗುಂಡಗತ್ತಿ ವಲಯದ ಯಡಿಹಳ್ಳಿ ಚಂದ್ರಮ್ಮ ಅವರಿಗೆ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ರಾಜ್ಯ ಸಂಘಟನಾ ಅಧ್ಯಕ್ಷ ನಟರಾಜ್ ಬಾದಾಮಿ ಅವರು ವಾತ್ಸಲ್ಯ ಮನೆ ಹಸ್ತಾಂತರಿಸಿದರು.

ನಂತರ ಮಾತನಾಡಿದ ಅವರು. ಸಮಾಜದಲ್ಲಿ ಅತೀ ದುರ್ಬಲ ಹಾಗೂ ಅಸಹಾಯಕ ಸ್ಥಿತಿಯಲ್ಲಿರುವ ನಿರ್ಗತಿಕ ಕುಟುಂಬಗಳನ್ನು ಗುರುತಿಸಿ ನಮಗೆ ಯಾರು ಇಲ್ಲ ಎನ್ನುವ ಹತಾಶೆಯಲ್ಲಿ ಇರಬಾರದು ಎನ್ನುವ ಉದ್ದೇಶದಿಂದ ಅಂತವರಿಗೆ ತುರ್ತು ಮೂಲ ಸೌಕರ್ಯ ವ್ಯವಸ್ಥೆಗಳಾದ ಪೌಷ್ಟಿಕ ಆಹಾರ, ಪಾತ್ರೆ, ಬಟ್ಟೆ ಹಾಗೂ ನೆಮ್ಮದಿ ಜೀವನ ನಡೆಸಲು ಸೂರಿನ ವ್ಯವಸ್ಥೆ ನಿರ್ಮಿಸಿಕೊಡುತ್ತಿರುವುದು ಪುಣ್ಯದ ಕೆಲಸವಾಗಿದೆ. ಇದಕ್ಕೆ ನಾವೆಲ್ಲರೂ ಆಭಾರಿಯಾ ಗಿರುತ್ತೇವೆಂದು ಹೇಳಿದರು.

ಅಖಿಲ ಕರ್ನಾಟಕ ಜನ ಜಾಗೃತಿ ಪದಾಧಿಕಾರಿ ಎಸ್.ಪಿ. ಲಿಂಬ್ಯಾನಾಯ್ಕ್ ಮಾತನಾಡಿ, ಆರ್ಥಿಕ ಸಹಕಾರ, ಗ್ರಾಮದ ಅಭಿವೃದ್ಧಿಗೆ ಸಹಕಾರ ನೀಡುತ್ತಿದೆ, ಸಂಸ್ಥೆಗೆ ನಾವೆಲ್ಲ ಚಿರರುಣಿಯಾಗಬೇಕು. ಇದನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು.



ಗ್ರಾಪಂ ಅಧ್ಯಕ್ಷರಾದ ಪಿ. ರಾಮಪ್ಪ, ಜ್ಞಾನವಿಕಾಸ ಯೋಜನಾಧಿಕಾರಿ ರತ್ನ ಮೈಪಾಳ, ಹರಪನಹಳ್ಳಿ ಯೋಜನಾಧಿಕಾರಿ ಡಿ. ಸುಬ್ರಮಣ್ಯ, ಅಧ್ಯಕ್ಷತೆ ಒಕ್ಕೂಟದ ಅಧ್ಯಕ್ಷ ವಿರೂಪಾಕ್ಷಪ್ಪ, ಮೇಲ್ವಿಚಾರಕ ಬಿ.ಎಸ್. ರಕ್ಷಿತ್ ಹೇಮಂತ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸುನೀತಾ ಉಪಸ್ಥಿತರಿದ್ದರು.



ದಾವಣಗೆರೆ ನಗರದ ಜಿಎಂಯು ಕ್ಯಾಂಪಸ್ ನಲ್ಲಿ ನಿರ್ಮಾಣಗೊಂಡಿರುವ ಡಿಜಿಟಲೀಕೃತ ಸುಸಜ್ಜಿತ ನೂತನ ಅಕಾಡೆಮಿಕ್ ಬ್ಲಾಕ್ ಕಟ್ಟಡದಲ್ಲಿ ಹೋಮ-ಹವನ ಸೇರಿದಂತೆ ವಿಶೇಷ ಪೂಜಾ ಕಾರ್ಯಕ್ರಮಗಳು ವೈಭವದಿಂದ ನೆರವೇರಿದವು. ವಿಶ್ವವಿದ್ಯಾಲಯದ ಕುಲಾಧಿಪತಿ ಜಿ.ಎಂ. ಲಿಂಗರಾಜು ತಮ್ಮ ಕುಟುಂಬ ವರ್ಗದವರೊಂದಿಗೆ ಭಾಗವಹಿಸಿ, ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ ನೂತನ ಕಟ್ಟಡವನ್ನು ಉದ್ಘಾಟಿಸಿದರು. ಸಹ ಕುಲಪತಿ ಡಾ.ಹೆಚ್.ಡಿ. ಮಹೇಶಪ್ಪ, ಕುಲಸಚಿವ ಡಾ.ಸುನೀಲ್ ಕುಮಾರ್, ಆಡಳಿತಧಿಕಾರಿ ವೈ.ಯು. ಸುಭಾಷ್ ಉಪಸ್ಥಿತರಿದ್ದರು.

ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆ ಯಶಸ್ವಿ: ರಾಧಾ ಹನುಮಂತಪ್ಪ

ಹರಿಹರ: ಸ್ವಾವಲಂಬಿಯಾಗಿ ವಿಶೇಷ ಸಾಧನೆಯನ್ನು ಮಾಡಿ ಮಹಿಳೆಯು ಯಶಸ್ವಿ ಆಗಿದ್ದಾಳೆ ಎಂದು ಲೇಖಕಿ, ಸಾಹಿತಿ ರಾಧಾ ಹನುಮಂತಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಚಿಂತನ ಪ್ರತಿಷ್ಠಾನದ ಕಚೇರಿಯಲ್ಲಿ ಪ್ರಗತಿಪರ ಬರಹಗಾರರ ಒಕ್ಕೂಟ ಹಾಗೂ ಚಿಂತನ ಪ್ರತಿಷ್ಠಾನ ಸಹಯೋಗ ದೊಂದಿಗೆ ಪ್ರತಿ ತಿಂಗಳ ಹಮ್ಮಿಕೊಳ್ಳುವ ಮಾಸಿಕ ಸಾಹಿತ್ಯ ಸತ್ಸಂಗ ಕಾರ್ಯಕ್ರಮದಲ್ಲಿ ವಿಶ್ವ ಮಹಿಳಾ ದಿನ ಕುರಿತು ಮಾತನಾಡಿದರು.

ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜ ಕೀಯ ಸಾಧನೆಗಳನ್ನು ಗೌರವಿಸುವ ಸಲುವಾಗಿ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಗುತ್ತಿದೆ ಎಂದರು.

ತೊಟ್ಟಿಲು ತೂಗುವ ಕೈ ಜಗತ್ತನ್ನೇ ಆಳಬಲ್ಲದು ಎಂದು ರಾಜಕಾರಣ ಕ್ಷೇತ್ರದಲ್ಲಿರುವ ಮಹಿಳೆಯರು ತೋರಿಸಿದ್ದಾರೆ. ಆದರ್ಶ ಮಹಿಳೆಯರು ನಮಗೆ ದಾರಿದೀಪವಾಗಬೇಕು. ಅವರ ತತ್ವ ಆದರ್ಶಗಳನ್ನು ನಾವುಗಳು ನಮ್ಮ ಬಾಳಲ್ಲಿ ಕೂಡಾ ಅನುಸರಿಸಬೇಕಾಗಿದೆ. ಪ್ರಸ್ತುತ ಮಹಿಳೆ ಕಾರ್ಯ ನಿರ್ವಹಿಸದ ಕ್ಷೇತ್ರಗಳೇ ಇಲ್ಲ, ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆ ಕಾಲಿರಿಸಿದ್ದಾಳೆ. ಜೊತೆಗೆ ಉತ್ತಮ ಸೇವೆ ಸಲ್ಲಿಸಿ ಸಾಧಿಸಿ ಗುರುತಿಸಲ್ಪಟ್ಟಿದ್ದಾಳೆ ಎಂದರು.

ಕುಟುಂಬದ ನಿರ್ವಹಣೆ ಜೊತೆಗೆ ಸಾಮಾಜಿಕ ಸೇವೆಯಲ್ಲಿ ತೊಡಗಿರುವ ಮಹಿಳೆ ಯಶಸ್ವಿ ಯಾಗಿದ್ದಾಳೆ. ಮಹಿಳೆಯರ ಪ್ರಗತಿಗೆ ಪುರುಷರೂ ಕೈಜೋಡಿಸಿದ್ದಾರೆ. ಒಟ್ಟಾರೆ ಎಲ್ಲರ ಸಹಕಾರದಿಂದ ಇಂದು ಮಹಿಳೆ ಉನ್ನತ ಸ್ಥಾನದಲ್ಲಿದ್ದಾಳೆ. ಸಾಧನೆ ಮಾಡಿದ ಎಲ್ಲಾ ಮಹಿಳೆಯರು ಅಭಿನಂದನಾರ್ಹರು ಎಂದು ಹೇಳಿದರು.

ಒಕ್ಕೂಟದ ಕಾರ್ಯದರ್ಶಿ ಡಿ. ಫ್ರಾನ್ಸಿಸ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಧ್ಯಕ್ಷತೆವಹಿಸಿಒಕ್ಕೂಟದಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್ ಮಾತನಾಡಿದರು. ಗಾಯತ್ರಿ ಅವರು ಪ್ರಾರ್ಥಿಸಿದರು. ಕೊನೆಯಲ್ಲಿ ಮಂಜುನಾಥ್ ಅಗಡಿ ವಂದಿಸಿದರು. ಸತ್ಸಂಗ ಕಾರ್ಯಕ್ರಮದಲ್ಲಿ ನಾಗರತ್ನ, ಎ.ಬಿ. ಮಂಜಮ್ಮ ಹೊಳೆಸಿರಿಗೆರೆ, ಚಂದನಾ, ವೈ. ನೀಲಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ನಂದಿಗುಡಿ ವೃಷಭಪುರ ಸಂಸ್ಥಾನ ಮಠದ ಶ್ರೀ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ

ಪ್ರಕೃತಿ ಸಹಜ ಜೀವನಶೈಲಿಯಿಂದ ಉತ್ತಮ ಆರೋಗ್ಯ

ಹರಿಹರ: ಪ್ರಕೃತಿ ಸಹಜ ಜೀವನಶೈಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು ಅಗತ್ಯ ಎಂದು ನಂದಿಗುಡಿ ವೃಷಭಪುರ ಸಂಸ್ಥಾನ ಮಠದ ಶ್ರೀಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಕರೆ ನೀಡಿದರು.

ತಾಲೂಕಿನ ಉಕ್ಕಡಗಾತ್ರಿಯಲ್ಲಿ ಸೋಮವಾರ ಶ್ರೀಕರಿಬಸವೇಶ್ವರ ಸ್ವಾಮಿ ಗದ್ದಿಗೆ ಟ್ರಸ್ಟ್ ಹಾಗೂ ಹರಪನಹಳ್ಳಿಯ ಜನನಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರದ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಪಾಶ್ಚಾತ್ಯ ಜೀವನಶೈಲಿಗೆ ಸಮಾಜ ಮಾರುಹೋದ ಪರಿಣಾಮ ಇಂದು ಅನೇಕ ರೋಗಗಳು ನಮ್ಮನ್ನು ಬಾಧಿಸುತ್ತಿವೆ. ನಮ್ಮ ಹಿರಿಯರು ತಲೆಮಾರುಗಳಿಂದ ಬಾಳಿ ಬದುಕಿದ ಸಹಜ ಜೀವನಶೈಲಿ ನಮ್ಮ ಆರೋಗ್ಯಕ್ಕೆ ಪೂರಕ. ಈ ಬಗ್ಗೆ ಸಮಾ ಜದಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಜನನಿ ಸಂಸ್ಥೆ ಈ ಶಿಬಿರ ಹಮ್ಮಿಕೊಂಡಿರುವುದು ಔಚಿತ್ಯಪೂರ್ಣ ಎಂದು ಅಭಿಪ್ರಾಯ ಪಟ್ಟರು.



ಶಿಬಿರ ಉದ್ಘಾಟಿಸಿದ ಟ್ರಸ್ಟ್ ಕಾರ್ಯದರ್ಶಿ ಸುರೇಶ್ ಮಾತನಾಡಿ, ಯೋಗದಿಂದ ರೋಗ ದೂರವಾಗುತ್ತದೆ. ಅಂತೆಯೇ ನಮ್ಮ ಆರೋಗ್ಯ ಕಾಪಾಡಿಕೊಳ್ಳಲು ಪ್ರಕೃತಿ ನಮಗೆ ನೀಡಿದ ಅನೇಕ ಅಂಶಗಳನ್ನು ನಾವಿಂದು ಮರೆತಿದ್ದೇವೆ. ಔಷಧರಹಿತವಾಗಿ ನಮ್ಮ ಜೀವನಶೈಲಿ ಮಾರ್ಪಡಿಸಿಕೊಳ್ಳುವ ಮೂಲಕ ಮರೆತ ಅಂಶಗಳನ್ನು ನಮಗೆ ಪ್ರಕೃತಿ ಚಿಕಿತ್ಸಾ ಪದ್ಧತಿ ನೆನಪಿಸುತ್ತಿದೆ. ಈ ಬಗ್ಗೆ ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಿದಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಆಸ್ಪತ್ರೆಯ ನಿರ್ದೇಶಕ ಮತ್ತು ಮುಖ್ಯ ವೈದ್ಯಾಧಿಕಾರಿ ಡಾ. ರಾಜೇಶ್ ಪಾದೇಕಲ್ ಮಾತನಾಡಿ, ಒಮ್ಮೆ ಆರೋಗ್ಯ ಹದಗೆಟ್ಟರೆ ಸರಿಪಡಿಸಿಕೊಳ್ಳುವುದು ಕಷ್ಟಸಾಧ್ಯ. ಆರೋಗ್ಯ ಸೇವೆ ದುಬಾರಿಯಾಗುತ್ತಿರುವ ಇಂದಿನ ದಿನಗಳಲ್ಲಿ ರೋಗ ಬಾರದಂತೆ ಮುನ್ನೆಚ್ಚರಿಕೆ ವಹಿಸುವುದೇ ಜಾಣತನ. ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಪ್ರಯೋಜನ ಪಡೆದುಕೊಳ್ಳುವ ಜೊತೆಗೆ ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳೋಣ ಎಂದು ಸಲಹೆ ನೀಡಿದರು.

ಪತ್ರಕರ್ತ ರಮೇಶ್, ಯೋಗ ಪ್ರಾಧ್ಯಾಪಕ ಬಿ. ಜಯರಾಂ, ವೈದ್ಯರಾದ ಡಾ. ನಿಶ್ಚಿತ್, ಡಾ. ದೀಪಾ, ಡಾ. ಮಾನಸ, ಡಾ. ಯಶಸ್ವಿನಿ, ವ್ಯವಸ್ಥಾಪಕ ಅನೀಶ್ ಮತ್ತಿತರರು ಉಪಸ್ಥಿತರಿದ್ದರು.

ಭೂ ಮಾಪನ ಮುಗಿಯುವವರೆಗೆ ರಾಜಾಕಾಲುವೆ ಕಾಮಗಾರಿ ಸ್ಥಗಿತಗೊಳಿಸಿ: ತಹಶೀಲ್ದಾರ್ ಸೂಚನೆ

ಹರಿಹರ: ಇಲ್ಲಿನ ತಾಲೂಕು ಕಚೇರಿಯಲ್ಲಿ ಸೋಮವಾರ ನಡೆದ ರಾಜ ಕಾಲುವೆ ಸಂರಕ್ಷಣಾ ಸಮಿತಿ ಪದಾಧಿಕಾರಿಗಳು ಹಾಗೂ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳನ್ನೊಳಗೊಂಡ ಸಭೆಯಲ್ಲಿ ಭೂ ಮಾಪನಾಕಾರ್ಯ ನಡೆಯುವವರೆಗೆ ನಗರದ ಎಸ್. ಜೆ.ವಿ.ಪಿ. ಕಾಲೇಜಿನ ಹಿಂಭಾಗದಲ್ಲಿ ರಾಜ ಕಾಲುವೆಗೆ ಸಿಸಿ ಚರಂಡಿ ಹಾಗೂ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಲು ನಿರ್ಣಯಿಸಲಾಯಿತು.

ರಾಜ ಕಾಲುವೆ ಸಂರಕ್ಷಣಾ ಸಮಿತಿ ಪದಾಧಿಕಾರಿಗಳು ಮಾತನಾಡಿ, ಈ ಕಾಲುವೆಯನ್ನು ಈಗಾಗಲೇ ಹಲವರು ಅತಿಕ್ರಮಮಾಡಿದ್ದರಿಂದಲೇ ಬೆಂಕಿನಗರ, ಕಾಳಿದಾಸನಗರ, ನೀಲಕಂಠನಗರ ಹಾಗೂ ಇತರೆ ಬಡಾವಣೆಗಳಲ್ಲಿ ಮಳೆಗಾಲದ ಪ್ರವಾಹದ ನೀರು ನುಗ್ಗಿ ನಿವಾಸಿಗಳು ಕಳೆದ ಮೂರ್‍ನಾಲ್ಕು ವರ್ಷಗಳಿಂದ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆಯುವ ದುಸ್ಥಿತಿ ನಿರ್ಮಾಣವಾಗಿದೆ ಎಂದು ಅಳಲನ್ನು ತೋಡಿಕೊಂಡರು.

ಈಗ ಸಿಸಿ ಚರಂಡಿ ನಿರ್ಮಿಸುವ ಮೂಲಕ ಕಾಲುವೆಯನ್ನೇ ಅಧಿಕೃತವಾಗಿ ಕಿರಿದಾಗಿಸುವ ಪ್ರಯತ್ನ ನಡೆಯುತ್ತಿದೆ. ಇದಕ್ಕಾಗಿ ಸಣ್ಣ ನೀರಾವರಿ ಇಲಾಖೆಯ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ. ಈ ಕಾಮಗಾರಿ ಯಿಂದಾಗಿ ನಗರದ ಇನ್ನಷ್ಟು ಬಡಾವಣೆಗಳಿಗೆ ಮಳೆಗಾ ಲದಲ್ಲಿ ಪ್ರವಾಹ ನುಗ್ಗಿ ನಿವಾಸಿಗಳನ್ನು ಸಂತ್ರಸ್ಥರ ನ್ನಾಗಿಸುತ್ತದೆ. ಯಾವುದೆ ಕಾರಣಕ್ಕೂ ಈಗ ನಡೆಯುತ್ತಿರುವ ಕಾಮಗಾ ರಿಯನ್ನು ಮುಂದುವರೆಸಬಾರದು ಎಂದು ಆಗ್ರಹಿಸಿದರು.

ತಹಶೀಲ್ದಾರ್ ಸಂತೋಷ್‌ಕುಮಾರ್ ಜಿ. ಮಾತನಾಡಿ, ರಾಜ ಕಾಲುವೆ ಹರಿದು ಹೋಗುವ ಮಾರ್ಗವನ್ನು ಭೂ ಮಾಪಕರಿಂದ ಮಾ.18ರಂದು ಅಳತೆ ಮಾಡಿಸೋಣ. ಅಲ್ಲಿಯವರೆಗೆ ಕಾಮಗಾರಿ ಸ್ಥಗಿತಗೊಳಿಸಿರಿ. ಅಳತೆ ಮಾಡುವಾಗ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು, ರಾಜ ಕಾಲುವೆ ಸಂರಕ್ಷಣಾ ಸಮಿತಿ ಪದಾಧಿಕಾರಿಗಳು ಹಾಜರಿರಬೇಕು ಎಂದು ಸೂಚಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ತಾಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ನಗರಸಭೆ ಮಾಜಿ ಸದಸ್ಯ ಎಂ.ಎಸ್. ಬಾಬುಲಾಲ್, ಸಾಮಾಜಿಕ ಕಾರ್ಯಕರ್ತ ಐರಣಿ ಹನುಮಂತಪ್ಪ, ರಾಜ ಕಾಲುವೆ ಸಂರಕ್ಷಣಾ ಸಮಿತಿ ಪದಾಧಿಕಾರಿಗಳಾದ ಬಿ. ಮಗ್ದುಮ್ ಇನ್ನಿತರರಿದ್ದರು.

ಕಿರುಸುದ್ದಿ

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-68,200-98,596	ರಾಶಿ-36,009-59,170
ರಾಶಿ-43,838-54,699	ಚಾಲಿ-20,305-43,309
ಬೆಟ್ಟೆ-50,00-63,210	ಕೆಂಪುಗೋಟು-23,999-37,199
ಗೊರಬಲು-19,001-37,169	ಬಿಳಿಗೋಟು-20,022-33,000
	ಸಿಪ್ಪೆಗೋಟು-8,332-22,415

ಶಿಕಾರಿಪುರ: ಮೆಸ್ಕಾಂ ಜನ ಸಂಪರ್ಕ ಸಭೆ ಇಂದು

ಶಿವಮೊಗ್ಗ : ಶಿಕಾರಿಪುರ ಮೆಸ್ಕಾಂ ಉಪವಿಭಾಗ ಕಚೇರಿಯಲ್ಲಿ ಮಾ.17 ರಂದು ಬೆಳಿಗ್ಗೆ 11 ರಿಂದ 1 ಗಂಟೆವರೆಗೆ ಜನ ಸಂಪರ್ಕ ಸಭೆ ನಡೆಯಲಿದೆ. ಈ ಸಭೆಯಲ್ಲಿ ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲ್ಲಿದ್ದು, ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸು ವುದರಿಂದ ಈ ಅವಕಾಶ ಸದುಪಯೋಗ ಪಡಿಸಿ ಕೊಳ್ಳುವಂತೆ ಮೆಸ್ಕಾಂ ತಿಳಿಸಿದ್ದು, ಮಾಹಿತಿಗೆ 94482895 ಸಂಪರ್ಕಿಸಬಹುದು.

ಮಹಿಳಾ ಸಾಧಕಿ ಶಶಿಕಲಾ ಶೆಟ್ಟಿಗೆ ವನಿತಾ ಪ್ರಶಸ್ತಿ

ಶಿವಮೊಗ್ಗ: ಮಹಿಳಾ ಸಾಧಕಿ ಶಶಿಕಲಾ ಶೆಟ್ಟಿ ಅವರಿಗೆ ಸಮಾಜ ಸೇವೆ ಪರಿಗಣಿಸಿ ವನಿತಾ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಮಹಿಳಾ ದಿನಾಚರಣೆ ಅಂಗವಾಗಿ ಚೇತನಾ ಫೌಂಡೇಷನ್ ಕರ್ನಾಟಕ ಇವರು ಬೆಂಗಳೂರಿನ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಈ ಪ್ರಶಸ್ತಿ ನೀಡಲಾಯಿತು. ಇದೇ ಕಾರ್ಯಕ್ರಮದಲ್ಲಿ ಶಿವಮೊಗ್ಗದ ಶರಾವತಿ ಮಹಿಳಾ ಸಂಘಕ್ಕೆ 25 ವರ್ಷಗಳ ಸೇವೆಯನ್ನು ಪರಿಗಣಿಸಿ ಅತ್ಯುತ್ತಮ ಮಹಿಳಾ ಸಂಘ ಪ್ರಶಸ್ತಿಯನ್ನು ನೀಡಲಾಯಿತು. ಶರಾವತಿ ಮಹಿಳಾ ಸಂಘವು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಪ್ರಸನ್ನನಾಥ ಸ್ವಾಮೀಜಿ ಅವರಿಂದ ಆರಂಭವಾಗಿದ್ದು, ಸಾಮಾಜಿಕ ಸೇವೆಯಲ್ಲಿ ಸಕ್ರಿಯವಾಗಿದೆ. ಶಿವಮೊಗ್ಗದ ಶಶಿಕಲಾ ಶೆಟ್ಟಿ ಸೀನಿಯರ್ ಚೇಂಬರ್‌ನ ಮುಂದಿನ ಬಾರಿಯ ನ್ಯಾಷನಲ್ ವೈಸ್ ಪ್ರೆಸಿಡೆಂಟ್ ಆಗಿ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಮಾರ್ಚ್ 21 ಮತ್ತು 22ರಂದು ಯೂತ್ ಬಾಕ್ಸಿಂಗ್ ಪಂದ್ಯಾವಳಿ

ಶಿವಮೊಗ್ಗ : ಕರ್ನಾಟಕ ಅಮೆಚೂರ್ ಬಾಕ್ಸಿಂಗ್ ಅಸೋಸಿಯೇಷನ್ ಮತ್ತು ಜಿಲ್ಲಾ ಅಮೆಚೂರ್ ಬಾಕ್ಸಿಂಗ್ ಅಸೋಸಿಯೇಷನ್ ಸಹಯೋಗದಲ್ಲಿ ಮಾ. 21 ಮತ್ತು 22ರಂದು ನಗರದ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ಯೂತ್ ಬಾಕ್ಸಿಂಗ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಬಾಕ್ಸಿಂಗ್ ಅಸೋಷಿಯೇಶನ್ ಜಿಲ್ಲಾಧ್ಯಕ್ಷ ವಿನೋದ್ ತಿಳಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಕ್ರೀಡಾಪಟುಗಳು ಆಗಮಿಸಲಿದ್ದಾರೆ. ಈ ಪಂದ್ಯಾವಳಿಯಲ್ಲಿ 2008 ಮತ್ತು 2009ರಲ್ಲಿ ಜನಿಸಿರುವ ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು ವಿವಿಧ ತೂಕದ ವಿಭಾಗದಲ್ಲಿ ಭಾಗವಹಿಸಲಿದ್ದಾರೆ ಎಂದರು. ಪಂದ್ಯಾವಳಿಯಲ್ಲಿ ವಿವಿಧ ವಿಭಾಗದಲ್ಲಿ ಜಿಲ್ಲೆಯ 12 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ ಎಂದರು.ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ಗೌರವಾಧ್ಯಕ್ಷ ದೇವರಾಜ್ ಮಂಡೇನಕೊಪ್ಪ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ, ಖಜಾಂಚಿ ಶ್ರೇಯಶ್, ಪ್ರೀತಿ, ದಿಗಂತ್, ಸಮೃದ್, ನಿಹಾರಿಕ ಇದ್ದರು.

ಮಾ.21ರಂದು 'ಜೀವಂತ ಶಿಲುಬೆ ಹಾದಿ' ಮಹೋತ್ಸವ

ಭದ್ರಾವತಿ: ತಾಲೂಕಿನ ಮಾವಿನಕೆರೆ ಕಿರಿಯ ಪುಷ್ಪ ಸಂತ ತೆರೇಸರ ಚರ್ಚ್ ವತಿಯಿಂದ ಐತಿಹಾಸಿಕ ಶಿಲುಬೆ ಬೆಟ್ಟದ ಮಹೋತ್ಸವ ಜೀವಂತ ಶಿಲುಬೆ ಹಾದಿ ಮಾ.21ರ ಶನಿವಾರ ಆಯೋಜಿಸಲಾಗಿದೆ. ಈ ಕುರಿತು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ನಗರದ ಗಾಂಧಿನಗರ ವೇಳಾಂಗಣಿ ಆರೋಗ್ಯ ಮಾತೆ ದೇವಾಲಯದ ಧರ್ಮಗುರು ಪಾದರ್ ಸ್ಟೀವನ್ ಡೆಸಾ, ಏಸು ಕ್ರಿಸ್ತನ ಸಾವಿನ ಕೊನೆಯ ಘಟನೆಗಳಿಗೆ ಅಭಿನಯದ ಮೂಲಕ ಜೀವಂತಿಕೆ ತುಂಬುವ ಜೊತೆಗೆ ಏಸು ಕ್ರಿಸ್ತನನ್ನು ಸ್ಮರಿಸಲಾಗುವುದು. ಅಲ್ಲದೆ ಜೀವಂತ ಶಿಲುಬೆ ಹಾದಿಯನ್ನು ವಿಜಯೋತ್ಸವದ ಸಂಕೇತವಾಗಿ ಆಚರಿಸಲಾಗುತ್ತದೆ ಎಂದರು.

ನಾಗರಾಜ ನಿಧನ



ಭದ್ರಾವತಿ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ರೂಪ ಅವರ ಪತಿ, ಹಳೇ ಸಿದ್ದಾಪುರ ನಿವಾಸಿ ನಾಗರಾಜ(48) ಭಾನುವಾರ ರಾತ್ರಿ ನಿಧನ ಹೊಂದಿದರು. ಪತ್ನಿ, ಪುತ್ರ ಹಾಗು ಪುತ್ರಿ ಇದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಹಳೇ ಸಿದ್ದಾಪುರದ ಇವರ ಜಮೀನಿನಲ್ಲಿ ನೆರವೇರಿತು. ನಾಗರಾಜ ಮೂಲತಃ ಕೃಷಿಕರಾಗಿದ್ದು, ಅಲ್ಲದೆ ಡೈರಿ ಗುತ್ತಿಗೆದಾರರಾಗಿದ್ದರು. ಇವರ ನಿಧನಕ್ಕೆ ಬಿಳಿಕಿ ಹಿರೇಮಠ, ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ, ಶಾಸಕ ಬಿ.ಕೆ ಸಂಗಮೇಶ್ವರ್, ಬಿ.ಕೆ ಮೋಹನ್, ಬಿ.ಕೆ ಜಗನ್ನಾಥ್, ಸಿದ್ದಲಿಂಗಯ್ಯ ಇತರ ಗಣ್ಯರು ಸಂತಾಪ ಸೂಚಿಸಿದ್ದಾರೆ.



ಸಾಗರ : ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬೆಂಗಳೂರಿನ ಕಾಸಿಯಾ ಭವನದಲ್ಲಿ ಐಕಾನ್ ಆಫ್ ಇಂಡಿಯಾ ಬ್ಯುಸಿನೆಸ್ ಮ್ಯಾಗಜಿನ್ ಆಯೋಜಿಸಿದ್ದ ನಾರಿಶಕ್ತಿ ಪುರಸ್ಕಾರ-2026 ಸಮಾರಂಭದಲ್ಲಿ ಸಾಗರದ ಶ್ವೇತಾ ಸಂತೋಷ್ ಶೇಟ್ ಅವರಿಗೆ ಅತ್ಯುತ್ತಮ ಮಹಿಳಾ ಉದ್ಯಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಇಂದು ನೇತ್ರ ತಪಾಸಣಾ ಶಿಬಿರ

ಶಿವಮೊಗ್ಗ : ನಗರದ ಹೊಸಮನೆ ಬಡಾವಣೆಯ ವಜ್ರೇಶ್ವರಿ ವಿನಾಯಕ ಸೇವಾ ಟ್ರಸ್ಟ್‌ನ 22ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಮಾ.17 ರ ಸಂಜೆ 7.30ಕ್ಕೆ ವಿನಾಯಕ ಪ್ರಾರ್ಥನೆ, ಪುಣ್ಯಾಹ, ಕುಂಭಾದಿವಾಸ, ಸಪ್ತಶುದ್ಧಿ, ವಾಸ್ತು ರಾಕ್ಷೋಘ್ನ ಹೋಮ, ವಸ್ತು ಬಲಿ, ದಿಗ್ಬಲಿ, ಪೂರ್ಣಹುತಿ, ಮಹಾಮಂಗಳಾರತಿ, ದ್ವಾದಶ ನಾರಿಕೇಳ ಗಣಯಾಗ, ಪೂರ್ಣಹುತಿ, ಕುಂಭಾಭಿಷೇಕ, ಬ್ರಹ್ಮ ಕುಂಭಾಷೇಕ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ವಾಸನ್ ಕಣ್ಣಿನ ಆಸ್ಪತ್ರೆ ವತಿಯಿಂದ ಮಾ.17ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ಉಚಿತ ನೇತ್ರ ತಪಾಸಣಾ ಶಿಬಿರ ಹಾಗೂ ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ ಕಾರ್ಯಕ್ರಮ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ದೇವರಾಜ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶಿವಮೊಗ್ಗ : ರಸ್ತೆ ಅಪಘಾತದಲ್ಲಿ ಮೃತಪಟ್ಟ ತೀರ್ಥಹಳ್ಳಿ ತಾಲೂಕಿನ ಕುಡುವಳ್ಳಿಯ ಆರ್‌ಎಸ್‌ಐ ಸಚಿನ್ ವಿ. ಮನೆಗೆ ಜಿಲ್ಲಾ ರಕ್ಷಣಾಧಿಕಾರಿ ನಿಖಿಲ್ ಬಿ. ಸೋಮವಾರ ಭೇಟಿ ನೀಡಿ ಗೌರವ ವಂದನೆ ಸಲ್ಲಿಸಿ, ಮೃತರ ಸಂಬಂಧಿಗಳಿಗೆ ಸಾಂತ್ವನ ಹೇಳಿದರು.

ಕಾನೂನು ಪರಿಪಾಲನೆ ಕಡ್ಡಾಯ: ಎಎಸ್ಪಿ ಡಾ. ಬೆನಕ ಪ್ರಸಾದ್

ಐಟಿಎಂಎಸ್ ತಂತ್ರಜ್ಞಾನ ಜಾರಿ

ಸಾಗರ : ನಗರವ್ಯಾಪ್ತಿಯಲ್ಲಿ ಐಟಿಎಂಎಸ್ ತಂತ್ರಜ್ಞಾನ ಜಾರಿಯಲ್ಲಿದ್ದು ಹೆಲ್ಮೆಟ್ ಸೇರಿದಂತೆ ದ್ವಿಚಕ್ರ ವಾಹನ ಸವಾರರು ಕಾನೂನು ಪರಿಪಾಲನೆ ಕಡ್ಡಾಯವಾಗಿದೆ. ಕಾನೂನು ತಪ್ಪಿ ವಾಹನ ಚಲಾಯಿಸಿದರೆ ಜಿಪಿಎಸ್ ಮೂಲಕ ಫೋಟೋ ತೆಗೆದು ವಾಹನ ಮಾಲೀಕರ ಮೊಬೈಲ್‌ಗೆ ದಂಡ ಪಾವತಿ ರಸೀದಿ ಬರುತ್ತದೆ ಎಂದು ಪೊಲೀಸ್ ಉಪಾಧೀಕ್ಷಕ ಡಾ. ಬೆನಕ ಪ್ರಸಾದ್ ತಿಳಿಸಿದರು.



> **ಈತನಕ 500ಕ್ಕೂ ಹೆಚ್ಚು ಜನರ ಮೇಲೆ ಕೇಸ್**
>
> **ಐಟಿಎಂಎಸ್ ಮೂಲಕ ದಂಡ ಹಾಕುವ ಕಾನೂನು ಸ್ಮಾರ್ಟ್ ಸಿಟಿ ಶಿವಮೊಗ್ಗದಲ್ಲಿ ಜಾರಿಯಲ್ಲಿತ್ತು. ಜಿಲ್ಲಾ ರಕ್ಷಣಾಧಿಕಾರಿಗಳ ಸೂಚನೆ ಮೇರೆಗೆ ಸಾಗರದಲ್ಲೂ ಜಾರಿಗೆ ತರಲಾಗಿತ್ತು. ಈತನಕ 500ಕ್ಕೂ ಹೆಚ್ಚು ಜನರ ಮೇಲೆ ಕೇಸ್ ಹಾಕಲಾಗಿದೆ. ದಂಡ ಹಾಕಿಸಿಕೊಂಡ ದ್ವಿಚಕ್ರ ವಾಹನ ಸವಾರರು ಮೊಬೈಲ್ ಮೂಲಕ ಆನ್‌ಲೈನ್‌ನಲ್ಲಿ ದಂಡ ಪಾವತಿ ಮಾಡಬಹುದು. ಇಲ್ಲವಾದಲ್ಲಿ ಠಾಣೆಗೆ ಬಂದು ದಂಡ ಪಾವತಿ ಮಾಡಲು ಅವಕಾಶವಿದೆ. ಅಪ್ರಾಪ್ತರಿಗೆ ದ್ವಿಚಕ್ರ ಸೇರಿದಂತೆ ವಾಹನ ಚಲಾವಣೆಗೆ ಪೋಷಕರು ಅವಕಾಶ ಕೊಟ್ಟರೆ ಪೋಷಕರನ್ನು ಜೈಲಿಗೆ ಕಳಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.**

ಇಲ್ಲಿನ ನಗರ ಠಾಣೆಯಲ್ಲಿ ಸೋಮವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ದ್ವಿಚಕ್ರ ವಾಹನ ಚಾಲನೆ ಮಾಡಿ ಅಪಘಾತವಾದರೆ ನಿಮ್ಮನ್ನು ನಂಬಿಕೊಂಡ ಕುಟುಂಬ ಸಂಕಷ್ಟಕ್ಕೆ ಸಿಲುಕುತ್ತದೆ ಎನ್ನುವ ಅರಿವು ಹೊಂದಿರಬೇಕು. ವೇಗದ ಚಾಲನೆ, ತ್ರಿಬಲ್ ರೈಡಿಂಗ್, ಸೀಟ್ ಬೆಲ್ಟ್ ಹಾಕದೆ ಕಾರು ಚಾಲನೆ ಸೇರಿ ಬೇರೆಬೇರೆ ಪ್ರಕರಣದಲ್ಲಿ ದಂಡ ವಿಧಿಸಲಾಗುತ್ತದೆ. ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಇಲಾಖೆ ಮೂಲಕ ಈ ಕಾರ್ಯಕ್ರಮ ಜಾರಿಯಿದೆ ಎಂದು ತಿಳಿಸಿದರು.

ಸಾಗರ ನಗರ ಮತ್ತು ಗ್ರಾಮಾಂತರ ಪ್ರಕರಣದಲ್ಲಿ ಸುಮಾರು 5 ಗೋಕಳ್ಳತನ ಪ್ರಕರಣ ದಾಖಲಾಗಿತ್ತು. ಪ್ರಕರಣ ಸಂಬಂಧ ಮಹೀಂದ್ರ ಕ್ಸೈಲ್ಲೋ ವಾಹನ ಸಮೇತ ಭದ್ರಾವತಿಯ ಸಲ್ಮಾನ್ ಖಾನ್ ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ. ಈತನ ನಾಲ್ಕು ಜನ ಸಹಚರರ ಪತ್ತೆಗೆ ಬಲೆ ಬೀಸಲಾಗಿದೆ. ಈ ಗುಂಪು ಸಾಗರ ಪೇಟೆ ಠಾಣೆಯಲ್ಲಿ 3, ಗ್ರಾಮಾಂತರ ಠಾಣೆಯಲ್ಲಿ 2 ಗೋವು ಕಳ್ಳತನ ಪ್ರಕರಣ ನಡೆಸಿದ್ದು ತನಿಖೆ ವೇಳೆ ಬಯಲಿಗೆ ಬಂದಿದೆ. ಇವರ ಮೇಲೆ ಶಿವಮೊಗ್ಗ ವಿನೋಬಾ ನಗರ, ಜಯನಗರದಲ್ಲೂ ಪ್ರಕರಣಗಳಿವೆ. ರಂಜಾನ್ ಹಿನ್ನೆಲೆಯಲ್ಲಿ ಗೋಕಳ್ಳತನ ಜಾಸ್ತಿಯಾಗುತ್ತದೆ ಎನ್ನುವ ದೂರಿನ ಹಿನ್ನೆಲೆಯಲ್ಲಿ ಸಾಗರ ನಗರ ಪ್ರವೇಶಿಸುವ ಎಲ್ಲಾ ಗಡಿಗಳಲ್ಲೂ ಚೆಕ್ ಪೋಸ್ಟ್ ನಿರ್ಮಿಸಿ ಕಟ್ಟುನಿಟ್ಟಿನ ಕಾವಲು ರೂಪಿಸಿದೆ. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಜಾನುವಾರು ಮಾಲೀಕರು ತಮ್ಮ ಜಾನುವಾರುಗಳನ್ನು ರಾತ್ರಿವೇಳೆ ಕೊಟ್ಟಿಗೆಯಲ್ಲಿ ಕಟ್ಟಿ ಸಾಕಬೇಕು. ಗ್ರಾಮೀಣ ಪ್ರದೇಶದ ಮುಖ್ಯ ವೃತ್ತಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿ ಗೋಕಳ್ಳತನ ತಪ್ಪಿಸಬೇಕು ಎಂದು ಮನವಿ ಮಾಡಿದರು.

ನಗರದ ಹೊರ ಬಡಾವಣೆಗಳಲ್ಲಿ ಗಾಂಜಾ ಸೇವನೆ ಮತ್ತು ಸಾಗಾಣಿಕೆಗೆ ಸಂಬಂಧಪಟ್ಟಂತೆ ನಿಗಾವಹಿಸಿದ್ದು, ಇಲಾಖೆ ಈತನಕ ಗಾಂಜಾ ಸೇವನೆ ಮಾಡಿದವರನ್ನು ಪರೀಕ್ಷೆಗೆ ಒಳಪಡಿಸಿ ಕಾನೂನುಕ್ರಮ ಜರುಗಿಸಿದೆ. ಗಾಂಜಾ ಸೇವನೆ ಮತ್ತು ಮಾರಾಟದ ಬಗ್ಗೆ ಮಾಹಿತಿ ಇದ್ದರೆ ಸಾರ್ವಜನಿಕರು 8277982900 ಈ ಸಂಖ್ಯೆಗೆ ಕರೆ ಮಾಡಬಹುದು. ಮಾಹಿತಿ ಕೊಟ್ಟವರ ಹೆಸರನ್ನು ಗೌಪ್ಯವಾಗಿ ಇರಿಸಲಾಗುತ್ತದೆ. ಯುಗಾದಿ ಮತ್ತು ರಂಜಾನ್ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಇಲಾಖೆ ಅಗತ್ಯ ಮುಂಜಾಗೃತೆ ವಹಿಸಿದೆ ಎಂದು ತಿಳಿಸಿದರು.

ಹೆಣ್ಣೇ ಒಂದು ಶಕ್ತಿ: ಜಿ. ಪಲ್ಲವಿ

ಶಿವಮೊಗ್ಗ: ವ್ಯವಸ್ಥೆಯೊಳಗಡೆ ಜಾತಿ, ಧರ್ಮದ ಹೆಸರಲ್ಲಿ ಹೆಣ್ಣನ್ನು ಅವಕಾಶದಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ ಎಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಲೆಮಾರಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಆಕ್ರೋಶ ವ್ಯಕ್ತಪಡಿಸಿದರು.



ಹಿಂದುಳಿದ ಜನ ಜಾಗೃತಿ ವೇದಿಕೆಯ ಮಹಿಳಾ ಘಟಕವು ಸೋಮವಾರ ನಗರದ ಪತ್ರಿಕಾ ಭವನದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಹಲವಾರು ವರ್ಷಗಳಿಂದ ನಾನು ಸಾರ್ವಜನಿಕ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದೇನೆ. ಅದರ ಆಧಾರದ ಮೇಲೆಯೇ ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರಕ್ಕೆ ಎರಡು ಭಾರಿ ಸ್ಪರ್ಧೆ ಮಾಡಲು ಬಯಸಿ ಟಿಕೆಟ್ ಆಕಾಂಕ್ಷಿಯಾದರೂ, ನಾನೊಬ್ಬಳು ಅಲ್ಪಸಂಖ್ಯಾತ ಅಲೆಮಾರಿ ಸಮುದಾಯದವಳು ಎನ್ನುವ ಕಾರಣಕ್ಕೆ ಟಿಕೆಟ್ ಸಿಗಲಿಲ್ಲ. ಹಾಗಾದರೆ ಹೆಣ್ಣಿಗೆ ಜಾತಿ ಇದೆಯೇ? ಹೆಣ್ಣಿಗೆ ಧರ್ಮ ಇಲ್ಲ, ಜಾತಿ ಇಲ್ಲ, ಹೆಣ್ಣೇ ಒಂದು ಶಕ್ತಿ ಎಂದು ಪ್ರತಿಪಾದಿಸಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಎನ್ನುವುದು ಹೆಣ್ಣು ಮಕ್ಕಳಿಗೆ ಒಂದು ಹಬ್ಬದ ದಿನ. ಈ ದಿನಕ್ಕೆ ಮಹಿಳೆಯರ ವಿರೋಚಿತ ಹೋರಾಟದ ಹಿನ್ನೆಲೆಯಿದೆ. 90 ವರ್ಷಗಳ ಹಿಂದೆ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಮಹಿಳೆಯರು ಕನಿಷ್ಟ ವೇತನ ಸೇರಿ ಸಮಾನ ಅವಕಾಶಗಳಿಗಾಗಿ ನಡೆಸಿದ ಹೋರಾಟದ ನೆನಪಿಗಾಗಿ ಮಹಿಳಾ ದಿನಾಚರಣೆ ಆಚರಣೆಗೆ ಬಂದಿದೆ ಎಂದರು.

ಮಹಿಳಾ ಸಮಾನತೆ ವಿಚಾರದಲ್ಲಿ ವಚನ ಚಳವಳಿಯನ್ನು ಮರೆಯುವಂತಿಲ್ಲ, ಅವತ್ತೇ ಮಹಿಳೆಯರಿಗೂ ಸಮಾನ ಅವಕಾಶಗಳು ಸಿಗಬೇಕು, ವ್ಯವಸ್ಥೆಯಲ್ಲಿ ಪುರುಷರಷ್ಟೇ ಅವರಿಗೂ ಹಕ್ಕು ಇದೆ ಎಂದು ಪ್ರತಿಪಾದಿಸಿದ್ದ ಬಸವಣ್ಣನವರು ನಮ್ಮ ಮನೆ ದೇವರು ಆಗಬೇಕಿದೆ. ಮಹಿಳೆಯರಿಗೆ ಮೊದಲು ಮತದಾನದ ಹಕ್ಕು ಕೊಡಿಸಿದವರು ಅಂಬೇಡ್ಕರ್. ಮಹಿಳೆಯರಿಗೆ ಶಿಕ್ಷಣ ಅವಕಾಶ ಕೊಡಿಸಿದರು. ಶಿಕ್ಷಣ ಅಂದಾಕ್ಷಣ ಈ ದೇಶದಲ್ಲಿ ಮೊದಲು ನೆನಪಾಗುವ ಹೆಸರು ಸಾವಿತ್ರಿಭಾಯಿ ಫುಲೆ. ಆ ಕಾಲದಲ್ಲಿ ಅವರು ಎಲ್ಲರಿಗೂ ಶಿಕ್ಷಣ ಸಿಗಬೇಕೆಂದು ಹೋರಾಡಿದರು. ಅವರ ಹೋರಾಟದ ಫಲವಾಗಿಯೇ ಇವತ್ತು ಮಹಿಳೆ ವಿದ್ಯಾವಂತಳಾಗಿ ಎಲ್ಲ ಕ್ಷೇತ್ರದಲ್ಲೂ ಸಾಧನೆ ಮಾಡುವಂತಾಗಿದೆ ಎಂದರು.

ಹಿಂದುಳಿದ ಜನ ಜಾಗೃತಿ ವೇದಿಕೆ ಮಹಿಳಾ ಘಟಕದ ಸಂಚಾಲಕಿ ಎಸ್.ವಿ.ರಾಜಮ್ಮ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಮಂಜುಳಾ ಮುಖ್ಯ ಭಾಷಣ ಮಾಡಿದರು. ಇದೇ ವೇಳೆ ರಾಷ್ಟ್ರಪತಿಗಳ ಪದಕಕ್ಕೆ ಪಾತ್ರರಾದ ಇನ್‌ಪೆಕ್ಟರ್ ಶಕುಂತಲಾ ಹೆಚ್.ಕೆ. ಅವರನ್ನು ಸನ್ಮಾನಿಸಲಾಯಿತು.

ಅತಿಥಿಗಳಾಗಿ ಸಹ್ಯಾದ್ರಿ ಮಹಿಳಾ ಸಹಕಾರ ಬ್ಯಾಂಕ್ ಅಧ್ಯಕ್ಷೆ ವೀರಮ್ಮ, ಎಪಿಸಿಆರ್ ಶಿವಮೊಗ್ಗ ಜಿಲ್ಲಾಧ್ಯಕ್ಷೆ ಸರೋಜ ಪಿ. ಚಂಗೊಳ್ಳಿ, ವಾರ್ತಾ ವಾಚಕಿ ಸುಗುಣ ಸತೀಶ್, ನಿವೃತ್ತ ಶಿಕ್ಷಕಿ ಯಶೋಧ ಕರಿಯಪ್ಪ, ಲೇಖಕಿ ನಂದಾ ಕವಯತ್ರಿ, ವಕೀಲರಾದ ಶೈನಿ ಮೇರಿ ಇದ್ದರು. ವರಲಕ್ಷ್ಮಿ ಪ್ರಕಾಶ್ ಸ್ವಾಗತಿಸಿದರು.

ಮರ ಬಿದ್ದ ಮನೆ ಸ್ಥಳಕ್ಕೆ ತಹಶೀಲ್ದಾರ್ ಭೇಟಿ

ರಿಪ್ಪನಪೇಟೆ : ಬೆಳ್ಳೂರು ಗ್ರಾಮದಲ್ಲಿ ಭಾನುವಾರ ಸಂಜೆ ಸುರಿದ ಭಾರಿ ಮಳೆ ಹಾಗೂ ಬಿರುಸಿನ ಗಾಳಿಯ ಪರಿಣಾಮ ಮನೆಯ ಮೇಲೆ ತೆಂಗಿನ ಮರ ಬಿದ್ದ ಘಟನೆ ನಡೆದಿದೆ.



ಬೆಳ್ಳೂರು ಗ್ರಾಮದ ನಿವಾಸಿ ರತ್ನಮ್ಮ ಅವರ ಹಂಚಿನ ಮನೆ ಮುಂದೆ ಇದ್ದ ತೆಂಗಿನ ಮರ ಗಾಳಿ-ಮಳೆ ತೀವ್ರತೆಗೆ ಮನೆ ಮೇಲೆ ಬಿದ್ದಿದೆ. ಇದರಿಂದ ಮನೆ ಮೇಲ್ಛಾವಣಿ ಹಾಗೂ ಹಂಚುಗಳು ಹೊಡೆದಿವೆ. ಮನೆಯೊಳಗೆ ಮಳೆ ನೀರು ನುಗ್ಗಿ ಗೃಹೋಪಯೋಗಿ ಸಾಮಾನುಗಳಿಗೆ ಹಾನಿಯಾಗಿದೆ. ಈ ವೇಳೆ ಮನೆಯಲ್ಲಿದ್ದ ಸದಸ್ಯರು ಯಾವುದೇ ಅಪಾಯವಿಲ್ಲದೆ ಪಾರಾಗಿದ್ದಾರೆ.

ಮಾಹಿತಿ ತಿಳಿದ ಹೊಸನಗರ ತಹಶೀಲ್ದಾರ್ ಭರತ್‌ರಾಜ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸರ್ಕಾರದ ವತಿಯಿಂದ ಅಗತ್ಯ ಪರಿಹಾರ ಒದಗಿಸುವ ಭರವಸೆ ನೀಡಿದರು.

ಸಾಗರ ವಿಧಾನಸಭಾ ಕ್ಷೇತ್ರದ ಶಾಸಕ ಬೇಳೂರು ಗೋಪಾಲಕೃಷ್ಣ ಅವರ ಸೂಚನೆ ಮೇರೆಗೆ ಅವರ ಆಪ್ತ ಕಾರ್ಯದರ್ಶಿ ಸಣ್ಣಕ್ಕಿ ಮಂಜು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ರತ್ನಮ್ಮ ಅವರಿಗೆ ವೈಯಕ್ತಿಕ ನೆರವು ವಿತರಿಸಿದರು. ಈ ಸಂದರ್ಭದಲ್ಲಿ ರಾಜಸ್ವ ನಿರೀಕ್ಷಕ ಅಪ್ರೋಜ್ ಅಹಮದ್, ಗ್ರಾಮ ಲೆಕ್ಕಿಗ ಜಾಕೀರ್, ಪ್ರಮುಖರಾದ ಯೋಗೇಶ್ ಬೆಳ್ಳೂರು ಉಪಸ್ಥಿತರಿದ್ದರು.

ಪ್ರಕೃತಿ ವಿಷಯ ಕುರಿತು ಚಿತ್ರಕಲಾ ಸ್ಪರ್ಧೆ

ಶಿವಮೊಗ್ಗ : ಮಹಿಳೆಯರ ಚಿತ್ರಕಲೆಯಲ್ಲಿ ಪ್ರಕೃತಿ ಅನಾವರಣಗೊಳ್ಳುತ್ತಿರುವುದು ಸಂತಸದ ವಿಷಯ. ಇಂತಹ ಚಿತ್ರಕಲೆ ಸ್ಪರ್ಧೆಗಳು ಮಹಿಳೆಯರಲ್ಲಿ ಸುಪ್ತವಾಗಿ ಅಡಗಿರುವ ಕಲೆ, ಕೌಶಲ್ಯಕ್ಕೆ ಉತ್ತಮ ವೇದಿಕೆಯಾಗಿದೆ ಎಂದು ಜಿ.ಪಂ. ಸಿಇಓ ಹೇಮಂತ್ ಎನ್. ತಿಳಿಸಿದರು.



ಪ್ರಕೃತಿ ಶೆಣೈ (ಪ್ರ)



ಭಾವನಾ ಹೊಳ್ಳ (ದ್ವಿ)

ಭಾನುವಾರ ಜಿಪಂ ಸಭಾಂಗಣದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಪ್ರಕೃತಿ ಎಂಬ ವಿಷಯ ಕುರಿತು ಮಹಿಳೆಯರಿಗೆ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

ಚಿತ್ರಕಲೆ ಕೇವಲ ಕಲೆ ಮಾತ್ರವಲ್ಲದೆ, ಮನಸ್ಸಿಗೆ ನೆಮ್ಮದಿ ಮತ್ತು ಆನಂದ ನೀಡಲಿದೆ. ಆದ್ದರಿಂದ ಆಸಕ್ತಿ ಉಳ್ಳವರು ಹೆಚ್ಚೆಚ್ಚು ಇಂತಹ ಸ್ಪರ್ಧೆಗಳಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಅನಾವರಣಪಡಿಸಿಕೊಳ್ಳಬೇಕೆಂದರು. 74 ಸ್ಪರ್ಧಾರ್ಥಿಗಳು ಚಿತ್ರಕಲಾ ಸ್ಪರ್ಧೆಗೆ ನೋಂದಾಯಿಸಿಕೊಂಡಿದ್ದು, ತೀರ್ಥಹಳ್ಳಿಯ ಪ್ರಕೃತಿ ಶೆಣೈ 8 ಸಾವಿರ ರೂ. ಪ್ರಥಮ, ಭಾವನಾ ಹೊಳ್ಳ 6 ಸಾವಿರ ರೂ. ದ್ವಿತೀಯ, ಆಶಾ ಉಮೇಶ್ 4 ಸಾವಿರ ರೂ. ತೃತೀಯ ಬಹುಮಾನ ಪಡೆದರು.ಶಿಕಾರಿಪುರದ ಹೇಮಲತಮ್ಮ, ಶಿವಮೊಗ್ಗದ ಮನ್ವಿತಾ ಆರ್, ಆನವಟ್ಟಿಯ ಶಾಲಿನಿ ನಾಯಕ್ ಸಮಾಧಾನಕರ ಬಹುಮಾನ ಪಡೆದರು. ಶಿವಮೊಗ್ಗದ ಸೌಜನ್ಯ ಆರ್.ಕೆ. ವಿಶೇಷ ಬಹುಮಾನ ಪಡೆದರು.

ಒಳಮೀಸಲಾತಿ ಇಲ್ಲದೇ ಹುದ್ದೆ ಭರ್ತಿ ಖಂಡಿಸಿ ಪ್ರತಿಭಟನೆ

ಶಿವಮೊಗ್ಗ : ರಾಜ್ಯ ಸರ್ಕಾರ ಒಳಮೀಸಲಾತಿ ಇಲ್ಲದೇ 56342 ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಿರುವುದನ್ನು ಖಂಡಿಸಿ ಕರ್ನಾಟಕ ಮಾದರ ಮಹಾ ಸಭಾದ ಜಿಲ್ಲಾ ಘಟಕದಿಂದ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.



ನ್ಯಾ. ನಾಗಮೋಹನದಾಸ್ ವರದಿಯಲ್ಲಿ ಪರಿಶಿಷ್ಟ ಜಾತಿಗಳಿಗೆ ಶೇ.17 ರಷ್ಟು ಮೀಸಲಾತಿ ಮಾರ್ಪಡಿಸಲಾಗಿದೆ. ಆದರೆ ಈ ಪ್ರಕರಣ ಹೈಕೋರ್ಟ್‌ನಲ್ಲಿರುವುದರಿಂದ ಸದ್ಯಕ್ಕೆ ಶೇ.17 ರಷ್ಟು ಮೀಸಲಾತಿ ಸಿಕ್ಕುತ್ತಿಲ್ಲ. ಆದರೆ ಶೇ.15 ರಷ್ಟು ಮೀಸಲಾತಿ ನೀಡಿಕೆಯಲ್ಲಿ ಯಾವುದೇ ಗೊಂದಲವಿಲ್ಲವೆಂದು ಅಡ್ವೊಕೇಟ್ ಜನರಲ್ ಸ್ಪಷ್ಟಪಡಿಸಿದ್ದಾರೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಸಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ತಲೆತಲಾಂತರಗಳಿಂದ ಶೋಷಣೆಗೆ ಒಳಗಾಗುತ್ತಾ ಅವಕಾಶ ವಂಚಿತಗೊಂಡಿರುವ ಮಾದಿಗ ಸಮುದಾಯ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಕಲ್ಪಿಸುವಂತೆ ಕಳೆದ 35 ವರ್ಷಗಳಿಂದ ನಡೆಸಿದ ಹೋರಾಟಕ್ಕೆ ಸುಪ್ರೀಂ ಕೋರ್ಟ್ ಅಸ್ತು ಅಂದಿದೆ. ಆದರೆ ಸುಪ್ರಿಂ ಕೋರ್ಟ್ ಆದೇಶವನ್ನು ರಾಜ್ಯ ಸರ್ಕಾರ ಕಳೆದ ಒಂದೂವರೆ ವರ್ಷದಿಂದ ಜಾರಿ ಮಾಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿದೆ. ಈಗಲೂ ಒಳ ಮೀಸಲಾತಿ ಇಲ್ಲದೆ 56 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಮುಂದಾಗಿರುವುದು ಪರಿಶಿಷ್ಟ ಜಾತಿಗಳಿಗೆ ಮಾಡುವ ಮಹಾ ಮೋಸವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒಳ ಮೀಸಲಾತಿ ಪ್ರಮಾಣ ಶೇ.17ಕ್ಕೆ ಏರಿಕೆ ಮಾಡುವ ನಿರ್ಧಾರ ಹೈಕೋರ್ಟಿನಲ್ಲಿ ಇತ್ಯರ್ಥ ಆಗುವವರೆಗೂ ಪರಿಶಿಷ್ಟ ಜಾತಿಗಳಿಗೆ ಈಗ ಇರುವ ಶೇ.15 ರಷ್ಟು ಮೀಸಲಾತಿಯಲ್ಲೇ ಒಳ ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿದ್ದಾರೆ.

ಪ್ರತಿಭಟನೆಯಲ್ಲಿ ಕರ್ನಾಟಕ ಮಾದಾರ ಮಹಾಸಭಾ ಜಿಲ್ಲಾಧ್ಯಕ್ಷ ಎಚ್. ಶಿವಾಜಿ, ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಎನ್. ಗೋವಿಂದ, ಸಂಘಟನೆಯ ಪ್ರಮುಖರಾದ ತೇಜಸ್ ಆರ್., ಪ್ರಭು ಎಚ್.ಎನ್., ಅಣ್ಣಪ್ಪ ಪಿ., ಅಣ್ಣಪ್ಪ ಕೆ., ಮೈಲಾರಪ್ಪ, ಸೂಲಯ್ಯ,ರಘು,ಮಂಜಪ್ಪ ಮೊದಲಾದವರು ಇದ್ದರು.

ಮಹಾನಗರ ಪಾಲಿಕೆ ಆವರಣದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಶಿವಪ್ಪನಾಯಕ ವೃತ್ತ, ಎಎ ವೃತ್ತ, ಗೋಪಿ ಸರ್ಕಲ್ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ತಂತ್ರಜ್ಞಾನದಿಂದ ಹೊಸತನ ಕಲಿಕೆ ಸಾಧ್ಯ: ಪ್ರೊ.ಶರತ್ ಅನಂತಮೂರ್ತಿ

ಶಿವಮೊಗ್ಗ: ವಿಜ್ಞಾನ ಮತ್ತು ತಂತ್ರಜ್ಞಾನ ಅಳವಡಿಸಿಕೊಳ್ಳುವುದರಿಂದ ಹೊಸತನದ ಕಲಿಕೆ ಸಾಧ್ಯ ಎಂದು ಕುವೆಂಪು ವಿವಿ ಕುಲಪತಿ ಪ್ರೊ. ಶರತ್ ಅನಂತಮೂರ್ತಿ ಹೇಳಿದರು.



ದೇಶೀಯ ವಿದ್ಯಾಶಾಲಾ ಸಮಿತಿಯ ಡಿವಿಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಭೌತಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ ಅಂತರಶಿಸ್ತೀಯ ಸಂಶೋಧನೆ ಮತ್ತು ನಾವೀನ್ಯತೆ ವಿಷಯ ಕುರಿತ ಎರಡು ದಿನದ ರಾಷ್ಟ್ರೀಯ ವಿಜ್ಞಾನ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಹೊಸ ಆಲೋಚನೆಗಳು, ಹೊಸ ರೀತಿಯ ಶಿಕ್ಷಣ ನಮ್ಮ ದೇಶಕ್ಕೆ ಬಹುಮುಖ್ಯವಾಗಿ ಅಗತ್ಯವಾಗಿದೆ. ನಾವು ಹೊಸ ಬದಲಾವಣೆಗೆ ಸನ್ನದ್ಧರಾಗಬೇಕು. ವಿದ್ಯಾರ್ಥಿಗಳು ವಿಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ಧನಾತ್ಮಕ ಉಪಯೋಗಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ. ಎಚ್. ಕೇಶವ ಮಾತನಾಡಿ, ಸಂಶೋಧನೆ ಮತ್ತು ನಾವೀನ್ಯತೆ ಬಹುಪ್ರಾಮುಖ್ಯವಾದ ವಿಚಾರ. ಹೊಸ ವಿಚಾರಕ್ಕೆ, ಹೊಸತನಕ್ಕೆ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ವಿಜ್ಞಾನಿ ಡಾ. ಸಿ.ವಿ.ಯೇಳಮಗ್ಗದ ಮಾತನಾಡಿ, ಹೊಸ ಆವಿಷ್ಕಾರಗಳ ಬಗ್ಗೆ ವಿದ್ಯಾರ್ಥಿಗಳು ಆಸಕ್ತಿ ವಹಿಸಬೇಕು. ನಮ್ಮ ಎದುರು ಇರುವ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಐಐಟಿ ಧಾರವಾಡ ಡೀನ್ ಡಾ. ಎಸ್.ಎಂ.ಶಿವಪ್ರಸಾದ್ ಮಾತನಾಡಿ, ಸಂಶೋಧನಾ ಕ್ಷೇತ್ರದಲ್ಲಿನ ಹೊಸ ಸಾಧ್ಯತೆಗಳ ವಿದ್ಯಾರ್ಥಿಗಳು ಅಧ್ಯಯನ ನಡೆಸಬೇಕು ಎಂದು ಹೇಳಿದರು.

ಡಿವಿಎಸ್ ಸಮಿತಿ ಅಧ್ಯಕ್ಷ ಕೆ.ಬಸಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ. ಎಂ.ವೆಂಕಟೇಶ್, ಐಕ್ಯೂಎಸಿ ಸಂಯೋಜಕ ಪ್ರೊ. ಎನ್. ಕುಮಾರಸ್ವಾಮಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಎಂ.ಆರ್.ಹರೀಶ್ ಕುಮಾರ್ ಇದ್ದರು.

ಸಾಧಕ ಮಹಿಳೆಯರ ಸನ್ಮಾನ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯೆ ಭಾರತೀ ಶೆಟ್ಟಿ

ನೆಲ-ಜಲವನ್ನು ತಾಯಿ ಎಂದು ಪೂಜಿಸುವ ರಾಷ್ಟ್ರ ನಮ್ಮದು

ಸೊರಬ: ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ಪೂಜ್ಯನೀಯ ಸ್ಥಾನವಿದ್ದು, ಪ್ರಸ್ತುತ ಪುರುಷರಿಗೆ ಸಮಾನಳಾಗಿ ಎಲ್ಲಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾಳೆ ಎಂದು ವಿಧಾನ ಪರಿಷತ್ ಸದಸ್ಯೆ ಭಾರತೀ ಶೆಟ್ಟಿ ಹೇಳಿದರು.



ಪಟ್ಟಣದ ಶ್ರೀರಂಗ ಕನ್ವೆನ್ಷನ್ ಹಾಲ್‌ನಲ್ಲಿ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ವತಿಯಿಂದ ಹಮ್ಮಿಕೊಂಡ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸಾಧಕ ಮಹಿಳೆಯರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ನೆಲ-ಜಲವನ್ನು ತಾಯಿ ಎಂದು ಪೂಜಿಸುವ ರಾಷ್ಟ್ರ ನಮ್ಮದಾಗಿದೆ. ಜಗತ್ತಿ ನಲ್ಲಿಯೇ ಮಹಿಳೆಗೆ ಮತದಾನದ ಹಕ್ಕು ನೀಡಿದ ರಾಷ್ಟ್ರ ಭಾರತ ಎಂಬುದು ಹೆಮ್ಮೆಯ ವಿಷಯ. ಚರಿತ್ರೆಯ ಪುಟಗಳನ್ನು ತೆರೆದಾಗ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ತ್ಯಾಗ ಮತ್ತು ಬಲಿದಾನ, ದಿಟ್ಟ ಹೋರಾಟಗಳನ್ನು ಕಾಣಬಹು ದಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಶಂಕರ್ ಶೇಟ್ ಮಾತನಾಡಿ, ಮಹಿಳೆ ವ್ಯಕ್ತಿಯಾಗಿರದೇ ಶಕ್ತಿಯಾಗಿದ್ದು, ಗೌರವಿಸುವುದು ಪುಣ್ಯದ ಕೆಲಸವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಪ್ರತಿವರ್ಷ ಫಲಿತಾಂಶಗಳಲ್ಲಿ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸುವುದನ್ನು ಗಮನಿಸಬಹುದು ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಬಿಇಒ ಆರ್ ಪುಷ್ಪಾ, ಎಸ್‌ಕೆಡಿಆರ್‌ಡಿಪಿ ಯೋಜನಾಧಿಕಾರಿ ಜಯಂತಿ, ಯೋಗಚಿಕಿತ್ಸಕಿ ಮಧುರಾ ಚಂದ್ರಶೇಖರ್ ಸಾಹುಕಾರ್, ಸೂಲಗಿತ್ತಿ ಸಾರೇ ಸೀತಮ್ಮ ಕಲ್ಲಂಬಿ, ಸಾಹಿತಿ ಪಿ.ಎಸ್. ಸುನಿತಾ, ಭರತನಾಟ್ಯದಲ್ಲಿ ಪಿಎಚ್‌ಡಿ ಸಂಶೋಧಕಿ ಪೃಥ್ವಿ ಜಾಣಾ ಕೆರೆಕೊಪ್ಪ, ಎಸ್‌ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕಿ ವನಿತಾ ಭಂಡಾರಿ, ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್‌ಗಳಾದ ಜಿ. ರೂಪಾಲಿ, ಶಿಲ್ಪಾ ಕುಮಾರ್, ಪೋಸ್ಟ್ ಮಾಸ್ಟರ್ ಎಚ್. ಆರ್. ಲಕ್ಷ್ಮಿ, ವೈದ್ಯೆ ಡಾ. ಅಶ್ವಿನಿ ವಿನಯ್, ವಕೀಲೆ ಹಾಗೂ ಯೋಗ ಶಿಕ್ಷಕಿ ಸಿ.ಬಿ. ಮಂಜುಳಾ ಮತ್ತು ಸಂಗೀತಾ ಕಲಾವಿದೆ ವೀಣಾ ನಾಯ್ಕ್ ಅವರನ್ನು ಸನ್ಮಾನಿಸಲಾಯಿತು. ಸಮೀನಾ ಪಾಟೀಲ್ ಸಾಧಕರ ಪರಿಚಯ ಮಾಡಿದರು.

ಕೋಟಿಪುರದ ಎವರಾನ್ ಇಂಟರ್ ನ್ಯಾಷನಲ್ ಸ್ಕೂಲ್ ಅಧ್ಯಕ್ಷೆ ಚರಿತಾ ಕಾರ್ತಿಕ್, ಶ್ರೀಧರ ಇಂಟರ್ ನ್ಯಾಷನಲ್ ಸ್ಕೂಲ್ ಅಧ್ಯಕ್ಷೆ ರೂಪಾ ಶ್ರೀನಾಥ್, ಮೆಡಿಲೆನ್ಸ್ ಡಯೋಗ್ನೋಸ್ಟಿಕ್ಸ್ ನಿರ್ದೇಶಕಿ ಅಶ್ವಿನಿ ಪ್ರಭು ಸಾಹುಕಾರ್, ಜ್ಞಾನ ಸಹ್ಯಾದ್ರಿ ಇಂಟರ್ ನ್ಯಾಷನಲ್ ಸ್ಕೂಲ್ ಪ್ರಾಂಶುಪಾಲೆ ಮೋನಿಕಾ ಡಿಸೋಜಾ ಇತರರಿದ್ದರು.

> **ಹುದ್ದೆಗಳು ತಾತ್ಕಾಲಿಕ**
>
> **ಬಿಜೆಪಿಯಲ್ಲಿ ಎಲ್ಲ ಹುದ್ದೆಗಳು ತಾತ್ಕಾಲಿಕವಾಗಿದ್ದು, ಕಾರ್ಯಕರ್ತನಾಗಿರುವುದೇ ಶಾಶ್ವತವಾದುದು ಎಂದು ವಿಪ ಸದಸ್ಯೆ ಭಾರತೀ ಶೆಟ್ಟಿ ಹೇಳಿದರು. ಪ್ರಧಾನಿ ಮೋದಿ, ಪಕ್ಷದ ಮುಖ್ಯಮಂತ್ರಿಗಳು, ಸಂಸದರು, ಶಾಸಕರು, ಪಕ್ಷದ ಹುದ್ದೆಗಳು ಎಲ್ಲವೂ ತಾತ್ಕಾಲಿಕವಾದುದು. ಆದರೇ ತಮ್ಮನ್ನು ಸೇರಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿರುವುದು ಶಾಶ್ವತವಾದುದು ಎಂದು ಪುನರುಚ್ಚರಿಸಿದರು. ಇತ್ತೀಚೆಗೆ ಮಾಜಿ ಸಚಿವ ಕುಮಾರ್ ಬಂಗಾರಪ್ಪ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜೇಂದ್ರ ಅವರ ಹುದ್ದೆ ತಾತ್ಕಾಲಿಕ ಎಂದಿದ್ದರು ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, ವಿಜೇಂದ್ರ ಬಗ್ಗೆ ಮಾತನಾಡಿದವರು ತಾತ್ಕಾಲಿಕದಲ್ಲೇ ತಾತ್ಕಾಲಿಕ ಎಂದು ವ್ಯಂಗ್ಯವಾಡಿದರು.**

ಕಾಸ್ಮೋ ಕ್ಲಬ್ ಅಧ್ಯಕ್ಷೆ ಶ್ರೀರಂಜನಿ ದತ್ತಾತ್ರಿ

ಸದೃಢ ಮಹಿಳೆಯಿಂದ ಸದೃಢ ದೇಶ ಸಾಧ್ಯ

ಶಿವಮೊಗ್ಗ : ಸದೃಢ ಮಹಿಳೆಯಿಂದ ಕುಟುಂಬ, ಸಮಾಜ, ದೇಶದ ಸದೃಢತೆ ಸಾಧ್ಯವಿದೆ ಎಂದು ಕಾಸ್ಮೋ ಕ್ಲಬ್ ಅಧ್ಯಕ್ಷೆ ಶ್ರೀರಂಜನಿ ದತ್ತಾತ್ರಿ ಹೇಳಿದರು.



ಕಾಸ್ಮೊ ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ದೇಶದ ಪ್ರಗತಿ ಸಂಕೇತ ಮಹಿಳೆಯೇ ಆಗಿದ್ದು, ಮಹಿಳೆಯರನ್ನು ಯಾವ ರೀತಿ ಆಧರಿಸಲಾಗುತ್ತದೆ ಎನ್ನುವುದರ ಮೇಲೆ ದೇಶದ ಭವಿಷ್ಯ ನಿರ್ಧಾರವಾಗಲಿದೆ ಎಂದರು.

ಅಕ್ಷರ ಕಲಿತ ಮಹಿಳೆ ತನ್ನ ಕುಟುಂಬದ ಸಬಲೀಕರಣಕ್ಕೆ ಸಹಜವಾಗೇ ಶ್ರಮಿಸುತ್ತಾಳೆ. ಮೌಲ್ಯ ಮತ್ತು ನೈತಿಕತೆ ಸಮಾಜದ ಮೂಲ ಮಂತ್ರವಾಗಿಸುತ್ತಾಳೆ. ಇಂದು ಬಹುತೇಕ ಮಹಿಳೆಯರು ಸಮಾನ ಹಕ್ಕು, ಅವಕಾಶ, ಅಧಿಕಾರ ಎಂದು ಮುನ್ನಡೆಯುತ್ತಿದ್ದೇವೆ. ಆದರೆ ಸ್ವಸ್ಥ ಕುಟುಂಬ ನಿರ್ವಹಿಸುವ ಜವಾಬ್ದಾರಿ ನಮ್ಮದೇ ಆಗಿರುತ್ತದೆ ಎಂದರು.

ಸಾಧನೆಯ ಪಥದತ್ತ ಮಹಿಳೆ ಸಾಗಿರುವುದಕ್ಕೆ ಕುಟುಂಬದೊಳಗಿನ ಅನ್ಯೋನ್ಯತೆ, ಸಹಕಾರ ಮನೋಭಾವ ತತ್ವವೂ ಅಡಗಿದೆ. ಆದರೂ ಮಹಿಳೆಯರು ಶಿಕ್ಷಣ ಪಡೆಯುವಲ್ಲಿ ಶೇ.60ರಷ್ಟು ಪ್ರಗತಿ ಆಗಿದ್ದರೂ, ಮಹಿಳಾ ಐಎಎಸ್ ಅಧಿಕಾರಿಗಳ ಸಂಖ್ಯೆ ಶೇ.14, ನ್ಯಾಯಾಧೀಶರ ಸಂಖ್ಯೆ ಶೇ.7, ಬ್ಯಾಂಕ್ ಉದ್ಯೋಗಿಗಳ ಸಂಖ್ಯೆ ಶೇ.18, ರಾಜಕಾರಣದಲ್ಲಿ ಶೇ.33 ಮುಟ್ಟಿಲ್ಲ. ತಾಂತ್ರಿಕ ಕೌಶಲ್ಯ ಶೇ.25, ಶಿಕ್ಷಣ ಕ್ಷೇತ್ರ ಶೇ.35 ಇದೆ. ಈ ಸ್ತರದಲ್ಲಿ ಮತ್ತಷ್ಟು ಪ್ರಗತಿ ಆಗಬೇಕಿದೆ ಎಂದರು. ವೇದಿಕೆಯಲ್ಲಿ ಮಿತ್ರೆ ಬಳಗದ ವೀಣಾ ಹರ್ಷ, ಸುನಿತಾ ಅರುಣ್, ದೀಪಾ ಶ್ರೀನಿವಾಸ್, ಹೇಮಾ ಸತೀಶ್, ಗಾರ್ಗಿತಂಡದ ರಾಜಶ್ರೀ ಬಸವರಾಜ್, ಸುಮಿತ್ರಾ ಕೇಶವಮೂರ್ತಿ, ಲತಾ ಗೋವಿಂದ್ ಇದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರನ್ನು ಸನ್ಮಾನಿಸಲಾಯಿತು.

ವೈಮಾನಿಕ ಸೇವೆ ಆರಂಭಕ್ಕೆ ಪ್ರಸ್ತಾವನೆ ಸಲ್ಲಿಕೆ



ಬೆಂಗಳೂರು: ರಾಜಧಾನಿಯಿಂದ ಬೀದರ್ ಮತ್ತು ಕಲಬುರಗಿಗೆ ವೈಮಾನಿಕ ಸೇವೆ ಆರಂಭಿಸುವ ಬಗ್ಗೆ ವಿಮಾನಯಾನ ಸಂಸ್ಥೆಗಳು ಮಾ.23ರೊಳಗೆ ತಮ್ಮ ಪ್ರಸ್ತಾವನೆ ಸಲ್ಲಿಸಬೇಕು. ಇದರ ಬಗ್ಗೆ ಮುಂದಿನ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ ಪಾಟೀಲ ಹೇಳಿದ್ದಾರೆ.

ಈ ಸಂಬಂಧ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸೋಮವಾರ ವಿವಿಧ ವಿಮಾನಯಾನ ಸಂಸ್ಥೆಗಳೊಂದಿಗೆ ಸಭೆ ನಡೆಸಿದ ಅವರು, ಕಲಬುರಗಿ ವಿಮಾನ ನಿಲ್ದಾಣದಿಂದ ಈಗ ವಿಮಾನಸೇವೆ ಸ್ತಬ್ಧವಾಗಿದೆ. ಬೀದರ್‌ನಲ್ಲಿ ಕೆ.ಕೆ.ಆರ್.ಡಿ.ಬಿ ನೆರವಿನಿಂದ ದಿನಕ್ಕೆ ಒಂದು ವಿಮಾನ ಮಾತ್ರ ಸಂಚರಿಸುತ್ತಿದೆ. ಕೇಂದ್ರ ಸರ್ಕಾರವು ಪ್ರಾದೇಶಿಕ ಮಟ್ಟದಲ್ಲಿ ವಿಮಾನಯಾನ ಉತ್ತೇಜಿಸಲು ಉಡಾನ್ ಯೋಜನೆ ಮೂಲಕ ಮೂರು ವರ್ಷ ನೆರವು ನೀಡಿತು. ಆ ಅವಧಿ ಮುಗಿದ ನಂತರ ಹೀಗಾಗುತ್ತಿದೆ. ಕಲಬುರಗಿಯಲ್ಲಿ 742 ಎಕರೆಯಲ್ಲಿ ವಿಮಾನ ನಿಲ್ದಾಣವಿದೆ. ಇಂದಿನ ಸಭೆಯಲ್ಲಿ ವೈಮಾನಿಕ ಸೇವೆ ಎಷ್ಟರ ಮಟ್ಟಿಗೆ ಕಾರ್ಯಸಾಧು, ವಿಮಾನ ನಿಲ್ದಾಣಗಳ ಪ್ರಾಧಿಕಾರ ಎರಡೂ ಕಡೆ ಒದಗಿಸಿರುವ ಸೌಲಭ್ಯಗಳು ಮುಂತಾದವನ್ನು ಚರ್ಚಿಸಲಾಯಿತು ಎಂದಿದ್ದಾರೆ.

ಕಲಬುರಗಿಯಲ್ಲಿ ರಾತ್ರಿ ವೇಳೆ ವಿಮಾನ ನಿಲ್ಲಿಸುವ ಸೌಲಭ್ಯ ಸೇರಿದಂತೆ ಎಲ್ಲ ಬಗೆಯ ವಿಮಾನಗಳು ಬಂದಿಳಿಯಲು ಅನುಕೂಲವಿದೆ. ಅಲ್ಲಿಂದ ಬೆಂಗಳೂರು ಮತ್ತು ಉಳಿದ ಅನೇಕ ರಾಜ್ಯಗಳಿಗೆ ದಿನನಿತ್ಯದ ವಿಮಾನಸೇವೆ ಆರಂಭಿಸಬಹುದು ಎಂದು ವಿಮಾನ ಸಂಸ್ಥೆಗಳು ಹೇಳಿವೆ. ಮತ್ತೊಂದು ವಿಮಾನ ಸಂಸ್ಥೆಯು ನಿತ್ಯವೂ ಬೆಂಗಳೂರಿನಿಂದ ಬೆಳಗ್ಗೆ ಹೊತ್ತು ಬೀದರ್‌ಗೆ ಮತ್ತು ಸಂಜೆ ಕಲಬುರ್ಗಿಗೆ ವಿಮಾನಸೇವೆ ಆರಂಭಿಸಲು ಯೋಚಿಸುತ್ತಿರುವುದಾಗಿ ಹೇಳಿದೆ. ಜತೆಗೆ ಬೆಂಗಳೂರು–ಕಲಬುರಗಿ –ಹೈದರಾಬಾದ್–ಬೆಂಗಳೂರು ಮಾರ್ಗವಾಗಿ ಸೇವೆ ಆರಂಭಿಸುವ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ ಎಂದು ವಿವರಿಸಿದ್ದಾರೆ.

ಈ ವೇಳೆ ತೊಗರಿ ಕಣಜ ಕಲಬುರಗಿ ಮತ್ತು ಬೀದರ್‌ಗೆ ವಿಮಾನ ಸೇವೆ ಆರಂಭಿಸಬೇಕು ಎಂದು ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಡಾ.ಶರಣಪ್ರಕಾಶ ಆರ್. ಪಾಟೀಲ್ ಆಗ್ರಹಿಸಿದ್ದಾರೆ.

ಉಪ ಚುನಾವಣೆಗೆ ಏ.9ಕ್ಕೆ ಮತದಾನ

ಬಾಗಲಕೋಟೆ: ಭಾರತ ಚುನಾವಣಾ ಆಯೋಗವು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದೆ. ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯನ್ನು ಪಾರದರ್ಶಕತೆಯಿಂದ ನಡೆಸಲು ಜಿಲ್ಲಾಡಳಿತ ವ್ಯವಸ್ಥೆ ಮಾಡಿಕೊಂಡಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಉಪ ಚುನಾವಣೆಗೆ ಮಾ.16ರಂದು ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಕೆಗೆ ಮಾ.23 ಕೊನೆಯ ದಿನವಾಗಿದೆ. ಮಾ.24 ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಮಾ.26 ಕೊನೆಯ ದಿನವಾಗಿದೆ. ಏ. ರಂದು ಮತದಾನ ನಡೆಯಲಿದ್ದು, ಮತ ಏಣಿಕೆ ಮೇ 4ರಂದು ನಡೆಯಲಿದೆ.

ಎಲ್‌ಪಿಜಿ ಗ್ರಾಹಕರಿಗೆ ಇ- ಕೆವೈಸಿ ಕಡ್ಡಾಯ

ಪುಟ ೧➡ ತೈಲ ಮಾರ್ಕೆಟಿಂಗ್ ಕಂಪನಿಯ ಮೊಬೈಲ್ ಅಪ್ಲಿಕೇಶನ್ ಮತ್ತು ಆಧಾರ ಫೇಸ್‌ಆರ್‌ಡಿ ಅಪ್ಲಿಕೇಶನ್ ಅನ್ನು ಬಳಸಿಕೊಂಡು ಜನರು ತಮ್ಮ ಮನೆಗಳಿಂದಲೇ ಆರಾಮವಾಗಿ ಪರಿಶೀಲಿಸಬಹುದು ಎಂದು ಅದು ಹೇಳಿದೆ. ಗ್ರಾಹಕರು ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಬಹುದು ಅಥವಾ ತಮ್ಮ ಎಲ್‌ಪಿಜಿ ವಿತರಕರನ್ನು ಸಂಪರ್ಕಿಸಬಹುದು. ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಭಾರತವು ಎಲ್‌ಪಿಜಿ ಕೊರತೆ ಎದುರಿಸುತ್ತಿದೆ.

ಕೆ.ಎಚ್. ಪಾಟೀಲ್ ಅಪರೂಪದ ರಾಜಕಾರಣಿ



ಬೆಂಗಳೂರು: ಸಹಕಾರಿ ಧುರೀಣ ಕೆ.ಎಚ್. ಪಾಟೀಲರು ಅಪರೂಪದ ರಾಜಕಾರಣಿ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಸಹಕಾರಿರಂಗದಭೀಷ್ಮನಾಡುಮೆಚ್ಚಿದನಾಯಕಕೆ.ಎಚ್; ಪಾಟೀಲ್ ರ 101 ನೇ ಜಯಂತ್ಯುತ್ಸವ ಸಮಾ ರಂಭದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಮಾಡದಿರುವ ಕೆಲಸವಿಲ್ಲ ಸಾಮಾನ್ಯ ಗ್ರಾಮದಲ್ಲಿ ಹುಟ್ಟಿ ಪಂಚಾಯತಿ ಸದಸ್ಯರಾಗಿ, ಕಾಂಗ್ರೆಸ್ ಅಧ್ಯಕ್ಷರಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಕೆ. ಎಚ್. ಪಾಟೀಲ್ ಅವರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರೆಂದರು.

ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಬಡವರು, ದಲಿತರು, ಅಲ್ಪಸಂಖ್ಯಾತರಲ್ಲಿ ಶಕ್ತಿ ತುಂಬುವ ಕೆಲಸ ಮಾಡಿದ್ದನ್ನು ಸ್ಮರಿಸಬೇಕು ಎಂದರು. ಕೆ ಎಚ್ ಪಾಟೀಲ್ ರ ಪುತ್ರ, ಸಚಿವರಾದ ಎಚ್.ಕೆ.ಪಾಟೀಲರು ಅವರ ತಂದೆಯವರು ನಡೆದ ದಾರಿಯಲ್ಲಿ ನಡೆಯುತ್ತಿದ್ದು, ಅವರಿಗಿಂತಲೂ ಹೆಚ್ಚು ಬೆಳೆಯಲಿ ಎಂದರು. ಮಾಜಿ ಸಿಎಂ ವೀರಪ್ಪ ಮೊಯ್ಲಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ , ಡಿಸಿಎಂ ಡಿ.ಕೆ. ಶಿವಕುಮಾರ್, ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರಾದ ಕೆ. ಎಚ್.ಮುನಿಯಪ್ಪ, ಎಚ್. ಕೆ.ಪಾಟೀಲ್, ರಾಮಲಿಂಗಾರೆಡ್ಡಿ, ಶಾಸಕರಿದ್ದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಹಿಂದೆ ನಮ್ಮ ಬಟ್ಟೆಯನ್ನು ನಾವೇ ಒಗೆಯಬೇಕಿತ್ತು, ನಮ್ಮ ತಟ್ಟೆಯನ್ನು ನಾವೇ ತೊಳೆಯಬೇಕಿತ್ತು, ಅಡಿಕೆಯನ್ನೂ ನಾವೇ ಹೆಕ್ಕಬೇಕಿತ್ತು, ದನಗಳನ್ನು ನಾವೇ ಮೇಯಿಸಬೇಕಿತ್ತು – ಡಾ/ ವೀರೇಂದ್ರ ಹೆಗ್ಗಡೆ
– ಇಂದು ನಾವು ಅದೆಲ್ಲವನ್ನೂ ಇನ್ನೊಬ್ಬರಿಂದ ಹಣ ಕೊಟ್ಟು ಮಾಡಿಸುವಷ್ಟು ಮುಂದುವರಿದಿದ್ದೇವೆ, ಆದರೆ ಅದಕ್ಕಾಗಿ ಮಾಡಿದ ಬ್ಯಾಂಕ್ ಸಾಲವನ್ನು ನಾವೇ ದುಡಿದು ನಾವೇ ಕಟ್ಟುತ್ತೇವೆ!

ದಿನ ಭವಿಷ್ಯ

ಮೇಷ ಪ್ರಗತಿಪರ ದಿನ. ಉದ್ದೇಶಿಸಿದ ಕಾರ್ಯ ಪೂರ್ಣ. ಪ್ರೀತಿಯ ವಿಷಯದಲ್ಲಿ ಸಫಲತೆ. ವೃತ್ತಿಯಲ್ಲಿ ಉನ್ನತಿ, ಕೌಟುಂಬಿಕ ಸಾಮರಸ್ಯ.

ವೃಷಭ ಕೆಲ ದಿನಗಳ ಪ್ರಕ್ಷುಬ್ಧತೆ ಕಳೆದು ಮನಸ್ಸು ಶಾಂತವಾಗಲಿದೆ. ಕಾರ್ಯ ಸಾಫಲ್ಯದಿಂದ ವಿಶ್ವಾಸ ವೃದ್ಧಿ. ಎಲ್ಲ ಸರಿಯಾಗಿ ನಿಭಾಯಿಸುವಿರಿ.

ಮಿಥುನ ನೆಮ್ಮದಿ ಕಲಕುವ ಬೆಳವಣಿಗೆ. ನಿಮಗೆ ಧೈರ್ಯ ಕಡಿಮೆ, ಅದರಿಂದ ಗುರಿ ಸಾಧನೆ ಕಷ್ಟ. ಸ್ನೇಹಿತರಿಂದ ಹಣ ವಂಚನೆ ನಡೆದೀತು.

ಕಟಕ ಕೆಲಸದಲ್ಲಿ ಹೆಚ್ಚು ಗಮನ ಕೇಂದ್ರೀಕರಿಸಿ. ಚಂಚಲಚಿತ್ತ ಒಳಿತಲ್ಲ. ಅನಿರೀಕ್ಷಿತ ಧನಲಾಭ. ದೇವರ ಪ್ರಾರ್ಥನೆಯಿಂದ ಮನಸ್ಸಿಗೆ ಶಾಂತಿ.

ಸಿಂಹ ನಿರ್ವಹಣೆ ಉತ್ತಮ. ಹಾಗಾಗಿ ಒಳ್ಳೆ ಫಲ ಸಿಗುವುದು. ಆದರೂ ಕೆಲವರ ಅವಕೃಪೆಗೆ ತುತ್ತಾಗುವಿರಿ. ಕೌಟುಂಬಿಕ ಭಿನ್ನಮತ, ಉದ್ವಿಗ್ನತೆ.

ಕನ್ಯಾ ಉದ್ದೇಶಿಸಿದ ಕಾರ್ಯಕ್ಕೆ ವಿಘ್ನಗಳು. ಪ್ರಯತ್ನ ವಿಫಲ. ಮನಸ್ಸಿಗೆ ನಿರಾಶೆ. ಅತಿಯಾಗಿ ವಿಶ್ವಾಸವಿಟ್ಟವರೇ ಕೇಡು ಬಗೆಯುತ್ತಾರೆ.

ತುಲಾ ಮಾಡಿದ ಕೆಲಸಕ್ಕೆ ಸೂಕ್ತ ಪ್ರತಿಫಲ ಸಿಗದಿದ್ದರೂ ನಿರಾಶೆ ಆಗದು. ಹಣದ ಹರಿವು ಸುಗಮ. ಉಳಿತಾಯವೂ ಸಾಧ್ಯ. ಮನಸ್ಸು ನಿರಾಳ.

ವೃಶ್ಚಿಕ ಒತ್ತಡದ ದಿನ. ಅಧಿಕ ಹೊಣೆಗಾರಿಕೆ. ನಿಮ್ಮನ್ನು ದ್ವೇಷಿಸುವವರಿಂದ ದೂರ ಇರಿ. ಅನವಶ್ಯ ವೆಚ್ಚದ ಮೇಲೆ ನಿಯಂತ್ರಣ ಇಡಿ. ಕೌಟುಂಬಿಕ ಸಹಕಾರ.

ಧನು ಯಾವುದೇ ವಿಷಯಕ್ಕೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಿ. ಅದು ನಿಮ್ಮ ಘನತೆ ಉಳಿಸುವುದು. ಗುರಿ ಸಾಧನೆ ನಿಮಗೆ ಕಷ್ಟವಾಗಲಾರದು.

ಮಕರ ಇತ್ತೀಚಿನ ಹಿನ್ನಡೆಗಳಿಂದ ನೊಂದಿದ್ದರೆ ಇಂದು ನಿರಾಳತೆ ಸಿಗಲಿದೆ. ನಿಮಗೆ ಪೂರಕವಾದ ಬೆಳವಣಿಗೆ. ಆಪ್ತರ ಜತೆಗಿನ ಮುನಿಸು ಮಾಯ.

ಕುಂಭ ವಿಶ್ವಾಸ ವೃದ್ಧಿಯ ಬೆಳವಣಿಗೆ. ಮನೆಯಲ್ಲಿ ಅಧಿಕ ಹೊಣೆಯ ಹೊರೆ. ಹಿರಿಯರಿಗೆ ಸಂಧಿ ನೋವಿನಿಂದ ನೆಮ್ಮದಿ ಸಿಗಬಹುದು.

ಮೀನ ಇತರರ ಜತೆ ಸರಿಯಾಗಿ ವ್ಯವಹರಿಸಿ. ತಪ್ಪು ಕಲ್ಪನೆ ಮೂಡದಂತೆ ಎಚ್ಚರ ವಹಿಸಿ. ಸಣ್ಣ ಸಮಸ್ಯೆ ಕಡೆಗಣಿಸಬೇಡಿ, ಅದೇ ದೊಡ್ಡದಾದೀತು.

ರಾಹುಕಾಲ: 3.00 – 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 7,0,6,2

ಶಕ್ತಿ ಯೋಜನೆಯಲ್ಲಿ ಮಹಿಳೆಯರ 700 ಕೋಟಿ ಪ್ರಯಾಣ: ಸಿಎಂ

ಮಹಿಳೆಯರ ಪಾತ್ರ ಮಹತ್ವದ್ದು

ಬೆಂಗಳೂರು: ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯ ಗೆಲುವಿನಲ್ಲಿ ಮಹಿಳಾ ಕಾಂಗ್ರೆಸ್ ಸದಸ್ಯರ ಪಾತ್ರ ಮಹತ್ವವಾದುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ತಿಳಿಸಿದರು.



ಸೋಮವಾರ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ವತಿಯಿಂದ ಆಯೋಜಿಸ ಲಾಗಿದ್ದ ಕಾರ್ಯಕಾರಿ ಸಭೆ ಮತ್ತು ತರಬೇತಿ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿ, 2013 ರಿಂದ 2018 ಮತ್ತು 2023ರಿಂದ ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದೆ. ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿಯೋಜನೆಯಿಂದ ಇದುವರೆಗೆ ಮಹಿಳೆಯರು 700 ಕೋಟಿ ಪ್ರಯಾಣ ಗಳನ್ನು ಕೈಗೊಂಡಿದ್ದಾರೆ. ಮಹಿಳಾ ಕೇಂದ್ರಿತ ಯೋಜನೆಗಳಿಂದ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲಾಗಿದೆ. ಸರ್ಕಾರದ ಗ್ಯಾರಂಟಿಗಳಿಂದ ಮಹಿಳೆಯರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ 1.26 ಕೋಟಿ ಮಹಿಳೆಯರಿಗೆ ಮಾಸಿಕ 2000 ರೂಗಳನ್ನು ನೀಡಲಾಗುತ್ತಿದ್ದು, ಇದರಿಂದ ಮಹಿಳೆಯರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಸುಧಾರಿಸಿದೆ. ಆರ್ಥಿಕ ಸ್ವಾತಂತ್ರ್ಯದಿಂದ ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿದೆ ಎಂದರು.

ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ: ಮಹಿಳೆಯರಲ್ಲಿ ನಾಯಕತ್ವದ ಗುಣ ಬಹಳ ಪ್ರಮುಖವಾಗಿದೆ. ಎಲ್ಲರಿಗೂ ಸಮಾನ ಅವಕಾಶ ದೊರೆತರೆ ಸಮಾನತೆಯನ್ನು ಸಾಧಿಸುವುದು ಸುಲಭವಾಗಿದೆ. ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್‌ನಲ್ಲಿ 1 ಲಕ್ಷಕ್ಕೂ ಹೆಚ್ಚು ಮಹಿಳಾ ಸದಸ್ಯರಿದ್ದು, ಭವಿಷ್ಯದಲ್ಲಿ ಈ ಸಂಖ್ಯೆ 2 ಲಕ್ಷಗಳಿಗೆ ವೃದ್ಧಿಸಬೇಕು. ಉಪಚುನಾವಣೆ ಸಮೀಸುತ್ತಿರುವುದರಿಂದ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮಹಿಳಾ ಸದಸ್ಯರ ಪಾತ್ರ ಮಹತ್ವದ್ದಾಗಿದೆ. ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಮಹಿಳಾ ಸದಸ್ಯರ ಎರಡು ತಂಡಗಳನ್ನು ರಚಿಸಿ, ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಸೂಚಿಸಿದರು.

ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಅಲ್ಕಾ ಲಾಂಬಾ, ಕರ್ನಾಟಕ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಸೌಮ್ಯಾ ರೆಡ್ಡಿ, ಮಹಿಳಾ ಕಾಂಗ್ರೆಸ್ ಕರ್ನಾಟಕ ಉಸ್ತುವಾರಿ ಸೋಫಿಯಾ ಜುಬೇರಾ, ಪ್ರಧಾನ ಕಾರ್ಯದರ್ಶಿ ಸೇವಾ ಸೆಲ್ವಾನ್, ಶಾಸಕ ಮಂಥರ್ ಗೌಡ, ನಯನ ಮೋಟಮ್ಮ, ಮಾಜಿ ಸಚಿವ ರಾಣಿ ಸತೀಶ್ ಸೇರಿದಂತೆ ಮಹಿಳಾ ಕಾಂಗ್ರೆಸ್ ವಿಭಾಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬನ್ನಿ

ಬೆಂಗಳೂರು: ನಿಷ್ಠೆಯಿಂದ ಕೆಲಸ ಮಾಡಿದರೆ ಅಧಿಕಾರ ಮನೆ ಬಾಗಿಲಿಗೆ ಬರಲಿದೆ. ಮಹಿಳೆಯರು ಗುರಿ ಇಟ್ಟುಕೊಂಡು ರಾಜಕಾರಣಕ್ಕೆ ಬರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಹೇಳಿದರು.



ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ವತಿಯಿಂದ ಮಹಿಳಾ ಸಬಲೀಕರಣ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ನಡೆಯುತ್ತಿರುವ ಮಹಿಳಾ ಸಬಲೀಕರಣ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಆರ್‌ಎಸ್‌ಎಸ್ ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ, ಅದೇ ರೀತಿ ಪಕ್ಷದಲ್ಲಿ ಮಹಿಳಾ ಕಾಂಗ್ರೆಸ್ ಘಟಕವು ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದೆ. ಉತ್ತಮ ಕೆಲಸ ಮಾಡಿದರೆ ಅಧಿಕಾರ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಮುಂಬರುವ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಎಲ್ಲಾ ವರ್ಗದವರನ್ನು ಗುರುತಿಸಿ ಟಿಕೆಟ್ ನೀಡಬೇಕು ಎಂದರು. ಸಂಘಟನೆಯಲ್ಲಿ ಒತ್ತು ನೀಡುವವರನ್ನು, ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಕ್ಕೆ ಬದ್ಧರಾಗಿರುವವರನ್ನು ಗುರುತಿಸಬೇಕು. ನಿಮ್ಮ ಅಕ್ಕಪಕ್ಕದ ಮನೆಯವರ ಮನಸ್ಸನ್ನು ಗೆದ್ದು, ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ಮಾಡಬೇಕು. ನಿಸ್ವಾರ್ಥದಿಂದ ಪಕ್ಷದಲ್ಲಿ ಕೆಲಸ ಮಾಡಬೇಕು ಎಂದರು.

ಸಚಿವರು, ಸಂಸದರ ಸಭೆ ಇಂದು

ಪುಟ ೧➡ ಈ ಹಿಂದೆ ರಾಜ್ಯದ ನೀರಾವರಿ ಸಚಿವರಾಗಿದ್ದ ಸಚಿವ ಎಚ್.ಕೆ. ಪಾಟೀಲ್, ಎಂ.ಬಿ.ಪಾಟೀಲ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೊಸರಾಜು ಜತೆಗೆ ಮಂಗಳವಾರ ಹೊಸದಿಲ್ಲಿಗೆ ತೆರಳಲಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು, ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವ ನೀರಾವರಿ ಪ್ರಕರಣಗಳ ಕುರಿತು ರಾಜ್ಯದ ಅಡ್ವೋಕೆಟ್ ಜನರಲ್ ಹಾಗೂ ರಾಜ್ಯವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರತಿನಿಧಿಸುತ್ತಿರುವ ಹಿರಿಯ ವಕೀಲರ ಜತೆಗೆ ಚರ್ಚೆ ನಡೆಸಲಿದ್ದಾರೆ. ಸುಪ್ರೀಂಕೋರ್ಟ್ ವಿಚಾರಣೆಯಲ್ಲಿ ರಾಜ್ಯ ಸರ್ಕಾರ ತಗೆದುಕೊಳ್ಳಬೇಕಾದ ನಿರ್ಧಾರದ ಕುರಿತು ವಕೀಲರ ತಂಡದೊಂದಿಗೆ ಚರ್ಚಿಸಲಿದ್ದಾರೆ.

ಅದೇ ದಿನ ಸಂಜೆ ರಾಜ್ಯದ ಕೇಂದ್ರ ಸಚಿವರಾಗಿರುವ ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ, ವಿ. ಸೋಮಣ್ಣ ಹಾಗೂ ಶೋಭಾ ಕರಂದ್ಲಾಜೆ ಸೇರಿದಂತೆ ಎಲ್ಲ ಪಕ್ಷಗಳ ರಾಜ್ಯ ಸಂಸದರ ಜತೆಗೆ ಸಭೆ ನಡೆಸಲಿದ್ದು, ಈ ಸಭೆಯಲ್ಲಿ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬೇಕಾದ ಯೋಜನೆಗಳು ಅಸರಲ್ಲಿಯೂ ಪ್ರಮುಖವಾಗಿ ಮೇಕೆದಾಟು, ಕೃಷ್ಣ ಮೇಲ್ದಂಡೆ ಯೋಜನೆ ಹಾಗೂ ತುಂಗಭದ್ರಾ, ರಾಷ್ಟ್ರೀಯ ಯೋಜನೆ ಘೋಷಣೆ ಕುರಿತಾಗಿ ಸಂಸದರೊಂದಿಗೆ ಚರ್ಚಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂತೆ ಮನವೊಲಿಸುವ ಪ್ರಯತ್ನ ಮಾಡಲಿದ್ದಾರೆ. ಬಳಿಕ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ.

ಆಂಧ್ರ, ಮಹಾರಾಷ್ಟ್ರದ ವಿರುದ್ಧ ಧ್ವನಿ ಎತ್ತಲು ಮನವಿ

ಪುಟ ೧➡ ನ್ಯಾಯಾಧಿಕರಣ ಆದೇಶದ ಪ್ರಕಾರ ನಮ್ಮ ಪಾಲಿನ ನೀರಿನ ಬಳಕೆಗೆ ಯೋಜನೆ ಮಾಡುತ್ತಿದ್ದು, ಈಗಾಗಲೇ 26 ಸಾವಿರ ಕೋಟಿ ರೂ. ಮೊತ್ತದ ಕಾಮಗಾರಿಗಳನ್ನು ಆರಂಭಿಸಲಾಗಿದೆ. ನಾವು ಈಗಲೇ ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳ ಮಾಡುತ್ತಿಲ್ಲ. 2010 ರಲ್ಲಿ ಆಗಿರುವ ಆದೇಶದ ಅನುಸಾರ ನಮ್ಮ ಪಾಲಿನ ನೀರು ಬಳಕೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

> ತುಂಗಭದ್ರಾ ಅಣೆಕಟ್ಟೆಯಿಂದ ನಮಗೆ 30 ಟಿಎಂಸಿ ನೀರು ವ್ಯರ್ಥವಾಗುತ್ತಿದ್ದು, ಇದಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳಲು ಆಂಧ್ರ ಸರ್ಕಾರ ಸಹಕಾರ ನೀಡುತ್ತಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ಸಂಸದರ ಜತೆ ಚರ್ಚಿಸಿ ಸರ್ಕಾರದ ಮೇಲೆ ಒತ್ತಡ ಹಾಕಲು ತೀರ್ಮಾನ ಮಾಡಲಾಗುತ್ತದೆ.
> ■ **ಶಿವಕುಮಾರ್**, ಡಿಸಿಎಂ

ಎಲ್ಪಿಜಿ ವಿತರಣೆಗೆ ಹೊಸ ನೀತಿ

ಪುಟ ೧➡ ರೆಸ್ಟೋರೆಂಟ್, ಡಾಬಾ, ಹೋಟೆಲ್ ಮತ್ತು ಕೈಗಾರಿಕಾ ಕ್ಯಾಂಟೀನ್‌ಗಳಿಗೆ ಪ್ರತಿದಿನ 1 ಸಾವಿರ ಸಿಲಿಂಡರ್‌ಗಳನ್ನು ನಿಗದಿಪಡಿಸಲಾಗಿದೆ. ಬೀಜ ಸಂಸ್ಕರಣಾ ಉದ್ಯಮ, ಆಹಾರ ಸಂಸ್ಕರಣಾ ಉದ್ಯಮ, ಕೃಷಿ ಮತ್ತು ಸಂಬಂಧಿತ ವಲಯಗಳು, ಔಷಧೀಯ ಉದ್ಯಮ, ಮೀನುಗಾರಿಕೆ, ಪ್ರಾಣಿ ಸಂಗ್ರಹಾಲಯ, ಕ್ರೀಡಾ ಹಾಸ್ಟೆಲ್‌ಗಳು, ಕಾರ್ಪೊರೇಟ್ ಕ್ಯಾಂಟೀನ್‌ಗಳು, ಕೋಳಿ ಮತ್ತು ರೇಷ್ಮೆ ಸಾಕಾಣಿಕೆ ಉದ್ಯಮಗಳಿಗೆ ಪ್ರತಿದಿನ 500 ಸಿಲಿಂಡರ್ ಹಾಗೂ ಇತರೆ ಅಗತ್ಯಗಳಿಗೆ ನಿತ್ಯ 100 ಸಿಲಿಂಡರ್‌ಗಳನ್ನು ಪ್ರಕರಣದ ಆಧಾರದ ಮೇಲೆ ವಿತರಿಸಲು ರಾಜ್ಯ ಸರಕಾರ ಮುಂದಾಗಿದೆ.

ಎಲ್‌ಪಿಜಿ ಬಳಕೆ ಎಷ್ಟು? 2025ರ ಡಿಸೆಂಬರ್‌ನಿಂದ 2026ರ ಫೆಬ್ರವರಿ ವರೆಗೆ ರಾಜ್ಯದಲ್ಲಿ ಒಟ್ಟು 76,544 ಮೆಟ್ರಿಕ್ ಟನ್ ವಾಣಿಜ್ಯ ಎಲ್‌ಪಿಜಿ ಬಳಕೆಯಾಗಿದ್ದು, ಸರಾಸರಿ ಮಾಸಿಕ ಬಳಕೆಯು 25,515 ಮೆಟ್ರಿಕ್ ಟನ್ ಹಾಗೂ ದೈನಂದಿನ ಬಳಕೆಯು ಸರಾಸರಿ 850 ಮೆಟ್ರಿಕ್ ಟನ್ ಆಗಿದೆ. ಅದೇ ರೀತಿ ಆಟೋ ಎಲ್‌ಪಿಜಿ ದೈನಂದಿನ ಬಳಕೆಯು ಸರಾಸರಿ 56.7 ಮೆಟ್ರಿಕ್ ಟನ್. ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಅನ್ವಯ, ರಾಜ್ಯದಲ್ಲಿ ದಿನನಿತ್ಯ ಸರಾಸರಿ 181.34 ಮೆಟ್ರಿಕ್ ಟನ್ ವಾಣಿಜ್ಯ ಎಲ್‌ಪಿಜಿಯನ್ನು ನಿಯಂತ್ರಿತ ಹಂಚಿಕೆಗೆ ಮೀಸಲಿಡಲಾಗಿದೆ.

> ಜನರು ಗಾಬರಿಯಾಗಬಾರದು. ಅಗತ್ಯಕ್ಕಿಂತ ಹೆಚ್ಚು ಸಿಲಿಂಡರ್ ಬುಕ್ ಮಾಡಬಾರದು ಹಾಗೂ ಸಂಗ್ರಹಿಸಬಾರದು. ಯಾವುದೇ ತಾಂತ್ರಿಕ ಸಮಸ್ಯೆ ಕಂಡುಬಂದರೆ ತಕ್ಷಣ ಸಂಬಂಧಿತ ಕಂಪನಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುತ್ತದೆ. ಜನರಿಗೆ ಯಾವುದೇ ತೊಂದರೆ ಆಗದಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ.
> ■ **ಕೆ.ಎಚ್. ಮುನಿಯಪ್ಪ**, ಆಹಾರ ಸಚಿವ

ಸಂಸತ್ತಲ್ಲಿ ಕಾಂಗ್ರೆಸ್ ಸದಸ್ಯರ ವರ್ತನೆ: ಸೋನಿಯಾಗೆ ಎಚ್‌ಡಿಡಿ ಪತ್ರ

ಪುಟ ೧➡ ಇದು ಸಂಸತ್ತಿನ ಘನತೆಯನ್ನು ಕುಗ್ಗಿಸುತ್ತಿದೆ. ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ಉಂಟು ಮಾಡುತ್ತದೆ ಎಂದು ಮಾಜಿ ಪ್ರಧಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಬಿಸ್ಕತ್ತು, ಪಕೋಡಾ ಸೇವನೆ ಅತಿರೇಕದ ಕ್ರಮ: ಸಂಸತ್ತಿನ ಮೆಟ್ಟಿಲುಗಳ ಮೇಲೆ ಚಹಾ ಸೇವನೆ ಮಾಡುವುದು ಸರಿಯಾದ ನಡವಳಿಕೆ ಅಲ್ಲ. ಈ ಹಿಂದೆ ವಿರೋಧಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯನ್ನು ಗೌರವಿಸಿ ಸಂಯಮದಿಂದ ವರ್ತಿಸಿದ್ದವು. ಸಂಸತ್ತಿನ ಮೆಟ್ಟಿಲುಗಳ ಮೇಲೆ ಕುಳಿತು ಚಹಾ, ಬಿಸ್ಕತ್ತು, ಪಕೋಡಾ ತಿನ್ನುವುದು ಅತಿರೇಕದ ಕ್ರಮಗಳು. ಇವು ಅನುಚಿತ ಎಂದು ಗೌಡರು ಟೀಕಿಸಿದ್ದಾರೆ.

ಪೀಠಕ್ಕೆ ತೋರುವ ಅಗೌರವ: ವಿರೋಧ ಪಕ್ಷದ ನಾಯಕನ ಕರ್ತವ್ಯ ಸುಲಭವಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅವರ ಎದುರು ಬೆಟ್ಟದಷ್ಟು ಸವಾಲುಗಳು ಇರುತ್ತವೆ. ಜನರ ಸಂಕಷ್ಟಗಳ ಬಗ್ಗೆ ಕಾಲ ಕಾಲಕ್ಕೆ ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಹಾಗಿದ್ದರೂ ಪ್ರತಿಭಟನೆ ಮಾಡುವ ಸಂದರ್ಭ ಬಂದರೆ ಅದಕ್ಕೆ ತನ್ನದೇ ಆದ ರೀತಿನೀತಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಪೀಠಕ್ಕೆ ಅಗೌರವ ತೋರುವ, ಅಪಚಾರ ಎಸಗುವ ಕೆಲಸ ಆಗಬಾರದು. ನನ್ನ ಕಾಳಜಿ ಮತ್ತು ನನ್ನ ಉದ್ದೇಶವನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂದು ನನಗೆ ನಂಬಿಕೆಯಿದೆ. ನಾನು ಯಾರನ್ನೂ ಲಘುವಾಗಿ ನೋಡುವ ಅಥವಾ ಯಾರ ಉತ್ಸಾಹವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿಲ್ಲ, ಆದರೆ, ವಿರೋಧ ಪಕ್ಷದ ಹಿರಿಯ ಸ್ಥಾನದಲ್ಲಿರುವ ನೀವು, ನಿಮ್ಮ ರಾಜಕೀಯ ಅನುಭವ ಮತ್ತು ಪ್ರಬುದ್ಧತೆಯನ್ನು ಬಳಸಿಕೊಂಡು ನಿಮ್ಮ ಪಕ್ಷದ ನಾಯಕರು ಮತ್ತು ಇತರರೊಂದಿಗೆ ಮಾತನಾಡಿ ಸರಿಪಡಿಸಬೇಕು ಒತ್ತಾಯಿಸುತ್ತೇನೆ ಎಂದು ದೇವೇಗೌಡರು, ಸೋನಿಯಾ ಗಾಂಧಿ ಅವರನ್ನು ಪತ್ರದ ಮೂಲಕ ಆಗ್ರಹಿಸಿದ್ದಾರೆ.

ದೇಶಕ್ಕಿಂದು ಎಲ್ಪಿಜಿ, ತೈಲ ಹೊತ್ತ 2 ನೌಕೆ

ಪುಟ ೧➡ ಶಿವಾಲಿಕ್ ಈಗಾಗಲೇ ಗುಜರಾತ್ ತಲುಪಿದ್ದು, ನಂದಾ ದೇವಿ ಮಂಗಳವಾರ ಕಾಂಡ್ಲಾ ಬಂದರನ್ನು ತಲುಪುವ ನಿರೀಕ್ಷೆಯಿದೆ. ಪ್ರಸ್ತುತ 22 ಭಾರತೀಯ ಧ್ವಜದ ಹಡಗುಗಳು ಪಶ್ಚಿಮ ಪರ್ಷಿಯನ್ ಕೊಲ್ಲಿಯಲ್ಲಿ ಉಳಿದುಕೊಂಡಿದ್ದು, ಸುರಕ್ಷಿತ ನಿರ್ಗಮನಕ್ಕೆ ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿವೆ.

ಸಾರಿಗೆ ಸಮನ್ವಯ ಮತ್ತು ಬೆಂಬಲ: ಫೆ.28ರಂದು ಸಂಘರ್ಷ ಆರಂಭವಾದಾಗಿನಿಂದ, ಡಿಜಿ ಶಿಪ್ಪಿಂಗ್ ನಿಯಂತ್ರಣ ಕೊಠಡಿ, 8,400ಕ್ಕೂ ಹೆಚ್ಚು ಕರೆಗಳನ್ನು ನಿರ್ವಹಿಸಿದೆ. ಇಲ್ಲಿಯವರೆಗೆ ಒಟ್ಟು 286 ಭಾರತೀಯ ನಾವಿಕರನ್ನು ಸ್ವದೇಶಕ್ಕೆ ಕರೆತರಲಾಗಿದೆ. ವ್ಯಾಪಾರ ನಿರಂತರತೆಯನ್ನು ಕಾಪಾಡಿಕೊಳ್ಳಲು ಜವಾಹರಲಾಲ್ ನೆಹರು ಪೋರ್ಟ್ ಅಥಾರಿಟಿ ಸೇರಿದಂತೆ ಪ್ರಮುಖ ಬಂದರುಗಳಲ್ಲಿ ಲಂಗರು ಹಾಕುವ ಮತ್ತು ಸಂಗ್ರಹಣಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಹಾರ್ಮುಜ್ ಜಲಸಂಧಿಯ ದಿಗ್ಬಂಧನ ಮುಂದುವರಿದಿದ್ದರೂ, ರಷ್ಯಾದಂತಹ ಪರ್ಯಾಯ ಪೂರೈಕೆದಾರರಿಂದ ತೈಲ ಪಡೆಯುವ ಮೂಲಕ ಕೊರತೆ ನೀಗಿಸಲು ಯತ್ನಿಸಲಾಗುತ್ತಿದೆ.

ಹಾರ್ಮುಜ್ ಬಗ್ಗೆ ಅಮೆರಿಕ ಜತೆ ಚರ್ಚೆಸಿಲ್ಲ: ಭಾರತ

ಪುಟ ೧➡ ಶಿಪ್ಪಿಂಗ್ ಮಾರ್ಗಗಳು ನಿರ್ಬಂಧಿತವಾಗಿದ್ದರೂ, ಎರಡು ಭಾರತೀಯ ಎಲ್‌ಪಿಜಿ ವಾಹಕ ನೌಕೆಗಳು ಶನಿವಾರ ಯಶಸ್ವಿಯಾಗಿ ಈ ಜಲಸಂಧಿ ದಾಟಿವೆ. ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ತಗ್ಗಿಸಲು ರಾಜತಾಂತ್ರಿಕ ಮಾರ್ಗ ಅಳವಡಿಸಿಕೊಳ್ಳಲು ಭಾರತ ಕರೆನೀಡಿದೆ.

ರಾಷ್ಟ್ರ ಸೇವಿಕಾ ಸಮಿತಿ ಹಿರಿಯ ಪ್ರಚಾರಿಕಾ ರೇಖಾ ರಾಜೆ ನಿಧನ

ಹೊಸದಿಲ್ಲಿ: ರಾಷ್ಟ್ರ ಸೇವಿಕಾ ಸಮಿತಿಯ ಹಿರಿಯ ಪ್ರಚಾರಿಕಾ ಮತ್ತು ಮಾಜಿ ಅಖಿಲ ಭಾರತೀಯ ಸಹ-ಸರಕಾರ್ಯವಾಹಿಕಾ ರೇಖಾ ರಾಜೆ (ರೇಖಾತಾಯಿ) ಅಲ್ಪಕಾಲದ ಅನಾರೋಗ್ಯದಿಂದ ಭಾನುವಾರ ದಿಲ್ಲಿಯ ಏಮ್ಸ್‌ನಲ್ಲಿ ನಿಧನರಾದರು.



ರೇಖಾ ರಾಜೇ ಅವರು ಕಾನ್ಪುರದಲ್ಲಿ ಜನಿಸಿದರು. ಎಳೆಯ ವಯಸ್ಸಿನಿಂದಲೇ ಸಾಮಾಜಿಕ ಮತ್ತು ರಾಷ್ಟ್ರೀಯತಾವಾದಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ನಾಸಿಕ್‌ನಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಶಾಖೆಯ ಸಂಪರ್ಕಕ್ಕೆ ಬಂದರು. ಅವರು ಪುಣೆಯಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದರು, ಕಾನ್ಪುರ ವಿಶ್ವವಿದ್ಯಾಲಯದಿಂದ ಎಂ.ಎ. (ಸಮಾಜಶಾಸ್ತ್ರ) ಮತ್ತು ಬಿ.ಎಡ್. ಪದವಿಗಳನ್ನು ಪಡೆದರು.

ತುರ್ತು ಪರಿಸ್ಥಿತಿಯ ಸಮಯದಲ್ಲಿ, ಅವರು ಕಾನ್ಪುರದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಪ್ರತಿಭಟನಾ ಚಳವಳಿಯಲ್ಲಿ ಮಹಿಳೆಯನ್ನು ಸಜ್ಜುಗೊಳಿಸುವಲ್ಲಿ ಪ್ರಮುಖಪಾತ್ರ ವಹಿಸಿದರು. ಅಶೋಕ್ ಸಿಂಘಾಲ್ ಮತ್ತು ಸಿಂಧುತಾಯಿ ಪಾಠಕ್ ಅವರಿಂದ ಪ್ರೇರಿತರಾದ ರೇಖಾತಾಯಿ, ರಾಷ್ಟ್ರೀಯ ಸೇವಿಕಾ ಸಮಿತಿಯ ಪೂರ್ಣಕಾಲಿಕ ಪ್ರಚಾರಿಕಾರಾದರು. ತಮ್ಮ ಇಡೀ ಜೀವನವನ್ನು ಸಂಘಟನಾ ಕಾರ್ಯಕ್ಕೆ ಮೀಸಲಿಟ್ಟು ಮತ್ತು ರಾಷ್ಟ್ರದ ಸೇವೆಯಲ್ಲಿ ಅವರು ಅವಿವಾಹಿತರಾಗಿ ಉಳಿಯಲು ಪ್ರತಿಜ್ಞೆ ಮಾಡಿದರು.

ರೇಖಾತಾಯಿ ಅವರು ದಿಲ್ಲಿ ಪ್ರಾಂತ ಪ್ರಚಾರಿಕಾ, ಉತ್ತರ ಕ್ಷೇತ್ರ ಪ್ರಚಾರಿಕಾ ಮತ್ತು ಅಖಿಲ ಭಾರತೀಯ ಪ್ರಚಾರಿಕಾ ಪ್ರಮುಖ್ ಸಹಿತ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಹಲವು ವರ್ಷಗಳ ಕಾಲ ಜಲಂಧರ್ ಕೇಂದ್ರ ಸ್ಥಾನವಾಗಿರಿಸಿ ಉತ್ತರ ಕ್ಷೇತ್ರದಾದ್ಯಂತ ಸಮಿತಿಕಾರ್ಯವನ್ನು ವಿಸ್ತರಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರ್ಯಾಣ ಮತ್ತು ಹಿಮಾಚಲ ಪ್ರದೇಶದಂತಹ ಸೂಕ್ಷ್ಮ ಹಾಗೂ ಗಡಿ ಪ್ರದೇಶಗಳಲ್ಲಿ ರಾಷ್ಟ್ರೀಯ ಸೇವಿಕಾ ಸಮಿತಿಯ ಕಾರ್ಯ ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಕಾಶ್ಮೀರದಲ್ಲಿ ಹಿಂದುಗಳ ಹತ್ಯಾಕಾಂಡದ ಸಮಯದಲ್ಲಿ ರೇಖಾ ತಾಯಿ ಅನೇಕ ಹುಡುಗಿಯರನ್ನು ರಕ್ಷಿಸಿದ್ದಾರೆ. ಹೆತ್ತವರನ್ನು ಕಳೆದುಕೊಂಡ ಹೆಣ್ಣುಮಕ್ಕಳಿಗಾಗಿ ಜಮ್ಮುವಿನಲ್ಲಿ ಅವರು ಅದಿತಿ ಹಾಸ್ಟೆಲ್ ಅನ್ನು ಸ್ಥಾಪಿಸಿದ್ದಾರೆ. ಲವ್ ಜಿಹಾದ್‌ನಲ್ಲಿ ಸಿಲುಕಿರುವ ಅನೇಕ ಹಿಂದು ಹುಡುಗಿಯರನ್ನು ರಕ್ಷಿಸುವಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ರೇಖಾ ರಾಜೆ ಅವರ ಪಾರ್ಥಿವ ಶರೀರವನ್ನು ದಿಲ್ಲಿಯಿಂದ ಕಾನ್ಪುರದ ಅವರ ಮನೆಗೆ ತರಲಾಯಿತು. ಅಲ್ಲಿ ಸಾರ್ವಜನಿಕ ದರ್ಶನದ ಬಳಿಕ ಅಂತಿಮ ಯಾತ್ರೆಯು ಭೈರವಘಾಟ್‌ಗೆ ತೆರಳಿ ಅಂತಿಮ ವಿಧಿವಿಧಾನಗಳೊಂದಿಗೆ ಅಂತ್ಯ ಸಂಸ್ಕಾರ ನಡೆಸಲಾಯಿತು.

ನಿತಿನ್, ನಿತೀಶ್ ಸೇರಿ ಎಂಟು ಎನ್‌ಡಿಎ ಅಭ್ಯರ್ಥಿಗಳಿಗೆ ಜಯ

ಪುಟ ೧➡ 243 ಸದಸ್ಯರ ಬಿಹಾರ ವಿಧಾನಸಭೆಯಲ್ಲಿ ಎನ್‌ಡಿಎಗೆ 202 ಸದಸ್ಯರ ಬೆಂಬಲ ಇರುವುದರಿಂದ ನಾಲ್ಕು ಸ್ಥಾನಗಳಲ್ಲಿ ಸುಲಭವಾಗಿ ಗೆಲುವು ಸಾಧಿಸಿತು. ಐದನೇ ಸ್ಥಾನಕ್ಕಾಗಿ ಪ್ರತಿಪಕ್ಷ ಆರ್‌ಜೆಡಿ ಪಕ್ಷದ ಅಮರೇಂದ್ರ ಧಾರಿ ಸಿಂಗ್ ಅವರನ್ನು ಕಣಕ್ಕಿಳಿಸಿ ಚುನಾವಣೆಯನ್ನು ಸ್ಪರ್ಧಾತ್ಮಕಗೊಳಿಸಿತು. ಎನ್‌ಡಿಎ ಅಭ್ಯರ್ಥಿಗಳಿಗೆ ಬೆಂಬಲವಾಗಿ ಮತ ಚಲಾಯಿಸಿದ ಮೈತ್ರಿ ಶಾಸಕರಿಗೆ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಧನ್ಯವಾದ ತಿಳಿಸಿದ್ದಾರೆ.

ಒಡಿಶಾದಲ್ಲಿ ನಾಲ್ವರು ಆಯ್ಕೆ: ಇನ್ನೊಂದೆಡೆ ಒಡಿಶಾದಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ನಾಲ್ವರು ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳಾದ ಮನ್ಮೋಹನ್ ಸಾಮಲ್ ಮತ್ತು ಸುಜೀತ್ ಕುಮಾರ್ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಕೇಂದ್ರ ಮಾಜಿ ಸಚಿವ ದಿಲೀಪ್ ರಾಯ್ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗಮನಾರ್ಹ ಜಯ ದಾಖಲಿಸಿದ್ದಾರೆ. ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿದ್ದ ಅವರು, ಬಿಜು ಜನತಾ ದಳ, ಕಾಂಗ್ರೆಸ್ ಮತ್ತು ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ ಡಾ. ದತ್ತೇಶ್ವರ ಹೊಟಾ ಅವರನ್ನು ಸೋಲಿಸಿದ್ದಾರೆ. ಈ ವೇಳೆ ಬಿಜು ಜನತಾ ದಳ ಮತ್ತು ಕಾಂಗ್ರೆಸ್ ಪಕ್ಷಗಳ ಕೆಲ ಶಾಸಕರು ಪಕ್ಷದ ವಿಪ್‌ಗೆ ವಿರುದ್ಧವಾಗಿ ದಿಲೀಪ್ ರಾಯ್ ಪರ ಮತ ಚಲಾಯಿಸಿದ ಘಟನೆ ಗಮನಸೆಳೆದಿದೆ. ಬಿಜು ಜನತಾ ದಳದ ಸಂತೃಪ್ತ ಮಿಶ್ರಾ ಕೂಡ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ಸಚಿವರಿಂದ ಸಹಾಯವಾಣಿ ವ್ಯವಸ್ಥೆಗೆ ಚಾಲನೆ

ಬೆಂಗಳೂರು: ವ್ಯಸನಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಕಚೇರಿಯಲ್ಲಿ ಸಾರ್ವಜನಿಕರಿಗಾಗಿ ಸ್ಥಾಪಿಸಲಾದ ಸಹಾಯವಾಣಿ (ಹೆಲ್ಪ್‌ಲೈನ್) ವ್ಯವಸ್ಥೆಗೆ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಚಿವರು, ವಿದ್ಯಾರ್ಥಿಗಳು ಹಾಗೂ ಸಾರ್ವ ಜನಿಕರಲ್ಲಿ ಮದ್ಯಪಾನ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ರಾಜ್ಯದಾದ್ಯಂತ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಹೇಳಿದರು.

ಮದ್ಯಪಾನ ಮತ್ತು ಮಾದಕ ವಸ್ತುಗಳ ಬಳಕೆ ವ್ಯಕ್ತಿಯ ಆರೋಗ್ಯ, ಕುಟುಂಬದ ಶಾಂತಿ ಹಾಗೂ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವುದರ ಜೊತೆಗೆ ಯುವಪೀಳಿಗೆಯ ಭವಿಷ್ಯಕ್ಕೂ ದೊಡ್ಡ ಅಪಾಯವನ್ನುಂಟು ಮಾಡುತ್ತಿದೆ. ಇದಲ್ಲದೆ ಸಮಾಜದಲ್ಲಿ ಹೆಚ್ಚುತ್ತಿರುವ ಅಕ್ರಮ ಮದ್ಯ ಸೇವನೆ, ಅಕ್ರಮ ಮಾರಾಟ ಹಾಗೂ ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಿದೆ. ಈ ಸಂಬಂಧ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆತಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಮಂಡಳಿಯ ಸಹಾವಾಣಿ ಸಂಖ್ಯೆ: 080–22863230ಗೆ ಕರೆ ಮಾಡಿ ದೂರು ನೀಡಬಹುದು ಎಂದರು. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಮಾತನಾಡಿ, ಸಾರ್ವಜನಿಕರಿಂದ ಬರುವ ದೂರುಗಳು ಮತ್ತು ಮಾಹಿತಿಗಳನ್ನು ಗೌಪ್ಯವಾಗಿ ಪರಿಗಣಿಸಲಾಗುವುದಲ್ಲದೆ, ಸಂಬಂಧಪಟ್ಟವರ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಮದ್ಯ ಮತ್ತು ಮಾದಕ ವಸ್ತುಗಳಿಂದ ಸಮಾಜವನ್ನು ರಕ್ಷಿಸುವುದು ಎಲ್ಲರ ಜವಾಬ್ದಾರಿಯಾಗಿದೆ. ಆದ್ದರಿಂದ ಸಾರ್ವಜನಿಕರು ಜಾಗೃತರಾಗಿದ್ದು ಇಂತಹ ಅಕ್ರಮ ಚಟುವಟಿಕೆಗಳ ವಿರುದ್ಧ ಧೈರ್ಯವಾಗಿ ಮಾಹಿತಿ ನೀಡುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಈ ಸಹಾಯವಾಣಿಯು, ಸರ್ಕಾರಿ ರಜಾ ದಿನಗಳು ಹೊರತುಪಡಿಸಿ ಕಚೇರಿ ಸಮಯದ ವೇಳೆ ಅಂದರೆ ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ರವರೆಗೆ ಕಾರ್ಯನಿರ್ವಹಿಸಲಿದೆ. ಈ ವೇಳೆ ಕಲ್ಬುರ್ಗಿ ಡಿ.ಡಿ.ಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸೋಮಶೇಖರ್ ಗೊನಾಯಕ್, ಮಂಡಳಿ ಅಧ್ಯಕ್ಷರ ಕಾರ್ಯದರ್ಶಿ ನರಸಿಂಹಮೂರ್ತಿ, ಮಂಡಳಿ ಕಾರ್ಯದರ್ಶಿ ಎನ್.ಎಸ್. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಆಲಿಕಲ್ಲು ಮಳೆ, ಸಿಡಿಲಿಗೆ ಬಾಲಕ ಬಲಿ



ಬೆಂಗಳೂರು: ರಾಜ್ಯದ ರಾಯಚೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆಯಾಗಿದೆ. ಈ ಅಕಾಲಿಕ ಮಳೆಯು ಬಿಸಿಲಿನಿಂದ ಜನರಿಗೆ ತಂಪೆರೆದರೂ, ರಾಯಚೂರಿನ ಮಾವು ಬೆಳೆಗಾರರು ಮತ್ತು ಇತರೆ ರೈತರಿಗೆ ಬೆಳೆ ಹಾನಿಯ ಭೀತಿ ತಂದೊಡ್ಡಿದೆ.

ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕೊಪ್ಪಳ ಜಿಲ್ಲೆ ಯಲಬುರ್ಗಾದ ಎನ್.ಜರಕುಂಟಿಯ ಮಂಜುನಾಥ್ (15) ಸಿಡಿಲಿಗೆ ಬಲಿಯಾಗಿದ್ದಾನೆ. ಬಿಸಿಲ ನಾಡು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮಲ್ಲದಗುಡ್ಡ ಸೇರಿದಂತೆ ವಿವಿಧೆಡೆ ಸುಮಾರು ಒಂದು ಗಂಟೆ ಕಾಲ ನಿರಂತರ ಆಲಿಕಲ್ಲು ಮಳೆಯಾಗಿದೆ. ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಮಳೆ ತಂಪು ನೀಡಿದ್ದರೂ, ಆಲಿಕಲ್ಲುಗಳ ಅಬ್ಬರ ಮಾವು ಬೆಳೆಗಾರರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಹೂವು ಬಿಟ್ಟಿದ್ದ ಮಾವಿನ ಗಿಡಗಳಿಗೆ ಆಲಿಕಲ್ಲು ಮಳೆ ಏಟು ನೀಡಿದ್ದು, ಬೆಳೆ ಹಾನಿಯಾಗುವ ಭೀತಿ ಎದುರಾಗಿದೆ.

ರಾಜ್ಯದ ಕರಾವಳಿ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆಗಳಲ್ಲಿ ಮಳೆಯಾಗಿದೆ. ಬೀದರ್ನಲ್ಲಿ ಆಲಿಕಲ್ಲು ಮಳೆಯಾಗಿದ್ರೆ. ಹುಬ್ಬಳ್ಳಿಯಲ್ಲಿ ಗುಡುಗು ಸಹಿತ ಭಾರೀ ಮಳೆಗೆ ಜನರು ಬೆಚ್ಚಿದ್ದಾರೆ. ಇತ್ತ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಾತ್ರ ಒಣಹವೆ ಮುಂದುವರಿದಿದೆ.

ಬೀದರ್ ನಗರದಲ್ಲಿ ಭಾರೀ ಬಿರುಸಿನ ಮಳೆಯಾಗಿದ್ದು ಸಂಜೆ ವೇಳೆಗೆ ಬಿರುಗಾಳಿ ಹಾಗೂ ಗುಡುಗು ಸಹಿತ ಭಾರೀ ಮಳೆಯಾಗಿದ್ದು, ಸುಡುಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ತಂಪೆರೆದಿದ್ದಾನೆ. ಧಾರವಾಡ, ಕೊಡಗು ಜಿಲ್ಲೆಯ ಮಡಿಕೇರಿ ನಗರ, ಕಕ್ಕಬ್ಬೆ, ನೆಲಜಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಮಳೆಯಾಗಿದೆ. ಕೋಲಾರ, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಕೊಪ್ಪ ಮತ್ತು ಕಳಸ ಭಾಗದಲ್ಲಿ ಭಾರೀ ಮಳೆಯಾಗಿದ್ದರೆ, ಶೃಂಗೇರಿ ಹಾಗೂ ಚಿಕ್ಕಮಗಳೂರು ನಗರದಲ್ಲಿ ಸಾಧಾರಣ ಮಳೆಯಾಗಿದೆ. ಮತ್ತೊಂದೆಡೆ ರೈತರು ಜೋಳವನ್ನು ಕಟಾವು ಮಾಡಿ ಜೋಳ ರಾಶಿ ಮಾಡಲು ಸಿದ್ಧತೆ ನಡೆಸಿದ್ರು. ಈ ವೇಳೆ ಅಕಾಲಿಕ ಮಳೆಯಾಗಿದ್ದು, ಹೊಲದಲ್ಲಿ ಕಟಾವು ಮಾಡಿ ಜೋಡಿಸಿದ ಜೋಳ ಭಾರೀ ಮಳೆಯಿಂದಾಗಿ ಹಾನಿಯಾಗಿದೆ. ಕೈಗೆ ತುತ್ತು ಬಾಯಿಗೆ ಬರಲಿಲ್ಲ ಅಂತ ರೈತರು ಬೇಸರಗೊಂಡಿದ್ದಾರೆ.

ಸದನದ ಗಂಭೀರತೆ ಅರ್ಥ ಮಾಡಿಕೊಳ್ಳಿ: ಶಾಸಕ ಸುನೀಲ್

• **ಬೆಂಗಳೂರು:** ಮುಖ್ಯಮಂತ್ರಿಗಳು ಸದನದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಶಾಸಕ ಸುನೀಲ್ ಕುಮಾರ್ ಒತ್ತಾಯಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜೊತೆ ಸೋಮವಾರ ಮಾತನಾಡಿ, ಪ್ರಶ್ನೆಗಳಿಗೆ ಉತ್ತರ ನೀಡುವ ವೇಳೆ ಸಚಿವರು ಸದನದಲ್ಲಿ ಹಾಜರಿರುವಂತೆ ಎಚ್ಚರಿಕೆಯನ್ನು ಸರ್ಕಾರ ಕೊಟ್ಟಿದ್ದರೂ



ಪ್ರಯೋಜನವಾಗಿಲ್ಲ; ಇವತ್ತು 230 ಲಿಖಿತ ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಮಾತ್ರ ಸರ್ಕಾರ ಉತ್ತರ ಕೊಟ್ಟಿದೆ. ಇದು ಸಹಜವಾಗಿ ವಿಧಾನಸಭಾಧ್ಯಕ್ಷರಿಗೆ ಬೇಸರ ತರಿಸಿದೆ ಎಂದು ವಿಶ್ಲೇಷಿಸಿದರು.

ಸರ್ಕಾರದ ನಿಲುವನ್ನು ಖಂಡಿಸಿ ಇತಿಹಾಸದಲ್ಲೇ ಮೊದಲ ಬಾರಿಗೆ ಸಭಾಧ್ಯಕ್ಷರು ಅವರು ಪೀಠವನ್ನು ಬಿಟ್ಟು ಹೋಗಿದ್ದಾರೆ. ಇದು ಆಘಾತಕಾರಿ ಸಂಗತಿ ಎಂದು ತಿಳಿಸಿದರು. ಸರ್ಕಾರಕ್ಕೆ ಸದನ, ಸಂವಿಧಾನದ ಕುರಿತು ಹಾಗೂ ಸದನದ ನಡವಳಿಕೆ ಬಗ್ಗೆ ಗೌರವ ಇದ್ದರೆ, ಮುಖ್ಯಮಂತ್ರಿಗಳು ಸ್ವತಃ ಈ ವಿಚಾರದಲ್ಲಿ ಪ್ರವೇಶ ಮಾಡಿ ಪ್ರಶ್ನೆಗಳಿಗೆ ಉತ್ತರ ಕೊಡುವುದಷ್ಟೇ ಅಲ್ಲ; ಸದನವನ್ನು ಸಚಿವರು ಯಾವ ರೀತಿ ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ಅಧಿಕಾರಿಗಳು ಗಂಭೀರವಾಗಿ ತೆಗೆದುಕೊಳ್ಳಬೇಕೆಂಬುದನ್ನು ಸ್ಪಷ್ಟಪಡಿಸಲಿ ಎಂದು ಒತ್ತಾಯಿಸಿದರು.

ಸಿಎಂ ಈ ವಿಷಯದಲ್ಲಿ ಅಸಹಾಯಕರಾಗಿದ್ದಾರೆ. ಕಳೆದ ಬಾರಿ ಅಧಿವೇಶನ ದಲ್ಲಿ ಎಲ್ಲ ಸಚಿವರು ಅಧಿವೇಶನದ ಸಂದರ್ಭದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕೆಂದು ಸ್ವತಃ ಸಿಎಂಗಳು ಸಚಿವರಿಗೆ ಪತ್ರ ಬರೆದಿದ್ದರು. ಸಿಎಂಗಳ ಪತ್ರಕ್ಕೆ ಬೆಲೆ ಇಲ್ಲ. ಆಡಳಿತ ಹಿಡಿತ ತಪ್ಪಿದೆ ಎಂಬುದು ಗೊತ್ತಾಗಿದೆ ಎಂದರು. ಇಡೀ ವರ್ಷದಲ್ಲಿ ಅಧಿ ವೇಶನ 40 ದಿನ ನಡೆಯುವುದೇ ಕಷ್ಟ, ಆ ಅಧಿವೇಶನದಲ್ಲಿ ಸದಸ್ಯರಿಗೆ ಸರಿಯಾದ ಉತ್ತರ ಸಿಗುತ್ತಿಲ್ಲ. ಯಾವುದೋ ಪ್ರಶ್ನೆಗೆ ಯಾವುದೋ ಉತ್ತರ ಕೊಡಲಾಗುತ್ತಿದೆ. ಇದೊಂದು ಪರಿಪಾಠವಾಗಿದೆ ಎಂದರು.

ಡಿಸಿಎಂ ಪರಿಶೀಲನೆ



ವಿಧಾನಸೌಧದ ಆವರಣದಲ್ಲಿ ತೆರೆದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ಮಳಿಗೆಗೆ ಸೋಮವಾರ ಸಂಜೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಭೇಟಿ ನೀಡಿ, ನಿಗಮದ ಉತ್ಪನ್ನಗಳನ್ನು ಪರಿಶೀಲಿಸಿದರು. ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್. ನಾಡಗೌಡ (ಅಪ್ಪಾಜಿ) ಹಾಜರಿದ್ದರು.

ಅಮರೇಶ, ಹೆನ್ರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

• **ಬೆಂಗಳೂರು:** ಸಾಹಿತಿ ಅಮರೇಶ ನುಗಡೋಣಿ ಅವರ ದಡ ಸೇರಿಸು ತಂದೆ ಕಥಾ ಸಂಕಲನ ಹಾಗೂ ಕೊಂಕಣಿ ಸಾಹಿತಿ ಮತ್ತು ಪತ್ರಕರ್ತ ಮಂಗಳೂರಿನ ಹೆನ್ರಿ ಮೆಂಡೊನ್ಸಾ





ಅವರ ರುಪಾನಿ ಅನಿ ರೂಪಕಾಂ ಸಾಹಿತ್ಯ ವಿಮರ್ಶೆ ಕೃತಿಗೆ 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಈ ಪ್ರಶಸ್ತಿಯು 1 ಲಕ್ಷ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಡಾ. ಜಯಲಲಿತ ಮತ್ತು ಸಹನಾ ಕಾಂತಬೈಲು ಅವರಿದ್ದ ತಜ್ಞರ ಸಮಿತಿಯು ಈ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 2025ರ ಜ.30ರಂದು ಆರಂಭವಾದ ಸುದೀರ್ಘ ಆಯ್ಕೆ ಪ್ರಕ್ರಿಯೆಯ ನಂತರ ಈ ಅಧಿಕೃತ ಘೋಷಣೆ ಹೊರಬಿದ್ದಿದೆ.

ರಾಯಚೂರು ಜಿಲ್ಲೆಯವರಾದ ಅಮರೇಶ ನುಗಡೋಣಿ ಅವರು, ಗ್ರಾಮೀಣ ಬದುಕಿನ ಸಮಸ್ಯೆಗಳಂತಹ ವಿಷಯಗಳನ್ನು ತಮ್ಮ ಕಥೆಗಳಲ್ಲಿ ನೈಜವಾಗಿ ಚಿತ್ರಿಸುವುದಕ್ಕೆ ಹೆಸರುವಾಸಿಯಾಗಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾಗಿದ್ದಾರೆ. ಮಂಗಳೂರಿನ ಹೆನ್ರಿ ಮೆಂಡೊನ್ಸಾ ಅವರು ಕೊಂಕಣಿ ಸಾಹಿತ್ಯದ ಪ್ರಮುಖ ಕವಿ, ಸಣ್ಣ ಕಥೆಗಾರ, ವಿಮರ್ಶಕ ಮತ್ತು ಸಂಪಾದಕರಾಗಿದ್ದು, ಇವರು ಕೇವಲ ಸಾಹಿತಿಯಾಗಿ ಮಾತ್ರವಲ್ಲದೆ, ಕೊಂಕಣಿ ಸಾಹಿತ್ಯವನ್ನು ಡಿಜಿಟಲ್ ಲೋಕಕ್ಕೆ ಕೊಂಡೊಯ್ಯುವಲ್ಲಿ ಮತ್ತು ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಕಿರುಸುದ್ದಿ

ಆಂಬುಲೆನ್ಸ್‌ಗೆ ಪೂರಕ ಸಿಬ್ಬಂದಿ ನೇಮಕಾತಿ

• **ವಿಧಾನಪರಿಷತ್:** ರಾಜ್ಯ ಸರ್ಕಾರವೇ ಆಂಬುಲೆನ್ಸ್‌ಗಳ ಕೇಂದ್ರಿಕೃತ ನಿರ್ವಹಣಾ ವ್ಯವಸ್ಥೆಯನ್ನು 112 ಅಡಿಯಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದ್ದು, 3 ತಿಂಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಟಿ.ಎನ್. ಜವರಾಯಿಗೌಡ ಅವರು ಆ್ಯಂಬುಲೆನ್ಸ್ ವ್ಯವಸ್ಥೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯ ಆ್ಯಂಬುಲೆನ್ಸ್‌ಗಳನ್ನು ತ್ವರಿತ ಹಾಗೂ ಪರಿಣಾಮಕಾರಿಯಾಗಿ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ 112 ಎಂಬ ಕೇಂದ್ರಿಕೃತ ನಿರ್ವಹಣಾ ವ್ಯವಸ್ಥೆಯನ್ನು ಸರ್ಕಾರವೇ ವಹಿಸಿಕೊಳ್ಳಲಿದೆ. ಈ ನೂತನ ವ್ಯವಸ್ಥೆ 3 ತಿಂಗಳಲ್ಲಿ ಅನುಷ್ಠಾನವಾಗುವ ಸಾಧ್ಯತೆ ಇದ್ದು, ತಾಂತ್ರಿಕತೆಯ ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿದೆ ಎಂದು ಹೇಳಿದರು. ಅದೇ ರೀತಿ ಆ್ಯಂಬುಲೆನ್ಸ್‌ಗೆ ಪೂರಕ ಸಿಬ್ಬಂದಿ ನೇಮಕಾತಿಯನ್ನೂ ಸರ್ಕಾರ ಶೀಘ್ರದಲ್ಲಿಯೇ ಕೈಗೊಳ್ಳಲಿದೆ. ಕೇಂದ್ರ ಸರ್ಕಾರದ ಮಾನದಂಡ ಗಳ ಅನ್ವಯ ರಾಜ್ಯದಲ್ಲಿ ಆ್ಯಂಬುಲೆನ್ಸ್‌ಗಳು ಸಮರ್ಪಕ ವಾಗಿವೆ, ಆ್ಯಂಬುಲೆನ್ಸ್‌ಗಳ ಕೊರತೆ ರಾಜ್ಯದಲ್ಲಿ ಇಲ್ಲ. ಆರೋಗ್ಯ ಕವಚ ವ್ಯಾಪ್ತಿಯಲ್ಲಿ 715 ಹಾಗೂ ರಾಜ್ಯದ 1 ಸಾವಿರ ಒಟ್ಟಾರೆಯಾಗಿ 1,715 ಆ್ಯಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇನ್ನೂ ಹೆಚ್ಚುವರಿಯಾಗಿ 262 ಆ್ಯಂಬುಲೆನ್ಸ್‌ಗಳ ಖರೀದಿಗೆ ಸರ್ಕಾರ ಮುಂದಾಗಿದೆ ಎಂದರು.

ವಾರದಲ್ಲಿ ನಾಲ್ಕು ಗಂಟೆ ದೈಹಿಕ ಶಿಕ್ಷಣಕ್ಕೆ ಮೀಸಲು

• **ವಿಧಾನಪರಿಷತ್:** ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಾರದಲ್ಲಿ ಪ್ರತಿ ತರಗತಿಗೆ 4 ತಾಸನ್ನು ದೈಹಿಕ ಶಿಕ್ಷಣಕ್ಕೆ ಮೀಸಲಿಡಲಾಗಿದೆ. ಮೌಲ್ಯ ಶಿಕ್ಷಣವನ್ನು ಪ್ರತ್ಯೇಕ ಪಿರಿಯಡ್‌ನಲ್ಲಿ ಬೋಧಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಚಿದಾನಂದ ಗೌಡ ಕೇಳಿದ ಪ್ರಶ್ನೆ ವೇಳೆ ಪ್ರತಿಕ್ರಿಯಿಸಿದ ಅವರು, ರಾಜ್ಯದ ಪ್ರಾಥಮಿಕ ಶಿಕ್ಷಣದಲ್ಲಿ 6,771 ದೈಹಿಕ ಶಿಕ್ಷಕರ ಹುದ್ದೆ ಮಂಜೂರಾಗಿದ್ದು, ಈ ಪೈಕಿ 3,361 ಹುದ್ದೆ ಖಾಲಿ ಇದೆ. ಪ್ರೌಢ ಶಾಲೆಗಳಲ್ಲಿ 5,223 ಹುದ್ದೆ ಮಂಜೂರಾಗಿದೆ. 1,841 ಹುದ್ದೆ ಖಾಲಿ ಉಳಿದಿವೆ. ಮುಂದಿನ 15 ಸಾವಿರ ಶಿಕ್ಷಕರ ನೇಮಕಾತಿಯ ಸಂದರ್ಭದಲ್ಲಿ ದೈಹಿಕ ಶಿಕ್ಷಕರ ನೇಮಕ್ಕೆ ಹೆಚ್ಚು ಒತ್ತು ನೀಡುವುದಾಗಿ ಸಚಿವರು ಭರವಸೆ ನೀಡಿದರು. ಚಿದಾನಂದ ಗೌಡ ಮಾತನಾಡಿ, ಉತ್ತಮ ಮನಸ್ಸಿನೊಂದಿಗೆ ಉತ್ತಮ ದೈಹಿಕ ಆರೋಗ್ಯವು ಅಗತ್ಯ. ಆದ್ದರಿಂದ ಮಕ್ಕಳ ದೈಹಿಕ ಶಿಕ್ಷಣ ಚಟುವಟಿಕೆಗೆ ಕಡಿವಾಣ ಹಾಕಬಾರದು ಎಂದು ಒತ್ತಾಯಿಸಿದರು.

ರಾಜ್ಯಮಟ್ಟದ ಸಮಿತಿ ರಚನೆ

• **ವಿಧಾನಪರಿಷತ್:** ರಾಜ್ಯದ ಶಿಕ್ಷಣ ಮಹಾವಿದ್ಯಾಲಯಗಳ ಪ್ರವೇಶಾತಿ ಶುಲ್ಕ ಪರಿಷ್ಕರಣೆಗಾಗಿ ಐವರು ಸದಸ್ಯರನ್ನೊಳಗೊಂಡ ರಾಜ್ಯಮಟ್ಟದ ಸಮಿತಿ ರಚಿಸಲಾಗಿದ್ದು, ಈ ಸಮಿತಿ ವರದಿ ಆಧರಿಸಿ ಶುಲ್ಕ ಪರಿಷ್ಕರಣೆಯ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ಸದಸ್ಯ ಮಧು ಜಿ. ಮಾದೇಗೌಡ ಅವರು ಬಿಇಡಿ ಮಹಾವಿದ್ಯಾಲಯಗಳ ಪ್ರವೇಶ ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಶುಲ್ಕ ಪರಿಷ್ಕರಣೆ ವಿಷಯವಾಗಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ಸಹ ನಡೆದಿದ್ದು, ಸಮಗ್ರವಾಗಿ ಚರ್ಚೆ ನಡೆಸಲಾಗಿದೆ. ಶುಲ್ಕ ಪರಿಷ್ಕರಣೆಗೆ ಸಮಿತಿ ವರದಿ ನೀಡಿದ ಬಳಿಕವೇ ಸರ್ಕಾರ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುತ್ತಿದೆ ಎಂದರು.

ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಹೇಳಿಕೆ

ದೇವಸ್ಥಾನ, ಶಾಲೆಗಳ ಆಸ್ತಿಗಳಿಗೆ ಕೈ ಹಾಕಲ್ಲ

• **ವಿಧಾನಸಭೆ:** ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಒತ್ತುವರಿಯನ್ನು ತೆರವುಗೊಳಿಸಿ ಆಸ್ತಿಗಳನ್ನು ಮರಳಿ ಪಡೆಯಲು ಎಲ್ಲಾ ಕ್ರಮಗಳನ್ನು



ಕೈಗೊಳ್ಳಲಾಗಿದೆ. ಆದರೆ ಯಾವುದೇ ದೇವಸ್ಥಾನ, ಶಾಲೆಗಳಿಗೆ ಕೈ ಹಾಕುವುದಿಲ್ಲ ಎಂದು ವಕ್ಫ್ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಎಂ.ವೈ. ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ 1,12,862 ಎಕರೆ ವಕ್ಫ್ ಆಸ್ತಿ ಇದೆ. ಈ ಆಸ್ತಿ ಸರ್ಕಾರದಿಂದ ಬಂದದ್ದಲ್ಲ, ಖಾಸಗಿ ವ್ಯಕ್ತಿಗಳು ಸಮಾಜದ ಅಭಿವೃದ್ಧಿಗೆ ಕೊಟ್ಟಿರುವುದು. ಅದರಲ್ಲಿ ಕೇವಲ 20,054 ಎಕರೆಗಳು ನಮ್ಮ ಬಳಿಯಿದೆ. 17,969 ಎಕರೆಗಳನ್ನು ಅತಿಕ್ರಮಣ ಮಾಡಲಾಗಿದೆ. 47,263 ಎಕರೆಗಳು ಇನಾಂ ರದ್ದತಿ ಕಾಯ್ದೆಯಡಿ ಮತ್ತು 23,627 ಎಕರೆಗಳು ಭೂ ಸುಧಾರಣಾ ಕಾಯ್ದೆಯಿಂದಾಗಿ ನಮ್ಮ ಕೈ ಬಿಟ್ಟು ಹೋಗಿವೆ. ವಕ್ಫ್ ಆಸ್ತಿಯನ್ನು ಒತ್ತುವರಿ ಮಾಡಿದವರು ಮುಸ್ಲಿಂ ಸಮುದಾಯದವರೇ ಎಂದು ಹೇಳಿದರು.

ವಕ್ಫ್ ಆಸ್ತಿ ಒತ್ತುವರಿ ತೆರವಿಗಾಗಿ ರಾಜ್ಯಾದ್ಯಂತ ವಕ್ಫ್ ಅದಾಲತ್‌ಗಳನ್ನು ನಡೆಸಲಾಗಿದೆ. ವಕ್ಫ್ ಅದಾಲತ್‌ನ ಬಗ್ಗೆ ಹಿಂದೆ ಪ್ರತಿಪಕ್ಷಗಳು ಟೀಕೆ ಮಾಡಿದ್ದವು. ಆದರೆ, ಈ ಅದಾಲತ್ ನಡೆಸಿರುವುದು ವಕ್ಫ್ ಆಸ್ತಿ ಉಳಿಸಲು. ದೇವಸ್ಥಾನ, ಶಾಲೆಗಳಿಗೆ ಬಳಕೆಯಾಗಿರುವ ವಕ್ಫ್ ಆಸ್ತಿಗಳನ್ನು ನಾವು ಹಾಗೆಯೇ ಬಿಟ್ಟಿದ್ದೇವೆ. ಖಾಸಗಿ ವ್ಯಕ್ತಿಗಳು ವಕ್ಫ್ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವು ಮಾಡುತ್ತಿದ್ದೇವೆ ಎಂದು ಸಚಿವರು ಸ್ಪಷ್ಟಪಡಿಸಿದರು.

ವಕ್ಫ್ ಆಸ್ತಿಯಲ್ಲಿ ಬೇಸಾಯ ಮಾಡುತ್ತಿದ್ದರೆ ರೈತರಿಗೆ ನೀಡಿ

ಈ ವೇಳೆ ಮಧ್ಯೆ ಪ್ರವೇಶಿಸಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ, ವಕ್ಫ್ ಆಸ್ತಿ ಒತ್ತುವರಿ ತೆರವು ಮಾಡಿ. ಅದಕ್ಕೆ ನಮ್ಮ ಆಕ್ಷೇಪವಿಲ್ಲ. ಹಿಂದೆ ದೇವಸ್ಥಾನಗಳಿಗೂ ಬಹಳಷ್ಟು ಇನಾಂ ಭೂಮಿ ಇತ್ತು. ಭೂ ಸುಧಾರಣಾ ಕಾಯ್ದೆಯಡಿ ಉಳುವ ರೈತರಿಗೆ ನೀಡಲಾಗಿದೆ. ಅದೇ ರೀತಿ ವಕ್ಫ್ ಆಸ್ತಿಯಲ್ಲಿ ಯಾರಾದರೂ ಬೇಸಾಯ ಮಾಡುತ್ತಿದ್ದರೆ ಅದನ್ನು ಅವರಿಗೇ ಕೊಟ್ಟುಬಿಡಿ. ಅತಿಕ್ರಮಣದ ಬಗ್ಗೆ ತನಿಖೆ ಮಾಡಿ ಎಂದು ನಾವೂ ಹೇಳುತ್ತಿದ್ದೇವೆ. ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಹೋಟೆಲ್ ಇರುವ ಜಾಗ ಸಹ ವಕ್ಫ್ ಆಸ್ತಿ. ಆ ಬಗ್ಗೆಯೂ ಸಚಿವರೇ ಮಾತನಾಡಿ ಎಂದು ಹೇಳಿದರು.ಅದಕ್ಕೆ ಸಚಿವರು ಅದು ಸುಪ್ರೀಂ ಕೋರ್ಟ್‌ನಲ್ಲಿದೆ ಎಂದು ಉತ್ತರಿಸಿದರು. ಸರ್ಕಾರ ಯಾವುದೇ ದೇವಾಲಯಗಳು ಅಥವಾ ಶಿಕ್ಷಣ ಸಂಸ್ಥೆಗಳ ಜಮೀನನ್ನು ವಕ್ಫ್ ಆಸ್ತಿ ಎಂದು ಹೇಳಿಕೊಳ್ಳುವ ಮೂಲಕ ಅವುಗಳ ಮೇಲೆ ಕೈ ಹಾಕುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಸ್ಮಶಾನ ಭೂಮಿ ಮಂಜೂರಿಗೆ ಕ್ರಮ

• **ವಿಧಾನಸಭೆ:** ಸ್ಮಶಾನ ಇಲ್ಲದ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರಿಗೆ ಸರ್ಕಾರಿ ಜಮೀನು ಇಲ್ಲದಿದ್ದರೆ, ಮಾರ್ಗಸೂಚಿ ದರಕ್ಕಿಂತ ಮೂರು ಪಟ್ಟು ಹಣ ನೀಡಿ



ಖಾಸಗಿ ಜಮೀನು ಖರೀದಿಗೆ ಸರ್ಕಾರ ಸಿದ್ಧ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಪ್ರಭು ಚೌಹಾಣ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಕಳೆದ 70 ವರ್ಷಗಳಿಂದ ಎಲ್ಲಾ ಸರ್ಕಾರಗಳೂ ಇರುವ ಭೂಮಿಯನ್ನೆಲ್ಲಾ ರೈತರಿಗೆ ಹಾಗೂ ವಿವಿಧ ಜನಪರ ಯೋಜನೆಗಳಿಗೆ ಮಂಜೂರು ಮಾಡಿದೆ. ಪ್ರಸ್ತುತ ಸ್ಮಶಾನಕ್ಕೂ ಭೂಮಿ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಹತ್ತು ವರ್ಷಗಳಿಂದ ಎಲ್ಲಾ ಸರ್ಕಾರಗಳೂ ವಸತಿ ಪ್ರದೇಶಗಳಿಗೆ ಅವಶ್ಯ ಇರುವಷ್ಟು ಸ್ಮಶಾನ ಭೂಮಿ ನೀಡಬೇಕು ಎಂದು ಪ್ರಯತ್ನಿಸಿದೆ. ಈ ವಿಚಾರದಲ್ಲಿ ಹೈಕೋರ್ಟ್ ಸಹ ಸರ್ಕಾರದ ಬೆನ್ನುಹತ್ತಿದೆ. ಸರ್ಕಾರಿ ಜಮೀನು ಇದ್ದಲ್ಲಿ ಆ ಭೂಮಿಯನ್ನೇ ಸ್ಮಶಾನಕ್ಕೆ ಕಾಯ್ದಿರಿಸಲಾಗಿದೆ. ಸರ್ಕಾರಿ ಜಮೀನು ಇಲ್ಲದಿದ್ದ ಭಾಗಗಳಲ್ಲಿ ಸ್ಮಶಾನ ಭೂಮಿ ನೀಡುವ ಸಲುವಾಗಿ ಕಳೆದ 3 ವರ್ಷದಲ್ಲಿ 58 ಕೋಟಿ ರೂ. ಕೊಟ್ಟು ಭೂಮಿಯನ್ನು ಖರೀದಿ ಮಾಡುವ ಹಂತಕ್ಕೆ ಬಂದು ನಿಂತಿದ್ದೇವೆ ಎಂದು ವಿಷಾದಿಸಿದರು.

ಔರಾದ್ ತಾಲೂಕಿನ ಪರಿಸ್ಥಿತಿ ಬಗ್ಗೆಯೂ ಸದನಕ್ಕೆ ಮಾಹಿತಿ ನೀಡಿದ ಅವರು, ಔರಾದ್ ತಾಲೂಕಿನ 154 ವಸತಿ ಪ್ರದೇಶಗಳ ಪೈಕಿ 9 ಪ್ರದೇಶಗಳಲ್ಲಿ ಸ್ಮಶಾನ ಇಲ್ಲ ಎಂಬ ವರದಿ ಇದೆ. ಈ 9 ಗ್ರಾಮಗಳ ಪೈಕಿ 2 ಗ್ರಾಮಗಳಿಗೆ ಆ ಗ್ರಾಮದ ಮಿತಿಯಲ್ಲೇ ಸರ್ಕಾರಿ ಭೂಮಿ ಲಭ್ಯ ಇದ್ದು, ಒಂದು ವಾರದಲ್ಲಿ ಸ್ಮಶಾನ ಭೂಮಿಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಲಾಗಿದೆ.

ಇನ್ನೂ 7 ವಸತಿ ಪ್ರದೇಶಗಳಿಗೆ ಪಕ್ಕದ ಗ್ರಾಮದಲ್ಲಿ ಭೂಮಿ ಇದ್ದು, ಅದನ್ನು 15 ದಿನಗಳ ಒಳಗೆ ಕಾಯ್ದಿರಿಸಲು ಸೂಚಿಸಲಾಗಿದೆ ಎಂದರು.

ಬಗರ್‌ಹುಕುಂ ಸಾಗುವಳಿ ಸಮಿತಿ ರಚಿಸಿಲ್ಲ

• **ವಿಧಾನಸಭೆ:** ರಾಜ್ಯದ 15 ವಿಧಾನಸಭಾ ಕ್ಷೇತ್ರಗಳಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ರಚನೆಯಾಗಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಡಾ. ಅವಿನಾಶ್ ಜಾಧವ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಒಟ್ಟು 175 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಿತಿ ರಚಿಸಲಾಗಿದೆ. ಅಲ್ಲದೇ 16 ಹೆಚ್ಚುವರಿ ಸಮಿತಿ ರಚಿಸಿದ್ದು, ಪ್ರಸಕ್ತ 191 ಬಗರ್ ಹುಕುಂ ಸಮಿತಿಗಳಿವೆ. ಬೈಂದೂರು ಮತ್ತು ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಸಮಿತಿಗಳಿಗೆ ಸಂಬಂಧಿಸಿ ಪ್ರಕರಣಗಳು ನ್ಯಾಯಾಲಯದಲ್ಲಿವೆ ಎಂದರು. ಮೊದಲು ತಾಲೂಕುವಾರು ಸಮಿತಿ ರಚನೆ ಮಾಡಲಾಗುತ್ತಿತ್ತು. ಈಗ ವಿಧಾನಸಭಾ ಕ್ಷೇತ್ರವಾರು ಸಮಿತಿ ರಚಿಸಲಾಗುತ್ತಿದೆ. ಒಂದು ವೇಳೆ ಹೆಚ್ಚುವರಿ ಸಮಿತಿಯ ಅಗತ್ಯವಿದ್ದರೆ ಹೆಚ್ಚುವರಿ ಸಮಿತಿ ರಚಿಸುವುದಕ್ಕೂ ಅವಕಾಶವಿದೆ ಎಂದರು.

ಉತ್ತರ ನೀಡದ ಅಧಿಕಾರಿಗಳ ಅಮಾನತು

• **ವಿಧಾನಸಭೆ:** ಸದನದಲ್ಲಿ ಕೇಳಲಾಗುವ ಲಿಖಿತ ಪ್ರಶ್ನೆಗಳಿಗೆ ವಿವಿಧ ಇಲಾಖೆಗಳಿಂದ ಬರುವ ಉತ್ತರಗಳಲ್ಲಿ ವಿಳಂಬ ಆಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಉತ್ತರ ನೀಡುವಲ್ಲಿ ವಿಳಂಬ ಮಾಡುವ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು ಎಂದು ಗೃಹ ಸಚಿವ ಡಾ. ಈ ಪರಮೇಶ್ವರ ಹೇಳಿದರು.



ಉತ್ತರದಲ್ಲಿ ಆಗುತ್ತಿರುವ ವಿಳಂಬಕ್ಕೆ ಸಭಾಧ್ಯಕ್ಷರು ಅಸಮಾಧಾನಗೊಂಡ ಬೆಳಗ್ಗೆ ಸಭಾತ್ಯಾಗ ಮಾಡಿದ್ದ ಬಗ್ಗೆ ಮಧ್ಯಾಹ್ನದ ನಂತರ ಕಲಾಪ ಆರಂಭವಾಗುತ್ತಿದಂತೆ ಸರ್ಕಾರದ ಪರವಾಗಿ ಉತ್ತರಿಸಿದ ಪರಮೇಶ್ವರ ಅವರು, ಸಭಾಧ್ಯಕ್ಷರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ, ನೋಟಿಸ್ ನೀಡುವಂತೆ ಮುಖ್ಯಕಾರ್ಯದರ್ಶಿಗೆ ಹೇಳಿದ್ದು, ತುಂಬಾ ಪ್ರಶ್ನೆಗಳು ಅವರಲ್ಲೇ ಉಳಿದುಕೊಂಡಿದ್ದರೆ ಅವರನ್ನು ಅಮಾನತು ಮಾಡಿ ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ, ಕಂದಾಯ ಇಲಾಖೆಯ 91 ಪ್ರಶ್ನೆಗಳಲ್ಲಿ 29 ಉತ್ತರಗಳು ಮಾತ್ರ ಬಂದಿವೆ. ಮುಂದೆ ಇಂತಹ ಬೆಳವಣಿಗೆ ನಡೆಯದಂತೆ ಸೂಕ್ತ ಸಮಯದಲ್ಲಿ ಉತ್ತರ ನೀಡಲಿದೆ ಎಂದು ಸರ್ಕಾರದ ಪರವಾಗಿ ಭರವಸೆ ನೀಡಲಾಗುವುದು ಎಂದರು.

ಸಭಾಧ್ಯಕ್ಷರ ತೀರ್ಮಾನವನ್ನು ಸ್ವಾಗತಿಸುವೆ, ಸಚಿವರು ಅಧಿಕಾರಿಗಳಿಗೆ ಜವಾಬ್ದಾರಿ ನಿಗದಿಮಾಡಬೇಕು, ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು, ಕೆಲವು ಅಧಿಕಾರಿಗಳು ಸದನಕ್ಕೆ ಬರುವುದಿಲ್ಲ, ಅಧಿಕಾರಿಗಳಿಗೆ ಗಂಭೀರತೆ ಇಲ್ಲ, ಮುಖ್ಯಕಾರ್ಯದರ್ಶಿಗಳು ಅಧಿಕಾರಿಗಳ ಸಭೆ ಕರೆಯಬೇಕು, ಅವರು ಕೈ ಚೆಲ್ಲಿ ಕೂತಿದ್ದಾರೆ, ಸದನದಲ್ಲಿ ಏನು ಮಾಡಿದೆ ಎಂದು ಕ್ಷೇತ್ರದ ಜನ ನಮ್ಮನ್ನು ಕೇಳುತ್ತಾರೆ. ವಿಳಂಬ ಮಾಡುವ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಕೆಲವು ಐಎಎಸ್ ಅಧಿಕಾರಿಗಳು 8 ರಿಂದ 10 ತಿಂಗಳು ಕಚೇರಿಗೆ ಬಂದೆ ಇಲ್ಲ, ಅವರಿಗೆ ಗಾಲ್ಫ್ ಆಡುವುದಕ್ಕೆ ಸಮಯ ಇರುತ್ತೆ ಸದನಕ್ಕೆ ಬರಲು ಸಮಯ ಇರಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಅಸಮಾಧಾನ ವ್ಯಕ್ತಪಡಿಸಿದರು.

ಟಿ-20 ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ಜಯ: ಶ್ಲಾಘನೆ

• **ವಿಧಾನಪರಿಷತ್:** ಇತ್ತೀಚೆಗೆ ಟಿ-20 ವಿಶ್ವಕಪ್‌ನಲ್ಲಿ ಜಯ ಗಳಿಸಿದ ಭಾರತ ತಂಡಕ್ಕೆ ಸೋಮವಾರ ಮೇಲ್ಮನೆಯಲ್ಲಿ ಸದಸ್ಯರೆಲ್ಲರೂ ಶ್ಲಾಘನೀಯ ವ್ಯಕ್ತಪಡಿಸಿದರು. ಸದನದಲ್ಲಿ ಸದಸ್ಯ ಡಿ.ಎಸ್. ಅರುಣ್ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದು, ಟಿ-20 ವಿಶ್ವಕಪ್‌ನಲ್ಲಿ ಭಾರತ ಗೆಲುವು ಸಾಧಿಸಿದೆ. ಆದ್ದರಿಂದ ಈ ಗೆಲುವಿನ ಗರಿಯನ್ನು ಮುಡಿಗೇರಿಸಿಕೊಂಡಿರುವ ನಮ್ಮ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ನಂತರ ಸದನದ ಸದಸ್ಯರೆಲ್ಲರೂ ಮೇಜು ತಟ್ಟಿ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಆಗ ಸಭಾಪತಿ ಪೀಠದಲ್ಲಿದ್ದ ಎಂ.ಕೆ. ಪ್ರಾಣೇಶ್ ಅವರು ಅಭಿನಂದನಾ ಪತ್ರವನ್ನು ಬಿಸಿಸಿಐ ಸಂಸ್ಥೆಗೆ ಕಳುಹಿಸಲಾಗುವುದು ಎಂದು ಹೇಳಿದರು.

ಕರ್ನಾಟಕ ಪೊಲೀಸು ತಿದ್ದುಪಡಿ ವಿಧೇಯಕ ಅಂಗೀಕಾರ

• **ವಿಧಾನಸಭೆ:** 2026ನೇ ಸಾಲಿನ ಕರ್ನಾಟಕ ಪೊಲೀಸು ತಿದ್ದುಪಡಿ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರಗೊಂಡಿತು. ವಿಧೇಯಕವನ್ನು ಮಂಡಿಸಿ ಮಾತನಾಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು, ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಯು ದುರ್ನಡತೆ ಅಥವಾ ಅಸಮರ್ಪಕ ಕಾರ್ಯವೈಖರಿಯಿಂದ ಅವರನ್ನು ವರ್ಗಾವಣೆ ಮಾಡಬೇಕಾದಲ್ಲಿ ಸರ್ಕಾರದ ಅನುಮತಿ ಬೇಕಾಗಿತ್ತು ಈ ವಿಧೇಯಕದಿಂದ ಪೊಲೀಸ್ ಸಿಬ್ಬಂದಿ ಅಥವಾ ಅಧಿಕಾರಿಯ ವರ್ಗಾವಣೆಯನ್ನು ಪೊಲೀಸ್ ಅನುಷ್ಠಾನ ಮಂಡಳಿಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಪಿಇಬಿಗೆ ವರ್ಗಾವಣೆ ಅಧಿಕಾರ: ಕರ್ತವ್ಯ ಲೋಪ, ದುರ್ನಡತೆ ಅಥವಾ ಅಶಿಸ್ತು ತೋರುವ ಡಿವೈಎಸ್ಪಿ ಶ್ರೇಣಿಯವರೆಗಿನ ಅಧಿಕಾರಿಗಳನ್ನು ಸರ್ಕಾರದ ಪೂರ್ವಾನುಮತಿಗಾಗಿ ಕಾಯದೆ ನೇರವಾಗಿ ವರ್ಗಾವಣೆ ಮಾಡುವ ಅಧಿಕಾರವನ್ನು ಪೊಲೀಸ್ ಅನುಷ್ಠಾನ ಮಂಡಳಿಗೆ (ಪಿಇಬಿ) ನೀಡಲು ಉದ್ದೇಶಿಸಲಾಗಿದೆ. ಈ ಮೊದಲು ಯಾವುದೇ ಅಧಿಕಾರಿಯನ್ನು ವರ್ಗಾಯಿಸಲು ಕನಿಷ್ಠ 2 ವರ್ಷಗಳ ಕಾಲಾವಕಾಶ ಇರಬೇಕಿತ್ತು. ಆದರೆ ಹೊಸ ತಿದ್ದುಪಡಿಯ ಪ್ರಕಾರ, ಗಂಭೀರ ಲೋಪಗಳು ಕಂಡುಬಂದಲ್ಲಿ ಈ ಕನಿಷ್ಠ ಅವಧಿಯ ನಿಯಮ ಅನ್ವಯಿಸುವುದಿಲ್ಲ.

ಅನಧಿಕೃತ ಜಾಹೀರಾತು ಪ್ಲಾಸ್ಟಿಕ್ ಬಳಕೆಗೆ ದಂಡ

• **ವಿಧಾನಸಭೆ:** ಅನಧಿಕೃತವಾಗಿ ಜಾಹೀರಾತು ಅಳವಡಿಸಿದಲ್ಲಿ ದಂಡ ಹಾಕಲಾಗುವುದು, ಪ್ಲಾಸ್ಟಿಕ್ ಬಳಕೆ ಮಾಡಿದರೆ ದಂಡ ಹಾಕಲಾಗುವುದು, ತಂತ್ರಜ್ಞಾನದ ನೆರವಿನಿಂದ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಗುರುತಿಸಿ ತೆರವುಗೊಳಿಸುವ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ವಿಧೇಯಕವು ವಿಧಾನಸಭೆಯಲ್ಲಿ ಅಂಗೀಕಾರವಾಯಿತು.

ಈ ತಿದ್ದುಪಡಿ ವಿಧೇಯಕದಲ್ಲಿ ನಗರಸಭೆ ವ್ಯಾಪ್ತಿಯ ಸಾರ್ವನಿಕ ಇಲ್ಲವೇ ಖಾಸಗಿ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶಿಸಲು ಶುಲ್ಕ ಪಾವತಿ ಮಾಡಬೇಕಿದ್ದು, ಸ್ಥಳೀಯ ಪೌರ ಪಾಲಿಕೆಯ ಅನುಮತಿ ಇಲ್ಲದೇ ಪಾಲಿಕೆ ಪ್ರದೇಶದ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶಿಸುವಂತಿಲ್ಲ, ಜಾಹೀರಾತು ಉಲ್ಲಂಘನೆ ಮತ್ತು ಶುಲ್ಕ ಬಾಕಿ ಇದ್ದಲ್ಲಿ ಅನುಮತಿ ಸಿಗುವುದಿಲ್ಲ.

ಅನಧಿಕೃತ ಜಾಹೀರಾತುಗಳ ತೆರವು: ಅನುಮತಿ ಮುಕ್ತಾಯದ ನಂತರವೂ ಜಾಹೀರಾತು ಪ್ರದರ್ಶಿಸಿದಲ್ಲಿ ಅದನ್ನು ತೆರವುಗೊಳಿಸಬಹುದಾಗಿದ್ದು, ಅಧಿಕೃತ ಮತ್ತು ಅನಧಿಕೃತ ಜಾಹೀರಾತು ಶುಲ್ಕವನ್ನು ಪಾವತಿಸದಿದ್ದಲ್ಲಿ ಶುಲ್ಕ ಅಥವಾ ದಂಡದ ಬಾಕಿ ದಿನದಿಂದ ಪಾವತಿವರೆಗೆ ವಾರ್ಷಿಕ ಶೇ.18ರ ಬಡ್ಡಿ ದರದಲ್ಲಿ ದಂಡ ವಿಧಸಬಹುದಾಗಿದೆ. ಜಾಹೀರಾತು ಆಕಾರದ ಮೇಲೆ ಶುಲ್ಕ ನಿಗದಿ ಮಾಡಲಾಗುತ್ತಿದೆ.

ವಿಧೇಯಕವನ್ನು ಮಂಡಿಸಿ ಮಾತನಾಡಿದ ಸಚಿವ ಬೈರತಿ ಸುರೇಶ್ ಅವರು, ಜಾಹೀರಾತಿಗೆ ಶುಲ್ಕ ವಿಧಿಸುವ ಕುರಿತಾದ ಈ ತಿದ್ದುಪಡಿ ವಿಧೇಯಕದಲ್ಲಿ ಸ್ವಂತ ಜಾಗದಲ್ಲಿ ಫಲಕ ಅಳವಡಿಸುವುದು, ಸರ್ಕಾರಿ ಜಾಗದಲ್ಲಿ ಖಾಸಗಿ ಫಲಕ ಅಳವಡಿಸುವುದು ಹಾಗೂ ಸರ್ಕಾರಿ ಜಾಗದಲ್ಲಿ ಸರ್ಕಾರಿ ಫಲಕ ಅಳವಡಿಸಲು ಶುಲ್ಕ ನಿಗದಿಪಡಿಸಲಾಗುವುದು ಎಂದರು.

ಪ್ಲಾಸ್ಟಿಕ್ ಬಳಸಿದರೆ ದಂಡ: ಸಾರ್ವಜನಿಕರಿಗೆ ತೊಂದರೆ ಆಗದ ಜಾಗದಲ್ಲಿ ಜಾಹೀರಾತು ಹಾಕಲು ಅವಕಾಶ ನೀಡಲಾಗುವುದು, ಜಾಹೀರಾತಿನ ವಿನ್ಯಾಸದ ಆಧಾರದ ಮೇಲೆ ಶುಲ್ಕ ನಿಗದಿಪಡಿಸಲಾಗುವುದು. ಫ್ಲೆಕ್ಸ್, ಬ್ಯಾನರ್ ಕೂಡಾ ತಿದ್ದುಪಡಿ ವಿಧೇಯಕದಲ್ಲಿ ಬರಲಿದ್ದು, ಅನಧಿಕೃತವಾಗಿ ಜಾಹೀರಾತು ಅಳವಡಿಸಿದಲ್ಲಿ ದಂಡ ಹಾಕಲಾಗುವುದು, ಪ್ಲಾಸ್ಟಿಕ್ ಬಳಕೆ ಮಾಡಿದರೆ ದಂಡ ಹಾಕಲಾಗುವುದು, ತಂತ್ರಜ್ಞಾನದ ನೆರವಿನಿಂದ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳನ್ನು ಗುರುತಿಸಿ ತೆರವುಗೊಳಿಸಲಾಗುವುದು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಳವಳ

ಅರೆ ವೈದ್ಯಕೀಯ ಕಾಲೇಜು ಮುಚ್ಚುವ ಭೀತಿ

• **ವಿಧಾನಪರಿಷತ್:** ನ್ಯಾಷನಲ್ ಕಮೀಷನ್ ಫಾರ್ ಅಲೈಡ್ ಆ್ಯಂಡ್ ಹೆಲ್ತ್ ಕೇರ್ ಪ್ರೊಫೆಶನ್ಸ್ (ಎನ್‌ಸಿಎಎಚ್‌ಪಿ) ಸುತ್ತೋಲೆಯಿಂದಾಗಿ ರಾಜ್ಯದಲ್ಲಿರುವ ಪ್ಯಾರಾ ಮೆಡಿಕಲ್ ಕಾಲೇಜುಗಳು ಮುಚ್ಚುವ ಭೀತಿ ಉಂಟಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ್ ಪ್ರಕಾಶ್ ಪಾಟೀಲ್ ಕಳವಳ ವ್ಯಕ್ತಪಡಿಸಿದ್ದಾರೆ.

ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಐವಾನ್ ಡಿಸೋಜಾ ಅವರು ಈ ಬಗ್ಗೆ ಪ್ರಸ್ತಾಪಿಸಿದ್ದು, ಎಸ್‌ಎಸ್‌ಎಲ್‌ಸಿ ನಂತರ ಈ ಕೋರ್ಸ್ ಅನ್ನು ರಾಜ್ಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಈಗ ಪಿಯುಸಿಯಲ್ಲಿ ವಿಜ್ಞಾನ ತಗೆದುಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು.

ಡಿಪ್ಲೊಮಾ ಕೋರ್ಸ್‌ಗಳನ್ನು ಪದವಿಗೆ ಸಮವಾಗಿ ಮೇಲ್ದರ್ಜೆಗೆ ಏರಿಸಬೇಕು ಎಂಬ ನಿಯಮ ಅಳವಡಿಸಲು ತೀರ್ಮಾನಿಸಲಾಗಿದೆ. ಆದರೆ, ಈ ನಿಯಮಗಳನ್ನು ಸರಳೀಕರಿಸುವಂತೆ ಆಯೋಗದ ಅಧ್ಯಕ್ಷರೊಂದಿಗೆ ಮಾತನಾಡಿದ್ದೇವೆ. ಅವರು, ಈ ಬಗ್ಗೆ ಸಭೆ ಕರೆದು ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ. ಇದು ದೇಶವ್ಯಾಪಿ ಜಾರಿಗೆ ಬರುವ ನಿಯಮ ಎಂದು ಸಚಿವರು ಹೇಳಿದರು.

ಇದಕ್ಕೂ ಮೊದಲು ಐವಾನ್ ಡಿಸೋಜಾ, ಈವರೆಗೂ ಎಸ್‌ಎಸ್‌ಎಲ್‌ಸಿ ನಂತರ ವೈದ್ಯಕೀಯ ಕ್ಷೇತ್ರದ ತರಬೇತಿ ಪಡೆಯಲು ಅವಕಾಶವಿತ್ತು. ಆದರೆ, ಇನ್ನೂ ಮುಂದೆ ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾದವರಿಗೆ ಮಾತ್ರ ಪ್ರವೇಶ ಎಂದು ನಿಯಮ ರೂಪಿಸಿರುವುದು ಹೊಸ ಶೈಕ್ಷಣಿಕ ಬಿಕ್ಕಟ್ಟಿಗೆ ನಾಂದಿಯಾಗಿದೆ. ಈ ನೂತನ ನಿಯಮವನ್ನು 2026-27ನೇ ಸಾಲಿನಿಂದಲೇ ಜಾರಿಗೆ ತರಲು ಸೂಚಿಸಿದೆ. ಇದರಿಂದ ರಾಜ್ಯದಲ್ಲಿ ಪ್ರಸ್ತುತ 32 ಸರ್ಕಾರಿ ಹಾಗೂ 608 ಖಾಸಗಿ ಕಾಲೇಜು ಸೇರಿ 640 ಪ್ಯಾರಾ ಮೆಡಿಕಲ್ ಶಿಕ್ಷಣ ಸಂಸ್ಥೆಗಳಿವೆ. ಹೊಸ ನಿಯಮ ಜಾರಿಯಾದರೆ 450 ರಿಂದ 500 ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಕೊರತೆ ಉಂಟಾಗಲಿದೆ ಎಂದು ತಿಳಿಸಿದರು.



ನೀಟ್ ತರಬೇತಿಗೆ ಒತ್ತು

• **ವಿಧಾನಪರಿಷತ್:** ನೀಟ್ ಪರೀಕ್ಷೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇನ್ನಷ್ಟೂ ಪರಿಣಾಮಕಾರಿಯಾದ ತರಬೇತಿ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ವಿವಿಧ ಉಪಕ್ರಮಗಳನ್ನು ಕೈಗೊಳ್ಳಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಮೇಲ್ಮನೆ ಕಾಂಗ್ರೆಸ್ ಸದಸ್ಯ ಐವಾನ್ ಡಿಸೋಜಾ, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು 3 ಲಕ್ಷ ರೂ. ಶುಲ್ಕ ನೀಡಿ ನೀಟ್ ತರಬೇತಿ ಪಡೆದುಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು.ಇದಕ್ಕೆ ಉತ್ತರಿಸಿದ ಶರಣಪ್ರಕಾಶ್ ಪಾಟೀಲ, ನೀಟ್ ವ್ಯವಸ್ಥೆಯಿಂದ ರಾಜ್ಯದ ಸೀಟ್‌ಗಳಿಗೆ ಯಾವ ಕೊರತೆ ಇಲ್ಲ. ನೀಟ್ ಸೀಲ್‌ಗಳ ಸಂಖ್ಯೆ ಕಡಿಮೆಯಾಗಿಲ್ಲ. ನೀಟ್ ವ್ಯವಸ್ಥೆಯನ್ನು ರದ್ದುಗೊಳಿಸಬೇಕು ಎಂದು ನಾವು ನಿರ್ಣಯವನ್ನಷ್ಟೇ ಸ್ವೀಕರಿಸಿದ್ದೇವೆ. ಆದರೆ, ಸುಪ್ರೀಂಕೋರ್ಟ್ ನೀಟ್ ವ್ಯವಸ್ಥೆಯ ಪರವಾಗಿ ತೀರ್ಪು ನೀಡಿದೆ. ಹೀಗಾಗಿ ಸರ್ಕಾರ ಹಲವು ಉಪಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸದನಕ್ಕೆ ಸಚಿವರೇ ಬರಲ್ಲ: ಛಲವಾದಿ ನಾರಾಯಣಸ್ವಾಮಿ

• **ವಿಧಾನಪರಿಷತ್:** ಸದನಕ್ಕೆ ಕಡ್ಡಾಯ ಹಾಜರಾತಿ ಇದ್ದರೂ, ಸಚಿವರು ಹಾಜರಾಗಿಲ್ಲ. ಅಧಿಕಾರಿಗಳೇ ಇಲ್ಲದಿದ್ದರೆ ಹೇಗೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸಭಾಪತಿಗಳನ್ನು ಪ್ರಶ್ನಿಸಿದರು.



ಸದಸ್ಯರ 126 ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲವೆಂದು ತಿಳಿದು ಬಂದಿದೆ. ನಮ್ಮ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು, ಯಾವಾಗ ಪ್ರಶ್ನೆ ಕೇಳಿದರೂ ಅವರಿಗೆ ಸಮರ್ಪಕವಾಗಿ ಉತ್ತರ ಬಂದಿಲ್ಲ. ಇಲ್ಲಿವರೆಗೂ ಪ್ರಶ್ನೆ ಮಾಡುತ್ತಿದ್ದಾರೆ. ನಾವು ಉತ್ತರ ಕೊಡಲಾರದ ಪ್ರಶ್ನೆಯನ್ನು ಕೇಳುತ್ತಿದ್ದೀವಾ? ಎಂದು ಛಲವಾದಿ ಗರಂಆದರು. ಸದಸ್ಯ ಭೋಜೆಗೌಡ ಅವರು, ಕೆಳಮನೆಯಲ್ಲಿ ಸ್ಪೀಕರ್ ಗರಂಆಗಿದ್ದರು. ಅಧಿಕಾರಿಗಳ, ಸಚಿವರ ವರ್ತನೆಗೆ ಬೇಸರ ವ್ಯಕ್ತಪಡಿಸಿದ್ದಾರೆ. ನಮ್ಮಲ್ಲೂ ಉತ್ತರ ಸಿಕ್ಕಿಲ್ಲ, ಗಂಭೀರವಾಗಿ ವಿಚಾರ ತೆಗೆದುಕೊಂಡಿಲ್ಲ. ಹೀಗಾದರೆ ಏನು ಮಾಡಬೇಕು ಎಂದು ಅಸಮಾಧಾನ ಹೊರಹಾಕಿದರು.

ಇದಕ್ಕೆ ಬೇಸರ ವ್ಯಕ್ತಪಡಿಸಿದ ಸಭಾಪತಿ, ನಾನೂ ಈ ಬಗ್ಗೆ ಸರ್ಕಾರಕ್ಕೆ ಹೇಳಿದ್ದೇನೆ. ಸರ್ಕಾರ ಕ್ರಮ ಕೈಗೊಳ್ಳಬೇಕು, ಉತ್ತರನೀಡಲುಕೆಲ ಸಚಿವರು ಒಂದು ತಿಂಗಳು ಕಾಲಾವಕಾಶ ಕೇಳುತ್ತಾರೆ. ಸದನ ನಡೆಯುವಾಗ ಮಾಹಿತಿ ಪಡೆಯಬೇಕಲ್ಲವೇ ಎಂದರು.

ಸಭಾನಾಯಕ ಬೋಸರಾಜು ಮಾತನಾಡಿ, ಸಮಸ್ಯೆ ಸರಿಪಡಿಸುವ ಪ್ರಯತ್ನ ಮಾಡಲಾಗುತ್ತದೆ. ಸಿಎಂ ಗಮನಕ್ಕೂ ತರಲಾಗುತ್ತದೆ. ಮುಂದೆ ಹೀಗಾಗದಂತೆ ನೋಡಿಕೊಳ್ಳಲಾಗುತ್ತದೆ ಎಂದರು. ಮತ್ತೆ ಸಭಾಪತಿ ಪ್ರತಿಕ್ರಿಯಿಸಿ, ಉತ್ತರ ನೀಡದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

ಶಿಶುಪಾಲನಾ ರಜೆ: 15 ದಿನಗೊಳಗೆ ಮಂಜೂರು

• **ವಿಧಾನಪರಿಷತ್:** ಶಿಕ್ಷಕಿಯರು ಮಾತೃತ್ವ ರಜೆಯೊಂದಿಗೆ ಶಿಶುಪಾಲನಾ ರಜೆಯನ್ನು ಸಂಯೋಜಿಸಿ ಉಪಯೋಗಿಸಿಕೊಳ್ಳಲು ಇಚ್ಛಿಸಿದ್ದಲ್ಲಿ ಅಥವಾ ಶಿಶುಪಾಲನಾ ರಜೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ರಜಾ ಮನವಿ ಸ್ವೀಕೃತವಾದ 15 ದಿನಗೊಳಗೆ ರಜೆಯನ್ನು ಮಂಜೂರು ಮಾಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ವೈ.ಎಂ. ಸತೀಶ್ ಅವರು ಶಿಕ್ಷಕಿಯರಿಗೆ ಶಿಶುಪಾಲನಾ ರಜೆ ಮಂಜೂರು ಮಾಡಲಿರುವ ಮಾನದಂಡಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾತೃತ್ವದ ವರ್ಗಾವಣೆಗೆ ಹೊಸ ಕೆಟಗರಿಯೊಂದನ್ನು ಪ್ರಾರಂಭಿಸಲಾಗುವುದು. ಮಾತೃತ್ವ ರಜಾ ಮನವಿ ಸ್ವೀಕೃತಗೊಂಡ 15 ದಿನಗಳೊಳಗೆ ಸಕ್ಷಮ ಪ್ರಾಧಿಕಾರದಿಂದ ಮಾತೃತ್ವ ರಜೆಯನ್ನು ಮಂಜೂರು ಮಾಡುವ ನೀತಿಯನ್ನು ರೂಪಿಸುತ್ತೇವೆ ಎಂದು ಸಚಿವರು ಭರವಸೆ ನೀಡಿದರು.

ಸಂಪಾದಕೀಯ

ವಿಧಾನಸಭಾ ಮತಸಮರ

ಕೊಲ್ಲಿಯಲ್ಲಿ ನಡೆದಿರುವ ಸಶಸ್ತ್ರ ಯುದ್ಧವು ಭಾರತದಲ್ಲೂ ಕಂಪನವನ್ನೆಬ್ಬಿಸಿ, ಜನಜೀವನದ ಮೇಲೆ ಪರಿಣಾಮ ಬೀರಿರುವ ಮಧ್ಯೆಯೇ ನಾಲ್ಕು ರಾಜ್ಯಗಳಲ್ಲಿ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಇದೀಗ 'ಮತಯುದ್ಧ'ಕ್ಕೆ ಸನ್ನದ್ಧತೆ ನಡೆದಿದೆ. ಅಸ್ಸಾಂ, ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳ್ನಾಡು ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ವಿಧಾನಸಭಾ ಚುನಾವಣೆ ನಡೆಸಲು ದಿನಾಂಕಗಳನ್ನು ಪ್ರಕಟಿಸಲಾಗಿದೆ. ಅದರ ಜತೆಗೇ ಕರ್ನಾಟಕದಲ್ಲಿ ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಯೂ ನಡೆಯಲಿದೆ. ಮೇ 4ರಂದು ಈ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಲಿದೆ.

ಕೆಲವೊಮ್ಮೆ ಹಲರಾಜ್ಯಗಳ ವಿಧಾನಸಭಾ ಚುನಾವಣೆಗಳು ಲೋಕಸಭಾ ಚುನಾವಣೆಗೆ ಸೆಮಿಫೈನಲ್ ಎಂಬಂತೆ ಬಣ್ಣಿಸಲ್ಪಡುವುದಿದೆ. ಆದರೆ ಈ ಬಾರಿ ಅಂತಹ ಆಯಾಮಗಳೇನೂ ಇಲ್ಲದಿದ್ದರೂ ಪ್ರತಿಯೊಂದು ರಾಜ್ಯದ ಚುನಾವಣೆಯೂ ಅದರದ್ದೇ ಆದ ಕಾರಣಗಳಿಗಾಗಿ ಮಹತ್ವ ಪಡೆದಿರುವುದು ಸುಳ್ಳಲ್ಲ. ಈ ನಿಟ್ಟಿನಲ್ಲಿ ಪ.ಬಂಗಾಳ ಚುನಾವಣೆಯು ಇಡೀ ದೇಶದಲ್ಲೇ ಎಲ್ಲರ ಕುತೂಹಲ ಕೆರಳಿಸಿದೆ. 15 ವರ್ಷಗಳಿಂದ ಅಧಿಕಾರದಲ್ಲಿರುವ



ಮಮತಾ ಬ್ಯಾನರ್ಜಿ ಇನ್ನೊಂದು ಅವಧಿಗೆ ಅಧಿಕಾರದಲ್ಲಿ ಮುಂದುವರಿಯುವರೆ ಅಥವಾ ಈ ಬಾರಿಯಾದರೂ ಎನ್‌ಡಿಎ ಕೂಟವು ಆಕೆಯನ್ನು ಅಧಿಕಾರದಿಂದ ಕೆಳಗಿಳಿಸಲು ಶಕ್ತವಾಗುವುದೆ ಎಂಬ ನಿಟ್ಟಿನಲ್ಲಿ ಈ ಕುತೂಹಲ ಉಂಟಾಗಿದೆ. ಪಶ್ಚಿಮ ಬಂಗಾಳದಲ್ಲಿ ನಡೆಸಿರುವ ಚುನಾವಣಾ ಮತಪಟ್ಟಿಯ ವಿಶೇಷ ಪರಿಷ್ಕರಣೆಯು(ಎಸ್‌ಐಆರ್) ಫಲಿತಾಂಶದ ಮೇಲೆ ಬೀರಲಿರುವ ಪರಿಣಾಮದ ಕುರಿತಂತೆಯೂ ಲೆಕ್ಕಾಚಾರಗಳು ನಡೆದಿವೆ. ಈ ಎಸ್‌ಐಆರ್ ಮಮತಾ ಅವರ ಓಲೈಕೆ ರಾಜಕಾರಣಕ್ಕೆ ದೊಡ್ಡ ಹೊಡೆತ ನೀಡಲಿದೆ ಎಂಬ ಮಾತುಗಳು ಕೇಳಿಬರುತ್ತಿದ್ದು ಅದರ ಸತ್ಯಾಸತ್ಯತೆ ಚುನಾವಣೆಯಿಂದ ಸಾಬೀತಾಗಲಿದೆ.

ತಮಿಳುನಾಡು ಮತ್ತು ಕೇರಳದಲ್ಲಿ ಆಡಳಿತ ಬದಲಾವಣೆಯಾಗುವುದೆ ಅಥವಾ ಆಡಳಿತಾರೂಢ ಪಕ್ಷಗಳೇ ಅಧಿಕಾರಕ್ಕೇರುವವೆ ಎಂಬ ಜಿಜ್ಞಾಸೆ ಆರಂಭವಾಗಿದೆ. ತಮಿಳುನಾಡಲ್ಲಿ ಆಳುವ ಡಿಎಂಕೆ ವಿರುದ್ಧ ಆಡಳಿತ ವಿರೋಧಿ ಅಲೆ ಎದ್ದಿರುವುದು ಸುಳ್ಳಲ್ಲ. ಅಣ್ಣಾಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟವು ಅದರ ಲಾಭ ಪಡೆಯಲು ಯತ್ನಿಸುತ್ತಿವೆ. ಇದರ ಮಧ್ಯೆಯೆ ಚಿತ್ರನಟ ವಿಜಯ್ ಅವರ ಹೊಸ ಪಕ್ಷವು ಯಾವ ಪಕ್ಷಕ್ಕೆ ಹೆಚ್ಚು ಹೊಡೆತ ನೀಡಲು ಸಫಲವಾಗುವುದೆಂಬ ಲೆಕ್ಕಾಚಾರಗಳೂ ಆರಂಭವಾಗಿವೆ. ನಿರೀಕ್ಷೆಯಂತೆ ಡಿಎಂಕೆಗೇ ಅದರ ಹೊಡೆತ ಹೆಚ್ಚಾದರೆ ಅದು ಅಣ್ಣಾಡಿಎಂಕೆ ಗೆಲುವನ್ನು ಸುಗಮಗೊಳಿಸಬಹುದು. ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಕೂಡಾ ಆಡಳಿತವಿರೋಧಿ ಅಲೆ ಎದುರಿಸುತ್ತಿದ್ದು, ಈ ಬಾರಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರ ಕಬಳಿಸಿಕೊಂಡರೂ ಅಚ್ಚರಿ ಪಡಬೇಕಾಗಿಲ್ಲ. ಅಸ್ಸಾಂನಲ್ಲಿ ಬಿಜೆಪಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಅವರು ಜನಪ್ರಿಯತೆಯ ತುತ್ತತುದಿಯಲ್ಲಿರುವುದರಿಂದ ಅವರು ಮತ್ತೊಂದು ಅವಧಿಗೆ ಅಧಿಕಾರ ಹಿಡಿಯುವುದು ಖಚಿತ ಎಂಬಂತಹ ಸ್ಥಿತಿಯಿದೆ. ಪುದುಚೇರಿಯಲ್ಲಿ ಕೂಡಾ ಬಿಜೆಪಿ ಬೆಂಬಲದೊಂದಿಗೆ ಸರಕಾರ ನಡೆಸುತ್ತಿರುವ ಎಐಎನ್‌ಆರ್‌ಸಿ ಇನ್ನೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವುದು ಅದು ಅಧಿಕಾರದಲ್ಲಿ ಮುಂದುವರಿಯಲು ನೆರವೀಯಬಹುದು.

ಒಟ್ಟಿನಲ್ಲಿ ಮುಂಬರುವ ಈ ವಿಧಾನಸಭಾ ಚುನಾವಣೆಗಳು ರಾಷ್ಟ್ರೀಯ ಪಕ್ಷಗಳ ಜತೆಗೇ ಕೆಲವು ಪ್ರಾದೇಶಿಕ ಪಕ್ಷಗಳಿಗೂ ಅತ್ಯಂತ ಮಹತ್ವದ್ದಾಗಿವೆ.

ವಜ್ರದ ವ್ಯಾಪಾರಿಯ ಅಪ್ರತಿಮ ಗೋಸೇವೆ



ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ದೇಶದಲ್ಲಿ ಸಾವಯವ ಕೃಷಿ, ನೈಸರ್ಗಿಕ ಕೃಷಿ ಹಾಗೂ ಶೂನ್ಯ ಬಂಡವಾಳದ ಕೃಷಿಯಲ್ಲಿ ತೊಡಗಿಸಿಕೊಂಡ ಬಹುತೇಕ ರೈತರಿಗೆ ಗುಜರಾತ್‌ನ ಬನ್ಸಿ ಗೀರ್ ಗೋಶಾಲೆಯ ಸಂಸ್ಥಾಪಕರಾದ ಗೋಪಾಲ್ ಸುತಾರಿಯಾ ಅತ್ಯಂತ ಚಿರಪರಿಚಿತರು. ಭಾರತದ ಪ್ರಾಚೀನ ಕೃಷಿ ಸಂಪ್ರದಾಯಗಳನ್ನು ಪುನರುಜ್ಜೀವನಗೊಳಿಸುತ್ತಿರುವ ಇವರ ಕಾರ್ಯ ಅತ್ಯಂತ ಶ್ಲಾಘನೀಯವಾದ್ದು. ಪಾರಂಪರಿಕ ಕೃಷಿಯನ್ನು ಜೀವಂತಗೊಳಿಸುವ ಮತ್ತು ಉತ್ತೇಜಿಸುವ ನಿಟ್ಟಿನಲ್ಲಿ ಇವರ ಸಂಶೋಧನೆಯ ಫಲವೇ ಗೋಕೃಪಾಮಮೃತ ಎಂಬುದು ಬಹುತೇಕ ಕೃಷಿಕರಿಗೆ ತಿಳಿದ ವಿಚಾರ. ಹೀಗೆ ಕೃಷಿಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡುತ್ತಿರುವ ಈ ದ್ರಾವಣದ ಪಿತಾಮಹರಾದ ಇವರ ಗೋಪಾಲನೆಯ ಕುರಿತ ಒಂದು ಸಣ್ಣ ಪರಿಚಯದ ಪ್ರಯತ್ನವಿದು.

ಗೋಕೃಪಾಮಮೃತ ಎಂಬ ಒಂದು ದ್ರಾವಣವೇ ಗೋಪಾಲ್ ಸುತಾರಿಯ ಇಚ್ಛಿಸಿದ್ದಲ್ಲಿ ದೇಶದ ಶ್ರೀಮಂತರ ಪಟ್ಟಿಯಲ್ಲಿ ಇವರನ್ನು ಒಬ್ಬರನ್ನಾಗಿಸುತ್ತಿತ್ತು. ಆದರೆ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದ ಇವರು ಗೋವುಗಳ ಮತ್ತು ರೈತರ ಹಿತಕ್ಕಾಗಿ ಇದನ್ನು ಸಂಪೂರ್ಣ ಉಚಿತವಾಗಿ ನೀಡುವ ಸಂಕಲ್ಪವನ್ನು ಮಾಡಿದ್ದಾರೆ. ಇವರ ಈ ಸಂಕಲ್ಪಕ್ಕೆ ಕನೇರಿ ಮಠದ ಕಾಡಸಿದ್ದೇಶ್ವರ ಸ್ವಾಮಿಗಳು ಸೇರಿದಂತೆ ಸಾಕಷ್ಟು ಮಠಾಧಿಪತಿಗಳು, ಸಮಾಜದ ಗಣ್ಯ ವ್ಯಕ್ತಿಗಳು ಹಾಗೂ ರೈತರು ಕೈಜೋಡಿಸುತ್ತಿರುವುದು ಇವರ ಪರಿಶ್ರಮಕ್ಕೆ ಸಾರ್ಥಕತೆಯನ್ನು ತಂದಿದೆ. ಇವರು ಹಿಂದೆ ಒಬ್ಬ ವಜ್ರದ ವ್ಯಾಪಾರಿಯಾಗಿದ್ದು, ಗುಜರಾತ್‌ನ ಗೋಸೇವಾ ಆಯೋಗದ ಡೈರೆಕ್ಟರ್ ಸಹ ಆಗಿದ್ದರು. ಹತ್ತು ತಲೆಮಾರು ಕುಳಿತು ತಿಂದರೂ ಕರಗದಷ್ಟು ಸಂಪತ್ತು ಇಂದಿಗೂ ಇವರಲ್ಲಿದೆ. ಆದರೆ ಇವರಿಗೇಕೋ ಈ ಸಂಪತ್ತು ಗೋಸಂಪತ್ತಿನ ಮುಂದೆ ತುಚ್ಛವೆನಿಸಿದೆ. ಸನಾತನ ಭಾರತೀಯ ಪರಂಪರೆಗಳಲ್ಲಿನ ವೈಜ್ಞಾನಿಕ ತಳಹದಿ ಇವರ ಅಂತರಾಳವನ್ನು ಬಡಿದೆಬ್ಬಿಸಿದೆ. ಈ ಕಾರಣದಿಂದಲೇ ಇವರು ಗೋಆಧಾರಿತ ವ್ಯವಸ್ಥೆಯೊಂದಿಗೆ ಗೋಶಾಲೆ ಮತ್ತು ಗುರುಕುಲವನ್ನು ಸ್ಥಾಪಿಸಿ ಗೋಪಾಲನೆ, ಧರ್ಮಪಾಲನೆ ಮಾಡುವ ಮೂಲಕ, ಭೂತಾಯಿಯ ಒಡಲನ್ನು ವಿಷಮುಕ್ತವನ್ನಾಗಿಸುವ ಶ್ರೇಷ್ಠ ಕಾರ್ಯವನ್ನು ಮಾಡುತ್ತಿದ್ದಾರೆ. ಇವರಿಗೆ ಈ ದೇಶದ ಸಂಪ್ರದಾಯ ಮತ್ತು ಜೀವನಶೈಲಿಯೊಂದಿಗಿನ ಆಧ್ಯಾತ್ಮಿಕ ಚಿಂತನೆಯ ಬಗ್ಗೆ ಗಾಢವಾದ ಒಲವಿದೆ. ಅಷ್ಟೇ ಬೇಸರ ಇತ್ತೀಚಿನ ಆಧುನಿಕ ಸಂಪ್ರದಾಯದ ಮೇಲೆಯೂ ಇದೆ. ನಮ್ಮ ಹಿರಿಯರು ನಾವು ಬದುಕುವ ಜೀವನದೊಂದಿಗೆ ಒಂದು ಆಧ್ಯಾತ್ಮಿಕ ಚಿಂತನೆಯನ್ನು ಅಳವಡಿಸಿದ್ದರು. ಗೋವಿನ ಮಹತ್ವದ ಅರಿವು ಅವರಿಗೆ ಅಂದೇ ಇದ್ದದ್ದರಿಂದ ಅದನ್ನು ಜೀವನದೊಂದಿಗೆ ಜೋಡಿಸಿದ್ದರು ಮತ್ತು ಗೋವಿನ ಉಪ ಉತ್ಪನ್ನಗಳಿಂದ ಕೃಷಿಯನ್ನು ಮಾಡಿ ಆರೋಗ್ಯಯುತ ಜೀವನವನ್ನು ತಮ್ಮದಾಗಿಸಿಕೊಂಡಿದ್ದರು ಎಂಬೆಲ್ಲಾ ನಿಲುವು ಗಟ್ಟಿಯಾಗಿ ಇವರಲ್ಲಿ ಬೇರೂರಿದೆ.

ನಾವಿಂದು ನಮ್ಮ ಹಿರಿಯರು ಹಾಕಿಕೊಟ್ಟ ಆ ಎಲ್ಲಾ ಬದುಕಿಗೆ ಪೂರಕವಾಗುವ ಅಂಶಗಳನ್ನು ಕಡೆಗಣಿಸಿ ಗೋಮಾತೆಯನ್ನು ನಿರ್ಲಕ್ಷಿಸಿದ್ದೇವೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸಿ ಭೂಮಾತೆಯನ್ನು ಅಪವಿತ್ರಗೊಳಿಸುತ್ತಿದ್ದೇವೆ. ನಾವು ವಿಷವನ್ನು ತಿನ್ನುವುದರೊಂದಿಗೆ ಇಡೀ ವಿಶ್ವಕ್ಕೆ ವಿಷವನ್ನು ಉಣಬಡಿಸುತ್ತಿದ್ದೇವೆ. ನಮ್ಮ ಹಿರಿಯರು ತೋರಿಸಿದ ದಾರಿಯಲ್ಲಿ ನಮಗೇಕೆ ಸಾಗಲಾಗುತ್ತಿಲ್ಲ, ಎಂದೆಲ್ಲಾ ಚಿಂತನೆ ಮಾಡಿದಾಗ ಇವರಿಗೆ ಸತ್ಯದ ದರ್ಶನವಾಗಿದೆ. ಕೂಡಲೇ ತಮ್ಮ ವ್ಯಾಪಾರಕ್ಕೆ ತಾರ್ಕಿಕ ಅಂತ್ಯ ಹಾಡಿ, ಒಂದಷ್ಟು ಗೀರ್ ಜಾತಿಯ ಗೋವುಗಳನ್ನು ತಂದು ಒಂದೆಡೆ ಸಾಕಲು ಪ್ರಾರಂಭಿಸುತ್ತಾರೆ. ಗೋವುಗಳನ್ನು ಕಟ್ಟಿಹಾಕಿ ಸಾಕುವುದು ಸಹ ಒಂದು ರೀತಿಯ ಶೋಷಣೆಯೆಂದು ಭಾವಿಸಿ, ಎಲ್ಲಾ ಗೋವುಗಳನ್ನು ಕಟ್ಟಿಹಾಕದೆ ಮುಕ್ತವಾಗಿ ಬಿಟ್ಟು ಸಾಕಲಾರಂಭಿಸುತ್ತಾರೆ. ಬೇಕೆಂದಾಗ ಅವುಗಳೇ ಹೋಗಿ ಮೇವು ತಿಂದು, ನೀರು ಕುಡಿದು ಬರುವ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ.

ಇವರು ಹೇಳುವಂತೆ, ಗೋವುಗಳಿಗೆ ಅತಿ ಹೆಚ್ಚು ತಿನ್ನಿಸಿದಷ್ಟು ಹೆಚ್ಚೆಚ್ಚು ಹಾಲನ್ನು ನೀಡುತ್ತವೆ ಎಂಬ ತಪ್ಪು ಕಲ್ಪನೆ ನಮ್ಮಲ್ಲಿದೆಯಂತೆ. ಆದರೆ ನಮ್ಮ ಸನಾತನ ಸಂಸ್ಕೃತಿಯಲ್ಲಿ ಗೋವುಗಳಿಗೆ ಹೊಟ್ಟೆ ತುಂಬಾ ಮೇವನ್ನು ಕೊಟ್ಟ ನಂತರ, ಅದು ಎಷ್ಟು ಹಾಲನ್ನು ನೀಡಬೇಕು ಎಂಬುದನ್ನು ಅದೇ ಸ್ವತಃ ನಿರ್ಧರಿಸುತ್ತದೆ. ಈ ಕಾರಣದಿಂದ ವೇದಗಳಲ್ಲಿ ಹೇಳಿರುವಂತೆ ಗೋವಿನ ಕೆಚ್ಚಲಿನ ಮೇಲೆ ಮೊದಲಿಗೆ ಅದರ ಕರುವಿಗೆ ಮಾತ್ರ ಅಧಿಕಾರವಿದೆ. ಆನಂತರವೇ ಮನುಷ್ಯನಿಗೆ ಎಂಬ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ, ಗೋವಿನ ಕೆಚ್ಚಲಿನ ತೊಟ್ಟಲ್ಲಿ ಎರಡು ಅದರ ಕರುವಿಗೆ ಬಿಟ್ಟು, ಇನ್ನೆರಡು ತೊಟ್ಟುಗಳಲ್ಲಿರುವ ಹಾಲನ್ನು ಮಾತ್ರ ಕರೆಯುವ ವ್ಯವಸ್ಥೆಯನ್ನು ರೂಪಿಸಿದ್ದಾರೆ. ತಮ್ಮಲ್ಲಿ ದೊರೆಯುವ ಗೋವಿನ ಸಗಣಿ, ಗೋಮೂತ್ರದೊಂದಿಗೆ ಸ್ಲರಿಯನ್ನು ಬಳಸಿ ಅವಶ್ಯಕವಾದ ಮೇವನ್ನು ಬೆಳೆದುಕೊಳ್ಳುತ್ತಿದ್ದಾರೆ.



ಸಾಮಾನ್ಯವಾಗಿ ವಿಶ್ವದಾದ್ಯಂತ ಗೋವುಗಳನ್ನು ಒಂದೆರಡು ಕರು ಹಾಕಿದ ನಂತರ ಕಸಾಯಿಖಾನೆಗೆ ಕಳುಹಿಸಲಾಗುತ್ತದೆ. ಭಾರತದಲ್ಲಿ ಈ ಪ್ರಮಾಣ ಕೊಂಚ ಕಡಿಮೆ ಇದ್ದು, ಇಲ್ಲಿ ನಾಲ್ಕೈದು ಕರು ಹಾಕಿದ ನಂತರ ಆ ಗೋವು ಕಡಿಮೆ ಹಾಲು ನೀಡುತ್ತದೆ ಎಂಬ ನೆಪವೊಡ್ಡಿ ಕಸಾಯಿಖಾನೆಗೆ ಅಟ್ಟಲಾಗುತ್ತದೆ. ಆದರೆ ಇವರಲ್ಲಿರುವ ಗೋವುಗಳ ಆಯುಷ್ಯದ ಬಗ್ಗೆ ತಿಳಿದರೆ ನೀವು ಬೆಕ್ಕಸ ಬೆರಗಾಗುತ್ತೀರಿ. ಇಲ್ಲಿ ಕೆಲವೊಂದು ಗೋವುಗಳು ಸುಮಾರು 15 ಕರು ಹಾಕಿದ ನಂತರವೂ ಇಂದಿಗೂ 20ರಿಂದ 30 ಲೀಟರ್ ಹಾಲನ್ನು ಪ್ರತಿನಿತ್ಯ ನೀಡುತ್ತಿವೆ. ಇವು ನೀಡುತ್ತಿರುವ ಹಾಲಿನಲ್ಲಿ ದೇಹಕ್ಕೆ ಅತ್ಯವಶ್ಯಕವಾದ ಕೊಬ್ಬಿನಾಂಶ ಹೆಚ್ಚಿರುವುದು ವೈಜ್ಞಾನಿಕವಾಗಿ ಸಾಬೀತಾಗಿದೆ. ವಿದೇಶಿ ತಳಿಗಳ 50 ಲೀಟರ್ ಹಾಲಿನಲ್ಲಿರುವಂತಹ ಕೊಬ್ಬಿನಾಂಶ ಇವರಲ್ಲಿನ ಗೋವುಗಳ 30 ಲೀಟರ್ ಹಾಲಿನಲ್ಲಿಯೇ ಸಿಗುತ್ತಿದೆ. ಯಾವುದೇ ಗೋವಿನಿಂದ ಬಲವಂತವಾಗಿ ಹಾಲನ್ನು ಕರೆಯುವ ಪರಿಪಾಠವೇ ಇಲ್ಲಿಲ್ಲ, ಹೆಸರು ಕರೆದ ಕೂಡಲೇ ಆಯಾ ಗೋವುಗಳು ಹಾಲು ಕರೆಯುವ ಸ್ಥಳಕ್ಕೆ ಖುದ್ದಾಗಿ ಹೋಗಿ ಹಾಲನ್ನು ನೀಡಿ ಬರುತ್ತವೆ. ಹೀಗೆ ಮನಸೋ ಇಚ್ಛೆ ನೀಡುತ್ತಿರುವ ಈ ಹಾಲಿಗೆ ಸಾಕಷ್ಟು ಬೇಡಿಕೆಯಿದೆ. ಅಚ್ಚರಿ ಎಂದರೆ ವೇದಗಳಲ್ಲಿ ಹೇಳಿರುವಂತೆ ಗೋವು ಸಾಯುವವರೆಗೂ ಹಾಲನ್ನು ನೀಡುತ್ತಿದ್ದ ಚಿತ್ರಣವನ್ನು ಇಲ್ಲಿ ಪುನರ್ಜೀವಗೊಳಿಸುವ ನಿಟ್ಟಿನಲ್ಲಿ ಕಾರ್ಯ ನಡೆಯುತ್ತಿದೆ.

ಇಲ್ಲಿಯ ಪ್ರತಿಯೊಂದು ಗೋವು ಪ್ರಕೃತಿದತ್ತವಾಗಿ ಬೆಳವಣಿಗೆ ಕಾಣುತ್ತಿದೆ. ಇಲ್ಲಿಯ ಎರಡು ವರ್ಷದ ಗೋವಿನ ದೇಹದಾರ್ಢ್ಯತೆ ಬೇರೆಡೆಯಲ್ಲಿನ ಸುಮಾರು ಐದು ವರ್ಷದ ಗೋವಿಗೆ ಸರಿಸಮಾನದಂತೆ ಕಂಡುಬರುತ್ತದೆ. ಇಲ್ಲಿಯ ಯಾವುದೇ ಗೋವಿಗೆ ಇಂದಿನವರೆಗೂ ಆಧುನಿಕ ವಿಜ್ಞಾನ ಹೇಳುವಂತಹ ಯಾವುದೇ ಅಲೋಪತಿ ಔಷಧಿಯನ್ನು ಕೊಟ್ಟಿಲ್ಲ. ಸಾಮಾನ್ಯವಾಗಿ ಕೊಡಲೇಬೇಕಾದ ಹೊಟ್ಟೆ ಹುಳದ ಔಷಧಿಯನ್ನು ನೀಡಿಯೇ ಇಲ್ಲ. 15 ದಿನಕ್ಕೊಮ್ಮೆ ಬೇವಿನ ಮರದ ಸೊಪ್ಪನ್ನು ಗೋವುಗಳಿಗೆ ತಿನ್ನಿಸುವ ವ್ಯವಸ್ಥೆ ಇದೆ. ಅನಾರೋಗ್ಯದಿಂದ ಬಳಲುವ ಗೋವುಗಳು ಈ ಸೊಪ್ಪನ್ನು ತಿಂದು ಆರೋಗ್ಯವಂತವಾಗುತ್ತಿವೆ. ಇದರಿಂದ ಗೋವುಗಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿರುವುದು ಆನಂತರ ಬೆಳಕಿಗೆ ಬಂದಿದೆ.

ಗೋಪಾಲ್ ಸುತಾರಿಯಾ ಹೇಳುವಂತೆ ಗೀರ್ ಜಾತಿಯ ಗೋವಿನಲ್ಲಿ ಸುಮಾರು 15 ವಿವಿಧ ಗೋತ್ರಗಳಿವೆ. ಇಂತಹ ಸುಮಾರು 12 ವಿವಿಧ ಗೋತ್ರದ ಗೋವುಗಳನ್ನು ಇವರಲ್ಲಿ ಕಾಣಬಹುದು. ಇಂದು ವಿಶ್ವದಲ್ಲಿಯೇ ಅತಿ ಹೆಚ್ಚು ಗೀರ್ ತಳಿಗಳನ್ನು ಹೊಂದಿರುವ ಬ್ರೆಜಿಲ್‌ನಲ್ಲಿಯೂ ಕೇವಲ ಒಂದೇ ಗೋತ್ರದ ತಳಿಗಳಿವೆ. ಮನುಷ್ಯರಂತೆ ಇಲ್ಲಿಯೂ ಸಹ ತಳಿ ಅಭಿವೃದ್ಧಿ ಗೋತ್ರದ ಜೋಡಣೆಯೊಂದಿಗೆ ಆಗುತ್ತಿದೆ. ಈ ಕಾರಣಕ್ಕಾಗಿಯೇ ಪ್ರತಿಯೊಂದು ತಳಿಯ ಹಿಂದಿನ ಐದಾರು ತಲೆಮಾರಿನ ಮಾಹಿತಿಯನ್ನು ಸಂಗ್ರಹಿಸಿ ಇಡಲಾಗಿದೆ. ಯಾವ ಗೋತ್ರದ ಗೋವಿಗೆ ಮತ್ತಿನ್ಯಾವ ಗೋತ್ರದ ತಳಿಯೊಂದಿಗೆ ಸೇರಿಸಬೇಕು ಎಂಬುದು ಒಂದು ವರ್ಷದ ಮೊದಲೇ ನಿರ್ಧರಿಸಲಾಗಿರುತ್ತದೆ. ಹೀಗೆ ಅವುಗಳ ವಂಶವಾಹಿಯ ಮೇಲೆಯೇ ಇಲ್ಲಿ ತಳಿ ಸಂವರ್ಧನೆಯ ಕಾರ್ಯ ಸಾಗುತ್ತಿದೆ.

ಇಲ್ಲಿಯ ಹಾಲು ಮತ್ತು ತುಪ್ಪಕ್ಕೆ ಸಾಕಷ್ಟು ಬೇಡಿಕೆಯಿದೆ. ಇಲ್ಲಿಯ ಗೋಉತ್ಪನ್ನಗಳಿಂದ ಕೆಲವೊಂದಿಷ್ಟು ಔಷಧಿಗಳನ್ನು ತಯಾರಿಸಲಾಗುತ್ತಿದೆ. ಇವರ ಈ ಗೋತೀರ್ಥ ವಿದ್ಯಾಪೀಠದಲ್ಲಿ ಸಂವರ್ಧನೆಗೊಂಡ ತಳಿಗಳಿಗೆ ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ಬೇಡಿಕೆ ಇದೆ. ಆದರೆ ಮೂಲತಃ ವಜ್ರದ ವ್ಯಾಪಾರಿಯಾಗಿರುವ ಇವರು, ಇದರಿಂದ ಹಣ ಮಾಡುವ ಉದ್ದೇಶವಿಲ್ಲದೆ ಇಂತಹ ಅವಕಾಶಗಳೆಲ್ಲವನ್ನು ತಿರಸ್ಕರಿಸಿದ್ದಾರೆ. ಗುಜರಾತ್‌ನ ಈ ಪರಿಪೂರ್ಣ ಗೋಶಾಲೆಯನ್ನು ಮತ್ತು ಇವರನ್ನು ನೋಡಲು ದೇಶದ ಮೂಲೆ ಮೂಲೆಗಳಿಂದ ಜನ ಪ್ರತಿನಿತ್ಯ ಬಂದು ಹೋಗುತ್ತಿದ್ದಾರೆ. ಹೀಗೆ ಬಂದವರೆಲ್ಲರಿಗೂ ಗೋವಿನ ಸಾಕಾಣಿಕೆಯ ಕುರಿತ ಸಂಪೂರ್ಣ ಮಾಹಿತಿಯನ್ನು ಉಚಿತವಾಗಿ ನೀಡಲಾಗುತ್ತಿದೆ. ಸ್ವತಃ ಗೋಪಾಲ್ ಸುತಾರಿಯಾರವರೇ ಕೆಲವೊಮ್ಮೆ ಬಂದಂತ ಆಸಕ್ತರಿಗೆ ಗೋಪಾಲನೆ ಮತ್ತು ಕೃಷಿಯ ಕುರಿತಂತೆ ಸಮಗ್ರವಾಗಿ ವಿವರಿಸುವುದು ಇದೆ. ಇದೆಲ್ಲದರ ಜೊತೆಗೆ ಇಲ್ಲೊಂದು ವಿಶೇಷವಾದ ಗುರುಕುಲ ವ್ಯವಸ್ಥೆ ಸದ್ದಿಲ್ಲದೇ ಗೋಆಧಾರಿತವಾಗಿಯೇ ನಡೆಯುತ್ತಿದೆ.

ಭಾರತ ಪ್ರವರ್ಧಮಾನಕ್ಕೆ ಬರುವುದನ್ನು ಅಮೆರಿಕ ಸಹಿಸದು

▸ ಉತ್ಪಲ್ ಕುಮಾರ್

ಇತ್ತೀಚೆಗೆ ದಿಲ್ಲಿಯಲ್ಲಿ ನಡೆದ ರೈಸಿನಾ ಸಂವಾದ ಕಾರ್ಯಕ್ರಮದಲ್ಲಿ ಅಮೆರಿಕದ ವಿದೇಶಾಂಗ ಸಹಕಾರ್ಯದರ್ಶಿ ಕ್ರಿಸ್ಟೋಫರ್ ಲಾಂಡ್ ರಾಜತಾಂತ್ರಿಕತೆಯ ಪಾಲಿಗೆ ನಿಷ್ಠುರವೇ ಎನಿಸಬಹುದಾದ ಮಾತುಗಳನ್ನಾಡಿದರು. ''ನಾವು 20 ವರ್ಷಗಳ ಹಿಂದೆ ಚೀನಾಕ್ಕೆ ಸಂಬಂಧಿಸಿ ಎಸಗಿದ ತಪ್ಪುಗಳನ್ನು ಈಗ ಭಾರತಕ್ಕೆ ಸಂಬಂಧಿಸಿ ಮತ್ತೆ ಎಸಗಲಾರೆವು ಎಂಬುದನ್ನು ಭಾರತವು ಅರಿತುಕೊಳ್ಳಬೇಕು'' ಎಂದು ಅವರು ಹೇಳಿದರು. ಅದನ್ನು ಮತ್ತಷ್ಟು ವಿವರಿಸಿದ ಅವರು, ''ನಾವು ನಿಮಗೆ ಎಲ್ಲಾ ಬಗೆಯ ಮಾರುಕಟ್ಟೆಯ ಅಭಿವೃದ್ಧಿಗೆ ನೆರವು ನೀಡುತ್ತೇವೆ. ಆದರೆ ಕೊನೆಗೆ ಹಲವಾರು ವಾಣಿಜ್ಯಿಕ ವಿಷಯಗಳಲ್ಲಿ ನಮ್ಮನ್ನೇ ಸೋಲಿಸುತ್ತೀರಿ. ಅದಕ್ಕಿನ್ನು ಅವಕಾಶ ನೀಡುವುದಿಲ್ಲ'' ಎಂದರು.

ಯಾವುದೇ ರಾಜತಾಂತ್ರಿಕ ನಯವಿನಯವಿಲ್ಲದ ಈ ಮಾತಿನ ಸಂದೇಶವು ಸ್ಪಷ್ಟವಾಗಿದೆ. ಚೀನಾ ತನ್ನ ವಿರೋಧಿಯಾಗಿ ಬೆಳೆಯಲು ತಾನೇ ಅವಕಾಶ ಮಾಡಿಕೊಟ್ಟಿರುವುದಾಗಿ ಅಮೆರಿಕ ನಂಬುತ್ತಿದೆ ಹಾಗೂ ಅದೇ ತಪ್ಪನ್ನು ಭಾರತಕ್ಕೆ ಸಂಬಂಧಿಸಿ ಎಸಗಬಾರದು ಎಂದು ಭಾವಿಸಿದೆ. ಭಾರತದ ನೀತಿ ನಿರೂಪಕರು ಈ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಹಾಗೂ ಹೆಚ್ಚು ಆಳವಾಗಿ ವಿಶ್ಲೇಷಣೆ ಮಾಡಬೇಕಾಗಿದೆ. ಏಕೆಂದರೆ ಇದರ ಹಿಂದೆ ಜಾಗತಿಕ 'ಶಕ್ತಿ ರಾಜಕೀಯ'ದ ಕಹಿಸತ್ಯ ಅಡಗಿದೆ. ಯಾವುದೇ ಸೂಪರ್ ಪವರ್ ಇನ್ನೊಂದು ರಾಷ್ಟ್ರದೊಂದಿಗೆ ಎಷ್ಟೇ ಉತ್ತಮ ಸಂಬಂಧ ಹೊಂದಿದ್ದರೂ ಆ ರಾಷ್ಟ್ರವು ಸೂಪರ್‌ಪವರ್ ಆಗಿ ಬೆಳೆಯಲು ತಾನಾಗಿ ಅವಕಾಶ ನೀಡಲಾರದು ಎಂಬುದು ಇದರ ಹಿಂದಿನ ಸಂದೇಶವಾಗಿದೆ.

ಕೆಲವಾರು ದಶಕಗಳಿಂದ ಅಮೆರಿಕದ ನೀತಿನಿರೂಪಕರು ಚೀನಾವು ಎಷ್ಟೇ ಶಕ್ತಿಶಾಲಿಯಾಗಿ ಬೆಳೆದರೂ ಅದನ್ನು ತಾವು ನಿಯಂತ್ರಿಸಬಹುದು ಎಂದು ಭಾವಿಸಿಕೊಂಡು ಬಂದಿದ್ದರು. ಡೆಂಗ್ ಕ್ಸಿಯೋಪಿಂಗ್ ಚೀನಾದ್ದು ಶಾಂತಿಯುತ ಬೆಳವಣಿಗೆ ಎಂದು ಜಗತ್ತಿಗೆ ನಂಬಿಸಿದ್ದರು. ಆದರೆ ಆಂತರ್ಯದಲ್ಲಿ ''ನಿಮ್ಮ ಸಾಮರ್ಥ್ಯವನ್ನು ಯಾರ ಕಣ್ಣಿಗೂ ಕಾಣದಂತೆ ಅಡಗಿಸಿಡಿ, ಸಮಯ ಬಂದಾಗ ಅದನ್ನು ಪ್ರದರ್ಶಿಸಿ'' ಎಂಬುದು ಅವರ ನೀತಿಯಾಗಿತ್ತು. ಬಳಿಕ ಚೀನಾ ಈ ನೀತಿಯನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿತು. ಮೂರು ದಶಕಗಳಿಂದ ಸದ್ದಿಲ್ಲದೆ ಪಾಶ್ಚಿಮಾತ್ಯ ತಂತ್ರಜ್ಞಾನವನ್ನು, ಬಂಡವಾಳವನ್ನು ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಬೆಳೆಸಿಕೊಂಡು ಬಂದಿತು. ಅದರ ಪರಿಣಾಮವು ಎಲ್ಲರ ಕಣ್ಣಿಗೆ ಗೋಚರಿಸುವ ವೇಳೆಗೆ, ಚೀನಾವು ವಿಶ್ವದ ಎರಡನೇ ಅತ್ಯಂತ ದೊಡ್ಡ ಆರ್ಥಿಕ ಶಕ್ತಿಯಾಗಿ ಹಾಗೂ ಅಮೆರಿಕಕ್ಕೆ ಸಮರ್ಥ ತಂತ್ರಜ್ಞಾನ ವಿರೋಧಿಯಾಗಿ ಬೆಳೆದು ನಿಂತಾಗಿತ್ತು.

ಪಾಶ್ಚಿಮಾತ್ಯ ರಾಷ್ಟ್ರಗಳೇ ನಿರ್ಮಿಸಿದ ವ್ಯವಸ್ಥೆಯೊಳಗೆ ಚೀನಾವು ಅತ್ಯಂತ ಶಕ್ತಿಶಾಲಿಯಾಗಿ ಬೆಳೆಯಲು ತಾವೇ ಅವಕಾಶ ಮಾಡಿಕೊಟ್ಟಿದ್ದೇವೆ ಎಂಬುದಾಗಿ ಅಮೆರಿಕ ಈಗ ಭಾವಿಸಿದೆ. ಭಾರತವನ್ನು ಕೂಡಾ ಅಮೆರಿಕ ಈಗ ಅದೇ ಆಯಾಮದಿಂದ ನೋಡುತ್ತಿದೆ.

ಜಪಾನ್‌ನ ನಿದರ್ಶನ

ಯಾವುದಾದರೊಂದು ದೇಶವು ಪ್ರಬಲವಾಗಿ ಬೆಳೆಯದಂತೆ ಮಾಡಲು ಅಮೆರಿಕವು ಏನು ಮಾಡಲೂ ಸಿದ್ಧ ಎಂಬುದನ್ನು ಅರಿಯಬೇಕಾದರೆ ಜಪಾನ್‌ನತ್ತ ನೋಡಬೇಕು. 1980ರ ದಶಕದಲ್ಲಿ ಜಪಾನ್ ಅತ್ಯಂತ ವೇಗವಾಗಿ ಬೆಳೆಯುತ್ತಿತ್ತು. ಅದನ್ನು ಯಾರೂ ತಡೆಯುವಂತಿರಲಿಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ ಜಪಾನಿ ಆಟೋಮೊಬೈಲ್‌ಗಳು, ಎಲೆಕ್ಟ್ರಾನಿಕ್ಸ್ ಮೇಲುಗೈ ಸಾಧಿಸಿದ್ದವು. ಮುಂದಿನ ದಿನಗಳಲ್ಲಿ ಜಪಾನ್ ಸೂಪರ್‌ಪವರ್ ಆಗಿ ಬೆಳೆದು ಅಮೆರಿಕದ ಕೈಗಾರಿಕೆಗಳು ಕುಗ್ಗಲಿದೆ ಎಂಬುದಾಗಿ ಅಮೆರಿಕನ್ ಪತ್ರಿಕೆಗಳೆಲ್ಲಾ ಬರೆಯುತ್ತಿದ್ದವು.



ಇದನ್ನು ಕಂಡ ಅಮೆರಿಕವು 1985ರಲ್ಲಿ ಜಪಾನ್‌ನೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದ ಜಪಾನ್ ಪಾಲಿಗೆ ಮಾರಕವಾಯಿತು. ಇದರ ಕಾರಣದಿಂದಾಗಿ ಜಪಾನಿನ ಕರೆನ್ಸಿಯ ಬೆಲೆ ಕುಸಿಯಿತು. ಅವುಗಳ ಉಪಕರಣಗಳ ಬೆಲೆ ಮಾರುಕಟ್ಟೆಯಲ್ಲಿ ಏರುವಂತಾಯಿತು. ಈ ಬೆಳವಣಿಗೆ ಜಪಾನಿನ ಅಭಿವೃದ್ಧಿಯ ಬಲೂನಿಗೆ ಸೂಜಿಯಿಂದ ಚುಚ್ಚಿದಂತಾಯಿತು. ಅಲ್ಲಿಂದ ಬಳಿಕ ಜಪಾನಿನ ಆರ್ಥಿಕ ಪ್ರಗತಿ ಸ್ಥಗಿತಗೊಂಡಿತು. ಕೆಲವು ದಶಕಗಳ ಕಾಲ ಜಪಾನ್ ಇದೇ ರೀತಿಯ ಆರ್ಥಿಕ ಸ್ಥಾಗಿತ್ಯವನ್ನು ಅನುಭವಿಸಿತು.

ಜಪಾನಿನ ಪ್ರಗತಿಯನ್ನು ಯಾವುದೇ ಯುದ್ಧ ಅಥವಾ ನಿರ್ಬಂಧಗಳು ತಡೆದುದಲ್ಲ. ಸ್ನೇಹಯುತ ರಾಜತಾಂತ್ರಿಕತೆ ಮತ್ತು ಆರ್ಥಿಕ ಕುಟಿಲತೆಯ ಮೂಲಕ ಅಮೆರಿಕ ಇದನ್ನು ಸಾಧಿಸಿತು.

ಅಮೆರಿಕ -ಭಾರತ ಸಂಬಂಧ ಸರಳವಲ್ಲ

ಅಮೆರಿಕದೊಂದಿಗಿನ ಭಾರತದ ಸಂಬಂಧವು ಎಂದಿಗೂ ಸರಳವಾಗಿರಲಿಲ್ಲ. ಅದು ಸಂಕೀರ್ಣವಾಗಿದೆ. ಹಲವಾರು ಏಳುಬೀಳುಗಳನ್ನು ಕಾಣುತ್ತಲೇ ಬಂದಿದೆ. ಅಮೆರಿಕವು ತನ್ನ ಹಿತಾಸಕ್ತಿಗೆ ಅನುಗುಣವಾಗಿ ಯಾವುದೇ ದೇಶದೊಂದಿಗಿನ ಸಂಬಂಧವನ್ನು ತನಗೆ ಬೇಕಾದಂತೆ ಬದಲಿಸುತ್ತದೆ. ''ಅಮೆರಿಕದ ಜತೆ ಕೈಜೋಡಿಸಿ ಸಾಗುವುದೆಂದರೆ ಗ್ಲಾಸ್ ಚೂರುಗಳ ಮೇಲೆ ನಡೆದಂತೆ. ಯಾವಾಗ ಗಾಜಿನ ಚೂರೊಂದು ಚುಚ್ಚುವುದೆಂದು ಹೇಳಲಾಗದು'' ಎಂಬುದಾಗಿ ಖ್ಯಾತ ಲೇಖಕರೊಬ್ಬರು ಬಣ್ಣಿಸುತ್ತಾರೆ.

ಅಮೆರಿಕವು ಭಾರತವನ್ನು ಚೀನಾದ ಪಟ್ಟಕದ ಮೂಲಕವೇ ನೋಡುತ್ತದೆ. ಚೀನಾಕ್ಕೆ ಪ್ರತಿಶಕ್ತಿಯಾಗಿ ಭಾರತವು ಬೆಳೆಯಬೇಕು ಎಂಬುದು ಅಮೆರಿಕದ ಇಂಗಿತ. ಆದರೆ ಭಾರತವು ಅಮೆರಿಕಕ್ಕಿಂತ ಬಲಿಷ್ಠವಾಗಿ ಬೆಳೆಯುವುದನ್ನು ಅದು ಸಹಿಸದು. ಕ್ರಿಸ್ಟೋಫರ್ ಹೇಳಿದಂತೆ ಬಲಿಷ್ಠ ಭಾರತವು ಅಮೆರಿಕಕ್ಕೆ ಒಂದು ಸಮಸ್ಯೆಯನ್ನು ಪರಿಹರಿಸಬಲ್ಲುದಾದರೂ ಮತ್ತೊಂದು ಸಮಸ್ಯೆಯನ್ನು ಸೃಷ್ಟಿಸಬಲ್ಲುದು.

ಭಾರತದ ಅಭಿವೃದ್ಧಿಯು ಪಾಶ್ಚಾತ್ಯ ರಣತಂತ್ರ ವ್ಯವಸ್ಥೆಯಲ್ಲಿ ಕೆಲಮಟ್ಟಿನ ಅಸಹನೆಯನ್ನು ಸೃಷ್ಟಿಸಿದೆ. ''ಯಾವಾಗಲೂ ಬಂದೂಕು ಹಿಡಿದವನೇ ನಮ್ಮ ವೈರಿಯಾಗಿರುವುದಿಲ್ಲ, ಕೆಲವೊಮ್ಮೆ ನಗು ಚೆಲ್ಲುತ್ತಾ ಕೊಡುಗೆಯನ್ನು ಕೈಯಲ್ಲಿ ಹಿಡಿದವನು ನಮ್ಮ ವೈರಿಯಾಗಿರುವ ಸಾಧ್ಯತೆಗಳಿವೆ'' ಎಂದು ಮಾಜಿ ಗುಪ್ತಚರ ಮುಖ್ಯಸ್ಥ ವಿಕ್ರಮ್ ಸೂದ್ ಹೇಳುತ್ತಾರೆ. ಅದು ಅಮೆರಿಕಕ್ಕೆ ಅನ್ವಯಿಸುತ್ತದೆ. ಸೂದ್ ಹೇಳುತ್ತಾರೆ ''ಭಾರತದ ಆತ್ಮನಿರ್ಭರ ರಾಷ್ಟ್ರೀಯತೆಯೆಂಬುದು ಪಾಶ್ಚಿಮಾತ್ಯ ಅಧಿಕಾರದ ಕಾರಿಡಾರ್‌ನಲ್ಲಿ ಸಹ್ಯವೆನಿಸದ ವಿಷಯವಾಗಿದೆ. ಆರ್ಥಿಕ ಶಕ್ತಿ, ಮಿಲಿಟರಿ ಶಕ್ತಿ ಮತ್ತು ಪರಮಾಣು ಶಕ್ತಿ ಹೊಂದಿರುವ ಎರಡು ಸ್ವಾವಲಂಬಿಯಾದ ಹಾಗೂ ಸ್ವತಂತ್ರವಾದ ರಾಷ್ಟ್ರಗಳು ಏಷ್ಯಾದಲ್ಲಿ ಬೆಳೆಯುವುದು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭೀತಿ ಸೃಷ್ಟಿಸುತ್ತದೆ. ಪಾಶ್ಚಿಮಾತ್ಯ ಕಾರ್ಪೋರೇಟ್ ಜಗತ್ತಂತೂ ಆ ಬೆಳವಣಿಗೆಯನ್ನು ಆತಂಕದಿಂದಲೇ ನೋಡುತ್ತದೆ''

ಹಿಂದೊಮ್ಮೆ ಚೀನಾ ಬೆಳೆಯಲು ಅವಕಾಶ ಮಾಡಿಕೊಟ್ಟು ಈಗ ಅದರಿಂದಲೇ ಬೆದರಿಕೆಗೊಳಗಾಗಿರುವ ಅಮೆರಿಕವು ಭಾರತವನ್ನು ಅದೇ ತಕ್ಕಡಿಯಲ್ಲಿ ತೂಗಲಾರದಾದರೂ ಸದ್ಯಕ್ಕೆ ಭಾರತ-ಪಾಕಿಸ್ತಾನ ಸಂಬಂಧದ ಕುರಿತಂತೆ ತನ್ನ ದ್ವಂದ್ವ ನೀತಿ ಮುಂದುವರಿಸುವುದು ಖಂಡಿತ. ಭಾರತವು ಸದಾ ಪಾಕಿಸ್ತಾನದೆಡೆಗೆ ಅನುಮಾನದಿಂದ ನೋಡುವಂತೆ ಮಾಡಲು ಪಾಕಿಸ್ತಾನಕ್ಕೆ ಕುಮ್ಮಕ್ಕು ನೀಡಬಹುದು. ಇದೇ ವೇಳೆ ಭಾರತವು ತನ್ನ ಮಾರುಕಟ್ಟೆಯನ್ನು ಅಮೆರಿಕನ್ ಉತ್ಪನ್ನಗಳಿಗೆ ಮುಕ್ತಗೊಳಿಸುವಂತೆ ಒತ್ತಡ ಹೇರಬಹುದು ಎಂದು ಅವರು ನುಡಿಯುತ್ತಾರೆ.

ಆದರೆ ಸಂಪೂರ್ಣವಾಗಿ ಭಾರತದ ವಿರೋಧ ಕಟ್ಟಿಕೊಳ್ಳುವುದನ್ನು ಅಮೆರಿಕ ಬಯಸಲಾರದು ಎಂದೂ ಹೇಳಲಾಗುತ್ತದೆ. ಅಧಿಕಾರಕೇಂದ್ರವು ಪೂರ್ವದೆಡೆಗೆ ವಾಲುತ್ತಿರುವಾಗ ಭಾರತವನ್ನು ಸಂಪೂರ್ಣ ಕಡೆಗಣಿಸುವ ತಪ್ಪನ್ನು ಅಮೆರಿಕ ಮಾಡಲಾರದು. ಕಳೆದ 300 ವರ್ಷಗಳಲ್ಲಿ ಇದೇ ಮೊದಲ ಬಾರಿ ಯಾವುದೇ ಐರೋಪ್ಯ ದೇಶವು ಜಗತ್ತಿನ ಅತೀ ದೊಡ್ಡ ಮೂರು ಆರ್ಥಿಕ ಶಕ್ತಿಗಳಲ್ಲಿ ಇಲ್ಲವಾಗಿರುವುದನ್ನು ಗಮನಿಸಬೇಕು.

ಭಾರತದ ಮಹತ್ವ ಇರುವುದು ಅದರ ಆರ್ಥಿಕ ಸಾಮರ್ಥ್ಯದಲ್ಲಿ ಮಾತ್ರವಷ್ಟೇ ಅಲ್ಲ. ಅದು ಹೊಂದಿರುವ ವ್ಯೂಹಾತ್ಮಕ ಭೌಗೋಳಿಕ ಕ್ಷೇತ್ರದಲ್ಲಿಯೂ. ಇಂಡೋ ಪೆಸಿಫಿಕ್ ವಲಯದಲ್ಲಿ ಚೀನಾದ ಪ್ರಭಾವವನ್ನು ತಗ್ಗಿಸಬೇಕಾದರೆ ಅಮೆರಿಕಕ್ಕೆ ಭಾರತದ ಅಗತ್ಯವಿದೆ. ಈಗಿನ ಜಾಗತಿಕ ಚದುರಂಗದ ಹಾಸಿನಲ್ಲಿ ಭಾರತವು ಪಾಲುದಾರನೂ ಆಗಬಲ್ಲುದು, ಸಮರ್ಥ ವೈರಿಯೂ ಆಗಬಲ್ಲುದು.

ಸವಾಲಿರುವುದು ಭಾರತದಲ್ಲೆ

ಈಗ ಚೀನಾದ ಆರ್ಥಿಕತೆಯು ನಿಧಾನಗೊಂಡಿರುವುದರಿಂದ ತಾವು ಭಾರತವನ್ನು ನಿಭಾಯಿಸುವಲ್ಲಿ ಹೆಚ್ಚಿನ ನಿಯಂತ್ರಣ ಹೊಂದಿರುವುದಾಗಿ ಅಮೆರಿಕನ್ನರು ಭಾವಿಸಿದ್ದಾರೆ. ಚೀನಾದ ಕುಸಿಯುತ್ತಿರುವ ಆರ್ಥಿಕತೆಯ ಕಾರಣದಿಂದ ಅಮೆರಿಕಕ್ಕೆ ತನ್ನ ಪ್ರಾಬಲ್ಯ ಉಳಿಸಿಕೊಳ್ಳಲು ಸಾಧ್ಯವಾಗಲಿದೆ ಎಂದವರು ಭಾವಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಮುಂದಿನ ಎರಡು ದಶಕಗಳು ಅತ್ಯಂತ ಮಹತ್ವದ್ದಾಗಿವೆ. ಭಾರತದ ಭವಿಷ್ಯವನ್ನು ನಿರ್ಧರಿಸುವುದು ಅಮೆರಿಕ ಅಥವಾ ಚೀನಾಗಳಲ್ಲ, ಬದಲಾಗಿ ಭಾರತದಲ್ಲೇ ಇದು ನಿರ್ಧರಿಸಲ್ಪಡುವುದು. ಭಾರತವು ತನ್ನ ಆರ್ಥಿಕತೆ ಮತ್ತು ಶಿಕ್ಷಣದಲ್ಲಿ ಭಾರೀ ಸುಧಾರಣೆ ತರಬೇಕಾಗಿದೆ. ಇದು ನಾವು ಸೂಪರ್‌ಪವರ್ ಹಾದಿಯಲ್ಲಿ ಸಾಗುತ್ತೇವೆಯೇ ಅಥವಾ ಜಪಾನ್‌ನಂತೆ ಸ್ಥಗಿತಗೊಳ್ಳುತ್ತೇವೆಯೇ ಎಂಬುದನ್ನು ನಿರ್ಧರಿಸಲಿದೆ. ರಾಜಕೀಯದಲ್ಲಿ ಉಚಿತ ಕೊಡುಗೆಗಳ ಚಾಳಿ ಕೊನೆಗೊಳ್ಳಬೇಕು. ಅದೇರೀತಿ ಶಿಕ್ಷಣದಲ್ಲಿ ಮೆರಿಟ್‌ಗೆ ಹೆಚ್ಚು ಆದ್ಯತೆ ಸಿಗುವಂತಾಗಬೇಕು.

'ಅಮೆರಿಕವು ಭಾರತವನ್ನು ಚೀನಾದ ವಿರುದ್ಧವಾಗಿ ತನ್ನ ಪಾಲುದಾರನಾಗಿರಲು ಬಯಸುತ್ತದೆ. ಆದರೆ ಭಾರತವು ಮತ್ತೊಂದು ಚೀನಾವಾಗಿ ರೂಪುಗೊಳ್ಳುವುದನ್ನು ಬಯಸುವುದಿಲ್ಲ' ಎಂಬುದನ್ನು ಕ್ರಿಸ್ಟೋಫರ್ ಲಾಂಡ್ ಅವರ ಹೇಳಿಕೆಯು ಸ್ಪಷ್ಟಪಡಿಸಿದೆ.

ಭಾರತಕ್ಕೆ ಇಲ್ಲಿನ ಸಂದೇಶ ಸರಳವಾಗಿದೆ ಮತ್ತು ಸ್ಪಷ್ಟವಾಗಿದೆ. ಯಾವುದೇ ಸೂಪರ್‌ಪವರ್ ತನಗೆ ಪ್ರತಿಸ್ಪರ್ಧಿ ಬೆಳೆಯುವುದನ್ನು ಇಷ್ಟಪಡುವುದಿಲ್ಲ. ಭಾರತವು 21ನೇ ಶತಮಾನದ ನಿರ್ಣಾಯಕ ಶಕ್ತಿಯಾಗಿ ಬೆಳೆಯಬೇಕಾಗಿರುವುದು ಜಾಗತಿಕ ಸಹಕಾರಕ್ಕಿಂತಲೂ ಹೆಚ್ಚಾಗಿ ತನ್ನದೇ ಸ್ವಸಾಮರ್ಥ್ಯದಿಂದ !

ಧೈರ್ಯವನ್ನು ಬಿಡುವುದಿಲ್ಲ

ಲೋಕೇऽನಂತಾನಿ ಕಷ್ಟಾನಿ ನೋಜ್ಝೇದ್ ಧೈರ್ಯಂ ತಥಾಪಿ ವಾ।
ಅರಣ್ಯಾನಿ ವಹನ್ ಶೈಲಃ ಸ್ಥಿರತಾಂ ನೈವ ಮುಂಚತಿ॥ -ಸುವಚನ ಶತಕಂ

ಈ ಪ್ರಪಂಚದಲ್ಲಿ ಕೊನೆಯಿಲ್ಲದ ಎಷ್ಟೋ ಕಷ್ಟಗಳಿವೆ. ಆದರೂ ಮನುಷ್ಯನು ಧೈರ್ಯವನ್ನು ಬಿಡಬಾರದು. ಬೆಟ್ಟವು ದೊಡ್ಡ ಅಡವಿಯನ್ನು ಹೊತ್ತಾಗಲೂ ತನ್ನ ಸ್ಥೈರ್ಯವನ್ನು ಬಿಡುವುದಿಲ್ಲ, -ಎಂಬುದು ಶ್ಲೋಕಾರ್ಥ.

ಕಷ್ಟಕ್ಕೆ ಕೊನೆಯೆಂಬುದಿಲ್ಲ. ಜೀವನದುದ್ದಕ್ಕೂ ಅನೇಕ ಬಗೆಯ ಕಷ್ಟಗಳು ಎದುರಾಗುತ್ತವೆ. ಕಷ್ಟಕ್ಕೆ ಅಂಜಿ ಬದುಕುವವನ ಇಷ್ಟಾರ್ಥ ಸಿದ್ಧಿಸುವುದಲ್ಲ. ಕಷ್ಟಕ್ಕೆ ಮುಖಾಮುಖಿಯಾಗಬೇಕೇ ವಿನಾ ಬೆನ್ನು ಹಾಕಬಾರದು. ಕಷ್ಟವನ್ನು ಮೆಟ್ಟಿ ಬದುಕುವುದೇ ನಿಜವಾದ ಬದುಕು.



ಮೂರ್ಖತ್ವವೇ ಕಷ್ಟ. ಯೌವನದಲ್ಲಿ ಬಡತನ ಇನ್ನೊಂದು ಬಗೆಯ ಕಷ್ಟ. ಪರಾನ್ನ, ಪರಗೃಹವಾಸ ಇನ್ನೂ ಕಷ್ಟ. 'ಕಷ್ಟಾ ಖಲು ಆತ್ಮಶಂಕಾ ನಾಮ' ತನಗೆ ತನ್ನ ಮೇಲೆ ವಿಶ್ವಾಸವಿಲ್ಲದಿರುವುದು ನಿಜಕ್ಕೂ ಕಷ್ಟ. ಇನ್ನೊಬ್ಬರ ಅಧೀನದಲ್ಲಿ ಕೆಲಸ ಮಾಡುವುದು ಕಷ್ಟ. ಹೀಗೆ ಹೇಳುತ್ತಾ ಹೋದರೆ ಎಲ್ಲವೂ ಕಷ್ಟವೇ. ಇವೆಲ್ಲವೂ ಕಷ್ಟವನ್ನು ಎದುರಿಸುವ ತಾಕತ್ತಿಲ್ಲದವರಿಗೆ ಮಾತ್ರ. ಉತ್ಸಾಹಿಯಾದ ಮನುಷ್ಯ ದುಸ್ಸಾಧ್ಯವನ್ನೂ ಸಾಧ್ಯವಾಗಿಸಬಲ್ಲ. ಅಂತಹ ಸ್ವ ತಾಕತ್ತನ್ನು ಎಲ್ಲರೂ ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು. ಪ್ರಯತ್ನಶೀಲನಿಗೆ ಅಸಾಧ್ಯವೆಂಬುದಿಲ್ಲ.

ಕಷ್ಟಕ್ಕೆ ಅಂಜುವವನು ಮನುಷ್ಯನಾಗಲು ಯೋಗ್ಯನಲ್ಲ. ವಿಷಮ ಸ್ಥಿತಿಯಲ್ಲಿಯೂ ಕಷ್ಟಕ್ಕಂಜಬಾರದು. ಧೈರ್ಯದಿಂದ ಮುನ್ನುಗ್ಗಿ ಎದುರಿಸಬೇಕು. ಲೋಕದಲ್ಲಿ ಯಾರಿಗೂ ಕೇವಲ ಕಷ್ಟವಾಗಲಿ ಕೇವಲ ಸುಖವಾಗಲಿ ಇಲ್ಲವೇ ಇಲ್ಲ. ಜೀವನವೇ ಕಷ್ಟ-ಸುಖಗಳ ಮಿಶ್ರಣ. ಕಷ್ಟವನ್ನೂ ಸುಖಾಂತಗೊಳಿಸುವವನೇ ಜೀವನದಲ್ಲಿ ಸುಖದ ಕ್ಷಣಗಳನ್ನು ಅನುಭವಿಸಬಲ್ಲ.

ಇದಕ್ಕೆ ಕವಿಯು ಕೊಡುವುದು ಬೆಟ್ಟಗಳ ಉದಾಹರಣೆಯನ್ನು. ಯಾವುದೇ ಬೆಟ್ಟವನ್ನು ನೋಡಿದರೂ ಅಲ್ಲಿ ಸಾಕಷ್ಟು ಕಲ್ಲು ಬಂಡೆಗಳಿವೆ. ಹೆಮ್ಮರಗಳು ಬೆಳೆದು ನಿಂತಿವೆ. ಇವುಗಳನ್ನು ಹೊತ್ತಾಗಲೂ ಬೆಟ್ಟವೆಂದೂ ಮಿಸುಕುವುದಿಲ್ಲ, ವ್ಯಥೆ ಪಡುವುದಿಲ್ಲ, ಧೈರ್ಯದಿಂದ ಅವೆಲ್ಲವನ್ನೂ ಹೊತ್ತುಕೊಳ್ಳುತ್ತದೆ. ಬೇಸರದ ಛಾಯೆಯೇ ಇಲ್ಲ, ಸ್ಥಿರತೆಯನ್ನು ಕಳೆದುಕೊಳ್ಳುವುದಿಲ್ಲ. ನಾವು ಶಾಂತವಾಗಿ ಸುತ್ತಲೂ ಕಣ್ಣಾಡಿಸಿದಾಗ ಇಂತಹ ಹತ್ತಾರು ದೃಷ್ಟಾಂತಗಳು ಸಿಗುತ್ತವೆ. ಘಟನೆಗಳ ಗೋಚರವಾಗುತ್ತವೆ. ಇವುಗಳಿಂದ ಪಾಠ ಕಲಿತವನೇ ಜಾಣ. ಮನುಷ್ಯ ಪ್ರಕೃತಿಯಿಂದ ಪಾಠ ಕಲಿಯಬೇಕು. ಪ್ರಕೃತಿ ಕಲಿಸಿದ ಪಾಠ ಜೀವನೋತ್ಕರ್ಷಕ್ಕೆ ಕಾರಣವಾಗುತ್ತದೆ.

'ಧೈರ್ಯಂ ಸರ್ವತ್ರ ಸಾಧನಮ್' ಎಂಬ ಲೋಕೋಕ್ತಿ ಹುಟ್ಟಿಕೊಂಡಿರುವುದೇ ಈ ಕಾರಣಕ್ಕಾಗಿ. ಬದುಕನ್ನು ಧೈರ್ಯದ ಆಧಾರದಲ್ಲಿ ಕಟ್ಟಿಕೊಳ್ಳಬೇಕು. ಎಂತಹ ಕಠಿಣ ಪರಿಸ್ಥಿತಿಯಲ್ಲೂ ಎದೆಗುಂದಬಾರದು. ವ್ಯಥೆ ಪಡಬಾರದು. ಸಾಧನಾ ಪಥದಲ್ಲಿ ಭಗವಂತನಿತ್ತ ಸವಾಲು ಎಂಬುದಾಗಿ ಸ್ವೀಕರಿಸಿ ಮುಂದುವರಿಯಬೇಕು.

ವಿಜ್ಞಾನ ಮತ್ತು ಧಾರ್ಮಿಕತೆಯ ಸಂಯೋಗ...

▸ ಜಿ. ನಂದಕುಮಾರ್

ಕೃತಕ ಬುದ್ಧಿಮತ್ತೆಯನ್ನು ಭವಿಷ್ಯದ ತಂತ್ರಜ್ಞಾನ ಎಂದು ಈಗ ಪರಿಗಣಿಸಲಾಗುತ್ತದೆ. ಆದರೆ ಚಾಟ್ ಜಿಪಿಟಿಯಂತಹ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಇತ್ತೀಚೆಗೆ ಉಂಟಾಗಿರುವ ಕೆಲವು ಅನೂಹ್ಯ ಬೆಳವಣಿಗೆಗಳು ವೈಜ್ಞಾನಿಕ ಸಮುದಾಯ ಮತ್ತು ನಾಗರಿಕ ಸಮಾಜವನ್ನು ಅಲ್ಲಾಡಿಸಿದೆ. ಕೃತಕ ಬುದ್ಧಿಮತ್ತೆಯನ್ನು ಅನೈತಿಕ ಉದ್ದೇಶಗಳಿಗಾಗಿ ಬಳಸಬಹುದೇ, ಅದು ಮಾನವ ಬುದ್ಧಿಮತ್ತೆಗೇ ಅಂತ್ಯ ಹಾಡಬಹುದೇ ಎಂಬ ಪ್ರಶ್ನೆಗಳು ಉದಿಸಲಾರಂಭಿಸಿವೆ. ಈ ಪ್ರಶ್ನೆಗಳೆಲ್ಲ ನಮ್ಮ ವಿಜ್ಞಾನ ಸಮುದಾಯದ ಪರಿಗಣನೆಗೆ ಬರಬೇಕಾದ ವಿಷಯಗಳು ಹಾಗೂ ಅವರು ಇದಕ್ಕೆ ಸ್ಪಷ್ಟ ಉತ್ತರ ಕಂಡುಕೊಳ್ಳಬೇಕಾಗಿದೆ. ಇವೆಲ್ಲದರ ಹೊರತಾಗಿಯೂ ನನ್ನಂತಹ ಸಾಮಾನ್ಯ ಜನರು, ಮುಂದೊಂದು ದಿನ ಕೃತಕ ಬುದ್ಧಿಮತ್ತೆಯು ಮಾನವ ಬುದ್ಧಿಮತ್ತೆಯನ್ನು ಮೀರಿ ಬೆಳೆಯಬಹುದೆಂಬ ಆತಂಕಕ್ಕೆ ಒಳಗಾಗಿರುವುದು ಸುಳ್ಳಲ್ಲ.

ಈವರೆಗೆ ಕೃತಕ ಬುದ್ಧಿಮತ್ತೆಯು ಮನುಷ್ಯನ ಬುದ್ಧಿವಂತಿಕೆಯ ಇನ್ನೊಂದು ಸ್ತರದ ಅಭಿವೃದ್ಧಿಯೆಂದು ಭಾವಿಸಲಾಗಿತ್ತು. ವಿಜ್ಞಾನ, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಮನುಕುಲವು ಈಗ ತನ್ನ ಜೈವಿಕ ಮಿತಿಯನ್ನು ಮೀರಿ ಜೀವನಿಯಮವನ್ನೇ ಬದಲಿಸಲು ಹಾಗೂ ಆ ಮೂಲಕ 'ಕೃತಕ ಜೀವಿ'ಗಳನ್ನು ಸೃಷ್ಟಿಸಲು ಯತ್ನಿಸುತ್ತಿದೆ. ಮಾನವ ಬುದ್ಧಿಮತ್ತೆಯು ನಶಿಸಿಹೋದ ಭವಿಷ್ಯದ ಜಗತ್ತೊಂದನ್ನು ಕಲ್ಪಿಸಿಕೊಳ್ಳುವುದೆಂದರೆ ಅದು ಒಂದು ರೀತಿಯಲ್ಲಿ ಮನುಕುಲದ ವಿನಾಶದಂತೆಯೂ ಕಂಡುಬರುತ್ತದೆ. ಕೃತಕ ಬುದ್ಧಿಮತ್ತೆಯು ಅಧಿಕ ಶಕ್ತಿಯ ಯಂತ್ರಮಾನವರನ್ನು ಅಥವಾ ಡೇಟಾ ಪ್ರೊಸೆಸರ್‌ಗಳನ್ನು ಸೃಷ್ಟಿಸಿ ಮನುಷ್ಯರನ್ನೇ ಮೀರಿ ಸಾಗಬಹುದು.

ಈ ಯುಗದಲ್ಲೇ ನಾವು ತಂತ್ರಜ್ಞಾನವು ನಮ್ಮನ್ನು ಶೋಷಿಸಲು ಅವಕಾಶ ಮಾಡಿಕೊಟ್ಟಿದ್ದೇವೆ. ನಮ್ಮ ಆರೋಗ್ಯ, ಸಂಪತ್ತು ಮತ್ತು ದೈನಂದಿನ ವ್ಯವಹಾರದ ಕುರಿತಂತೆ ಈ ಮೊದಲು ವೈದ್ಯರು, ಆರ್ಥಿಕ ತಜ್ಞರು, ಸೇವಾ ಕ್ಷೇತ್ರದವರು ನಿರ್ಧಾರ ತೆಗೆದುಕೊಳ್ಳುತ್ತಿದ್ದರೆ ಈಗ ಅವೆಲ್ಲವನ್ನು ಆ್ಯಲ್ಗರಿದಮ್‌ಗಳು ನಿರ್ಧರಿಸುತ್ತವೆ. ಕೃತಕ ಬುದ್ಧಿಮತ್ತೆ ಆಧರಿತ ಆಲ್ಗರಿದಮ್‌ಗಳು ಮನುಷ್ಯನ ಪ್ರಗತಿಗೆ ಬಹಳಷ್ಟು ಕೊಡುಗೆ ನೀಡುತ್ತವಾದರೂ ಅವುಗಳ ವರ್ತನೆಯ ಅಶ್ಚಿತತೆಯು ಬೆದರಿಕೆಯನ್ನೂ ಒಡ್ಡಿರುವುದು ಸುಳ್ಳಲ್ಲ. ಡಾ. ಫ್ರಾಂಕ್‌ಸ್ಟೈನ್‌ನ ಕಲ್ಪನೆಯು ಈಗ ಕೇವಲ ಫ್ಯಾಂಟಸಿಯಾಗಿ ಉಳಿದಿಲ್ಲ. 'ಡೇಟಾಯಿಸಂ' ಅಥವಾ 'ಡೇಟಾ ರಿಲಿಜನ್' ರೂಪು ಪಡೆಯುವುದರೊಂದಿಗೆ ಇದು ಅಪಾಯದ ಹಾದಿ ತುಳಿದಿದೆ.

ಡೇಟಾ ರಿಲಿಜನ್ ಜೀವಿಗಳನ್ನು ಕೂಡಾ ಬಯೋಕೆಮಿಕಲ್ ಆಲ್ಗರಿದಮ್‌ನಂತೆಯೆ ಪರಿಗಣಿಸುತ್ತದೆ. ತಜ್ಞನೊಬ್ಬ ಹೇಳುವ ಪ್ರಕಾರ 'ಡೇಟಾಯಿಸಂ ಪ್ರಾಣಿಗಳು ಮತ್ತು ಯಂತ್ರಗಳ ನಡುವಿನ ಭೇದವನ್ನು ಅಳಿಸಿಹಾಕುತ್ತದೆ. ಅಂತಿಮವಾಗಿ ಅದು ಬಯೋಕೆಮಿಕಲ್ ಆಲ್ಗರಿದಮ್‌ಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕೆಂದು ನಿರೀಕ್ಷಿಸುತ್ತದೆ'' ಡೇಟಾಯಿಸಂ ಎಂಬುದು ಮಾನವ ಜನಾಂಗದ ಅಸ್ತಿತ್ವವನ್ನೆ ನಾಶಗೊಳಿಸುವ ಬೆದರಿಕೆಯಂತೆ ಕಂಡುಬರುತ್ತದೆ. ಮಾನವ ಬುದ್ಧಿಮತ್ತೆಯ ಜಾಗದಲ್ಲಿ ಕೃತಕ ಬುದ್ಧಿಮತ್ತೆಯನ್ನು ನೆಲೆಗೊಳಿಸಬೇಕೆಂದು ಬಯಸುತ್ತದೆ. ಮಾನವ ಕೇಂದ್ರಿತ ಜಗತ್ತು ಡೇಟಾ ಕೇಂದ್ರಿತ ಜಗತ್ತಾಗಿ ಪರಿವರ್ತನೆಗೊಂಡಾಗ ಎಲ್ಲ ಡೇಟಾಗಳ ಸಂಸ್ಕರಣೆ ಮತ್ತು ನಿರ್ಧಾರ ತಾಳುವ ಪ್ರಕ್ರಿಯೆನ್ನು ಒಂದು ಕೇಂದ್ರೀಯ ಪ್ರೊಸೆಸರ್ ನಡೆಸುತ್ತದೆ. ಇಂತಹ ನರಕಸ್ವರೂಪಿ ವ್ಯವಸ್ಥೆಯು ಒಂದು ರೀತಿಯಲ್ಲಿ ಕಮ್ಯುನಿಸ್ಟ್ ವ್ಯವಸ್ಥೆಯೇ ಆಗಿದೆ ಎಂದು ತಜ್ಞರು ಹೇಳುತ್ತಾರೆ.


ಇಂತಹ ಸ್ವ-ವಿನಾಶಿ ಪರಿಸ್ಥಿತಿಯಿಂದ ಹೇಗೆ ಪಾರಾಗುವುದು ಎಂಬುದನ್ನು ಚಿಂತಿಸುವುದು ತಂತ್ರಜ್ಞರು ಮತ್ತು ವಿಜ್ಞಾನಿಗಳ ಕಾರ್ಯವಾದರೂ ಇಂತಹುದೊಂದು ವಕ್ರಹಾದಿ ತುಳಿಯಲು ಕಾರಣವೇನು ಎಂಬುದನ್ನು ತಿಳಿಯುವುದು ನಮ್ಮ ಕರ್ತವ್ಯವಾಗಿದೆ.

ನಿಜವಾದ ಸಮಸ್ಯೆಯಿರುವುದು ಮನುಷ್ಯನ ಜ್ಞಾನವನ್ನು ವಿಭಾಗೀಕರಣಗೊಳಿಸಿರುವುದರಲ್ಲಿ ಹಾಗೂ ಮಾನವನ ಧಾರ್ಮಿಕ ಆಯಾಮವನ್ನು ಕಡೆಗಣಿಸಿ ಆತನನ್ನು ಕೇವಲ ಬಯೋಕೆಮಿಕಲ್ ವಸ್ತು ಎಂಬಂತೆ ಪರಿಗಣಿಸಿರುವಲ್ಲಿ. ಕೃತಕ ಬುದ್ಧಿಮತ್ತೆಯು ಮನುಷ್ಯನ ಬುದ್ಧಿಮತ್ತೆಗೆ ಸವಾಲೊಡ್ಡುವಂತೆ ಬೆಳೆದರೆ, ಅದಕ್ಕೆ ಹಿಂದೂ ಚಿಂತನೆಯ ಪ್ರಕಾರ ಪರಿಹಾರ ಮಾರ್ಗವೆಂದರೆ ಉನ್ನತ ಮಾನಸಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು. ಈ ನಿಟ್ಟಿನಲ್ಲಿ ಪುರಾತನ ಹಿಂದು ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಮೇಳೈಸಿದ ಶ್ರೀ ಅರವಿಂದರ ಚಿಂತನೆ ನೆರವಿಗೆ ಬರಬಲ್ಲುದು. ಇದು ಒಂದು ರೀತಿಯಲ್ಲಿ ವಿಕಾಸವಾದಿ ಧಾರ್ಮಿಕತೆ ಎಂದು ಹೇಳಬಹುದು.

ಅರವಿಂದರು ಪ್ರಜ್ಞಾವಂತಿಕೆಯನ್ನು ಕೇವಲ ಬುದ್ಧಿವಂತಿಕೆಗೆ ಸೀಮಿತಗೊಳಿಸುವುದಿಲ್ಲ. ಮನಸ್ಸೆಂಬುದು ಪ್ರಜ್ಞೆಯೆಂದು ಕರೆಯಲ್ಪಡುವ ಬಹುಸ್ತರದ ವಾಸ್ತವತೆಯ ಒಂದು ಸ್ತರ ಮಾತ್ರ ಎನ್ನುತ್ತಾರವರು. ''ಪ್ರಸಕ್ತ ಮನುಕುಲವು ವಿಕಾಸವಾದಿ ಬಿಕ್ಕಟ್ಟು ಎದುರಿಸುತ್ತಿದೆ. ಮಾನವನು ಎಂತಹ ನಾಗರಿಕತೆ ವ್ಯವಸ್ಥೆಯನ್ನು ಸ್ಥಾಪಿಸಿದ್ದಾನೆಂದರೆ ಅದು ಆತನ ಸೀಮಿತ ಮಾನಸಿಕ ಸಾಮರ್ಥ್ಯಕ್ಕೆ ಮತ್ತು ಅರಿವಿಗೆ ಎಟುಕದ್ದಾಗಿದೆ. ಆತನ ಧಾರ್ಮಿಕ ಮತ್ತು ನೈತಿಕ ತಿಳಿವಿಗೂ ಸಿಲುಕದ್ದಾಗಿದೆ'' ಎನ್ನುತ್ತಾರವರು.

ಕೃತಕ ಬುದ್ಧಿಮತ್ತೆ ಮನುಷ್ಯನ ಮೇಲೆಯೆ ನಿಯಂತ್ರಣ ಸಾಧಿಸುವುದನ್ನು ತಡೆಯಲು ಇರುವ ಸಾಧನೀಯ ದಾರಿಯೆಂದರೆ ನಮ್ಮ ಮಾನವ ಬುದ್ಧಿಶಕ್ತಿಯನ್ನೆ ಇನ್ನೊಂದು ಸ್ತರ ಮೇಲಕ್ಕೆ ಕೊಂಡೊಯ್ಯುವುದು ಹಾಗೂ ಸುಪರ್‌ಮೈಂಡ್‌ನ ಅಪರಿಮಿತ ಶಕ್ತಿಯ ಸಾಧ್ಯತೆಗಳನ್ನು ಪರಿಶೀಲಿಸುವುದು. ಇದರ ಸರಳ ಅರ್ಥವೆಂದರೆ ನಮ್ಮ ಮನಸ್ಸನ್ನು ಮತ್ತು ಬುದ್ಧಿಮತ್ತೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು ಹಾಗೂ ಅದನ್ನು ಯಂತ್ರದ ಬುದ್ಧಿಮತ್ತೆಗಿಂತ ಹೆಚ್ಚು ಶಕ್ತಿಶಾಲಿ ಮತ್ತು ವಿಶಾಲವನ್ನಾಗಿಸುವುದು.

ಅರವಿಂದರು ಹೇಳುವ ಪ್ರಕಾರ ಸುಪರ್‌ಮೈಂಡ್ ಎನ್ನುವುದು ಎಲ್ಲದರ ಬಗ್ಗೆಯೂ ಸಂಪೂರ್ಣ ಅರಿವಿರುವ ಪರಿಪೂರ್ಣ ಹಾಗೂ ಸಮಗ್ರ ಜ್ಞಾನ. ಮನುಷ್ಯ ತನ್ನ ಈಗಿನ ಸೀಮಿತ ಬುದ್ಧಿಮತ್ತೆಯಿಂದ ಈ ಹಂತಕ್ಕೆ ಮೇಲೇರಲು ಸಾಧ್ಯವಿದೆ. ಪ್ರಜ್ಞಾವಂತಿಕೆಯನ್ನು ಬೆಳೆಸುವ ಮೂಲಕ ಹಾಗೂ ಬದುಕಿನಲ್ಲಿ ಧಾರ್ಮಿಕ ಪ್ರಗತಿ ಸಾಧಿಸುವ ಮೂಲಕ ಮಾನವ ಬುದ್ಧಿವಂತಿಕೆಯ ಸದುಪಯೋಗ ಪಡೆದುಕೊಳ್ಳಬಹುದು. ಇದು ಕೃತಕ ಬುದ್ಧಿಮತ್ತೆಯು ಒಡ್ಡುವ ಸವಾಲುಗಳನ್ನು ಮತ್ತು ಅಪಾಯಗಳನ್ನು ಎದುರಿಸಲು ನಮಗೆ ನೆರವೀಯಬಲ್ಲುದು.



ಜಾಗತಿಕ ಇಂಧನ ಸಂಕಷ್ಟ ಭೀತಿ

ಜಾಗತಿಕ ಆರ್ಥಿಕತೆಗೆ ಹೊಡೆತ

ಈ ಯುದ್ಧದಿಂದ ಇಂಧನ ಮತ್ತು ರಸಗೊಬ್ಬರ ಬೆಲೆ ಏರಿಕೆ ಕಂಡುಬರುತ್ತಿದ್ದು, ಬಡ ರಾಷ್ಟ್ರಗಳಲ್ಲಿ ಆಹಾರ ಕೊರತೆ ಉಂಟಾಗುವ ಆತಂಕ ವ್ಯಕ್ತವಾಗಿದೆ. ಜಾಗತಿಕ ಆರ್ಥಿಕತೆಗೂ ಇದರ ಪರಿಣಾಮ ಬೀರುವ ಸಾಧ್ಯತೆ ಇದೆ.

ಮಧ್ಯಪ್ರಾಚ್ಯ ಯುದ್ಧ ತೀವ್ರ: ಹಾರ್ಮುಜ್ ಸಾಗರದ ಮಾರ್ಗ ತಡೆ

ಯುದ್ಧ ನೌಕೆಗಳನ್ನು ಕಳುಹಿಸಲು ಒಗೊಡದ ಮಿತ್ರದೇಶಗಳು

ಬೈರೂತ್: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ತೀವ್ರಗೊಳ್ಳುತ್ತಿರುವ ಹಿನ್ನೆಲೆ ಜಾಗತಿಕ ಇಂಧನ ಸಂಕಷ್ಟದ ಭೀತಿ ಹೆಚ್ಚಾಗಿದೆ. ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ಬಳಿಕ ಇರಾನ್ ಪ್ರತಿ ದಾಳಿ ನಡೆಸುತ್ತಿದ್ದು, ಪ್ರಮುಖ ಸಾಗಣೆ ಮಾರ್ಗವಾದ ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆ ಸ್ಥಗಿತಗೊಂಡಿದೆ. ಈ ಮಾರ್ಗದ ಮೂಲಕ ವಿಶ್ವದ ಸುಮಾರು ಐದನೇ ಭಾಗದ ತೈಲ ಸಾಗಣೆ ನಡೆಯುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಕಂಡುಬಂದಿದೆ.

ಏತನ್ಮಧ್ಯೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾರ್ಮುಜ್ ಮಾರ್ಗವನ್ನು ಸುರಕ್ಷಿತಗೊಳಿಸಲು ಹಲವು ದೇಶಗಳಿಗೆ ಯುದ್ಧ ನೌಕೆಗಳನ್ನು ಕಳುಹಿಸುವಂತೆ ಮನವಿ ಮಾಡಿದ್ದಾರೆ. ಆದರೆ ಇದುವರೆಗೆ ಯಾವುದೇ ದೇಶ ಸ್ಪಷ್ಟವಾಗಿ ಒಪ್ಪಿಗೆ ನೀಡಿಲ್ಲ. ಇದೇ ವೇಳೆ ಸಹಾಯ ಮಾಡದ ದೇಶಗಳನ್ನು ನಾವು ನೆನಪಿಟ್ಟುಕೊಳ್ಳುತ್ತೇವೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇನ್ನೊಂದೆಡೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಯುದ್ಧ ವಿರಾಮ ಅಥವಾ ಮಾತುಕತೆ ಸಾಧ್ಯತೆಗಳ ಕುರಿತು ಹೊರಬರುತ್ತಿರುವ ವರದಿಗಳನ್ನು ತಳ್ಳಿಹಾಕಿದ್ದಾರೆ.

ಇರಾನ್ ದಾಳಿಗಳ ಭೀತಿಯಿಂದ ಹಾರ್ಮುಜ್ ಜಲಸಂಧಿಯಲ್ಲಿ ವ್ಯಾಪಾರ ಹಡಗುಗಳ ಸಂಚಾರ ಬಹುತೇಕ ನಿಂತಿದೆ. ಈ ಮಾರ್ಗದ ಮೂಲಕ ವಿಶ್ವದ ಸುಮಾರು 20% ತೈಲ ಸಾಗಣೆ ನಡೆಯುತ್ತದೆ.

ಈ ಪರಿಸ್ಥಿತಿಯಿಂದ ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 100 ಡಾಲರ್ ಮೀರಿದ್ದು, ಸೋಮವಾರ ಆರಂಭಿಕ ವಹಿವಾಟಿನಲ್ಲಿ 104 ಡಾಲರ್‌ಗೆ ಏರಿಕೆಯಾಗಿದೆ. ಫೆಬ್ರವರಿ 28ರಿಂದ ಇದು ಸುಮಾರು 45% ಏರಿಕೆಯಾಗಿದೆ.

ಚಬಹಾರ್ ಸಮೀಪದ ಮಿಲಿಟರಿ ನೆಲೆಗಳ ಮೇಲೆ ಅಮೆರಿಕ ದಾಳಿ

ಇರಾನ್‌ನ ಮ್ಯೂಹಾತ್ಮಕ ಚಬಹಾರ್ ಮುಕ್ತ ವ್ಯಾಪಾರ-ಕೈಗಾರಿಕಾ ವಲಯದ(ಸಿಎಫ್ ಝೆಡ್) ಸಮೀಪವಿರುವ ಮಿಲಿಟರಿ ನೆಲೆಗಳ ಮೇಲೆ ಅಮೆರಿಕದ ಫೈಟರ್ ಜೆಟ್‌ಗಳು ದಾಳಿ ನಡೆಸಿವೆ ಎಂದು ವರದಿಯಾಗಿದೆ. ಸಂಘರ್ಷ ಮೂರನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಸಿಸ್ತಾನ್ ಮತ್ತು ಬಲೂಚಿಸ್ತಾನ್ ಪ್ರಾಂತ್ಯದ ಈ ವ್ಯಾಪಾರ ಕೇಂದ್ರದ ಹಿಂಭಾಗದಲ್ಲಿ ಭೀಕರ ಸ್ಫೋಟದ ಶಬ್ದ ಕೇಳಿಬಂದಿದೆ, ಎಂದು ವಾಯ್ಸ್ ಆಫ್ ಅಮೇರಿಕಾ ವರದಿ ಮಾಡಿದೆ.

ಮಧ್ಯ ಏಷ್ಯಾವನ್ನು ಹಿಂದೂ ಮಹಾಸಾಗರಕ್ಕೆ ಸಂಪರ್ಕಿಸುವ ಅತ್ಯಂತ ಪ್ರಮುಖ ತೆರಿಗೆ ಮುಕ್ತ ಕೇಂದ್ರದ ಸಮೀಪವಿರುವ ಪ್ರದೇಶಗಳನ್ನು ಈ ದಾಳಿಯಲ್ಲಿ ಗುರಿಪಡಿಸಲಾಗಿದೆ. ಹಾರ್ಮುಜ್ ಜಲಸಂಧಿಯನ್ನು ಬಳಸದೆಯೇ ನೇರ ಸಮುದ್ರ ಮಾರ್ಗವನ್ನು ಒದಗಿಸುವ ಈ ವಲಯ ಇರಾನ್‌ಗೆ ಅತ್ಯಂತ ನಿರ್ಣಾಯಕ. ಒಂದು ವೇಳೆ ಗಲ್ಫ್ ಹಡಗು ಸಂಚಾರಕ್ಕೆ ಇರಾನ್ ಅಡ್ಡಿಪಡಿಸುವುದನ್ನು ಮುಂದುವರಿಸಿದರೆ, ಈ ದಾಳಿಗಳನ್ನು ಇಂಧನ ಮೂಲಸೌಕರ್ಯಗಳಿಗೂ ವಿಸ್ತರಿಸಲಾಗುವುದು, ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

550ಕ್ಕೂ ಹೆಚ್ಚು ಪ್ರಯಾಣಿಕರ ಸ್ಥಳಾಂತರ

ಹೊಸದಿಲ್ಲಿ: ಭಾರತವು ತನ್ನ 550ಕ್ಕೂ ಹೆಚ್ಚು ಪ್ರಜೆಗಳನ್ನು ಇರಾನ್‌ನಿಂದ ಅರ್ಮೇನಿಯಾದ ಮೂಲಕ ಸ್ಥಳಾಂತರಿಸಿದೆ. ಇದಕ್ಕೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅರ್ಮೇನಿಯಾಗೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಧನ್ಯವಾದ ಹೇಳಿದ್ದಾರೆ.

ಸುಮಾರು 9,000 ಭಾರತೀಯರು ಇರಾನ್‌ನಲ್ಲಿ ನೆಲೆಸಿದ್ದಾರೆ. ಅಜರ್ ಬೈಜಾನ್ ಮತ್ತು ಅರ್ಮೇನಿಯಾಗೆ ಪ್ರಯಾಣಿಸಲು ಬಯಸುವವರಿಗೆ ಭಾರತ ಸರ್ಕಾರವು ಸಹಾಯ ಮಾಡುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.



ಇರಾನ್ ತೈಲ ಕೇಂದ್ರದ ವಶಕ್ಕೆ ಅಮೆರಿಕ ಚಿಂತನೆ



ವಾಷಿಂಗ್ಟನ್: ಟೆಹ್ರಾನ್‌ನ ಕಡಲ ದಿಗ್ಬಂಧನವನ್ನು ಭೇದಿಸಿ ಉಲ್ಬಣಗೊಳ್ಳುತ್ತಿರುವ ಜಾಗತಿಕ ಇಂಧನ ಬಿಕ್ಕಟ್ಟನ್ನು ಪರಿಹರಿಸಲು ಖಾರ್ಗ್ ದ್ವೀಪದ ಮೇಲೆ ಮಿಲಿಟರಿ ಹಸ್ತಕ್ಷೇಪ ಮಾಡುವ ಬಗ್ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರಿಶೀಲಿಸುತ್ತಿದ್ದಾರೆ ಎನ್ನಲಾಗಿದೆ. ಪರ್ಷಿಯನ್ ಕೊಲ್ಲಿಯಲ್ಲಿ ತೈಲ ಟ್ಯಾಂಕರ್‌ಗಳ ಸಂಚಾರ ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಇರಾನ್‌ನ ಪ್ರಮುಖ ತೈಲ ರಫ್ತು ಕೇಂದ್ರವನ್ನು ವಶಪಡಿಸಿಕೊಳ್ಳುವ ಸಾಧ್ಯತೆಯಿದೆ, ಎಂದು ಮೂಲಗಳು ತಿಳಿಸಿವೆ. ಟ್ರಂಪ್, ಅತ್ಯಮೂಲ್ಯ ರತ್ನ ಎಂದೇ ವ್ಯಾಖ್ಯಾನಿಸುವ ಖಾರ್ಗ್ ದ್ವೀಪವನ್ನು ಅಮೆರಿಕದ ಅಧಿಕಾರಿಗಳು ನಿರ್ಣಾಯಕ ಗುರಿಯೆಂದು ಪರಿಗಣಿಸಿದ್ದಾರೆ. ಈ ಸೌಲಭ್ಯದ ಮೇಲಿನ ನಿಯಂತ್ರಣ ಸಾಧಿಸಿ, ಇರಾನ್ ಆಡಳಿತದ ಆರ್ಥಿಕ ಮೂಲವನ್ನೇ ಕಡಿತಗೊಳಿಸುವ ಯೋಜನೆ ಅವರದ್ದು ಎಂದು ನಂಬಲಾಗಿದೆ.


ದ್ವೀಪದ ಮೇಲಿರುವ ಮಿಲಿಟರಿ ನೆಲೆಗಳ ಮೇಲೆ ಈಗಾಗಲೇ ದಾಳಿ ನಡೆಸಲು ಆದೇಶಿಸಲಾಗಿದ್ದರೂ, ಭೂಸೇನೆಯನ್ನು ನಿಯೋಜಿಸುವುದು ಹೆಚ್ಚಿನ ಅಪಾಯದ ಕ್ರಮವೆಂದು ಪರಿಗಣಿಸಲಾಗಿದೆ. ನೆರೆಯ ಕೊಲ್ಲಿ ರಾಷ್ಟ್ರಗಳ ತೈಲ ಮೂಲಸೌಕರ್ಯಗಳ ಮೇಲೆ ಪ್ರತೀಕಾರದ ದಾಳಿಗಳು ನಡೆಯಬಹುದು ಎಂಬ ಆತಂಕ ವ್ಯಕ್ತವಾಗಿದೆ. ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಪ್ರಮುಖ ಮಿತ್ರರಾಷ್ಟ್ರವಾದ ಇಸ್ರೇಲ್, ಇರಾನ್‌ನಲ್ಲಿ ಸದ್ಯಕ್ಕೆ ನೇರ ಭೂಸೇನಾ ಕಾರ್ಯಾಚರಣೆಗೆ ಇಳಿಯಲು ಒಲವು ಹೊಂದಿಲ್ಲ ಎನ್ನಲಾಗಿದೆ.

ದುಬೈ ವಿಮಾನ ನಿಲ್ದಾಣದ ಮೇಲೆ ಡ್ರೋನ್ ದಾಳಿ

ಸೋಮವಾರ ಬೆಳಗ್ಗೆ ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ಇಂಧನ ಟ್ಯಾಂಕ್ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ ಪರಿಣಾಮ ಭಾರೀ ಬೆಂಕಿ ಕಾಣಿಸಿಕೊಂಡಿದೆ. ಕೆಲ ಗಂಟೆಗಳ ಕಾಲ ವಿಮಾನ ಸಂಚಾರ ಸ್ಥಗಿತಗೊಂಡು ಬಳಿಕ ಪುನರಾರಂಭವಾಯಿತು. ಯಾವುದೇ ಗಾಯಗಳ ವರದಿ ಇಲ್ಲ. ಇದಕ್ಕೂ ಮುನ್ನ ಅಬುಧಾಬಿಯಲ್ಲಿ ಇರಾನ್ ಕ್ಷಿಪಣಿ ದಾಳಿಯಿಂದ ಒಂದು ವಾಹನಕ್ಕೆ ಹಾನಿಯಾದ ಪರಿಣಾಮ ಒಬ್ಬರು ಮೃತಪಟ್ಟಿದ್ದಾರೆ. ಫುಜೈರಾ ಪ್ರದೇಶದ ತೈಲ ಘಟಕದಲ್ಲೂ ಡ್ರೋನ್ ದಾಳಿಯಿಂದ ಬೆಂಕಿ ಕಾಣಿಸಿಕೊಂಡಿದೆ.

ಬೈರೂತ್, ಟೆಹ್ರಾನ್ ಮೇಲೆ ಇಸ್ರೇಲ್ ದಾಳಿ

ಇಸ್ರೇಲ್ ಸೇನೆ ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿ ಹೆಜ್ಬೊಲ್ಲಾ ಸಂಘಟನೆಯ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಹೊಸ ದಾಳಿಗಳನ್ನು ನಡೆಸಿದೆ. ಈ ದಾಳಿಯಿಂದ ದಕ್ಷಿಣ ಲೆಬನಾನ್‌ನಲ್ಲಿ ಕನಿಷ್ಠ ಏಳು ಮಂದಿ ಮೃತಪಟ್ಟಿದ್ದಾರೆ. ಇದುವರೆಗೆ ಲೆಬನಾನ್‌ನಲ್ಲಿ 850ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸುಮಾರು 8 ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ. ಟೆಹ್ರಾನ್ ಮೇಲೂ ಇಸ್ರೇಲ್ ಹೊಸ ದಾಳಿಗಳನ್ನು ನಡೆಸಿದ್ದು, ಹಲವು ಸ್ಫೋಟಗಳ ಶಬ್ದಗಳು ಕೇಳಿಬಂದಿವೆ. ಇತ್ತೀಚಿನ ಯುದ್ಧದಲ್ಲಿ ಇರಾನ್‌ನಲ್ಲಿ 1300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.





ಭಾರತೀಯರಿಗೆ ಸಲಹೆ

ಪ್ರಸ್ತುತ ಇರಾನ್‌ನಲ್ಲಿರುವ ತನ್ನ ನಾಗರಿಕರು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಪೂರ್ವಭಾವಿ ಮತ್ತು ಸ್ಪಷ್ಟ ಮಾಹಿತಿ ಇಲ್ಲದೆ ಯಾವುದೇ ಭೂ ಗಡಿ ದಾಟಲು ಪ್ರಯತ್ನಿಸಬೇಡಿ ಎಂದು ಭಾರತವು ಸೋಮವಾರ ಮತ್ತೊಂದು ಸಲಹೆ ನೀಡಿದೆ. ಇರಾನ್‌ಗೆ ಮಾರ್ಗದರ್ಶನವಿಲ್ಲದೆ ಭೂ ಗಡಿಗಳ ಮೂಲಕ ಹೊರಡಲು ಪ್ರಯತ್ನಿಸುವ ಭಾರತೀಯ ಪ್ರಜೆಗಳು ಗಂಭೀರ ಸಾರಿಗೆ ಮತ್ತು ವಲಸೆ ತೊಂದರೆಗಳನ್ನು ಎದುರಿಸುವ ಸಾಧ್ಯತೆಯಿದೆ ಎಂದು ರಾಯಭಾರ ಕಚೇರಿಯು ಹೇಳಿದೆ.

4,300ಕ್ಕೂ ಹೆಚ್ಚು ವಿಮಾನಗಳು ರದ್ದು

ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಭಾರತೀಯ ವಿಮಾನಯಾನ ಸಂಸ್ಥೆಗಳು ಈವರೆಗೆ 4,335 ವಿಮಾನಗಳನ್ನು ಮತ್ತು ವಿದೇಶಿ ವಿಮಾನಯಾನ ಸಂಸ್ಥೆಗಳು 1,187 ವಿಮಾನಗಳನ್ನು ರದ್ದುಗೊಳಿಸಿವೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್ ನಾಯ್ಡು ಸೋಮವಾರ ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ. ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ವಾಯುಪ್ರದೇಶದ ಮುಚ್ಚುವಿಕೆಯಿಂದಾಗಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ಒಳಗೊಂಡ ಉಲ್ಬಣಗೊಳ್ಳುತ್ತಿರುವ ಸಂಘರ್ಷವು ವಿಮಾನ ಕಾರ್ಯಾಚರಣೆಯನ್ನು ಗಮನಾರ್ಹವಾಗಿ ಅಡ್ಡಿಪಡಿಸಿದೆ. ಪ್ರಶ್ನೋತ್ತರದ ಸಮಯದಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ನಾಯ್ಡು, ವಿಮಾನಯಾನ ಕಾರ್ಯಾಚರಣೆಗಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಪ್ರತಿಪಾದಿಸಿದರು.

ಮೋದಿ ಇಸ್ರೇಲ್ ಭೇಟಿಗೂ ಸಮರಕ್ಕೂ ಸಂಬಂಧವಿಲ್ಲ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಇಸ್ರೇಲ್ ಭೇಟಿ ಮುಗಿಸಿ ಭಾರತಕ್ಕೆ ಮರಳಿದ 2 ದಿನ ನಂತರ ಇರಾನ್ ವಿರುದ್ಧ ಮಿಲಿಟರಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ. ಪ್ರಧಾನಿ ಮೋದಿ ಪ್ರವಾಸವನ್ನು ದಾಳಿ ಕಾರ್ಯಾಚರಣೆ ಜತೆ ತಳುಕು ಹಾಕುವುದು ತಪ್ಪು ಎಂದು ಇಸ್ರೇಲ್‌ನ ಭಾರತ ರಾಯಭಾರಿ ರುವೆನ್ ಅಝುರ್ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಧಾನಿ ಮೋದಿ ಭೇಟಿಗೆ ಮುನ್ನ ವಲಯದಲ್ಲಿ ಸನ್ನಿವೇಶ ಅತ್ಯಂತ ಪ್ರಕ್ಷುಬ್ಧವಾಗಿತ್ತು. ಪ್ರಧಾನಿ ಮೋದಿ ಇಸ್ರೇಲ್‌ನಿಂದ ನಿರ್ಗಮಿಸಿದ ಬಳಿಕವೇ ಇರಾನ್ ವಿರುದ್ಧ ಮಿಲಿಟರಿ ಕಾರ್ಯಾಚರಣೆಗಳ ಶುರು ಮಾಡಲಾಗಿತ್ತು. ಪ್ರಧಾನಿ ಮೋದಿ ಇಸ್ರೇಲ್‌ನಿಂದ ನಿರ್ಗಮಿಸಿದ ಎರಡು ದಿನಗಳ ತರುವಾಯ, ಕಾರ್ಯಾಚರಣೆ ನಿರ್ಧಾರವನ್ನು ಇಸ್ರೇಲ್ ಸಂಪುಟವು ಕೈಗೊಂಡಿತು. ಈ ಹಿನ್ನೆಲೆಯಲ್ಲಿ ಮೋದಿಯವರ ಇಸ್ರೇಲ್ ಪ್ರವಾಸವನ್ನು ಮಿಲಿಟರಿ ಕಾರ್ಯಾಚರಣೆಯೊಂದಿಗೆ ಜೋಡಿಸುವುದು ಸರಿಯಲ್ಲವೆಂದು ಅಝುರ್ ಪುನರುಚ್ಚರಿಸಿದ್ದಾರೆ.

ಕಳೆದ 9ವರ್ಷಗಳಲ್ಲಿ ದ್ವಿತೀಯ ಬಾರಿ ಫೆ.25ರಂದು ಪ್ರಧಾನಿ ಮೋದಿ ಇಸ್ರೇಲ್‌ಗೆ ಭೇಟಿ ನೀಡಿದ್ದರು. ಅಧ್ಯಕ್ಷ ಬೆಂಜಮಿನ್ ನೆತನ್ಯಾಹು ಜತೆ ಮಾತುಕತೆ ಬಳಿಕ ಮರುದಿನ ಭಾರತಕ್ಕೆ ವಾಪಸ್ಸಾಗಿದ್ದರು. ಫೆ.28ರಂದು ಮುಂಜಾನೆ ಅಮೆರಿಕ ಸಹಕಾರದೊಂದಿಗೆ ಇಸ್ರೇಲ್ ಇರಾನ್ ವಿರುದ್ಧ ಭಾರೀ ಮಿಲಿಟರಿ ಕಾರ್ಯಾಚರಣೆ ನಡೆಸಿತ್ತು. ಸಂಭಾವ್ಯ ಪರಮಾಣು ಒಪ್ಪಂದ ಕುರಿತ ಮಾತುಕತೆಗಳು ನಡೆದಿರುವಂತೆಯೇ, ಟೆಹ್ರಾನ್ ಅಣ್ವಸ್ತ್ರ ತಯಾರಿಗೆ ಮುಂದಾಗಿರುವುದು ತೀರಾ ತಪ್ಪೆಂಬುದು ಇಸ್ರೇಲ್ ಆರೋಪವಾಗಿದೆ.

ಕಿರುಸುದ್ದಿ

ಸಿಪಿಐಗೆ ರಾಜೀನಾಮೆ ನೀಡಿದ್ದ ಶಾಸಕ ಬಿಜೆಪಿಗೆ

ತ್ರಿಶೂರ್: ಕೇರಳದಲ್ಲಿ ರಾಜಕೀಯ ಬದಲಾವಣೆಗಳು ತೀವ್ರಗೊಳ್ಳುತ್ತಿದ್ದು, ಇತ್ತೀಚೆಗೆ ಸಿಪಿಐಗೆ ರಾಜೀನಾಮೆ ನೀಡಿದ್ದ ನಾಟ್ಟಿಕಾ ಶಾಸಕ ಸಿ.ಸಿ.ಮುಕುಂದನ್ ಅವರು ಸೋಮವಾರ ಬಿಜೆಪಿ ಸೇರಿದ್ದಾರೆ. ಜಿಲ್ಲಾ ಬಿಜೆಪಿ ಕಚೇರಿಗೆ ಆಗಮಿಸಿದ ಮುಕುಂದನ್ ಅವರು ಅಲ್ಲಿ ಬಿಜೆಪಿ ಸದಸ್ಯತ್ವ ಸ್ವೀಕರಿಸಿದ್ದು, ಅವರನ್ನು ನಾಟ್ಟಿಕಾ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ನಿರೀಕ್ಷೆಯಿದೆ. ತಾನು ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಪ್ರಕಟಿಸಿದ ಬಳಿಕ ಅವರನ್ನು ಪಕ್ಷದಿಂದ ಉಚ್ಚಾಟಿಸಿರುವುದಾಗಿ ಸಿಪಿಐ ಹೇಳಿಕೊಂಡಿತ್ತು.

ಬೆಂಕಿ ಅವಘಡದಲ್ಲಿ 10 ರೋಗಿಗಳ ಸಾವು

ಭುವನೇಶ್ವರ: ಸರ್ಕಾರಿ ಸ್ವಾಮ್ಯದ ಎಸ್‌ಸಿಬಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಐಸಿಯುನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ 10 ರೋಗಿಗಳು ಮೃತಪಟ್ಟಿದ್ದು, 11 ಮಂದಿ ಗಾಯಗೊಂಡಿದ್ದಾರೆ. ಮೃತರ ಕುಟುಂಬಗಳಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ತಲಾ 25 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಣೆ ಮಾಡಿದರು. ಪ್ರಧಾನಿ ಮೋದಿ ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ.

ಭಾರತದ ಫೆಬ್ರವರಿ ತಿಂಗಳ ಸರಕು ರಫ್ತಲ್ಲಿ ಅಲ್ಪ ಕುಸಿತ

ಹೊಸದಿಲ್ಲಿ: ಭಾರತದ ಸರಕು ರಫ್ತು ಫೆಬ್ರವರಿಯಲ್ಲಿ ಶೇ. 0.81 ರಷ್ಟು ಕುಸಿದು 36.61 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ. ವ್ಯಾಪಾರ ಕೊರತೆ ಕಳೆದ ತಿಂಗಳಿಗಿಂತ 27.1 ಬಿಲಿಯನ್ ಡಾಲರ್‌ಗಳಿಗೆ ಇಳಿಕೆಯಾಗಿದೆ.

ವ್ಯಾಪಾರ ಕೊರತೆ ಜನವರಿಯ 34.68 ಬಿಲಿಯನ್ ಡಾಲರ್‌ಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ, ಆದರೆ ಕಳೆದ ವರ್ಷದ ಫೆಬ್ರವರಿಯ 14.05 ಬಿಲಿಯನ್ ಡಾಲರ್‌ಗಳಿಗೆ ಹೋಲಿಸಿದರೆ ಹೆಚ್ಚಾಗಿದೆ. ಚಿನ್ನದ ಆಮದು ಶೇ. 218.55 ಮತ್ತು ಬೆಳ್ಳಿ ಆಮದು ಶೇ. 285.23 ರಷ್ಟು ಏರಿಕೆಯಾದ ಕಾರಣ, ಒಟ್ಟು ಆಮದು ಶೇ. 24.11 ರಷ್ಟು ಹೆಚ್ಚಾಗಿ 63.71 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ.

ಸರಕು ಸಾಗಣೆ ವೆಚ್ಚದ ಬಿಸಿ: ಫೆಬ್ರವರಿ 28 ರಂದು ಆರಂಭವಾದ ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಮಾರ್ಚ್ ತಿಂಗಳ ರಫ್ತು ಕುಸಿಯುವ ಸಾಧ್ಯತೆಯಿದೆ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ತಿಳಿಸಿದ್ದಾರೆ. ಹೆಚ್ಚುತ್ತಿರುವ ತೈಲ ಬೆಲೆಗಳು ಮತ್ತು ಅಸ್ತವ್ಯಸ್ತಗೊಂಡಿರುವ ಕಡಲ ಮಾರ್ಗಗಳು ಸರಕು ಸಾಗಣೆ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸಿವೆ.

ಜಾಗತಿಕ ಸವಾಲುಗಳ ನಡುವೆಯೂ ಏಪ್ರಿಲ್-ಫೆಬ್ರವರಿ ಅವಧಿಯ ಒಟ್ಟು ರಫ್ತು ಶೇ. 1.84 ರಷ್ಟು ಏರಿಕೆಯಾಗಿ 402.93 ಬಿಲಿಯನ್ ಡಾಲರ್‌ಗಳಿಗೆ ತಲುಪಿದೆ. ರಫ್ತುದಾರರು ಎದುರಿಸುತ್ತಿರುವ ಸಾಗಾಣಿಕೆ ಅಡಚಣೆಗಳನ್ನು ಪರಿಹರಿಸಲು ಸರ್ಕಾರ ನಿರಂತರ ಪ್ರಯತ್ನಗಳನ್ನು ಮಾಡುತ್ತಿದೆ.

ಮುರ್ಮು ಭೇಟಿಗಾಗಿ ಟಿಎಂಸಿ ಮತ್ತೆ ಮನವಿ

ಹೊಸದಿಲ್ಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕಾರ್ಯಕ್ರಮ ಮತ್ತು ಪ್ರೋಟೋಕಾಲ್ ವಿಚಾರದಲ್ಲಿ ವಿವಾದ ಮೈಗತ್ತಿಸಿಕೊಂಡಿರುವ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಮತ್ತೊಮ್ಮೆ ಅವರ ಭೇಟಿಗೆ ಸಮಯ ಕೋರಿದೆ. ಈಗಾಗಲೇ ಎರಡು ಬಾರಿ ಈ ಸಂಬಂಧ ಸಲ್ಲಿಕೆಯಾಗಿದ್ದ ಮನವಿಯನ್ನು ರಾಷ್ಟ್ರಪತಿ ಕಾರ್ಯಾಲಯ ತಿರಸ್ಕರಿಸಿದೆ. ಸದ್ಯ ಸಮಯಾಭಾವ ಇರುವುದರಿಂದ ಭೇಟಿ ಸಾಧ್ಯವಿಲ್ಲ ಎಂದಿದೆ. ಇದರ ನಡುವೆಯೂ ಮೂರನೇ ಬಾರಿಗೆ ಮನವಿ ಸಲ್ಲಿಕೆ ಮಾಡಿದ್ದು, ಭೇಟಿಗೆ ಅವಕಾಶ ಕೇಳಿದೆ. ಪಶ್ಚಿಮ ಬಂಗಾಳ ಸರ್ಕಾರ ಕೈಗೊಂಡಿರುವ ಕಲ್ಯಾಣ ಯೋಜನೆಗಳ ಕುರಿತು ವಿವರಿಸಲು ಸಮಯ ನೀಡುವಂತೆ ಪತ್ರ ಬರೆದಿದೆ. ಮಾ. 9ರಂದು ಟಿಎಂಸಿಯ ಹಿರಿಯ ನಾಯಕರು ರಾಷ್ಟ್ರಪತಿಗೆ ಮೊದಲ ಪತ್ರ ಬರೆದು, ಸಂಸದರು ಹಾಗೂ ರಾಜ್ಯ ಸಚಿವರು ಸೇರಿರುವ 12-15 ಸದಸ್ಯರ ಪ್ರತಿನಿಧಿ ಮಂಡಳಿಗೆ ಭೇಟಿಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದರು. ಪಶ್ಚಿಮ ಬಂಗಾಳ ಸರ್ಕಾರವು ಸಮಾಜದ ಎಲ್ಲಾ ವರ್ಗಗಳ ಸಮಗ್ರ ಅಭಿವೃದ್ಧಿಗಾಗಿ ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ರಾಷ್ಟ್ರಪತಿಗೆ ವಿವರಿಸಲು ಈ ಭೇಟಿಯನ್ನು ಕೇಳಲಾಗಿದೆ ಎಂದು ಪತ್ರದಲ್ಲಿ ತಿಳಿಸಲಾಗಿತ್ತು. ಮತ್ತೆ ಮಾ.11ರಂದು ಪತ್ರ ಬರೆಯಲಾಗಿತ್ತು. ಮಾ.7ರಂದು ಪಶ್ಚಿಮ ಬಂಗಾಳ ಭೇಟಿ ವೇಳೆ ಸಿಎಂ ಮಮತಾ ಬ್ಯಾನರ್ಜಿ ಅವರು ರಾಷ್ಟ್ರಪತಿಗಳನ್ನು ಸ್ವಾಗತಿಸಲು ಹೋಗಿರಲಿಲ್ಲ, ಅಲ್ಲದೆ, ಹಿರಿಯ ಅಧಿಕಾರಿಗಳೂ ತೆರಳಿರಲಿಲ್ಲ. ಇದಾದ ಬಳಿಕ ರಾಷ್ಟ್ರಪತಿಗಳ ಭೇಟಿಗಾಗಿ ಟಿಎಂಸಿ ಪದೇ ಪದೆ ಮನವಿ ಸಲ್ಲಿಕೆ ಮಾಡುತ್ತಿದೆ.

ಪಬಂ: ಸಿಎಸ್, ಡಿಜಿಪಿ ಸೇರಿ ಏಳು ಅಧಿಕಾರಿಗಳ ವರ್ಗ

ಕೋಲ್ಕತ್ತಾ: ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಸರ್ಕಾರದ ಅಂದಾದುಂದಿ ಆಡಳಿತ ಮುಂದುವರಿದಿರುವಂತೆಯೇ, ಚುನಾವಣಾ ಆಯೋಗ ಆ ರಾಜ್ಯದಲ್ಲಿ ಹಿಂಸಾಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಾತ್ರಿಪಡಿಸುವುದಕ್ಕಾಗಿ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಮತ್ತು ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಅವರ ಸ್ಥಾನದಿಂದ ಪದಚ್ಯುತಗೊಳಿಸಿ ಅವರ ಸ್ಥಾನಗಳಿಗೆ ದಕ್ಷ, ಅನುಭವೀ ಅಧಿಕಾರಿಗಳನ್ನು ನಿಯೋಜಿಸಿದೆ. ರಾಜ್ಯದಲ್ಲಿ 2 ಹಂತಗಳ ಚುನಾವಣೆ ಘೋಷಣೆಯಾದ ಬೆನ್ನಿಗೇ, ಪಶ್ಚಿಮ ಬಂಗಾಲದಲ್ಲಿ ಉನ್ನತ ಆಡಳಿತ ಮತ್ತು ಪೊಲೀಸ್ ಆಡಳಿತವ್ಯವಸ್ಥೆಯನ್ನು ಪುನರ್‌ರಚಿಸಿರುವ ಚುನಾವಣಾ ಆಯೋಗ ಕಟ್ಟುನಿಟ್ಟಿನ ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ, ಗೃಹಕಾರ್ಯದರ್ಶಿ ಜಗದೀಶ್ ಪ್ರಸಾದ್ ಮೀನಾ, ಡಿಜಿಪಿ ಪೀಯೂಷ್ ಪಾಂಡೆ, ಕೋಲ್ಕತಾ ಪೊಲೀಸ್ ಕಮಿಷನರ್ ಆಗಿರುವ ಸುಪ್ರತಿಮ್ ಸರ್ಕಾರ್ ಸೇರಿದಂತೆ ನಾಲ್ವರು ಐಪಿಎಸ್ ಅಧಿಕಾರಿಗಳನ್ನು ಬದಲಿಸಿದೆ. ಮುಖ್ಯ ಕಾರ್ಯದರ್ಶಿಯಾಗಿ ದಕ್ಷ ಮತ್ತು ಅನುಭವಿ ಅಧಿಕಾರಿ ಎಂದೇ ಗುರುತಿಸಲ್ಪಟ್ಟ ದುಷ್ಯಂತ್ ನಾರಿಯಾಲ ಅವರನ್ನು ನೇಮಿಸಿದೆ. ಹಾಗೆಯೇ ನೂತನ ಗೃಹಕಾರ್ಯದರ್ಶಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಸಂಘಮಿತ್ರಾ ಘೋಷ್ ಅವರನ್ನು ನೇಮಿಸಿದೆ. ಹೊಸ ಪೊಲೀಸ್ ಮಹಾನಿರ್ದೇಶಕರಾಗಿ ಹಿರಿಯ ಐಪಿಎಸ್ ಅಧಿಕಾರಿ ಸಿದ್ಧ್ ನಾಥ್ ಗುಪ್ತಾ ಅವರನ್ನು ಮತ್ತು ಕೋಲ್ಕತಾ ಪೊಲೀಸ್ ಆಯುಕ್ತರನ್ನಾಗಿ ಅಜಯ್ ಕುಮಾರ್, ನಂದಾ, ಕಾನೂನು ಸುವ್ಯವಸ್ಥೆಯ ಎಡಿಜಿ ವಿನೀತ್ ಗೋಯಲ್ ಅವರ ಸ್ಥಾನಕ್ಕೆ ಅಜಯ್ ಮುಕುಂದ್ ರಾನಡೆ ಅವರನ್ನು, ನಟರಾಜನ್ ರಮೇಶ್ ಬಾಬು ಅವರನ್ನು ಸುಧಾರಣಾ ಸೇವೆಗಳ ಡಿಜಿ ಆಗಿ ನೇಮಿಸಿದೆ.

ಜೆಫ್ರಿ ಎಪ್ಸ್ಟೀನ್: ಪುರಿ ಪುತ್ರಿಯಿಂದ ಮಾನನಷ್ಟ ಕೇಸ್



ಹೊಸದಿಲ್ಲಿ: ಜೆಫ್ರಿ ಎಪ್ಸ್ಟೀನ್ ಕ್ರಿಮಿನಲ್ ಚಟುವಟಿಕೆಗಳಿಗೆ ಮತ್ತು ತಮಗೂ ನಂಟು ಕಲ್ಪಿಸುವ ಮಾನಹಾನಿಕರ ವಿಷಯ ಹರಡಿದ್ದಕ್ಕಾಗಿ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪುತ್ರಿ ಹಿಮಾಯನಿ ಪುರಿ ಅವರು ಹಲವಾರು ವ್ಯಕ್ತಿಗಳು ಮತ್ತು ಆನ್‌ಲೈನ್ ಪ್ಲಾಟ್‌ಫಾಮ್‌ಗಳ ವಿರುದ್ಧ 10 ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಇವರು ದಿಲ್ಲಿ ಹೈಕೋರ್ಟ್‌ನಲ್ಲಿ 10 ಕೋಟಿ ರೂ. ಮಾನನಷ್ಟ ಮೊಕದ್ದಮೆ ಹೂಡಿದ್ದು, ತಮ್ಮ ವಿರುದ್ಧ ವಿಷಯವನ್ನು ಪ್ರಕಟಿಸದಂತೆ ಶಾಶ್ವತ ಮತ್ತು ಕಡ್ಡಾಯ ತಡೆಯಾಜ್ಞೆ, 10 ಕೋಟಿ ರೂ. ಪರಿಹಾರ ಮತ್ತು ಬೇಷರತ್ತಾದ ಕ್ಷಮೆಯಾಚನೆ ಕೋರಿದ್ದಾರೆ. ಈ ಪ್ರಕರಣವನ್ನು ಮಂಗಳವಾರ ವಿಚಾರಣೆ ನಡೆಸುವ ಸಾಧ್ಯತೆಯಿದೆ.

ಜಾತಿವಾದದಿಂದ ಸಾಮಾಜಿಕ ಚೌಕಟ್ಟು ದುರ್ಬಲ

ಧರ್ಮಕ್ಕಿದೆ ಸಂಘಟಿಸುವ ಶಕ್ತಿ

ಜೈಪುರ: ಜಾತಿ ವ್ಯವಸ್ಥೆ ಸಮಾಜ ಸಂಘಟನೆಗಾಗಿ ಮಾಡಿಕೊಂಡ ವ್ಯವಸ್ಥೆಯಾಗಿದೆ. ಜಾತೀಯವಾದವು ಸಾಮಾಜಿಕ ಚೌಕಟ್ಟನ್ನು ದುರ್ಬಲಗೊಳಿಸುತ್ತದೆ ಮತ್ತು ರಾಷ್ಟ್ರವನ್ನು ಒಡೆಯುತ್ತದೆ ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಎಚ್ಚರಿಸಿದ್ದಾರೆ. ಧರ್ಮವು ಸಮಾಜವನ್ನು ಸಂಘಟಿಸುವ ಶಕ್ತಿಯಾಗಬೇಕೆಂದು ಅವರು ನುಡಿದರು. ಜಲೋರ್‌ನ ಸೈರೆ ಕ್ಷೇತ್ರದಲ್ಲಿನ ಕಾರ್ಯಕ್ರಮದಲ್ಲಿ ಆದಿತ್ಯನಾಥ್ ಪಾಲ್ಗೊಂಡರು.



ಸಮಾಜ ವ್ಯವಸ್ಥಿತವಾಗಿ ಮುನ್ನಡೆಯಲು ಜಾತಿ ವ್ಯವಸ್ಥೆ ಮಾಧ್ಯಮವಾಗಬೇಕು. ಜಾತಿವಾದವು ಈ ವ್ಯವಸ್ಥೆಯನ್ನು ಹಾಳುಗೆಡಹುವಂತದ್ದು. ಹಿಂದಿನ ಸರ್ಕಾರಗಳು ಜನರನ್ನು ಧರ್ಮ, ಜಾತಿ, ಭಾಷೆಗಳ ಹೆಸರಲ್ಲಿ ಒಡೆದ ಪರಿಣಾಮ ದೇಶವು ದುರ್ಬಲಗೊಂಡಿತ್ತು ಮತ್ತು ಕಾಶ್ಮೀರ ಅರಾಜಕತೆ, ನಕ್ಸಲ್‌ಪಿಡುಗುಗಳಂತಹ ಸವಾಲುಗಳು, ಭಾಷಾ ಸಂಬಂಧಿತ ವಿವಾದಗಳು ಹಾಗೂ ಜಾತಿ ಸಂಘರ್ಷಗಳಿಗೆ ನಾಂದಿ ಹಾಡಿತ್ತು. ಮಾತ್ರವಲ್ಲ, ಸರ್ಕಾರದ ಯೋಜನೆಗಳ ಪ್ರಯೋಜನಗಳು ದಲಿತರು, ಕಡುಬಡವರು ಹಾಗೂ ಇತರ ಶೋಷಿತ ವರ್ಗಗಳನ್ನು ತಲುಪುವಲ್ಲಿ ವಿಫಲವಾಗಿತ್ತು.

ಇಂದಿನ ಭಾರತವಾಗಲಿದೆ ವಿಶ್ವದ ಪ್ರಬಲ ಶಕ್ತಿ: ಆದರೆ, ಇಂದು ಭಾರತವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ವಿಶ್ವದ ಪ್ರಮುಖ ಶಕ್ತಿಯಾಗುವತ್ತ ದಾಪುಗಾಲಿಕ್ಕಿದೆ. ಮೋದಿ ನಾಯಕತ್ವದಲ್ಲಿ ದೇಶವನ್ನು ಒಗ್ಗಟ್ಟಾಗಿಸಲಾಗಿದೆ. ಕಾಶ್ಮೀರ ಸಮಸ್ಯೆ, ನಕ್ಸಲ್ ಪಿಡುಗುಗಳ ಮಟ್ಟಹಾಕಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರದ ಯೋಜನೆಗಳ ಪ್ರಯೋಜನಗಳು ಯಾವುದೇ ತಾರತಮ್ಯರಹಿತವಾಗಿ ಜನರನ್ನು ತಲುಪುತ್ತಿವೆ. ದೇಶಾದ್ಯಂತ ಮೂಲಸೌಕರ್ಯಗಳು ಮತ್ತು ಸಾರ್ವಜನಿಕ ಸೌಲಭ್ಯಗಳ ವಿಸ್ತರಣೆಗೆ ಸರಕಾರ ಆದ್ಯತೆ ನೀಡಿದೆ ಎಂದು ಸಿಎಂ ಯೋಗಿ ವಿವರಿಸಿದರು.

ರಾಮನ ಅಸ್ತಿತ್ವವನ್ನೇ ಶಂಕಿಸಿತ್ತು ಯುಪಿಎ

ಹಿಂದಿನ ಯುಪಿಎ ಸರ್ಕಾರ ಭಾರತದ ಆಧ್ಯಾತ್ಮಿಕ ಪರಂಪರೆಗಳನ್ನು ಕಡೆಗಣಿಸಿತ್ತು. ಆದರೆ ನಮ್ಮ ಧರ್ಮ ಶ್ರದ್ಧೆಗಳು ಸನಾತನ ಧರ್ಮಾಧಾರಿತ ಮತ್ತು ಸಮಾಜದೊಂದಿಗೆ ಗಾಢವಾಗಿ ಬೆರೆತಿವೆ. ಭಕ್ತಿ- ಶ್ರದ್ಧೆ ವಿನಾ ನಾವು ಪ್ರಗತಿ ಸಾಧಿಸಲಾಗದು ಎಂಬ ಅಚಲ ನಂಬಿಕೆ ಪ್ರಸ್ತುತ ನಾಯಕತ್ವದ್ದು. ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮನ ಮಂದಿರ ನಿರ್ಮಾಣ ದಶಕಗಳ ಹಿಂದೆಯೇ ಸಾಕಾರಗೊಳ್ಳಬೇಕಿತ್ತು. ಆದರೆ, ಹಿಂದಿನ ಸರ್ಕಾರಗಳು ಈ ನಿಟ್ಟಿನಲ್ಲಿ ಪ್ರಯತ್ನಿಸಲೇ ಇಲ್ಲ, ಬದಲಾಗಿ ಶ್ರೀರಾಮನ ತೀರಾ ಅಸ್ತಿತ್ವವನ್ನೇ ಶಂಕಿಸಿದ್ದವು ಎಂದು ಸಿಎಂ ಯೋಗಿ ಆರೋಪಿಸಿದರು. ಇಂದೀಗ ಶ್ರೀರಾಮ ಮಂದಿರ ಅತ್ಯದ್ಭುತವಾಗಿ ಪ್ರಗತಿ ಹೊಂದುತ್ತಿದೆ. ಜನರು ದೃಢ ಸಂಕಲ್ಪದೊಂದಿಗೆ ಒಗ್ಗಟ್ಟಾದಾಗ ಶ್ರೀರಾಮ ಮಂದಿರದಂತಹ ಸಾಧನೆಗಳು ಸುಲಭವಾಗಿ ಸಾಕಾರಗೊಳ್ಳುವುದು ಎಂದು ಸಿಎಂ ಯೋಗಿ ವಿಶ್ವಾಸ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳ, ಕೇರಳ ಚುನಾವಣೆ: ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಮಮತಾ ವಿರುದ್ಧ ಬಿಜೆಪಿಯ ಸುವೇಂದು ಸ್ಪರ್ಧೆ

ಹೊಸದಿಲ್ಲಿ: ಪಂಚರಾಜ್ಯ ವಿಧಾನಸಭೆ ಚುನಾವಣೆಗೆ ಭರ್ಜರಿ ತಯಾರಿ ನಡೆಸಿರುವ ಬಿಜೆಪಿ, ಚುನಾವಣೆ ಘೋಷಣೆಯಾದ ಮರುದಿನವೇ ಪಶ್ಚಿಮ ಬಂಗಾಳ ಹಾಗೂ ಕೇರಳಕ್ಕೆ ತನ್ನ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಮೊದಲ ಹಂತದಲ್ಲಿ ಪಶ್ಚಿಮ ಬಂಗಾಳದಲ್ಲಿ 144 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿರುವ ಬಿಜೆಪಿ, ಭವಾನಿಪುರ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಎದುರಾಳಿಯಾಗಿ ಸುವೇಂದು ಅಧಿಕಾರಿ ಅವರನ್ನು ಕಣಕ್ಕಿಳಿಸಿದೆ. ನಂದಿಗ್ರಾಮ ಕ್ಷೇತ್ರದಿಂದಲೂ ಸುವೇಂದು ಸ್ಪರ್ಧಿಸಲಿದ್ದಾರೆ. ಇನ್ನು ಕೇರಳ ವಿಧಾನಸಭೆಗೆ 47 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ನೇಮಮ್ ಕ್ಷೇತ್ರದಿಂದ ರಾಜೀವ್ ಚಂದ್ರಶೇಖರ್ ಅವರನ್ನು ಬಿಜೆಪಿ ಅಭ್ಯರ್ಥಿಯಾಗಿ ಘೋಷಿಸಿದೆ. ಅದೇ ರೀತಿ ಕಂಜಿರಪ್ಪಳ್ಳಿ ಕ್ಷೇತ್ರದಿಂದ ಕೇಂದ್ರ ಮಾಜಿ ಸಚಿವ ಜಾರ್ಜ್ ಕುರಿಯನ್ ಅವರನ್ನು ಪಕ್ಷ ಸ್ಪರ್ಧೆಗೆ ಇಳಿಸಿದೆ.

ಕೇರಳದಲ್ಲಿ ಏ.9ರಂದು ಒಂದೇ ದಿನ ಮತದಾನ ನಡೆಯಲಿದೆ. ಪಶ್ಚಿಮ ಬಂಗಾಳದ 294 ವಿಧಾನಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ಏ.23 ಮತ್ತು ಏ.29ರಂದು ಮತದಾನ ನಡೆಯಲಿದೆ. ಎರಡೂ ರಾಜ್ಯಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ.



ನೇಮಮ್ ಕ್ಷೇತ್ರದಿಂದ ರಾಜೀವ್ ಕಣಕ್ಕೆ: ನೇಮಮ್ ಮತ್ತು ಕಳಕೂಟ್ಟಂ ಕ್ಷೇತ್ರಗಳಿಗೆ ಕ್ರಮವಾಗಿ ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಹಾಗೂ ವಿ.ಮುರಳೀಧರನ್ ಒಳಗೊಂಡಂತೆ, ಮುಂದಿನ ವಿಧಾನಸಭಾ ಚುನಾವಣೆಗೆ 47 ಅಭ್ಯರ್ಥಿಗಳ ಪ್ರಥಮ ಪಟ್ಟಿಯನ್ನು ಕೇರಳ ಬಿಜೆಪಿ ಬಿಡುಗಡೆ ಮಾಡಿದೆ.

ಕೇಂದ್ರದ ಮಾಜಿ ಸಚಿವ ಜಾರ್ಜ್ ಕುರಿಯನ್ ಕಾಂಜಿರಪಳ್ಳಿ ಕ್ಷೇತ್ರದಿಂದ ಸ್ಪರ್ಧಾ ಕಣಕ್ಕಿಳಿಯುವರು. ಪೂಂಜಾರ್ ಕ್ಷೇತ್ರಕ್ಕೆ ಪಿ.ಸಿ.ಜಾರ್ಜ್ ಅಭ್ಯರ್ಥಿಯಾದರೆ, ಆರ್.ಶ್ರೀಲೇಖಾ ವಟ್ಟಿಯೂರ್‌ಕಾವು ಕ್ಷೇತ್ರದಿಂದ, ತೃಶೂರ್‌ನಿಂದ ಪದ್ಮಜಾ ವೇಣುಗೋಪಾಲ್ ಸ್ಪರ್ಧಾ ಕಣಕ್ಕಿಳಿಯಲಿದ್ದಾರೆ. ಪ.ಜಾತಿಗೆ ಮೀಸಲಾಗಿರುವ ಕುನ್ನತ್ತೂರ್ ಕ್ಷೇತ್ರದಿಂದ ರಾಜಿ ಪ್ರಸಾದ್ ಸ್ಪರ್ಧಿಸಲಿದ್ದಾರೆ. ಕೊಟ್ಟಾರಕ್ಕರ ಕ್ಷೇತ್ರಕ್ಕೆ ಆರ್. ರಶ್ಮಿ, ಶೋಭಾ ಸುರೇಂದ್ರನ್ ಪಾಲಕ್ಕಾಡ್‌ನಿಂದ, ನವ್ಯಾ ಹರಿದಾಸ್ ಕೋಯಿಕ್ಕೋಡ್ ಉತ್ತರ ಕ್ಷೇತ್ರ ಮತ್ತು ಮೀಸಲು ಕ್ಷೇತ್ರ ಸುಲ್ತಾನ್ ಬತ್ತೇರಿಯಿಂದ ಕವಿತಾ ಕೆ.ಎಸ್.ಸ್ಪರ್ಧಾಕಣದಲ್ಲಿರುವರು.

ಪ.ಬಂಗಾಳಕ್ಕೆ ಬಿಜೆಪಿ 144 ಅಭ್ಯರ್ಥಿ ಪಟ್ಟಿ ಬಿಡುಗಡೆ: ಸುವೇಂದು ಅಧಿಕಾರಿ ಮತ್ತು ದಿಲೀಪ್ ಘೋಷ್ ಸಹಿತ ಹಲವು ಪ್ರಮುಖ ನಾಯಕರು ಸ್ಪರ್ಧಾ ಕಣದಲ್ಲಿರುವ 144 ಅಭ್ಯರ್ಥಿಗಳನ್ನು ಒಳಗೊಂಡ ಪ್ರಥಮ ಪಟ್ಟಿಯನ್ನು ಪ.ಬಂಗಾಳ ಬಿಜೆಪಿ ಬಿಡುಗಡೆ ಮಾಡಿದೆ. ದಿಲೀಪ್ ಘೋಷ್ ಖರಗ್‌ಪುರ ಸದರ್‌ನಿಂದ ಸ್ಪರ್ಧಿಸಲಿದ್ದು, ಸುವೇಂದು ಅಧಿಕಾರಿ ಭವಾನಿಪುರ ಮತ್ತು ನಂದಿಗ್ರಾಮ ಕ್ಷೇತ್ರಗಳಿಂದ ಸ್ಪರ್ಧಾ ಕಣದಲ್ಲಿರುವರು.

ಕಿರುಸುದ್ದಿ

ಪಾಕ್ ಆಟಗಾರನಿಗೆ ನೀಡುವ ವೇತನವು ಭಾರತಕ್ಕೆ ಮಾರಕ

ಹೊಸದಿಲ್ಲಿ: ಸನ್ ಟಿವಿ ನೆಟ್‌ವರ್ಕ್ ಹಾಗೂ ಸನ್ ರೈಸರ್ಸ್ ಹೈದರಾಬಾದ್ ಮುಖ್ಯಸ್ಥೆ ಕಾವ್ಯಾ ಮಾರನ್ ಒಡೆತನದ ದಿ ಹಂಡ್ರೆಡ್‌ನ ಸನ್‌ರೈಸರ್ಸ್ ಲೀಡ್ಸ್ ಪಾಕಿಸ್ತಾನಿ ಸ್ಪಿನ್ನರ್ ಅಬ್ರಾರ್ ಅಹ್ಮದ್‌ರನ್ನು ಖರೀದಿಸಿರುವುದನ್ನು ಮಾಜಿ ಕ್ರಿಕೆಟಿಗರ ಲಿಟಲ್ ಮಾಸ್ಟರ್ ಸುನಿಲ್ ಗವಾಸ್ಕರ್ ಕಟುವಾಗಿ ವಿರೋಧಿಸಿದ್ದಾರೆ. ಪಾಕಿಸ್ತಾನಿ ಆಟಗಾರರಿಗೆ ವೇತನ ನೀಡುವುದು ಭಾರತದ ವಿರುದ್ಧ ಹಾನಿ ಮಾಡಲು ಕೊಡುಗೆ ನೀಡಿದಂತೆ ಎಂದು ನೇರ ಮಾತಿನಲ್ಲಿ ವಿರೋಧ ವ್ಯಕ್ತಪಡಿಸಿದ್ದಾರೆ. ದಿ ಹಂಡ್ರೆಡ್ ಪಂದ್ಯಾವಳಿಯಲ್ಲಿ ಭಾರತೀಯ ಫ್ರಾಂಚೈಸಿ ಮಾಲೀಕರು ಪಾಕ್ ಆಟಗಾರನನ್ನು ಖರೀದಿಸಿರುವುದು ನಿಜಕ್ಕೂ ನನಗೆ ಆಶ್ಚರ್ಯ ಮೂಡಿಸಿದೆ.

ಸಚಿನ್ 100ನೇ ಶತಕಕ್ಕೆ 14 ವರ್ಷ

ಮುಂಬೈ: ಕ್ರಿಕೆಟ್ ದೇವರೆಂದೇ ಕರೆಯಲ್ಪಡುವ ಸಚಿನ್ ತೆಂಡುಲ್ಕರ್ ಅವರ 100ನೇ ಅಂತಾರಾಷ್ಟ್ರೀಯ ಶತಕದ ಮೈಲಿಗಲ್ಲಿಗೆ 14 ವರ್ಷಗಳಾಗಿವೆ. 2012ರ ಮಾ.16ರಂದು ಢಾಕಾದಲ್ಲಿ ನಡೆದಿದ್ದ ಬಾಂಗ್ಲಾದೇಶ ತಂಡದ ವಿರುದ್ಧದ ಏಷ್ಯಾ ಕಪ್ ಏಕದಿನ ಪಂದ್ಯದಲ್ಲಿ ಸಚಿನ್ ತಮ್ಮ 100ನೇ ಅಂತಾರಾಷ್ಟ್ರೀಯ ಶತಕವನ್ನು ದಾಖಲಿಸಿದ್ದರು. ಪಂದ್ಯದಲ್ಲಿ 147 ಎಸೆತಗಳನ್ನು ಎದುರಿಸಿದ್ದ ತೆಂಡುಲ್ಕರ್ ಅವರು 12 ಬೌಂಡರಿಗಳನ್ನು ಮತ್ತು ಏಕೈಕ ಸಿಕ್ಸರ್ ಒಳಗೊಂಡಿದ್ದ 114 ರನ್‌ಗಳನ್ನು ಕಲೆಹಾಕಿದ್ದರು. ಸ್ಕ್ವೇರ್ ಲೆಗ್ ಕ್ಷೇತ್ರದಲ್ಲಿ ಒಂದು ರನ್ ಕಸಿಯುವ ಮೂಲಕ ತೆಂಡುಲ್ಕರ್ ಮೈಲಿಗಲ್ಲು ಪೂರೈಸಿದ್ದರು. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಚಿನ್ 51 ಟೆಸ್ಟ್ ಮತ್ತು 49 ಏಕದಿನ ಶತಕಗಳನ್ನು ದಾಖಲಿಸಿದ್ದರು.

ಜೇಮ್ಸ್ ಫೋಸ್ಟರ್ ಸಿಎಸ್‌ಕೆ ನೂತನ ಫೀಲ್ಡಿಂಗ್ ಕೋಚ್

ಚೆನ್ನೈ: ಇಂಗ್ಲೆಂಡ್‌ನ ಮಾಜಿ ಕ್ರಿಕೆಟಿಗ ಜೇಮ್ಸ್ ಫೋಸ್ಟರ್ ಅವರನ್ನು ನೂತನ ಫೀಲ್ಡಿಂಗ್ ಕೋಚ್ ಆಗಿ ನೇಮಿಸಿರುವುದಾಗಿ ಐಪಿಎಲ್ ಫ್ರಾಂಚೈಸಿ ಚೆನ್ನೈ ಸೂಪರ್ ಕಿಂಗ್ಸ್ ಸೋಮವಾರ ದೃಢೀಕರಿಸಿದೆ. ಫೋಸ್ಟರ್ ಅವರು ಇಂಗ್ಲೆಂಡ್ ಪರ 7 ಟೆಸ್ಟ್, 12 ಏಕದಿನ ಮತ್ತು 5 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ ಅನುಭವ ಹೊಂದಿದ್ದಾರೆ. ಫ್ರಾಂಚೈಸಿ ಮತ್ತು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಕೋಚಿಂಗ್ ಅನುಭವವನ್ನು ಫೋಸ್ಟರ್ ಹೊಂದಿದ್ದಾರೆ. ದಿ ಹಂಡ್ರೆಡ್ ಟೂರ್ನಿಯಲ್ಲಿ ಅವರು ಬರ್ಮಿಂಗಮ್ ಫೀನಿಕ್ಸ್‌ನ ಸಹಾಯಕ ಕೋಚ್ ಆಗಿದ್ದರು.

ಕೆಎಸ್‌ಸಿಎ, ಆರ್‌ಸಿಬಿಗೆ ರಾಜ್ಯ ಸರ್ಕಾರದ ಅಧಿಕೃತ ಅನುಮತಿ

ಸರ್ಕಾರದ ಗ್ರೀನ್ ಸಿಗ್ನಲ್ ಚಿನ್ನಸ್ವಾಮಿನಲ್ಲಿ ಐಪಿಎಲ್

ಹೊಸದಿಲ್ಲಿ: ಐಪಿಎಲ್ 2026ರ ಪಂದ್ಯಗಳನ್ನು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಫ್ರಾಂಚೈಸಿಗೆ ಕರ್ನಾಟಕ ಸರ್ಕಾರದಿಂದ ಸೋಮವಾರ ಅಧಿಕೃತ ಅನುಮತಿ ಲಭಿಸಿದೆ. ಈ ನಿರ್ಧಾರದಿಂದ, ಆರ್‌ಸಿಬಿ ತನ್ನ ಚೊಚ್ಚಲ ಐಪಿಎಲ್ ಪ್ರಶಸ್ತಿಯನ್ನು ಗೆದ್ದ ನಂತರದ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತ ದುರಂತ ಸಂಭವಿಸಿತ್ತು. ಕಾಲ್ತುಳಿತ ದುರಂತದ ನಂತರ ಮೈದಾನದಲ್ಲಿ ಯಾವುದೇ ಐಪಿಎಲ್ ಅಥವಾ ಅಂತಾರಾಷ್ಟ್ರೀಯ ಪಂದ್ಯಗಳು ನಡೆಯುವ ಬಗ್ಗೆ ಇದ್ದ ಅನಿಶ್ಚಿತತೆ ಅಂತ್ಯಗೊಂಡಿದೆ.

ಕೆಎಸ್‌ಸಿಎ ಕೃತಜ್ಞತೆ

ಈ ಅನುಮತಿ ಪ್ರಕ್ರಿಯೆಗೆ ನೆರವಾದ ರಾಜ್ಯ ಸರ್ಕಾರ ಮತ್ತು ತಜ್ಞ ಸಮಿತಿಗೆ ಕೆಎಸ್‌ಸಿಎ ಧನ್ಯವಾದ ತಿಳಿಸಿದೆ. ತಜ್ಞ ಸಮಿತಿ ಕಾರ್ಯದರ್ಶಿ ಹಾಗೂ ಬೆಂಗಳೂರು ಪೊಲೀಸ್ ಆಯುಕ್ತ ಶ್ರೀಮಂತ್ ಕುಮಾರ್ ಸಿಂಗ್ ಅವರಿಗೆ ನಮ್ಮ ವಿಶೇಷ ಧನ್ಯವಾದಗಳು. ಅವರು ಸಕ್ರಿಯ ಸಂಯೋಜನೆ ನಡೆಸಿ, ಎಲ್ಲಾ ಭದ್ರತಾ ಹಾಗೂ ಕಾರ್ಯಾಚರಣಾ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಲು ನೆರವಾದರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ತಜ್ಞ ಸಮಿತಿಯ ಗೌರವಾನ್ವಿತ ಸದಸ್ಯರು ಹಾಗೂ ಅದರ ಉಪಸಮಿತಿಗಳ ಅಧಿಕಾರಿಗಳು ನೀಡಿದ ಸೂಕ್ಷ್ಮ ಪರಿಶೀಲನೆ ಮತ್ತು ರಚನಾತ್ಮಕ ಶಿಫಾರಸುಗಳು ಈ ಮಹತ್ವದ ನಿರ್ಧಾರಕ್ಕೆ ನೆರವಾದವು ಎಂದು ತಿಳಿಸಿದೆ.

ತಜ್ಞರ ಸಮಿತಿಯ ಪರಿಶೀಲನೆ ಬಳಿಕ ಅನುಮತಿ

ಅನುಮತಿ ನೀಡುವ ಮೊದಲು, ಕರ್ನಾಟಕ ಗೃಹ ಸಚಿವ ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ರಾಜ್ಯ ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ ಈ ಸಭೆಯಲ್ಲಿ ಭಾಗವಹಿಸಿತು. ಸಭೆಯಲ್ಲಿ ಕೆಎಸ್‌ಸಿಎ, ಆರ್‌ಸಿಬಿ ಮತ್ತು ಕಾರ್ಯಕ್ರಮ ನಿರ್ವಹಣಾ ಸಂಸ್ಥೆ ಡಿಎನ್‌ಎ ಪ್ರತಿನಿಧಿಗಳೂ ಹಾಜರಿದ್ದರು. ಚರ್ಚೆಯ ವೇಳೆ ಮುಂಬರುವ ಐಪಿಎಲ್ ಪಂದ್ಯಗಳ ಆಯೋಜನೆಗೂ ಮುನ್ನ ಮೈದಾನದಲ್ಲಿ ಕೈಗೊಳ್ಳಲಾದ ಸಿದ್ಧತೆಗಳು ಹಾಗೂ ಭದ್ರತಾ ಕ್ರಮಗಳ ಕುರಿತು ತಜ್ಞ ಸಮಿತಿ ವಿವರವಾದ ವರದಿ ಮಂಡಿಸಿತು. ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಅವರ ಪ್ರಕಾರ, ಸಮಿತಿಯ ಶಿಫಾರಸುಗಳು ಹಾಗೂ ಸರ್ಕಾರದ ಪರಿಶೀಲನೆಯ ಬಳಿಕ ಅಧಿಕೃತ ಅನುಮತಿ ನೀಡಲಾಗಿದೆ. ತಜ್ಞರ ಸಮಿತಿಯು ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೈಗೊಂಡಿರುವ ಸಿದ್ಧತೆಗಳು ಹಾಗೂ ನಿಯಮಾನುಸರಣೆ ಕ್ರಮಗಳ ಬಗ್ಗೆ ವರದಿ ಮಂಡಿಸಿತು. ವ್ಯವಸ್ಥೆಗಳನ್ನೆಲ್ಲಾ ಸಮಗ್ರ ಪರಿಶೀಲಿಸಿದ ನಂತರ ಗೌರವಾನ್ವಿತ ಗೃಹ ಸಚಿವರು ಐಪಿಎಲ್ ಪಂದ್ಯಗಳನ್ನು ಇಲ್ಲಿ ನಡೆಸಲು ಅಧಿಕೃತ ಅನುಮತಿ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಚಿನ್ನಸ್ವಾಮಿ ಮೈದಾನದಲ್ಲೇ ಟೂರ್ನಿಯ ಆರಂಭ

ಐಪಿಎಲ್ 19ನೇ ಆವೃತ್ತಿ ಮಾ.28ರಂದು ಆರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವು ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ವಿರುದ್ಧ ತವರಿನ ಎಂ.ಚಿನ್ನಸ್ವಾಮಿ ಮೈದಾನದಲ್ಲಿ ಕಣಕ್ಕಿಳಿಯಲಿದೆ. ಉದ್ಘಾಟನಾ ಪಂದ್ಯ ಮಾತ್ರವಲ್ಲದೆ, ಟೂರ್ನಿಯ ಉದ್ಘಾಟನಾ ಸಮಾರಂಭ ಹಾಗೂ ಆರ್‌ಸಿಬಿ ತಂಡದ ಪ್ರಸಿದ್ಧ ಅನ್‌ಬಾಕ್ಸಿಂಗ್ ಕಾರ್ಯಕ್ರಮವೂ ಇದೇ ಮೈದಾನದಲ್ಲಿ ನಡೆಯಲಿದೆ. ಇದು ಸಾಮಾನ್ಯವಾಗಿ ಹೊಸ ಆವೃತ್ತಿಯ ಆರಂಭವನ್ನು ಸೂಚಿಸುವ ಕಾರ್ಯಕ್ರಮವಾಗಿದೆ.

ಆರ್‌ಸಿಬಿ ತವರಿನ ಪಂದ್ಯಗಳ ವೇಳಾಪಟ್ಟಿ

ಐಪಿಎಲ್ 2026 ಆವೃತ್ತಿಯಲ್ಲಿ ಆರ್‌ಸಿಬಿ ತನ್ನ 7 ತವರಿನ ಪಂದ್ಯಗಳಲ್ಲಿ, ಐದು ಪಂದ್ಯಗಳನ್ನು ಅಭಿಮಾನಿಗಳ ನೆಚ್ಚಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದೆ. ಉಳಿದ ಎರಡು ತವರಿನ ಪಂದ್ಯಗಳನ್ನು ರಾಯ್ಪುರ್‌ನ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಆಯೋಜಿಸಲು ಫ್ರಾಂಚೈಸಿ ನಿರ್ಧರಿಸಿದೆ. ಈ ವ್ಯವಸ್ಥೆಯಿಂದ ಬೆಂಗಳೂರು ತಂಡದ ಮುಖ್ಯ ತವರಿನ ಮೈದಾನವಾಗಿಯೇ ಉಳಿದಿದೆ, ಜೊತೆಗೆ ಕೆಲವು ಪಂದ್ಯಗಳನ್ನು ಪರ್ಯಾಯ ಮೈದಾನದಲ್ಲಿ ನಡೆಸಲು ಅವಕಾಶ ಸಿಗುತ್ತದೆ.



2027ರ ಒಡಿಐ ವಿಶ್ವಕಪ್ ಗೆಲ್ಲುವುದೇ ಗುರಿ: ಗಿಲ್



ಹೊಸದಿಲ್ಲಿ: ಮುಂದಿನ ವರ್ಷ ನಡೆಯಲಿರುವ ಐಸಿಸಿ ಏಕದಿನ ವಿಶ್ವಕಪ್ ಗೆಲ್ಲುವುದೇ ತಮ್ಮ ತಂಡದ ಪ್ರಮುಖ ಗುರಿ ಎಂದು ಭಾರತದ ಏಕದಿನ ಕ್ರಿಕೆಟ್ ತಂಡದ ನಾಯಕ ಶುಬ್ಮನ್ ಗಿಲ್ ಸೋಮವಾರ ಹೇಳಿದ್ದಾರೆ.

2023ರ ಆವೃತ್ತಿಯ ತವರಿನ ವಿಶ್ವಕಪ್‌ನಲ್ಲಿ ಅಜೇಯ ತಂಡವಾಗಿ ಫೈನಲ್ ಪ್ರವೇಶಿಸಿದ್ದ ರೋಹಿತ್ ಶರ್ಮಾ ನೇತೃತ್ವದ ತಂಡ, ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಸೋಲುಂಡಿತ್ತು. ವಿಶ್ವಕಪ್ ಫೈನಲ್ ಸೋಲು ಭಾರತೀಯ ಕ್ರಿಕೆಟ್ ತಂಡ ಮತ್ತು ಕ್ರಿಕೆಟ್ ಅಭಿಮಾನಿಗಳಿಗೆ ಆಘಾತವನ್ನು ನೀಡಿತ್ತು.

ಟಿ20 ಗೆದ್ದಾಯ್ತು, ಇನ್ನು ಏಕದಿನ: ಭಾರತ ತಂಡ ಸತತ ಎರಡು ಟಿ20 ವಿಶ್ವಕಪ್ ಗೆದ್ದ ಬಳಿಕ ಇದೀಗ ಶುಬ್ಮನ್ ಗಿಲ್ ನೇತೃತ್ವದ ತಂಡವು ಏಕದಿನ ವಿಶ್ವಕಪ್ ಟ್ರೋಫಿಯ ಮೇಲೆ ಕಣ್ಣಿಟ್ಟಿದೆ. ಮುಂದಿನ ವರ್ಷ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ರಾಷ್ಟ್ರಗಳ ಜಂಟಿ ಆತಿಥ್ಯದಲ್ಲಿ ಏಕದಿನ ವಿಶ್ವಕಪ್ ನಡೆಯಲಿದೆ.

> **ಹಿಂದಿನ ವಿಶ್ವಕಪ್‌ನಲ್ಲಿ ನಾವು ಗೆಲುವಿನ ಬಹಳ ಸಮೀಪದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿ ಪ್ರಶಸ್ತಿ ಗೆಲ್ಲಲು ಇನ್ನೊಂದು ಅವಕಾಶ ಸಿಕ್ಕರೆ, ನಮಗದು ದೊಡ್ಡ ಅವಕಾಶ. ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ವಿಶ್ವಕಪ್ ಗೆಲ್ಲುವುದು ನಮ್ಮ ತಂಡದ ಪ್ರಮುಖ ಗುರಿ. ಆ ಯೋಚನೆ ಸದಾ ನನ್ನ ಮನಸ್ಸಿನಲ್ಲಿದೆ.**
> ■ **ಶುಬ್ಮನ್ ಗಿಲ್, ಭಾರತ ಏಕದಿನ ತಂಡದ ನಾಯಕ**

ದಕ್ಷಿಣ ಆಫ್ರಿಕಾದಲ್ಲಿ ಇನ್ನೊಂದು ಅವಕಾಶ?

ಭಾನುವಾರ ರಾತ್ರಿ ಬಿಸಿಸಿಐ ಆಯೋಜಿಸಿದ್ದ ನಮನ್ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ನಾಯಕ ಶುಬ್ಮನ್, ಹಿಂದಿನ ವಿಶ್ವಕಪ್‌ನಲ್ಲಿ ನಾವು ಗೆಲುವಿನ ಬಹಳ ಸಮೀಪದಲ್ಲಿದ್ದೆವು. ದಕ್ಷಿಣ ಆಫ್ರಿಕಾದಲ್ಲಿ ಪ್ರಶಸ್ತಿ ಗೆಲ್ಲಲು ಇನ್ನೊಂದು ಅವಕಾಶ ಸಿಕ್ಕರೆ, ನಮಗದು ದೊಡ್ಡ ಅವಕಾಶ. ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿ ದೇಶಕ್ಕಾಗಿ ವಿಶ್ವಕಪ್ ಗೆಲ್ಲುವುದು ನಮ್ಮ ತಂಡದ ಪ್ರಮುಖ ಗುರಿ. ಆ ಯೋಚನೆ ಸದಾ ನನ್ನ ಮನಸ್ಸಿನಲ್ಲಿದೆ ಎಂದು ಅಭಿಪ್ರಾಯಿಸಿದ್ದಾರೆ.

ಯಶಸ್ಸಿನ ಪಥದಲ್ಲಿ ಭಾರತೀಯರು: ಸೂರ್ಯ



ಈ ಮಧ್ಯೆ, ಕಾರ್ಯಕ್ರಮದಲ್ಲಿ ಮಾತನಾಡಿದ ಭಾರತದ ಟಿ20 ತಂಡದ ನಾಯಕ ಸೂರ್ಯ ಕುಮಾರ್ ಯಾದವ್, 2024ರ ಟಿ20 ವಿಶ್ವಕಪ್ ಜಯವು ಭಾರತೀಯ ಕ್ರಿಕೆಟಿಗರು ಯಶಸ್ಸಿನ ಪಥದಲ್ಲಿ ಓಡಲು ನೆರವಾಗಿದೆ. ಪುರುಷರ ತಂಡ ಚಾಂಪಿಯನ್ಸ್ ಟ್ರೋಫಿ ಮತ್ತು ವನಿತೆಯರು ಚೊಚ್ಚಲ ಏಕದಿನ ವಿಶ್ವಕಪ್ ಗೆದ್ದಿದ್ದರು ಎಂದು ಹೇಳಿದರು.


ಆ ಒಂದು ಹೆಜ್ಜೆ ಬಹಳ ಮುಖ್ಯವಾಗಿತ್ತು. ಐಸಿಸಿ ಟ್ರೋಫಿ ಗೆಲ್ಲಲು ಏನು ಬೇಕು ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಲು ಆ ಅನುಭವ ಬಹಳ ಮುಖ್ಯ ಎಂದು ನಾಯಕ ಸೂರ್ಯ ಕುಮಾರ್ ಹೇಳಿದರು. ಇನ್ನು ಹಿಂದೆ ತಿರುಗಿ ನೋಡುವ ಪ್ರಶ್ನೆಯೇ ಇಲ್ಲ. ಈ ಯಶಸ್ಸು ಆರಂಭವಾಗಿರುವುದರಿಂದ ಸಾಧ್ಯವಾದಷ್ಟು ಹೆಚ್ಚು ಟ್ರೋಫಿಗಳನ್ನು ಗೆಲ್ಲಲು ಪ್ರಯತ್ನಿಸೋಣ ಎಂದು ಸೂರ್ಯ ಹೇಳಿದರು.

- ಅಕ್ಟೋಬರ್-ನವೆಂಬರ್‌ನಲ್ಲಿ ಐಸಿಸಿ ಏಕದಿನ ವಿಶ್ವಕಪ್
- ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ಜಂಟಿ ಆತಿಥ್ಯ

ಸಿನ್ನರ್, ಸೆಬಲೆಂಕಾ ಚಾಂಪಿಯನ್ಸ್

» ಇಂಡಿಯನ್ ವೆಲ್ಸ್ 2026 ಎಟಿಪಿ ಮಾಸ್ಟರ್ಸ್ ಟೂರ್ನಿ
ಎಲ್ಲಾ 6 ಎಟಿಪಿ ಮಾಸ್ಟರ್ಸ್ 1000 ಹಾರ್ಡ್‌ಕೋರ್ಟ್ ಪ್ರಶಸ್ತಿ ಗೆದ್ದ 3ನೇ ಟೆನಿಸಿಗ ಯಾನಿಕ್ ಸಿನ್ನರ್





ಕ್ಯಾಲಿಫೋರ್ನಿಯಾ: ಇಂಡಿಯನ್ ವೆಲ್ಸ್ ಎಟಿಪಿ ಮಾಸ್ಟರ್ಸ್ ಟೆನಿಸ್ ಪಂದ್ಯಾವಳಿಯಲ್ಲಿ ಇಟಲಿಯ ಯಾನಿಕ್ ಸಿನ್ನರ್ ಪುರುಷರ ಸಿಂಗಲ್ಸ್ ವಿಭಾಗದ ಹಾಗೂ ಬೆಲಾರೂಸ್‌ನ ಆರೀನಾ ಸೆಬಲೆಂಕಾ ಅವರು ಮಹಿಳೆಯರ ವಿಭಾಗದ ಚಾಂಪಿಯನ್ನರಾಗಿ ಹೊರಹೊಮ್ಮಿದ್ದಾರೆ.


ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಸಿನ್ನರ್ ತನ್ನ ಚೊಚ್ಚಲ ಇಂಡಿಯನ್ ವೆಲ್ಸ್ ಪ್ರಶಸ್ತಿಯನ್ನು ಗೆದ್ದರು. ಅವರು ಫೈನಲ್‌ನಲ್ಲಿ ಡೇನಿಲ್ ಮೆಡ್ವೆಡೆವ್ ಅವರನ್ನು 7-6(6), 7-6(4) ನೇರ ಸೆಟ್‌ಗಳ ಅಂತರದಿಂದ ಸೋಲಿಸಿ, ಕ್ಯಾಲಿಫೋರ್ನಿಯಾ ಮರುಭೂಮಿಯ ಸೂರ್ಯನಡಿ ಅದ್ಭುತ ಹಾರ್ಡ್‌ಕೋರ್ಟ್ ಪ್ರದರ್ಶನ ನೀಡಿದರು. ಇಟಲಿ ಆಟಗಾರ ಸಂಪೂರ್ಣ ಪಂದ್ಯದಲ್ಲಿ ಪ್ರಾಬಲ್ಯ ತೋರಿದರು. 28 ವಿನ್ನರ್‌ಗಳು

ಒಂದೂ ಸೆಟ್ ಸೋಲದೆ ಎಟಿಪಿ ಪ್ರಶಸ್ತಿ: 1990ರಿಂದ ಒಂದೂ ಸೆಟ್ ಕೂಡ ಕಳೆದುಕೊಳ್ಳದೇ ಸತತ ಎಟಿಪಿ ಮಾಸ್ಟರ್ಸ್ 1000 ಪ್ರಶಸ್ತಿಗಳನ್ನು ಗೆದ್ದ ಮೊದಲ ಆಟಗಾರ ಎಂಬ ದಾಖಲೆಯನ್ನೂ ನಿರ್ಮಿಸಿದರು. ಕಳೆದ ನವೆಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ಪಡೆದ ಪ್ರಶಸ್ತಿಯಿಂದ ಆರಂಭವಾದ ಅವರ ಗೆಲುವಿನ ಸರಣಿ ಈಗ 11 ಪಂದ್ಯಗಳಿಗೆ ಏರಿದೆ.

ಸೆಬಲೆಂಕಾಗೆ ವೃತ್ತಿಜೀವನದ 23ನೇ ಪ್ರಶಸ್ತಿ!: ಬೆಲಾರೂಸ್ ತಾರೆ ಆರೀನಾ ಸೆಬಲೆಂಕಾ ಭಾನುವಾರ ತಮ್ಮ ದೀರ್ಘಕಾಲದ ಸೋಲಿನ ಸರಪಣಿಯನ್ನು ಮುರಿದು, ಇದೇ ಮೊದಲ ಬಾರಿಗೆ ಇಂಡಿಯನ್ ವೆಲ್ಸ್‌ನಲ್ಲಿ ಪ್ರಶಸ್ತಿಗೆ ಮುತ್ತಿಟ್ಟಿದ್ದಲ್ಲದೆ ತಮ್ಮ ವೃತ್ತಿಜೀವನದ 23ನೇ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ರೋಚಕ ಫೈನಲ್ ಪಂದ್ಯದಲ್ಲಿ ಕಜಕಿಸ್ತಾನದ ತಾರೆ ಎಲೆನಾ ರೀಬಕಿನ ಅವರನ್ನು 3-6, 6-3, 7-6(6) ಅಂತರದಿಂದ ಸೋಲಿಸಿ ಮೊದಲ ಬಾರಿಗೆ ಕ್ಯಾಲಿಫೋರ್ನಿಯಾದಲ್ಲಿ ಪ್ರಶಸ್ತಿಗೆ ಮುತ್ತಿಟ್ಟರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5926

ಎಡದಿಂದ ಬಲಕ್ಕೆ
2.ಗಡಿಯ ನಡುವೆ ಕಟ್ಟಿದ ವ್ಯಾಯಾಮ ಶಾಲೆ (3)
5.ಮಕ್ಕಳು ಮರಳಿನಿಂದ ಕಟ್ಟಿದ ಮನೆ (4)
6. ಗೋಡಂಬಿಯನ್ನು ಹೀಗೂ ಕರೆಯುತ್ತೇವೆ (4)
7. ಮಣ್ಣಿನ ಪಾತ್ರೆ ಮಾಡುವ ಕಾಯಕದವ (3)
8.ದೃಷ್ಟಿಯೂ ಹೌದು-ಕಾಣಿಕೆಯೂ ಹೌದು (3)
10.ಭೂಮಿ-ಆಕಾಶಕ್ಕೂ ನಡುವಿನ ಪ್ರದೇಶ (4)
11.ಸಂತನ ನಡುವೆ ಕುಗ್ಗಿದ್ದು ಇದೆ (4)
13. ಈತ ಹರಿಕಥೆ ಮಾಡುವವನು (5)
15. ಜೀರ್ಣಕ್ರಿಯೆಯ ಮುಖ್ಯ ಅಂಗ (3)
16. ತಾಳ್ಮೆಯಿಂದ ಸೈರಿಸಿಕೋ (3)

ಮೇಲಿನಿಂದ ಕೆಳಕ್ಕೆ
1.ಕೊಂಬೆಗಳಿಲ್ಲದ ಎತ್ತರವಾದ ಮರ (2)
2. ಗರದ ನಡುವೆ ಅಡಗಿದ ಕಠಿಣವಾದದ್ದು (4)
3.ಅಪಹಾಸ್ಯಕ್ಕೆ ಒಳಗಾದವನು ತಲೆಕೆಳಗಾಗಿದ್ದಾನೆ (4)
4. ಒಂದು ದೇಶದ ಆಡಳಿತಗಾರ (2)
7.ಬಲ ಕಡಿಮೆಯಾದದ್ದು-ಕುಗ್ಗಿದುದು (3)
9. ತಳಿರು ಇಲ್ಲಿ ತಲೆಕೆಳಗಾಗಿದೆ (3)
10. ಅಂಕದ ನಡುವೆ ಕುಜಗ್ರಹವಿದೆ (4)
12.ಅಕಸ್ಮಾತ್ ಪರಿಸ್ಥಿತಿಯಿಂದ ಮನ ಅಸ್ತವ್ಯಸ್ತವಾಗು (4)
13.ಹೀನವೂ ಹೌದು-ಎಳೆದುಹಾಕುವಿಕೆಯೂ ಹೌದು (2)
14.ಇದು ಹಣ್ಣಿನ ಸಾರ (2)

5925 ಉತ್ತರ

ಎಡದಿಂದ ಬಲಕ್ಕೆ:
2.ಅನುಕೂಲಿಗ
5.ಉಗ್ರ 6.ಧೇನು
7.ಕಲಹ 9.ಅವನಿ
11.ಕಾಯಿಸು 13.ಜನನಿ
15.ಲವ 16.ಮಾರಿ
17.ಕ್ರಮಪಡಿಸು

ಮೇಲಿನಿಂದ ಕೆಳಕ್ಕೆ :
1 .ಆಕರ್ಷಕ 2.ಅನುಗ್ರಹ
3.ಅನುರಾಗ
4.ಬಿರಿಯಾನಿ 8.ಲಡಾಯಿ
10.ವದನ 11.ಸುಚರಿತ
12.ಕಾಲಚಕ್ರ
13.ಜಮಾಯಿಸು
14.ನಿವೇದನೆ

ಇಶಾನ್ ಕಿಶನ್ ಸನ್‌ರೈಸರ್ಸ್ ನಾಯಕ?



ಟಿ20 ವಿಶ್ವಕಪ್ ಗೆಲುವಿನ ರೂವಾರಿ

ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರಲ್ಲಿ ಇಶಾನ್ ಕಿಶನ್ ಭಾರತ ತಂಡಕ್ಕೆ ಮಹತ್ವದ ಪಾತ್ರ ವಹಿಸಿದರು. 9 ಇನ್ನಿಂಗ್ಸ್‌ಗಳಲ್ಲಿ 317 ರನ್ ಗಳಿಸಿದ ಕಿಶನ್, ಭಾರತದ ಎರಡನೇ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದರು. ಅವರ ಸರಾಸರಿ 35.22 ಆಗಿದ್ದು, ಸ್ಟ್ರೈಕ್ ರೇಟ್ 193 ದಾಟಿತ್ತು. ಈ ಅಭಿಯಾನದಲ್ಲಿ 3 ಅರ್ಧಶತಕಗಳು ಸೇರಿದ್ದು, ಫೈನಲ್‌ನಲ್ಲೂ ಒಂದು ಅರ್ಧಶತಕ ಬಾರಿಸಿ ಭಾರತ ತಂಡಕ್ಕೆ ಪ್ರಶಸ್ತಿ ಗೆಲ್ಲಲು ನೆರವಾದರು.

ಹೈದರಾಬಾದ್: ಭಾರತ ತಂಡದ ಎಡಗೈ ಬ್ಯಾಟ್ಸ್‌ಮನ್ ಇಶಾನ್ ಕಿಶನ್ ಮುಂಬರುವ ಐಪಿಎಲ್ 2026 ಹಂಗಾಮಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮುನ್ನಡೆಸುವ ಸಾಧ್ಯತೆಯಿದೆ. ಆಸ್ಟ್ರೇಲಿಯಾದ ವೇಗದ ಬೌಲರ್ ಪ್ಯಾಟ್ ಕಮ್ಮಿನ್ಸ್ ಯಾವಾಗ ತಂಡದೊಂದಿಗೆ ಸೇರಿಕೊಳ್ಳುತ್ತಾರೆ ಎಂಬುದರ ಕುರಿತು ಇನ್ನೂ ಸ್ಪಷ್ಟತೆ ಇಲ್ಲದಿರುವ ಕಾರಣ, ಕಿಶನ್ ನಾಯಕರಾಗಲು ಪ್ರಮುಖ ಅಭ್ಯರ್ಥಿ ಎಂಬ ನಿರೀಕ್ಷೆಯಿದೆ. ಮೂಲಗಳ ಪ್ರಕಾರ, ಈ ವಿಷಯದ ಬಗ್ಗೆ ಸನ್‌ರೈಸರ್ಸ್ ಕ್ರಿಕೆಟ್ ನಿರ್ವಹಣಾ ಮಂಡಳಿ ಚರ್ಚೆ ನಡೆಸಿದ್ದು, ಕಮ್ಮಿನ್ಸ್ ಗೈರುಹಾಜರಿಯಲ್ಲಿ ನಾಯಕತ್ವ ವಹಿಸಲು ಕಿಶನ್ ಅವರನ್ನು ಅತ್ಯಂತ ಸೂಕ್ತ ಅಭ್ಯರ್ಥಿಯನ್ನಾಗಿ ಗುರುತಿಸಿದೆ.

ಈ ವೇಳೆ ಕಿಶನ್ ಅವರ ಪ್ರದರ್ಶನವೂ ಅತ್ಯುತ್ತಮ ಮಟ್ಟದಲ್ಲಿದೆ. 27 ವರ್ಷದ ಈ ಆಟಗಾರ ಇತ್ತೀಚಿನ ಟಿ20 ವಿಶ್ವಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ ದೇಶದ ಗಮನ ಸೆಳೆದಿದ್ದರು. ಆರಂಭದಲ್ಲಿ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್ ಆಗಿ ಹಾಗೂ ನಂತರ ಸಂಜು ಸ್ಯಾಮ್ಸನ್ ಪ್ಲೇಯಿಂಗ್ ಇಲೆವೆನ್‌ಗೆ ಮರಳಿದ ನಂತರ ಮೂರನೇ ಕ್ರಮಾಂಕದಲ್ಲಿ ಉತ್ತಮ ಆಟ ಪ್ರದರ್ಶಿಸಿದರು.

ಐಪಿಎಲ್‌ನಲ್ಲಿ ಕಿಶನ್ ಸ್ಫೋಟಕ ಪ್ರದರ್ಶನ: ಐಪಿಎಲ್‌ನಲ್ಲಿ ಕಿಶನ್ ಅತ್ಯಂತ ಸ್ಫೋಟಕ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರಾಗಿ ತಮ್ಮ ಛಾಪು ಮೂಡಿಸಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ಸೇರಿ ಮೂರು ಫ್ರಾಂಚೈಸಿಗಳ ಪರ ಆಡಿರುವ ಅವರು ಟೂರ್ನಿಯ ಒಟ್ಟು 119 ಪಂದ್ಯಗಳ 112 ಇನ್ನಿಂಗ್ಸ್‌ಗಳಲ್ಲಿ 2,998 ರನ್ ಕಲೆಹಾಕಿದ್ದಾರೆ. ಅವರ ಸರಾಸರಿ 29.10 ಆಗಿದ್ದು, 137.64 ಸ್ಟ್ರೈಕ್ ರೇಟ್ ಅನ್ನು ಹೊಂದಿದ್ದಾರೆ.

ಅವರ ಖಾತೆಯಲ್ಲಿ 1 ಶತಕ, 17 ಅರ್ಧಶತಕಗಳು, 288 ಬೌಂಡರಿಗಳು ಹಾಗೂ 134 ಸಿಕ್ಸರ್‌ಗಳು ಸೇರಿವೆ. ಇದು ಅವರ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಯನ್ನು ಸ್ಪಷ್ಟಪಡಿಸುತ್ತದೆ. ವಿಕೆಟ್ ಹಿಂದೆ ಕೂಡ ಅವರು 59 ಕ್ಯಾಚ್‌ಗಳು ಮತ್ತು 5 ಸ್ಟಂಪಿಂಗ್‌ಗಳ ಮೂಲಕ ತಂಡಕ್ಕೆ ಕೊಡುಗೆ ನೀಡಿದ್ದಾರೆ.

2025ರ ಹರಾಜಿನಲ್ಲಿ 11.25 ಕೋಟಿಗೆ ಖರೀದಿ!: 2025ರ ಹಂಗಾಮಿನಲ್ಲಿ ಹರಾಜಿನಲ್ಲಿ ರೂ. 11.25 ಕೋಟಿಗೆ ಖರೀದಿಸಲ್ಪಟ್ಟ ನಂತರದ ಮೊದಲ ಸೀಸನ್‌ನಲ್ಲಿ ಅವರು 14 ಪಂದ್ಯಗಳಲ್ಲಿ 354 ರನ್ ಗಳಿಸಿದ್ದರು. ಆ ಸಂದರ್ಭದಲ್ಲಿ ಅವರ ಸ್ಟ್ರೈಕ್ ರೇಟ್ 152.58 ಆಗಿದ್ದು, ತಲಾ ಒಂದು ಶತಕ ಮತ್ತು ಅರ್ಧಶತಕವನ್ನು ಕೂಡ ದಾಖಲಿಸಿದ್ದರು.

ಆದಾಯ ಸ್ಥಿರತೆ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿಯ ಮಾರ್ಗ | ವಿಕಸಿತ ಭಾರತ-2047 ಗುರಿಯತ್ತ ದಿಟ್ಟ ಹೆಜ್ಜೆ

ವಿಬಿ ಜಿ ರಾಮ್ ಜಿ ಸಮಗ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ದಾರಿದೀಪ

ವಿಕಸಿತ ಭಾರತ-ರೋಜಗಾರ್ ಮತ್ತು ಜೀವನೋಪಾಯ ಖಾತರಿ ಮಿಷನ್ (ಗ್ರಾಮೀಣ) ಇದು ಒಂದು ಪರಿಷ್ಕೃತ ಸಮಗ್ರ, ಸುಸ್ಥಿರ ಗ್ರಾಮೀಣ ಅಭಿವೃದ್ಧಿಯ ನೂತನ ಯೋಜನೆ. ಇದು ಇಂಗ್ಲೀಷ್‌ನಲ್ಲಿ ವಿಬಿ-ಜಿ ರಾಮ್-ಜಿ (VB-G RAM-G) ಎಂದು ಸಂಕ್ಷಿಪ್ತವಾಗಿ ಕರೆಯಲಾಗುತ್ತದೆ. ಇದು ಯಾರ ಒಬ್ಬ ವ್ಯಕ್ತಿಯ, ಊರಿನ ಅಥವಾ ಧರ್ಮ ಗ್ರಂಥದ ಹೆಸರೂ ಅಲ್ಲ, ಬಲ ಅಥವಾ ಎಡಪಂಕ್ತಿಯ ಸೈದ್ಧಾಂತಿಕ ಕೃತಿಯ ಹೆಸರೂ ಅಲ್ಲ. ಇದು ಒಬ್ಬ ವ್ಯಕ್ತಿಯ ಕೇವಲ ಉದ್ಯೋಗ ಸೃಷ್ಟಿಯ ಯೋಜನೆ ಅಲ್ಲ; ಇದು ಸಮಗ್ರ ಗ್ರಾಮೀಣ ಅಭಿವೃದ್ಧಿ ಜೊತೆಗೆ ಆದಾಯ ಸ್ಥಿರತೆ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿಯ ಮಾರ್ಗವಾಗಿದ್ದು, ವಿಕಸಿತ ಭಾರತ-2047 ಗುರಿಯನ್ನು ಸಾಧಿಸಲು ಗ್ರಾಮೀಣ ಭಾರತವನ್ನು ಬಲಪಡಿಸುವ ಒಂದು ದಿಟ್ಟ ಹೆಜ್ಜೆಯಾಗಿದೆ.ಇದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ 2005 (MGN-REGA)ರ ಬದಲಾಗಿ ದೇಶಾದ್ಯಂತ ಏ.1, 2026ರಿಂದ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.



ವಿಬಿ-ಜಿರಾಮ್-ಜಿ ಯೋಜನೆಯ ವಿಶೇಷತೆಗಳು: ಇದು ಹಕ್ಕು-ಆಧಾರಿತ, ಬೇಡಿಕೆ-ಪ್ರಚೋದಿತ ಗ್ರಾಮೀಣ ಉದ್ಯೋಗ ಯೋಜನೆಯಿಂದ, ವಿಕಸಿತ ಭಾರತ ಗುರಿ ಸಾಧನೆಗೆ ಹೊಂದಿಕೊಳ್ಳುವ ಬಜೆಟ್ ಮಿತಿಯ ಪೂರೈಕೆ-ಆಧಾರಿತ ಯೋಜನೆಯಾಗಿದೆ. ಅಂದರೆ ಈಯೋಜನೆಯು ಗ್ರಾಮೀಣ ಉದ್ಯೋಗವನ್ನು ಕೇವಲ ಕೂಲಿ ಆಧಾರಿತ ಯೋಜನೆಯಾಗಿ ಅನುಷ್ಠಾನಗೊಳಿಸದೆ, ಉತ್ಪಾದಕ ಆಸ್ತಿ ನಿರ್ಮಾಣ, ಮಹಿಳಾ ಸಬಲೀಕರಣ, ಹವಾಮಾನ ಪ್ರತಿರೋಧಕ ಅಭಿವೃದ್ಧಿ ಮತ್ತು ಪಾರದರ್ಶಕ ಆಡಳಿತ ಹೊಂದಿದ ಸಮಗ್ರ ಗ್ರಾಮೀಣ ಅಭಿವೃದ್ಧಿ ಚೌಕಟ್ಟಾಗಿ ರೂಪಿಸಲಾಗಿದೆ.

ಜೀವನೋಪಾಯ ಕಾಮಗಾರಿಗಳು: ಕೇವಲ ತಾತ್ಕಾಲಿಕ ಕೂಲಿ ಕೆಲಸ ಒದಗಿಸುವುದರ ಜೊತೆಗೆ ಉತ್ಪಾದಕ ಮತ್ತು ದೀರ್ಘಕಾಲಿಕ ಆದಾಯ ಸೃಷ್ಟಿಸುವ ಆಸ್ತಿಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡುವುದು. ನಾಲ್ಕು ಕ್ಷೇತ್ರಗಳಲ್ಲಿ ಶಾಶ್ವತ ಆಸ್ತಿಗಳ ನಿರ್ಮಾಣ ಮಾಡಲಾಗುತ್ತದೆ. ಅಂದರೆ ನೀರಿನ ಭದ್ರತೆ, ಗ್ರಾಮೀಣ ಮೂಲಸೌಕರ್ಯ, ಜೀವನೋಪಾಯ ಸಂಬಂಧಿತ ಮೂಲಸೌಕರ್ಯ ಮತ್ತು ತೀವ್ರ ಹವಾಮಾನ ಶಮನಗೊಳಿಸುವ ಕಾಮಗಾರಿಗಳು ಈ ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು. ಇದರಿಂದ ದೀರ್ಘಕಾಲಿಕ ಮತ್ತು ಉತ್ಪಾದಕ ಗ್ರಾಮೀಣ ಆಸ್ತಿಗಳು ಸೃಷ್ಟಿಯಾಗುತ್ತವೆ.

ನೀರಿನ ಭದ್ರತೆ: ನೀರಿನ ಕೊರತೆ ಗ್ರಾಮೀಣ ಭಾರತದ ಮುಖ್ಯ ಸಮಸ್ಯೆಯಾಗಿದೆ. ಹೀಗಾಗಿ ವಿಕಸಿತ ಭಾರತ ಗುರಿ ಸಾಧನೆಯ ಹಿನ್ನಲೆಯಲ್ಲಿ ನೀರಿನ ಭದ್ರತೆ ಒದಗಿಸುವ ಸಲುವಾಗಿ ಕೆರೆಗಳ ಮರುನಿರ್ಮಾಣ, ಚೆಕ್‌ಡ್ಯಾಂ, ಬಂಡೆಗಳು, ಮಳೆ ನೀರು ಸಂಗ್ರಹಣೆ, ಭೂಗರ್ಭ ಜಲ ಸಂರಕ್ಷಣೆ ಮುಂತಾದ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಲು ಪ್ರಸ್ತಾವಿಸಲಾಗಿದೆ.

ಗ್ರಾಮೀಣ ಮೂಲಸೌಕರ್ಯ: ಗ್ರಾಮೀಣ ಭಾರತದ ಸಮಗ್ರ ಸುಸ್ಥಿರ ಅಭಿವೃದ್ಧಿಯಲ್ಲಿ ಮೂಲಸೌಕರ್ಯಗಳ ಪಾತ್ರ ಮಹತ್ವದ್ದು. ಇವುಗಳ ಗುಣಮಟ್ಟದ ಕೊರತೆಗಳಿಂದ ಅಭಿವೃದ್ಧಿ ಕುಂಠಿತಗೊಂಡಿದ್ದರಿಂದ, ಗ್ರಾಮೀಣ ರಸ್ತೆ, ಕಾಲುವೆಗಳು, ಸ್ಮಶಾನ ಭೂಮಿ ಅಭಿವೃದ್ಧಿ, ಸಾರ್ವಜನಿಕ ಕಟ್ಟಡ ಮುಂತಾದವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ಮಹಿಳಾ ಮತ್ತು ದುರ್ಬಲ ವರ್ಗಗಳ ಸಬಲೀಕರಣ: ಈ ಯೋಜನೆಯ ಪ್ರತಿ ಕಾಮಗಾರಿಗಳಲ್ಲಿ ಕನಿಷ್ಠ ಶೇ.33ರಷ್ಟು ಮಹಿಳಾ ಕಾರ್ಮಿಕರು ಪಾಲ್ಗೊಳ್ಳುವಿಕೆಗೆ ಕಡ್ಡಾಯಗೊಳಿಸಲಾಗಿದೆ. ಕೂಲಿ ಆಧಾರಿತ ಉದ್ಯೋಗ ಒದಗಿಸುವಲ್ಲಿ ಏಕಾಂಗ ಮಹಿಳೆಯರಿಗೆ ಹಾಗೂ ಮಹಿಳಾ ಮುಖ್ಯಸ್ಥ ಕುಟುಂಬಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಐದು ಅಥವಾ ಹೆಚ್ಚು ಮಕ್ಕಳು ಕೆಲಸಕ್ಕೆ ಬರುವ ಮಹಿಳೆಯರೊಂದಿಗೆ ಇದ್ದಲ್ಲಿ, ಕಾರ್ಯಕ್ಷೇತ್ರದಲ್ಲಿ ಸೌಲಭ್ಯ ಒದಗಿಸುವುದು ಕಡ್ಡಾಯ.

ಪಾರದರ್ಶಕತೆ ಮತ್ತು ಜವಾಬ್ದಾರಿತ್ವ: ಬಯೋಮೆಟ್ರಿಕ್ ದೃಢೀಕರಣ ಮತ್ತು ಡಿಜಿಟಲ್ ಮೇಲ್ವಿಚಾರಣೆ ಮೂಲಕ ಅಕ್ರಮ ಕಾಮಗಾರಿಗಳ ಸೃಷ್ಟಿ, ಜಾಬ್ ಕಾರ್ಡ್‌ಗಳ ನೋಂದಣಿ, ವೇತನ ಪಾವತಿ ವಿಳಂಬ ಮುಂತಾದ ಸಮಸ್ಯೆಗಳನ್ನು ಇತ್ಯಾರ್ಥಗೊಳಿಸಲು ಸಾಧ್ಯ. ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನದ ಮೂಲಕ ಈ ಯೋಜನೆಯ ಕಾಮಗಾರಿಗಳ ಸಾಮಾಜಿಕ ಲೆಕ್ಕಪತ್ರ ಮತ್ತು ದೂರು ನಿವಾರಣಾ ವ್ಯವಸ್ಥೆಯನ್ನು ಬಲಪಡಿಸಲಾಗುತ್ತದೆ.

ಸಮಗ್ರ ಯೋಜನೆ ಮತ್ತು ಸಂಯೋಜನೆ: ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳೊಂದಿಗೆ ಇದು ಸಮನ್ವಯಗೊಳಿಲಾಗುತ್ತದೆ. ವಿಕಸಿತ ಗ್ರಾಮ ಪಂಚಾಯತ್ ಯೋಜನೆಗಳು (Viksit Gram Panchayat Plans) ಹಾಗೂ ಇತರ ಯೋಜನೆಗಳ ಸಂಯೋಜನೆಯ ಮೂಲಕ ಕೂಲಿ ಆಧಾರಿತ ಉದ್ಯೋಗವನ್ನು ಆಸ್ತಿ ನಿರ್ಮಾಣ, ಮೂಲಸೌಕರ್ಯ ಕೊರತೆ ನಿವಾರಣೆ ಮತ್ತು ದೀರ್ಘಕಾಲೀನ ಜೀವನೋಪಾಯ ವೃದ್ಧಿಯ ಕಾಮಗಾರಿಗಳೊಂದಿಗೆ ಸಂಪರ್ಕಿಸುತ್ತದೆ.

ಕೇಂದ್ರ-ರಾಜ್ಯಗಳ ನಡುವೆ ನಿಧಿ ಹಂಚಿಕೆ: ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ ವಸ್ತು ಮತ್ತು ಪರಿಣತ ಕಾರ್ಮಿಕರ ಮೇಲಿನ ವೆಚ್ಚ ಶೇ.60ರಷ್ಟು ಕೇಂದ್ರ ಸರ್ಕಾರ ಮತ್ತು ಶೇ. 40ರಷ್ಟು ರಾಜ್ಯ ಸರ್ಕಾರ ಭರಿಸಬೇಕಾಗುತ್ತದೆ. ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಪಾಲು ಕಡಿಮೆ ಮಾಡಿ ರಾಜ್ಯ ಸರ್ಕಾರದ ಪಾಲು ಶೇ.25ರಿಂದ ಶೇ.40ರಷ್ಟಕ್ಕೆ ಹೆಚ್ಚಿಸಲಾಗಿದೆ.

ಪ್ರಸ್ತುತ ಹಣಕಾಸಿನ ವರ್ಷದಲ್ಲಿ ಕೇಂದ್ರ ಸರ್ಕಾರವು ಮನರೇಗಾ ಯೋಜನೆಯಡಿಯಲ್ಲಿ 30,000 ಕೋಟಿರೂ. ಮತ್ತು ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ 95,692 ಕೋಟಿ ರೂ.ಗಳನ್ನ ಕಾಯ್ದಿರಿಸಲಾಗಿದೆ. ಅಂದರೆ ಒಟ್ಟು 1,25,692 ಕೋಟಿ ರೂ.ಗಳನ್ನು ವೆಚ್ಚ ಮಾಡುವ ಉದ್ದೇಶವನ್ನು ಹೊಂದಿದೆ.

ರಾಜ್ಯ ಸರ್ಕಾರಗಳ ವಿರೋಧವೇಕೆ?: ದೇಶದ ಬಹುತೇಕ ರಾಜ್ಯಗಳು ವಿಬಿ ಜಿ ರಾಮ್ ಜಿ ಯೋಜನೆಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದರೆ, ಕರ್ನಾಟಕ ರಾಜ್ಯ ಸೇರಿದಂತೆ ತೆಲಂಗಾಣ, ತಮಿಳುನಾಡು ಮತ್ತು ಪಂಜಾಬ್ ರಾಜ್ಯಗಳುಇದರ ಅನುಷ್ಠಾನವನ್ನು ಏಕಾಏಕಿಯಾಗಿ ವಿರೋಧಿಸುತ್ತಿವುದು ವಿಷಾದನೀಯ. ಏಕೆಂದರೆ ಈ ಯೋಜನೆಯನ್ನು ಜಾರಿಗೆ ತಂದರೆ ರಾಜ್ಯ ಸರ್ಕಾರಗಳ ಮೇಲೆ ಆರ್ಥಿಕ ಭಾರ ಹೆಚ್ಚಾಗುವ ಸಾಧ್ಯತೆ ಇದೆ.

ಆದರೆ ಈ ಯೋಜನೆ ರೈತರ, ಬಡವರ, ಮಹಿಳೆಯರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದೂಳಿದ ಜನರ, ಯುವಕರಮೇಲೆ ಅಥವಾಗ್ರಾಮೀಣ ಸುಸ್ಥಿರ ಅಭಿವೃದ್ಧಿಯ ಮೇಲೆ ಯಾವುದೇ ರೀತಿಯ ವ್ಯತಿರಿಕ್ತವಾದ ಪರಿಣಾಮ ಬೀರುವುದಿಲ್ಲ. ಇದು ಗ್ರಾಮೀಣ ಭಾರತದ ಆರ್ಥಿಕತೆಯನ್ನು ಇನ್ನಷ್ಟು ಬಲಪಡಿಸುವುದರ ಮೂಲಕ 2047ರೊಳಗೆ ವಿಕಸಿತ ಭಾರತ ಗುರಿ ಸಾಧಿಸಲು ಅಣಿಯಾಗುವಂತೆ ಪರಿಷ್ಕೃತಗೊಂಡು ಅನುಷ್ಠಾನಗೊಳ್ಳಲ್ಪಡುವ ಒಂದು ಯೋಜನೆ.

ಪ್ರೊ. ಆರ್.ಆರ್. ಬಿರಾದಾರ
ಕುಲಸಚಿವರು, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ,
ಕಲಬುರಗಿ, rrbiradar@kud.ac.in

ಕಾಂಗ್ರೆಸ್‌ನಲ್ಲಿ ಒಡಕು ತಾರಕಕ್ಕೇರಿದೆ ; ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ ಆರೋಪ

ಉಪಚುನಾವಣೆ ಗಂಭೀರವಾಗಿ ಪರಿಗಣನೆ

ದಾವಣಗೆರೆ: ಈ ಬಾರಿ ದಾವಣಗೆರೆ ದಕ್ಷಿಣದಲ್ಲಿ ಬಿಜೆಪಿ ಎಂಬ ಘೋಷಣೆಯೊಂದಿಗೆ ಉಪಚುನಾವಣೆಗೆ ಸಿದ್ಧತೆ ನಡೆದಿದ್ದು, ಪ್ರಸ್ತುತ ಚುನಾವಣೆಯನ್ನು ಪಕ್ಷದ ಕೇಂದ್ರ ಮತ್ತು ರಾಜ್ಯ ನಾಯಕರು ಅತ್ಯಂತ ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ ತಿಳಿಸಿದರು.



ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಪಕ್ಷದ ಎಲ್ಲಾ ಆಕಾಂಕ್ಷಿಗಳು ಒಗ್ಗಟ್ಟಾಗಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷದಲ್ಲಿನ ಒಡಕು ತಾರಕಕ್ಕೇರಿದೆ. ದಾವಣಗೆರೆ ದಕ್ಷಿಣದಲ್ಲಿ ಒಳ್ಳೆಯ ಶಾಲಾ-ಕಾಲೇಜು, ಆಸ್ಪತ್ರೆ ಸಹಿತ ಮೂಲಭೂತ ಸೌಕರ್ಯ ಇಲ್ಲ. ಗ್ಯಾರಂಟಿ ಯೋಜನೆಗಳ ಮೂಲಕ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು 20 ವರ್ಷ ಹಿಂದಕ್ಕೆ ತೆಗೆದುಕೊಂಡು ಹೋಗಿದೆ. ರಾಜ್ಯದೆಲ್ಲೆಡೆ ಆಡಳಿತ ವಿರೋಧಿ ಅಲೆಯೂ ಇದೆ. ಈ ಎಲ್ಲಾ ಅಂಶಗಳು ಬಿಜೆಪಿ ಗೆಲುವಿಗೆ ಕಾರಣವಾಗಲಿವೆ. ಚುನಾವಣೆ ಹಿನ್ನೆಲೆಯಲ್ಲಿ ಪಕ್ಷ ಸಂಘಟನೆ ಕಾರ್ಯ ಚುರುಕುಗೊಂಡಿದ್ದು, ದಾವಣಗೆರೆ ದಕ್ಷಿಣದಲ್ಲಿ ಬಿಜೆಪಿ ಈ ಬಾರಿ ಗೆಲ್ಲುವ ಬಗ್ಗೆ ಕೇಂದ್ರ ಹಾಗೂ ರಾಜ್ಯ ನಾಯಕರಿಗೆ ವಿಶ್ವಾಸ ಹೆಚ್ಚಿದೆ ಎಂದರು.



ದಾವಣಗೆರೆ ದಕ್ಷಿಣ ಉಪಚುನಾವಣೆ ಸಂಬಂಧ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರರ ನಿರ್ದೇಶನದಂತೆ ತಂಡ ರಚಿಸಲಾಗಿದೆ. ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್, ಪಕ್ಷದ ಮಾಜಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ವಿಧಾನ ಪರಿಷತ್ ಸದಸ್ಯರಾದ ಎ. ನಾರಾಯಣಸ್ವಾಮಿ, ಮಾಜಿ ಕೇಂದ್ರ ಸಚಿವ ಡಾ.ಜಿ.ಎಂ. ಸಿದ್ದೇಶ್ವರ್, ಮಾಜಿ ಸಂಸದ ದೊಡ್ಡನಗೌಡ ಪಾಟೀಲ್, ವಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ಶಾಸಕರಾದ ಎಂ. ಚಂದ್ರಪ್ಪ, ಬಿ.ಪಿ. ಹರೀಶ್, ಭಾರತಿ ಶೆಟ್ಟಿ, ಶಿವನಗೌಡ ನಾಯಕ್, ಮಾಜಿ ಸಚಿವರಾದ ಎಂ.ಪಿ. ರೇಣುಕಾಚಾರ್ಯ, ಎಸ್. ಮುನಿಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ. ಗೌಡ ತಂಡದಲ್ಲಿದ್ದು, ಇವರೆಲ್ಲರೂ ಕ್ಷೇತ್ರದಲ್ಲಿದ್ದು ಬಿಜೆಪಿ ಗೆಲುವಿಗೆ ಸಹಕರಿಸಲಿದ್ದಾರೆ ಎಂದು ತಿಳಿಸಿದರು.

ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ದಾವಣಗೆರೆ ದಕ್ಷಿಣಕ್ಕೆ ಈವರೆಗಿನ ನಡೆದ ಎಲ್ಲ ಚುನಾವಣೆಗಳಲ್ಲಿ ಅಕ್ರಮ ನಡೆದಿದೆ. 2023ರ ಚುನಾವಣೆಯಲ್ಲಿ ಶಾಮನೂರರ ಫೋಟೋ ಸಮೇತ ಕುಕ್ಕರ್, ಸೀರೆ, ತವಾ ಹಂಚಿದರೂ ಯಾವುದೇ ಕ್ರಮವಾಗಲಿಲ್ಲ. ಈ ಬಾರಿ ಕೂಡ ಅಕ್ರಮಗಳ ಸರಮಾಲೆ ಶುರುವಾಗುವ ಸಾಧ್ಯತೆ ಇದೆ. ಡಿಸಿ, ಎಸ್ಪಿ ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು. ಚುನಾವಣೆಗೆ 48 ಗಂಟೆ ಮೊದಲಿನಿಂದಲೇ ಹೊರಗಿನವರು ಕ್ಷೇತ್ರದಲ್ಲಿ ಇರುವಂತಿಲ್ಲ. ಗಲಾಟೆಗೆ ಅವಕಾಶ ಕೊಡದೆ, ಶಾಂತಿಪೂರ್ಣ ಚುನಾವಣೆ ನಡೆಸಬೇಕು. ಮಿಲ್ಲತ್ ಶಾಲೆ ಯಂತಹ ಸೂಕ್ಷ್ಮ ಮತಗಟ್ಟೆಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವ ಜೊತೆಗೆ ಹೆಚ್ಚಿನ ಬಂದೋಬಸ್ತ್ ಒದಗಿಸಬೇಕು. ಇಲ್ಲವಾದರೆ ಮುಂದಿನ ಅನಾಹುತಗಳಿಗೆ ಜಿಲ್ಲಾಡಳಿತವೇ ಹೊಣೆ ಎಂದು ಎಚ್ಚರಿಸಿದರು.

ಪಕ್ಷದ ಹಿರಿಯ ಮುಖಂಡ ಎಂ.ಪಿ. ಕೃಷ್ಣಮೂರ್ತಿ ಪವಾರ್ ಮಾತನಾಡಿ, ದಾವಣಗೆರೆ ದಕ್ಷಿಣದಲ್ಲಿ ಅಭಿವೃದ್ಧಿ ಆಗಿದ್ದರೆ ಅದು ಬಿಜೆಪಿ ಕಾಲದಲ್ಲಿ ಮಾತ್ರ. ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಸಾಕಷ್ಟು ಯೋಜನೆ, ಅನುದಾನ ತಂದು ದಾವಣಗೆರೆ ದಕ್ಷಿಣವನ್ನು ಅಭಿವೃದ್ಧಿಪಡಿಸಲಾಗಿದೆ. ಬಿಜೆಪಿ ಮಾಡಿರುವ ಕೆಲಸಗಳನ್ನು ಕಾಂಗ್ರೆಸ್ಸಿನವರು ತಮ್ಮದೆಂದು ಹೇಳಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಮುಖಂಡರಾದ ಬಾತಿ ವೀರೇಶ್, ಆರ್.ಎಲ್. ಶಿವಪ್ರಕಾಶ್, ಶ್ರೀನಿವಾಸ ದಾಸಕರಿಯಪ್ಪ, ಪಿ.ಸಿ. ಶ್ರೀನಿವಾಸ ಭಟ್, ಹೆಚ್.ಸಿ.ಜಯಮ್ಮ, ಡಾ.ಸಿ.ಆರ್.ನಾಸಿರ್ ಅಹಮದ್, ಸೋಗಿ ಗುರುಶಾಂತ್, ರಾಜೇಶ್, ಕೊಟ್ರೇಶ್, ರಾಜು ನೀಲಗುಂದ ಇದ್ದರು.

ಸ್ಟಾರ್ ಕ್ಯಾಂಪೇನರ್ಸ್..!

ಚುನಾವಣೆ ದೃಷ್ಟಿಯಿಂದ ಪ್ರಚಾರಕ್ಕಾಗಿ ಕೇಂದ್ರ ನಾಯಕರು, ಸ್ಟಾರ್ ಕ್ಯಾಂಪೇನರ್‌ಗಳು ಕೂಡ ಆಗಮಿಸಲಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದರಾದ ಯದುವೀರ ಒಡೆಯರ್, ತೇಜಸ್ವಿ ಸೂರ್ಯ, ಮಾಜಿ ಸಚಿವರಾದ ಶ್ರೀರಾಮುಲು, ಭೈರತಿ ಬಸವರಾಜ್, ಅಣ್ಣಾಮಲೈ, ಪಿ. ರಾಜೀವ್, ಶೃತಿ, ತಾರಾ, ಮಾಳವಿಕ ಅವಿನಾಶ್, ತಾರಿಕ್ ಮನ್ಸೂರ್, ಅಜೀಮ್ ಸೇರಿದಂತೆ ಅನೇಕರು ಚುನಾವಣೆ ಪ್ರಚಾರದಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎಂದು ವಿವರಿಸಿದರು.

ಜಾನಪದ ಕಲಾವಿದೆ ಡಾ. ಜೋಗತಿ ಮಂಜಮ್ಮ ಸಲಹೆ

ಕಷ್ಟ-ಸುಖ ಸಮಾನ ಸ್ವೀಕರಿಸಿ

ದಾವಣಗೆರೆ: ಕಷ್ಟ-ಸುಖಗಳನ್ನು ಸಮಾನವಾಗಿ ಸ್ವೀಕರಿಸಿ ಧೈರ್ಯದಿಂದ ಹೋರಾಡಿದರೆ ಮಾತ್ರ ಯಶಸ್ಸು ಸಾಧ್ಯ. ಜೀವನದಲ್ಲಿ ಯಾವುದೂ ಶಾಶ್ವತವಲ್ಲ. ಸಣ್ಣಪುಟ್ಟ ಸೋಲುಗಳಿಗೆ ಹೆದರಿ ಜೀವನ ಕೊನೆಗಾಣಿಸಬಾರದು ಎಂದು ಪದ್ಮಶ್ರೀ ಪುರಸ್ಕೃತ ಜಾನಪದ ಕಲಾವಿದೆ ಡಾ. ಜೋಗತಿ ಮಂಜಮ್ಮ ಹೇಳಿದರು.

ನಗರದ ಆರ್.ಎಲ್ ಕಾನೂನು ಕಾಲೇಜಿನಲ್ಲಿ ಸೋಮವಾರ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಪರೀಕ್ಷೆಯಲ್ಲಿ ಫೇಲ್ ಆಗಿದ್ದಕ್ಕೆ ಅಥವಾ ಪ್ರೀತಿಯಲ್ಲಿ ಸೋತಿದ್ದಕ್ಕೆ ಆತ್ಮಹತ್ಯೆ ಮಾಡುವಂತಹ ನಿರ್ಧಾರ ತೆಗೆದುಕೊಳ್ಳಬಾರದು. ಬಡತನ, ಶ್ರೀಮಂತಿಕೆ, ಸೋಲು, ಗೆಲುವು ಹೀಗೆ ಯಾವುದೂ ಶಾಶ್ವತವಲ್ಲ. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯಬೇಕು. ಪೋಷಕರು ಮಕ್ಕಳಿಗೆ ಆಸ್ತಿ ಮಾಡುವುದಕ್ಕಿಂತಲೂ ಉತ್ತಮ ಶಿಕ್ಷಣ ನೀಡಬೇಕು. ವಿದ್ಯೆ ಇದ್ದರೆ ಮಾತ್ರ ಸಮಾಜದಲ್ಲಿ ಗೌರವದಿಂದ ಬದುಕಲು ಸಾಧ್ಯ. ಮಕ್ಕಳು ಕೂಡ ತಂದೆ-ತಾಯಿ, ಗುರುಗಳ ಮನಸ್ಸನ್ನು ನೋಯಿಸಬಾರದು ಎಂದರು.

ನಮ್ಮ ದೇಶದಲ್ಲಿ ಹೆಣ್ಣನ್ನು ಶಕ್ತಿ ಸ್ವರೂಪಿಣಿ ಅಂತಾ ಪೂಜಿಸುತ್ತಿದ್ದು, ಪರಮೇಶ್ವರನೇ ತನ್ನ ಅರ್ಧ ಶರೀರವನ್ನು ಪಾರ್ವತಿಗೆ ನೀಡಿ ಅರ್ಧನಾರೀಶ್ವರನಾಗಿದ್ದಾನೆ. ಅಂತಹ ದೇವರನ್ನು ಆರಾಧಿಸುವ ಈ ಸಮಾಜ ಇಂದಿಗೂ ತೃತೀಯಲಿಂಗಿಗಳನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಿರುವುದು ನೋವಿನ ಸಂಗತಿ. ನಮಗೂ ನಿಮ್ಮೊಂದಿಗೆ ಸಹಬಾಳ್ವೆ ನಡೆಸಲು ಅವಕಾಶ ಕೊಡಬೇಕು. ನಮ್ಮಂತಹ ಮಕ್ಕಳನ್ನು ಪೋಷಕರು ತಿರಸ್ಕರಿಸಿ ಬೀದಿಗೆ ಬಿಟ್ಟರೆ ಭಿಕ್ಷಾಟನೆ, ವೇಶ್ಯಾ ವೃತ್ತಿಗೆ ತಳ್ಳಲ್ಪಡುತ್ತಾರೆ. ಈಗಾಗಲೇ ಮಹಿಳೆಯರಿಗೂ ಪುರುಷರ ಸರಿಸಮಾನ



ಮೀಸಲಾತಿ ದಕ್ಕುತ್ತಿದ್ದು, ಮುಂದೊಂದು ದಿನ ತೃತೀಯ ಲಿಂಗಿಗಳಿಗೆ ಮೀಸಲಾತಿ ಸಿಗುವ ದಿನ ದೂರವಿಲ್ಲ. ಈಗಾಗಲೇ ಸರ್ಕಾರ ನೀಡಿರುವ ಶೇ.1ರಷ್ಟು ಮೀಸಲಾತಿಗೆ ಪೊಲೀಸ್ ಇಲಾಖೆ ಸೇರಿದಂತೆ ಹಲವೆಡೆ ಉದ್ಯೋಗ ದೊರೆತಿರುವುದು ಆಶಾಭಾವನೆ ಹುಟ್ಟು ಹಾಕಿದೆ ಎಂದರು.

ನಾನು ಜಾನಪದ ಕಲೆಯನ್ನು ನಂಬಿ ಬದುಕನ್ನು ರೂಪಿಸಿಕೊಂಡವಳು. ದಾವಣಗೆರೆಯ ಹಳೆಯ ಬಸ್ ನಿಲ್ದಾಣದಲ್ಲಿ ಯುವಕನೊಬ್ಬ ಮಾಡುತ್ತಿದ್ದ ನೃತ್ಯ ನೋಡಿ ಪ್ರೇರಿತಳಾಗಿ, ಅಡೆತಡೆಗಳ ನಡುವೆಯೂ ಕಲೆ ಕಲಿಯಲು ನಿರ್ಧರಿಸಿದೆ. ಅಲ್ಲಿಂದ ಆರಂಭವಾದ ನನ್ನ ಪಯಣದಲ್ಲಿ ಹಸಿವು, ಅವಮಾನ ಮತ್ತು ಬಡತನ ಸದಾ ಜೊತೆಗಿದ್ದವು. ಆದರೆ, ಇಂದು ನಾನು ಈ ಸ್ಥಾನದಲ್ಲಿ ನಿಲ್ಲಲು ನನ್ನ ಕಷ್ಟದ ದಿನಗಳು ಕಾರಣ ಎಂದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಬಿ.ಪಿ. ಬಸವನಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ, ಕಾಲೇಜು ನಿರ್ದೇಶಕ ಡಾ.ಎಂ. ಸೋಮಶೇಖರಪ್ಪ, ಐಕ್ಯೂಎಸಿ ಸಂಚಾಲಕ ಕೆ.ಎನ್. ಪ್ರದೀಪ್, ಕಾರ್ಯಕ್ರಮ ಸಂಯೋಜಕಿ ಜಿ.ಹೆಚ್. ತೃಪ್ತಿ ಇದ್ದರು.

ಆರೋಗ್ಯವಂತ ಮಕ್ಕಳಿದ್ದರೆ ಆರೋಗ್ಯವಂತ ರಾಷ್ಟ್ರ

ಚಿತ್ರದುರ್ಗ: ಆರೋಗ್ಯವಂತ ಮಕ್ಕಳು ಆರೋಗ್ಯವಂತ ರಾಷ್ಟ್ರ ಎಂದು ಕಾಸವರಹಟ್ಟಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಬಿ.ಶಿವಕುಮಾರ್ ಹೇಳಿದರು.

ಚಿತ್ರದುರ್ಗ ತಾಲ್ಲೂಕಿನ ಕಾಸವರಹಟ್ಟಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಾಲೂಕ್ ಆರೋಗ್ಯ ಅಧಿಕಾರಿಗಳ ಕಚೇರಿಯ ಸಹಯೋಗದೊಂದಿಗೆ ಸೋಮವಾರ ರಾಷ್ಟ್ರೀಯ ಲಸಿಕಾ ದಿನದ ಪ್ರಯುಕ್ತ ಸಾರ್ವಜನಿಕರಿಗೆ ಆಯೋಜಿಸಿದ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಷ್ಟ್ರಾದ್ಯಂತ ಒಂದು ವರ್ಷದ ಒಳಗಿನ ಮಕ್ಕಳಿಗೆ 12 ಮಾರಕ ರೋಗಗಳ ವಿರುದ್ಧ ಉಚಿತವಾಗಿ ಲಸಿಕೆಗಳನ್ನು ನೀಡುವ ಮುಖಾಂತರ ಮಾರಕ ರೋಗಗಳನ್ನು ತಡೆಯಲಾಗುತ್ತದೆ ಹಾಗೂ ರಾಷ್ಟ್ರಾದ್ಯಂತ ಗರ್ಭಕಂಠದ ಕ್ಯಾನ್ಸರ್ ತಡೆಯಲು 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಎಚ್ ಪಿ ವಿ ಲಸಿಕೆ ನೀಡಲಾಗುತ್ತಿದ್ದು, ಇದರ ಸದುಪಯೋಗ ಅರ್ಹರು ಪಡೆದುಕೊಳ್ಳಬೇಕು ಎಂದರು.

ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ ಮಾಹಿತಿ ನೀಡಿ, ದೇಶದ ಜನರಿಗೆ ಲಸಿಕೆಗಳ ಮಹತ್ವ ತಿಳಿಯಲು ಪ್ರತಿವರ್ಷ ಮಾರ್ಚ್ 16 ರಂದು ರಾಷ್ಟ್ರೀಯ ಲಸಿಕಾ ದಿನವನ್ನು ಆಚರಿಸಲಾಗುತ್ತದೆ. ಲಸಿಕೆಯಿಂದಾಗಿ ಉಂಟಾಗುವ ವ್ಯಾಪಕ ರೋಗನಿರೋಧಕ ಶಕ್ತಿಯು ಸಿಡುಬನ್ನು ವಿಶ್ವದಾದ್ಯಂತ ನಿರ್ಮೂಲನೆ ಮಾಡಲು ಮತ್ತು



ಪೋಲಿಯೋ, ದಡಾರ, ಟೆಟನಸ್ ನಂತಹ ರೋಗಗಳನ್ನು ಹೆಚ್ಚು ಪ್ರಮಾಣದಲ್ಲಿ ತಡೆಯಲು ಕಾರಣವಾಗಿದೆ ಎಂದು ಹೇಳಿದರು.

1995 ರಿಂದ ಭಾರತದಲ್ಲಿ ಪೋಲಿಯೋ ವಿರುದ್ಧ ಮೌಕಿಕ ಲಸಿಕೆ ನೀಡುತ್ತಿದ್ದು, ಸಾರ್ವಜನಿಕರ ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಆರೋಗ್ಯ ಇಲಾಖೆಯ ಪರಿಶ್ರಮದಿಂದ ದೇಶದಲ್ಲಿ ಪೋಲಿಯೋ ನಿರ್ಮೂಲನೆ ಮಾಡಲಾಗಿದೆ ಎಂದರು. ಮಾರಕ ರೋಗಗಳ ತಡೆಗೆ ಲಸಿಕೆಗಳು ಅತ್ಯಂತ ಪರಿಣಾಮಕಾರಿಯಾಗಿದ್ದು ಸಕಾಲಕ್ಕೆ ಸಾರ್ವಜನಿಕರು ಮಕ್ಕಳಿಗೆ ಲಸಿಕೆ ಹಾಕಿಸಿ ಆರೋಗ್ಯ ಕಾಪಾಡಿಕೊಂಡು ದೇಶಾಭಿವೃದ್ಧಿಗೆ ಸಾರ್ವಜನಿಕರು ಕೈಜೋಡಿಸಬೇಕು ಎಂದರು.

ಆರೋಗ್ಯ ನಿರೀಕ್ಷಣಾಧಿಕಾರಿ ಪ್ರವೀಣ್ ಕುಮಾರ್ ಸಿಹೆಚ್‌ಓ ಶಾಂತಲಾ, ಅಭಿದಾಲಿ, ಮದಕರಿ, ಮಂಜುನಾಥ, ಹಿಂದುಮತಿ ಹಾಗೂ ಸಾರ್ವಜನಿಕರು ಹಾಜರಿದ್ದರು.

ವಿದ್ಯುತ್ ಪೂರೈಕೆ ತಾರತಮ್ಯಕ್ಕೆ ಖಂಡನೆ

ಹೊಳಲ್ಕೆರೆ: ತೋಟಗಾರಿಕೆ ಬೆಳೆಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುವಲ್ಲಿ ಬೆಸ್ಕಾಂ ಹಾಗೂ ಕೆಪಿಟಿಸಿಎಲ್ ಇಲಾಖೆಗಳು ವಿಫಲವಾಗಿವೆ ಎಂದು ಆರೋಪಿಸಿ, ಪಟ್ಟಣದ ರೈತರು ಹಾಗೂ ರೈತ ಸಂಘದ ಪದಾಧಿಕಾರಿಗಳು ಸೋಮವಾರ ಬೆಸ್ಕಾಂ ಕಚೇರಿಗೆ ಬೀಗ ಜಡಿದು ತೀವ್ರ ಪ್ರತಿಭಟನೆ ನಡೆಸಿದರು.

ಪಟ್ಟಣದ ಸುತ್ತಮುತ್ತಲ ಪ್ರದೇಶಗಳಲ್ಲಿ ತೋಟಗಾರಿಕೆಗೆ ಕನಿಷ್ಠ 7 ರಿಂದ 10 ಗಂಟೆಗಳ ಕಾಲ ವಿದ್ಯುತ್ ನೀಡಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು, ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ರುದ್ರಪ್ಪ ಮಾತನಾಡಿ, ಈ ಹಿಂದೆ 15 ಗಂಟೆಗಳ ಕಾಲ ನೀಡುತ್ತಿದ್ದ ವಿದ್ಯುತ್ತನ್ನು ಈಗ ಕೇವಲ 5 ಗಂಟೆಗೆ ಸೀಮಿತಗೊಳಿಸಲಾಗಿದೆ. ಆದರೆ, ಕೆಲವು ಭಾಗದ ಟಿಸಿಗಳಿಗೆ ಮಾತ್ರ 15 ರಿಂದ 20 ಗಂಟೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಇದು ಇಲಾಖೆಯ ಸ್ಪಷ್ಟ ಮಲತಾಯಿ ಧೋರಣೆಯಾಗಿದೆ. ವಿದ್ಯುತ್ ಇಲ್ಲದೆ ಅಡಕೆ, ತೆಂಗು, ಬಾಳೆ ಹಾಗೂ ಬೇಸಿಗೆ ಬೆಳೆಗಳು ನೀರಿಲ್ಲದೆ ಒಣಗುತ್ತಿವೆ, ಎಂದು ಆತಂಕ ವ್ಯಕ್ತಪಡಿಸಿದರು.

ರೈತ ಮುಖಂಡ ಬಾಲು ಪ್ರಕಾಶ್ ಮಾತನಾಡಿ, ಕೆಪಿಟಿಸಿಎಲ್ ಮತ್ತು ಬೆಸ್ಕಾಂ ನಡುವೆ ಹೊಂದಾಣಿಕೆ ಇಲ್ಲದೆ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ. 5 ಗಂಟೆ ನಂತರ ವಿದ್ಯುತ್ ನೀಡಲು ಕೇಳಿದರೆ ಓವರ್ ಲೋಡ್ ಎಂದು ಸುಳ್ಳು ಮಾಹಿತಿ



ನೀಡುತ್ತಿದ್ದಾರೆ. ಆದರೆ, 20 ಗಂಟೆ ವಿದ್ಯುತ್ ಪಡೆಯುವವರಿಗೆ ಈ ಸಮಸ್ಯೆ ಕಾಡುತ್ತಿಲ್ಲವೇ. ಇಲಾಖೆಯ ಕಳ್ಳಾಟದ ವಿರುದ್ಧ ಸರ್ಕಾರದ ಕ್ರಮಕ್ಕೆ ಒತ್ತಾಯಿಸಿದರು.

ಬೆಸ್ಕಾಂ ಇಂಜಿನಿಯರ್ ಜಯಣ್ಣ ಹಾಗೂ ಕೆಪಿಟಿಸಿಎಲ್ ಇಂಜಿನಿಯರ್ ಮಂಜುನಾಥ್ ರೈತರ ಮನವೊಲಿಸಲು ಯತ್ನಿಸಿದರು. ಸರ್ಕಾರದ ಆದೇಶದಂತೆ ಪ್ರತಿ ನಿತ್ಯ ಕನಿಷ್ಠ 7 ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಮಾಡುವ ಭರವಸೆಯನ್ನು ನೀಡಿದ ನಂತರ ರೈತರು ಪ್ರತಿಭಟನೆಯನ್ನು ಹಿಂತೆಗೆದುಕೊಂಡರು.

ರೈತ ಸಂಘದ ಅಧ್ಯಕ್ಷ ರಂಗಸ್ವಾಮಿ, ನಗರಾಧ್ಯಕ್ಷ ಸಿದ್ದರಾಮಯ್ಯ, ಕಾರ್ಯದರ್ಶಿ ಅಜಯ್, ರೈತರಾದ ನಾಗರಾಜ್, ಗಂಗಮ್ಮ, ಶಿವಕುರ್ಮಾ, ಚೇತನ, ಲೋಕೇಶ, ಗಿರೀಶ, ನಾಗರಾಜಪ್ಪ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

ತೋಟಗಾರಿಕೆ ಕಾಲೇಜಿನಲ್ಲಿ ಕ್ರೀಡಾಕೂಟ



ಹಿರಿಯೂರು: ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ತೊಡಗಿಕೊಳ್ಳಲು ಸುಸಜ್ಜಿತವಾದ ಕ್ರೀಡಾಂಗಣ ಮತ್ತು ಇನ್ನಿತರ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುವುದು ಎಂದು ಕೆಳದಿ ಶಿವಪ್ಪ ನಾಯಕ ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಜಗದೀಶ್ ತಿಳಿಸಿದರು. ಸತತವಾಗಿ ಮೂರೂ ವರ್ಷ ಹಿರಿಯೂರು ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಕ್ರೀಡಾಕೂಟ ಆಯೋಜಿಸಿರುವುದು ತುಂಬಾ ಸಂತೋಷಕರ. ಹಿರಿಯೂರು ಮಹಾವಿದ್ಯಾಲಯದ ಕ್ರೀಡಾಂಗಣ ವಿಶ್ವವಿದ್ಯಾಲಯದ ಮಟ್ಟದಲ್ಲಿ ಚೆನ್ನಾಗಿದೆ ಎಂದು ತಿಳಿಸಿದರು. ಡಾ. ಎ ಬಿ ಪಾಟೀಲ್ ಮಾತನಾಡಿ ಕ್ರೀಡಾಕೂಟ ಅಚ್ಚುಕಟ್ಟಾಗಿ ನಡೆಸಿದ್ದಲ್ಲದೆ ವಿದ್ಯಾರ್ಥಿಗಳಿಗೆ ದಕ್ಷಿಣಭಾರತ ಮತ್ತು ಅಖಿಲ ಭಾರತ ಮಟ್ಟದ ಕ್ರೀಡಾ ಕೂಟಗಳಿಗೆ ವಿದ್ಯಾರ್ಥಿಗಳು ಭಾಗವಹಿಸಲು ವಿಶ್ವವಿದ್ಯಾಲಯದ ವತಿಯಿಂದ ಅವಕಾಶ ನೀಡುತ್ತಿರುವುದು ಶ್ಲಾಘನೀಯ ಎಂದರು. ಶ್ರೀದೇವಿ ಕುಮಾರ, ಡಾ. ರಮೇಶ, ವಿಶ್ವನಾಥ ಉಪಸ್ಥಿತರಿದ್ದರು.

ಮಚ್ಚಿನಿಂದ ಕೊಚ್ಚಿ ಕೊಲೆ

ಚಿತ್ರದುರ್ಗ: ಕುಟುಂಬ ಕಲಹಕ್ಕೆ ಸಂಬಂಧಿಸಿದಂತೆ ವ್ಯಕ್ತಿಯೋರ್ವನನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಚಿತ್ರದುರ್ಗದ ಬುದ್ಧ ನಗರದ ಸರ್ಕಲ್‌ನಲ್ಲಿ ಭಾನುವಾರ ರಾತ್ರಿ ನಡೆದಿದೆ. ಕೊಲೆ ಆರೋಪಿ ಸಾಧಿಕ್‌ವುಲ್ಲಾ, ಈತ ನಗರದ ಜೋಗಿಮಟ್ಟಿ ರಸ್ತೆಯ 1ನೇ ಕ್ರಾಸ್ ನಿವಾಸಿ. ಈತ ಶಬಾನಾ ಎಂಬುವರನ್ನು ಪ್ರೀತಿಸಿ ಮದುವೆಯಾಗಿದ್ದ. ಆದರೆ ಶಬಾನಾಳನ್ನು ತನ್ನೊಂದಿಗೆ ಸಂಸಾರ ಮಾಡಲು ಆಕೆಯ ತವರುಮನೆಯವರು ಹಾಗೂ ಆಕೆಯ ಮಾವ ತಾಜ್ ಪೀರ್ ಬಿಡುತ್ತಿಲ್ಲ ಎಂದು ಆರೋಪಿ ದೂರಿದ್ದಾನೆ. ಈ ಸಂಬಂಧ ಭಾನುವಾರ ರಾತ್ರಿ 8.45 ರ ಸುಮಾರಿಗೆ ಶಬಾನಾ ಅವರ ಮಾವ ತಾಜ್‌ಪೀರ್ ಅವರಿಗೆ ಆರೋಪಿ ಸಾಧಿಕ್‌ವುಲ್ಲಾ ಫೋನ್ ಮಾಡಿ ಬುದ್ಧ ನಗರ ಸರ್ಕಲ್‌ಗೆ ಕರೆಸಿಕೊಂಡಿದ್ದಾನೆ. ಅಲ್ಲಿಗೆ ಬಂದ ತಾಜ್‌ಪೀರ್ ಅವರೊಂದಿಗೆ ಜಗಳ ತೆಗೆದ ಆರೋಪಿ ಮಚ್ಚಿನಿಂದ ತಾಜ್‌ಪೀರ್ ಅವರ ಕುತ್ತಿಗೆಗೆ ಹೊಡೆದು ಕೊಲೆ ಮಾಡಿದ್ದಾನೆ. ಈ ಕುರಿತು ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಘಟನೆಯ ಬಳಿಕ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಪತ್ತೆ ಮಾಡಿ ಬಂಧಿಸಲಾಗಿದೆ.

ಚಿತ್ರದುರ್ಗದಲ್ಲಿ ವಿಚಾರ ಸಂಕಿರಣ

ಚಿತ್ರದುರ್ಗ: ಲಂಕೇಶ್ ಆಶಯಗಳನ್ನು ಪಾಲಿಸಿಕೊಂಡು ಬಂದ ಒಂದು ತಲೆಮಾರಿನೊಂದಿಗೆ ಬದುಕಿರುವುದೇ ಸೌಭಾಗ್ಯ. ದಲಿತ ಹಾಗೂ ಸ್ತ್ರೀ ಸಂವೇದನೆಗಳಂತಹ ವಿಚಾರಗಳು ಸಂವಿಧಾನದ ಮೂಲ ಆಶಯಗಳೇ ಆಗಿವೆ ಎಂದು ಸಾಹಿತಿ ಡಾ.ಲೋಕೇಶ್ ಅಗಸನಕಟ್ಟೆ ಹೇಳಿದರು.

ಆಶಯ, ಅರಳಿ, ಗೆಳೆಯರ ಬಳಗ, ರೋಟರಿ ಕ್ಲಬ್ ಚಿನ್ಮೂಲಾದ್ರಿ, ವೇದಿಕೆಯಿಂದ ನಗರದ ರೋಟರಿ ಭವನದಲ್ಲಿ ಆಯೋಜಿಸಿದ್ದ ಪತ್ರಕರ್ತ ಟಿ.ಎನ್.ಷಣ್ಮುಖ ಬದುಕು ಮತ್ತು ಬರಹ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಸಮ ಸಮಾಜದ ಕನಸು, ಸಮತಾವಾದ ಮತ್ತು ಮೌಢ್ಯ ಮೀರಿದ ಜನಪರ ಚಿಂತನೆ ಹೊಂದಿರುವ ಎಲ್ಲರೂ ಸಮಾಜ ಪರಿವರ್ತನೆಗಾಗಿ ಹೋರಾಡುವ ಗೆಳೆಯರಾಗಿದ್ದಾರೆ ಎಂದರು.

ಸಾಹಿತಿ ದಾದಾಪೀರ್ ನವೀಲೆಹಾಳ್ ಮಾತನಾಡಿ, ಇಂದಿನ ಕಾಲದಲ್ಲಿ ಮೊಬೈಲ್ ಬಳಕೆ ಹೆಚ್ಚುತ್ತಿರುವುದರಿಂದ ಜನರು ಏಕಾಂಗಿ ಜೀವನಕ್ಕೆ ಸಿಲುಕುತ್ತಿದ್ದಾರೆ. ಚರ್ಚೆ, ಚಳವಳಿ ಮತ್ತು ಸಾಮಾಜಿಕ ಸಂವಾದಗಳು ಕಡಿಮೆಯಾಗುತ್ತಿರುವುದು ಆತಂಕಕಾರಿ ಎಂದು ಹೇಳಿದರು. ಜಿಲ್ಲಾ ನೀರಾವರಿ ಹೋರಾಟ ಸಮಿತಿ ಸಂಚಾಲಕ ಜೋಗಿಮಟ್ಟಿ ಮಹೇಶ್ ಬಾಬು, ಗೌನಹಳ್ಳಿ ಗೋವಿಂದಪ್ಪ, ಶ್ರೀನಿವಾಸ್ ಮಳಲಿ, ಕೆ.ಪಿ.ಎಂ.ಗಣೇಶಯ್ಯ, ಟಿ.ಆನಂದ್, ಹೊಳೆಯಪ್ಪ ಕೆ.ಸಾಕ್ಯ ಹಾಜರಿದ್ದರು.

ಮೃತನ ಕುಟುಂಬಕ್ಕೆ ನೆರವು



ಚಿತ್ರದುರ್ಗ: ನಗರದ ಕೆಳಗೋಟೆಯ ನಿವಾಸಿ ನೋಂದಾಯಿತ ಕಟ್ಟಡ ಕಾರ್ಮಿಕ ನಾಗೇಂದ್ರ, ಅನಾರೋಗ್ಯ ಕಾರಣದಿಂದ ಭಾನುವಾರ ಮೃತಪಟ್ಟಿದ್ದಾರೆ. ಇವರಿಗೆ ಸುಮಾರು 59 ವರ್ಷ ವಯಸ್ಸಾಗಿತ್ತು. ಬಾರ್ ಬೆಂಡರ್ ಕೆಲಸ ಮಾಡುತ್ತಿದ್ದರು. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ವೈ. ಕುಮಾರ್ ಮೃತರ ನಿವಾಸಕ್ಕೆ ಭೇಟಿ ನೀಡಿ ಮೃತರ ಅಂತ್ಯ ಸಂಸ್ಕಾರಕ್ಕೆ ವೈಯಕ್ತಿಯವಾಗಿ 5000 ರೂ.ಗಳ ಚೆಕ್ಕನ್ನು ನೀಡುವ ಮೂಲಕ ಸಹಾಯ ಹಸ್ತ ಚಾಚಿದ್ದಾರೆ. ಮೃತರ ಮಕ್ಕಳಾದ ಸಂಧ್ಯಾ ಹಾಗೂ ಸುಧಾ ಅವರಿಗೆ ಹಣದ ಚೆಕ್ ಹಸ್ತಾಂತರಿಸಿದರು. ಈ ಸಂಧರ್ಭದಲ್ಲಿ ಗೌರವಧ್ಯಕ್ಷ ಕೆ.ರಾಜಣ್ಣ, ಮಾಯಣ್ಣ, ಮೈಲಾರಪ್ಪ ಇನ್ನು ಮುಂತಾದವರು ಹಾಜರಿದ್ದರು.

ಕಸಬಾ ಹೋಬಳಿ ಪ್ರಥಮ ಸಾಹಿತ್ಯ ಸಮ್ಮೇಳನ | ಸಾಹಿತಿ ಜೆ.ಎಸ್.ಸಿದ್ದರಾಮಯ್ಯ ಹೇಳಿಕೆ

ಇತಿಹಾಸ ತಿರುಚುವ ಕೆಲಸವಾಗಬಾರದು

ಹಿರಿಯೂರು: ಇತ್ತೀಚಿನ ದಿನಗಳಲ್ಲಿ ಜನಸಮುದಾಯದ ಸಂಸ್ಕೃತಿ ಭಾಷೆ ಸಾಧನೆ ಗುರುತಿಸುವ ಬದಲಾಗಿ ತಿರುಚುವ ಕೆಲಸ ವಾಗುತ್ತಿದೆ ಎಂದು ಸಾಹಿತಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ನಗರದ ನೆಹರು ಮೈದಾನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಸಬಾ ಹೋಬಳಿ ಘಟಕ ಆಯೋಜಿಸಿದ್ದ ಕಸಬಾ ಹೋಬಳಿ ಪ್ರಥಮ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಪರಿಷತ್ತು ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವ ಅಂಗ ಸಂಸ್ಥೆ ನಂಜುಂಡಯ್ಯನವರ ಶ್ರಮದಿಂದ ಸಾಹಿತ್ಯ ಪರಿಷತ್ತು ಆರಂಭವಾಯಿತು ಈ ನೆಲದ ಜಲ ಸಂಪತ್ತು ಪರಂಪರೆಯನ್ನ ಕಾಪಾಡುವ ಜವಾಬ್ದಾರಿ ಹೊಣೆಗಾರಿಕೆ ಸಾಹಿತ್ಯ ಪರಿಷತ್ತಿಗೆ ಇದೆ ಆದರೆ ಇಂತಹ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ವಿಶ್ವ ಇಂದು ಉರಿಯುತ್ತಿದೆ ಅಪಾರ ಸಾವು ನೋವು ಸಂಕಟ ಎದುರಿಸುತ್ತಿದೆ. ಇದಕ್ಕೆ ಟ್ರಂಪ್ ನಂತಹ ವ್ಯಕ್ತಿಗಳು ಕಾರಣ ರಾಗಿದ್ದಾರೆ. ಒಬಾಮ ಇದ್ದಿದ್ದರೆ ಯುದ್ಧ



ಆಗುತ್ತಿರಲಿಲ್ಲ ಇಂತಹ ನೋವುಗಳನ್ನ ಜಗತ್ತು ನೋಡುತ್ತಿರಲಿಲ್ಲ. ಟ್ರಂಪ್ ಒಬ್ಬ ವರ್ತಕ ಅವರಿಂದ ಅಹಿಂಸೆ ಮನುಷ್ಯತ್ವ ನೈತಿಕ ಮೌಲ್ಯಗಳು ಕಾಣಲು ಅಸಾಧ್ಯ ಆದುದರಿಂದ ಇಂತಹ ಘಟನೆಗಳು ಸಂಭವಿಸುತ್ತವೆ ಎಂದು ಹೇಳಿದರು.

ಆದಿ ಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್.ಮಂಜುನಾಥ ಮಾತನಾಡಿ ಜಿಲ್ಲೆಯಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಜಾರಿಗಾಗಿ ಹೋರಾಟಗಳು ಆರಂಭವಾಗಿ ಇಂದಿಗೆ 35 ವರ್ಷಗಳು ಕಳೆದಿವೆ ಆದರೆ ಈ ಕೆಲಸಗಳು ಇನ್ನು ಮುಗಿದಿಲ್ಲ. ಇದಕ್ಕೆ ಆಳುವಂತಹ ಸರ್ಕಾರಗಳ ಇಚ್ಚ ಶಕ್ತಿಯು ಕೊರತೆ ಕಂಡುಬರುತ್ತದೆ ಹಾಗೆ ಕನ್ನಡ ಭಾಷೆ ನೆಲ ಜಲ ಹೋರಾಟವೆಂದರೆ ಜನರು ಬರುವುದಿಲ್ಲ ಚಲನಚಿತ್ರ ಧಾರಾವಾಹಿ ನಟರು ನಟಿಯರು ಬರುತ್ತಾರೆ ಎಂದರೆ ಜನರು ಸಾಲು ಸಾಲು ಬರುತ್ತಾರೆ ಎಂದರು.

ಪ್ರಾಂಶುಪಾಲರಾದ ಡಾ. ಜೆ. ಕರಿಯಪ್ಪ ಮಾಳಿಗೆ ಮಾತನಾಡಿ, ಅನ್ಯ ಭಾಷಿಕರನ್ನ ಒಪ್ಪಿಕೊಳ್ಳುವ ಮತ್ತು ಅಪ್ಪಿಕೊಳ್ಳುವ ಸಂಸ್ಕಾರ ಸಂಸ್ಕೃತಿ ಹೊಂದಿರುವ ವಿಶ್ವದ ಏಕೈಕ ಭಾಷೆ ಕನ್ನಡ. ಈ ಭಾಷೆಯಿಂದ ಮಾತ್ರ ನಮ್ಮ ಸಂಕಟ, ವೇದನೆ,ದುಃಖ, ದುಮಾನಗಳನ್ನು ಹೇಳಿಕೊಳ್ಳಲು ಸಾಧ್ಯ, ಆದರಿಂದ ತಾಯಿ ಭಾಷೆಯಾದ ಕನ್ನಡವನ್ನು ಉಳಿಸಿ ಬೆಳೆಸಲು ಇಂತಹ ಸಾಹಿತ್ಯ ಸಮ್ಮೇಳನಗಳು ಅಗತ್ಯವಾಗಿದೆ ಎಂದು ಹೇಳಿದರು.

ಕಸಬಾ ಹೋಬಳಿ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಜಿ.ಡಿ. ಚಿತ್ತಣ್ಣ ಸೀಗೆಹಟ್ಟಿ ಮಾತನಾಡಿ ಕನ್ನಡ ಭಾಷೆ ವಿಶ್ವದಲ್ಲಿ ಅತಿಸುಂದರ ವಾದ ಭಾಷೆ ಇದನ್ನು ಕಲಿಯೋದು ತುಂಬಾ ಸರಳ ವಾಗಿದೆ ಇಂತಹ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ ಎಂದರು.

ಜಿ.ಡಿ. ಚಿತ್ತಣ್ಣ, ಪಿ. ರಘು, ಜೆ.ರಾಜು ಎಂ. ಡಿ .ಸಣ್ಣಪ್ಪ. ತಿಪ್ಪೇಸ್ವಾಮಿ . ರಾಜೇಶ್ ನಟರಂಗ ಇದ್ದರು.

ಚಿರಡೋಣಿ ಯುವಕರಿಂದ ರೈತರಿಗೆ ನೆರವು

ಮೇವಿಗೆ ಭಾರೀ ಬೇಡಿಕೆ

ಬಸವಾಪಟ್ಟಣ: ಇಲ್ಲಿನ ಚಿರಡೋಣಿ ಗ್ರಾಮದಲ್ಲಿ ಇತ್ತೀಚೆಗೆ ಭತ್ತದ ಮೇವಿಗೆ ಭಾರೀ ಬೇಡಿಕೆ ಕಾಣಿಸಿಕೊಂಡಿದ್ದು, ಈ ಭಾಗವು ಪಶುಸಂಗೋಪನೆ ಮಾಡುವ ರೈತರಿಗೆ ಪ್ರಮುಖ ಕೇಂದ್ರವಾಗುತ್ತಿದೆ. ಇಲ್ಲಿನ ಗೋದಾಮುಗಳಲ್ಲಿ ಸಂಗ್ರಹವಾಗುವ ಭತ್ತದ ಹುಲ್ಲನ್ನು ರಾಜ್ಯದ ವಿವಿಧ ಜಿಲ್ಲೆಗಳ ರೈತರು ಖರೀದಿಸಿ ತಮ್ಮ ಊರುಗಳಿಗೆ ಕೊಂಡೊಯ್ಯುತ್ತಿದ್ದಾರೆ.

ಗ್ರಾಮದ ಯುವಕರಾದ ಭೂಮೇಶ್ ಮತ್ತು ಹಾಲಪ್ಪ ಅವರು ಈ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸುತ್ತಿದ್ದು, ಚಿರಡೋಣಿ ಹಾಗೂ ಸುತ್ತಮುತ್ತಲಿನ ರೈತರಿಂದ ಭತ್ತದ ಹುಲ್ಲನ್ನು ಖರೀದಿಸಿ ದೊಡ್ಡ ಗೋದಾಮಿನಲ್ಲಿ ಸಂಗ್ರಹಿ ಸುತ್ತಾರೆ. ಅಲ್ಲದೇ ರಾಜ್ಯದ ಬಳ್ಳಾರಿ, ಗಂಗಾವತಿ, ರಾಯ ಚೂರು ಭಾಗಗಳಿಂದಲೂ ಮತ್ತು ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡಿನಿಂದಲೂ ಹುಲ್ಲನ್ನು ಖರೀದಿಸಿ ಇಲ್ಲಿ ಸಂಗ್ರಹಿಸಲಾಗುತ್ತಿದೆ. ಪ್ರಸ್ತುತ ಸುಮಾರು 20 ಕೆಜಿ ತೂಕದ ಒಂದು ಹುಲ್ಲಿನ ಪೆಂಡೆಗೆ ಸುಮಾರು ರೂ.250 ದರ ನಿಗದಿಯಾಗಿದ್ದು, ರೈತರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಿದ್ದಾರೆ.

ಚಿರಡೋಣಿಯಿಂದ ದಾವಣಗೆರೆ ಜಿಲ್ಲೆಯ ಹಲವು ಹಳ್ಳಿಗಳಿಗೆ ಮಾತ್ರವಲ್ಲದೆ ಜಗಳೂರು, ಚಿತ್ರದುರ್ಗ, ಚಿಕ್ಕಮ ಗಳೂರು ಹಾಗೂ ಕುಮಟಾ ಭಾಗಗಳವರೆಗೆ ಭತ್ತದ ಹುಲ್ಲಿನ ಪೆಂಡೆಗಳು ಸಾಗಾಣಿಕೆ ಆಗುತ್ತಿರುವುದು ಗಮನಾರ್ಹ ವಾಗಿದೆ.

ಭತ್ತದ ಕಟಾವು ಸಮಯದಲ್ಲಿ ಮಳೆಯ ಪರಿಣಾಮದಿಂದ ಹುಲ್ಲನ್ನು ಒಣಗಿಸಿ ಸಂಗ್ರಹಿಸುವುದು ಕಷ್ಟಕರವಾಗುತ್ತದೆ. ಆದರೂ ರೈತರಿಗೆ ಮೇವಿನ ಕೊರತೆ ಆಗಬಾರದೆಂಬ ಉದ್ದೇಶ ದಿಂದ ನಾವು ಇದನ್ನು ಒಂದು ಸೇವೆಯಾಗಿ ಮಾಡಿ ಕೊಂಡು ಕೆಲಸ ಮಾಡುತ್ತಿದ್ದೇವೆ ಎಂದು ಭೂಮೇಶ್ ಹೇಳಿದರು.

ಬಸವಾಪಟ್ಟಣ ಭಾಗದಲ್ಲಿ ಹಿಂದೆ ವ್ಯಾಪಕ ವಾಗಿ ಭತ್ತವನ್ನು ಬೆಳೆಯಲಾಗುತ್ತಿತ್ತು. ಆದರೆ ಈಗ ಅನೇಕ ರೈತರು ವಾಣಿಜ್ಯ ಬೆಳೆಯಾದ ಅಡಿಕೆ ತೋಟಗಳಿಗೆ ತಿರುಗುತ್ತಿರುವುದರಿಂದ ಭತ್ತದ ಹುಲ್ಲಿನ ಉತ್ಪಾದನೆ ಕಡಿಮೆಯಾಗುತ್ತಿದೆ. ಇದರಿಂದ ಪಶುಗಳಿಗೆ ಅಗತ್ಯವಾದ ಮೇವಿನ ಕೊರತೆ ಹೆಚ್ಚಾಗುತ್ತಿರುವುದು ಸಹ ಸತ್ಯ ಎಂದು ಹಾಲಪ್ಪ ಅಭಿಪ್ರಾಯಪಟ್ಟರು.

ಜೇನು ಕುಟುಂಬಕ್ಕೆ ಮಾರಕವಾದ ಕ್ರಿಮಿ ನಾಶಕ | ಡ್ರೋಣ್ ಬಳಸಿ ಅಡಿಕೆ ತೋಟಗಳಿಗೆ ವಿಷ ಸಿಂಪರಣೆ

ಸಾವಿರಾರು ಜೇನು ನೊಣಗಳ ಮಾರಣ ಹೋಮ

ಸುಬ್ರಹ್ಮಣ್ಯ ಸಿ ಹೊರಬೈಲು

ಶಿವಮೊಗ್ಗ: ಜಿಲ್ಲೆಯ ಕೆಲ ಭಾಗದಲ್ಲಿ ರೈತರು ಕೈಗೊಳ್ಳುತ್ತಿರುವ ಅತಿರೇಕದ ನಿರ್ಧಾರ ಜೇನು ನೊಣಗಳ ಮಾರಣ ಹೋಮಕ್ಕೆ ಕಾರಣವಾಗಿದೆ !

ಜೇನು ನೊಣಗಳು ರೈತರು ಸಿಂಪಡಿಸಿದ ಕ್ರಿಮಿನಾಶಕಗಳ ವಿಷಕ್ಕೆ ಬಲಿಯಾಗುತ್ತಿವೆ. ಮತ್ತೊಂದೆಡೆ ಅಡಿಕೆ ತೋಟಗಳ ರಕ್ಷಣೆ ಹೆಸರಿನಲ್ಲಿ ಕಂಪನಿಗಳು ಹೆಣೆಯುತ್ತಿರುವ ಬಲೆಯಲ್ಲಿ ರೈತರು ಸಿಲುಕಿ ಪರದಾಡುತ್ತಿದ್ದಾರೆ.

ಎಲೆಚುಕ್ಕೆಗೆ ಕಂಗಾಲು...

ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳ ಕೆಲವೆಡೆ ಅಡಿಕೆ ತೋಟಕ್ಕೆ ಎಲೆ ಚುಕ್ಕಿ ರೋಗ ಭಾದಿಸುತ್ತಿರುವುದು ನಿಜ. ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಮಲೆ ಹೆಚ್ಚು ಬೀಳುವ ತಾಲೂಕುಗಳಲ್ಲಿ

ಅಡಿಕೆ ತೋಟಗಳು ಎಲೆಚುಕ್ಕೆ ರೋಗಕ್ಕೆ ತುತ್ತಾಗಿವೆ.





ವಿಜ್ಞಾನಿಗಳು, ತೋಟಗಾರಿಕೆ ವಿವಿ ಪ್ರಾಧ್ಯಾಪಕರು, ಸರ್ಕಾರದ ಅಧಿಕಾರಿಗಳು ತೋಟಗಳಿಗೆ ಮೇಲಿಂದ ಮೇಲೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಲೇ ಇದ್ದಾರೆ. ಆದರೆ ಯಾವುದೇ ನಿರ್ದಿಷ್ಟ ಔಷಧ ಇನ್ನೂ ಸಿಕ್ಕಿಲ್ಲ.

ದಿಗಂತ ವಿಶೇಷ

ಎಲೆಚುಕ್ಕೆ ಬಾಧಿತ ತೋಟಗಳಲ್ಲಿ ಅಡಿಕೆ ಫಸಲು ಶೇ.80 ರಷ್ಟು ಕಡಿಮೆ ಆಗಿರುವುದೂ ಕಂಡು ಬಂದಿದೆ. ಇದರಿಂದ ರೈತರು ಕಂಗಾಲಾಗಿದ್ದಾರೆ. ತಮ್ಮ ಜೀವನದ ಭಾಗವೇ ಆಗಿರುವ ಅಡಿಕೆ ತೋಟಗಳು ಕಣ್ಣೆದುರೇ ರೋಗಕ್ಕೆ ತುತ್ತಾಗಿರುವುದು ಕಂಡು ಅಸಾಹಯಕರಾಗಿದ್ದಾರೆ.

ಈ ಸಮಸ್ಯೆಗೆ ಸೂಕ್ತ ಪರಿಹಾರ ಇನ್ನೂ ಯಾರೂ ಕಂಡುಹಿಡಿದಿಲ್ಲ, ಇದನ್ನೇ ವಿವಿಧ ಕ್ರಿಮಿನಾಶಕ ಮತ್ತು ಕೀಟನಾಶಕಗಳ ಕಂಪನಿಗಳು ಬಂಡವಾಳ ಮಾಡಿಕೊಳ್ಳುತ್ತಿವೆ. ಕೆಲ ಕೃಷಿ ಔಷಧ ವ್ಯಾಪಾರಿಗಳು ತಾವೇ ವಿಜ್ಞಾನಿಗಳಂತೆ ರೈತರಿಗೆ ಸಲಹೆ ನೀಡುತ್ತಿದ್ದಾರೆ. ಈ ಮೂಲಕ ರೈತರನ್ನ ಮೂರ್ಖರನ್ನಾಗಿಸುವ ಪ್ರಯತ್ನಗಳು ನಡೆದಿವೆ.

ತಮ್ಮ ಅಡಿಕೆ ಮರಗಳು ಉಳಿದರೆ ಸಾಕು ಎಂಬ ಜಿಜ್ಞಾಸೆಗೆ ಬಿದ್ದಿರುವ ರೈತರು ಔಷಧ ಕಂಪನಿಗಳ ಮಾರಾಟ ಪ್ರತಿನಿಧಿಗಳು ಹೇಳುತ್ತಿರುವ ರಾಸಾಯನಿಕ ಪ್ರಯೋಗಿಸುತ್ತಿದ್ದಾರೆ. ಇದು ಪರೋಪಕಾರಿ ಜೇನು ಕುಟುಂಬಗಳ ನಾಶಕ್ಕೆ ಕಾರಣವಾಗುತ್ತಿದೆ.

ಇಳುವರಿ ಮತ್ತಷ್ಟು ಕುಸಿತ...!

ಜೇನು ನೊಣಗಳು ವಿಷ ಸಿಂಪಡಣೆ ಮಾಡಿದ ಜಾಗಕ್ಕೆ ಹೋಗದೆ ಇದ್ದಲ್ಲಿ ತೋಟಗಳಲ್ಲಿ ಹೂವುಗಳು ಪರಾಗಸ್ಪರ್ಶ ಆಗದೆ ಹಾಗೆ ಉದುರುತ್ತವೆ. ಇದಕ್ಕೂ ಮತ್ತೆ ವಿಷ ಸಿಂಪಡಣೆ ಮಾಡಲು ರೈತರು ಮುಂದಾಗುತ್ತಾರೆ. ಇದೆಲ್ಲದರ ಪರಿಣಾಮ ಇಳುವರಿ ಗಣನೀಯವಾಗಿ ಕಡಿಮೆ ಆಗುತ್ತದೆ. ಈ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಶೀಘ್ರ ಆಗಬೇಕಾಗಿದೆ ಎನ್ನುತ್ತಾರೆ ಸೊರಬದ ಜೇನು ಕೃಷಿಕ ಗೌತಮ್.

“ಎಲೆಚುಕ್ಕೆ ರೋಗ ಫಂಗಸ್‌ನಿಂದ ಬರುತ್ತದೆ. ಅದಕ್ಕೆ ಕ್ರಿಮಿನಾಶಕ ಅಥವಾ ಕೀಟ ನಾಶಕ ಸಿಂಪರಣೆ ಮಾಡಲು ಇಲಾಖೆ ಶಿಫಾರಸು ಮಾಡಿಲ್ಲ. ವಿಜ್ಞಾನಿಗಳು ಕೂಡ ಶಿಫಾರಸು ಮಾಡಿಲ್ಲ. ಯಾರೂ ಕೂಡ ಇದನ್ನು ಪ್ರೋತ್ಸಾಹಿಸಬಾರದು. ಇಲಾಖೆ ಕೂಡ ಜಾಗೃತಿ ಮೂಡಿಸಲು ಪ್ರಯತ್ನ ಮಾಡುತ್ತದೆ.

■ -ಎ.ಬಿ.ಸಂಜಯ್, ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ

ರೈತರಿಗೆ ಪ್ರಚೋದನೆ...!

ಇವತ್ತಿನ ತಂತ್ರಜ್ಞಾನದ ಡ್ರೋನ್ ಬಳಸಿ 50, 60 ಅಡಿ ಮೇಲಿನಿಂದ ಅಡಿಕೆ ತೋಟಗಳಿಗೆ ವಿಷ ಸಿಂಪಡಣೆ ಮಾಡಲು ರೈತರನ್ನು ಪ್ರಚೋದಿಸಲಾಗುತ್ತಿದೆ. ಶಿಕಾರಿಪುರ ಮತ್ತು ಸೊರಬ ತಾಲೂಕಿನ ಹಲವು ಕಡೆಗಳಲ್ಲಿ ಈ ಪ್ರಯೋಗ ನಡೆದಿದೆ. ರೈತರು ಸಮೂಹ ಸನ್ನಿಗೆ ಒಳಗಾದವರಂತೆ ಒಬ್ಬರ ನಂತರ ಅಕ್ಕಪಕ್ಕದವರೂ ಈ ಪ್ರಯೋಗಕ್ಕೆ ಇಳಿಯುತ್ತಿದ್ದಾರೆ. ಇದರ ಪರಿಣಾಮ ಸುತ್ತಮುತ್ತ ವಾಸಿಸುವ ಎಲ್ಲ ಜೀವಿಗಳಿಗೂ ಆರೋಗ್ಯ ಸಮಸ್ಯೆ ಉಂಟಾಗುತ್ತಿದೆ. ಅಲ್ಲದೇ ಡ್ರೋನ್ ಮೂಲಕ 60-70 ಅಡಿ ಎತ್ತರದಲ್ಲಿ ಕ್ರಿಮಿನಾಶಕ ಅಥವಾ ಕೀಟನಾಶಕ ಸಿಂಪರಣೆ ಮಾಡಲು ಕಾನೂನಿನ ಅವಕಾಶಗಳು ಕೂಡ ಇಲ್ಲ ಎನ್ನಲಾಗುತ್ತಿದೆ.

“ಪ್ರಕೃತಿಯ ಸಮತೋಲನದಲ್ಲಿ ಜೇನಿನ ಪಾತ್ರ ಕೆಲವರಿಗೆ ಮಾತ್ರ ತಿಳಿದಿದೆ. ಇವು ಸೂಕ್ಷ್ಮ ಜೀವಿಗಳು. ಪಕ್ಕದ ಜಮೀನಿನಿನವರು ಡ್ರೋನ್ ಬಳಸಿ ಅಡಕೆಗೆ ವಿಷ ಸಿಂಪಡಣೆ ಪರಿಣಾಮ ನಮ್ಮ 10 ಸಾವಿರಕ್ಕೂ ಹೆಚ್ಚು ಜೇನು ನೊಣಗಳು ಸತ್ತುಹೋಗಿವೆ.ಈ ವಿಷಯಗಳ ಬಗ್ಗೆ ನೆರೆಹೊರೆಯವರಿಗೆ ತಿಳಿಸಿ ಮುನ್ಸೂಚನೆ ಸಿಕ್ಕರೆ ಜೇನು ಪೆಟ್ಟಿಗೆಗಳನ್ನು ಸ್ಥಳಾಂತರಿಸಬಹುದು. ರೈತರ ಮುಗ್ಧತೆ, ಅಜ್ಞಾನವನ್ನು ಬಂಡವಾಳ ಮಾಡಿಕೊಂಡು ರಾಸಾಯನಿಕ ಕಂಪನಿಗಳು ಶೋಷಣೆಗೆ ನಿಂತಿದ್ದಾರೆ. ಜಾಗರೂಕತೆಯಿಂದ ಪ್ರಜ್ಞಾಪೂರ್ವಕವಾಗಿ ಕೃಷಿ ಮಾಡುತ್ತಾ, ವಿಷಮುಕ್ತ ಕೃಷಿ ಕಡೆಗೆ ಸಾಗಬೇಕಿದೆ.

■ -ಗೌತಮ , ಸೊರಬ (ಜೇನು ಕೃಷಿಕ)

ಬಣಜಿಗ ಸಂಘ ಪುನರ್ ರಚನೆಗೆ ನಿರ್ಧಾರ: ಕಾಂಚನ್ ಕುಮಾರ್

ಶಿಕಾರಿಪುರ: ಸಮುದಾಯದ ಪ್ರತಿಯೊಬ್ಬರಿಗೂ ಸರ್ಕಾರದ ಯೋಜನೆಯ ಪ್ರಯೋಜನ ದೊರಕಿಸಿಕೊಡುವ ದಿಸೆಯಲ್ಲಿ ಸಂಘಟನೆಯನ್ನು ಸದೃಢಗೊಳಿಸಲು ಜಿಲ್ಲಾದ್ಯಂತ ಬಣಜಿಗ ಕ್ಷೇಮಾಭಿವೃದ್ಧಿ ಸಂಘವನ್ನು ಪುನರ್ ರಚಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಈ ದಿಸೆಯಲ್ಲಿ ವಿವಿಧ ತಾಲೂಕಿನ ಪದಾಧಿಕಾರಿಗಳನ್ನು ಆಯ್ಕೆಗೊಳಿಸಲಾಗಿದೆ ಎಂದು ಬಣಜಿಗ ಕ್ಷೇಮಾಭಿವೃದ್ಧಿ ಸಂಘದ(ರಿ) ಜಿಲ್ಲಾಧ್ಯಕ್ಷೆ ಹಾಗೂ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ ಕಾಂಚನ್ ಕುಮಾರ್ ತಿಳಿಸಿದರು.



ಸೋಮವಾರ ಪಟ್ಟಣದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಬಣಜಿಗ ಸಮಾಜ ಜಿಲ್ಲೆಯ ಕೆಲ ತಾಲೂಕಿನಲ್ಲಿ ಮಾತ್ರ ನಿರ್ದಿಷ್ಟ ಜನಸಂಖ್ಯೆ ಹೊಂದಿದೆ ಎಂದು ತಿಳಿಸಿದರು.

ಶಿಕಾರಿಪುರ, ಸಾಗರ, ಸೊರಬ ಮತ್ತಿತರ ಕಡೆ ಹೆಚ್ಚಿರುವ ಸಮಾಜದ ಸದಸ್ಯರಿಗೆ ಸರ್ಕಾರದಿಂದ ದೊರಕಬೇಕಾದ ಯೋಜನೆಯ ಪ್ರಯೋಜನ ದೊರಕಿಸಿಕೊಡುವ ದಿಸೆಯಲ್ಲಿ ಸಂಘಟನೆಗೆ ಹೆಚ್ಚಿನ ಶಕ್ತಿ ನೀಡಲು ರಾಜ್ಯ ಸಂಘದ ನಿರ್ದೇಶನದ ಮೇರೆಗೆ ಶಿವಮೊಗ್ಗ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾಗಿ ಅನಿತಾ ರವಿಶಂಕರ್, ಶಿವಮೊಗ್ಗ ತಾ.ಮಹಿಳಾ ಘಟಕದ ಅಧ್ಯಕ್ಷರಾಗಿ ಸುಮಾ ಎನ್.ವಿ, ಶಿಕಾರಿಪುರ ತಾ.ಘಟಕದ ಅಧ್ಯಕ್ಷರಾಗಿ ನಿಂಬೆಗೊಂದಿ ಸಿದ್ದಲಿಂಗಪ್ಪ, ಉಪಾಧ್ಯಕ್ಷರಾಗಿ ಹಾದ್ರಿಹಳ್ಳಿ ಈರಣ್ಣ, ಪ್ರ.ಕಾ ಗಿರೀಶ್ ಧಾರವಾಡದ, ತಾ.ಮಹಿಳಾ ಘಟಕದ ಅಧ್ಯಕ್ಷರಾಗಿ ಶಿರಾಳಕೊಪ್ಪದ ರೂಪ ಹಾಲೇಶ್, ಉಪಾಧ್ಯಕ್ಷರಾಗಿ ಜ್ಯೋತಿ ಹರಿಹರದ ಹಾಗೂ ಶಿವಮೊಗ್ಗ ಜಿಲ್ಲಾ ಯುವ ಘಟಕದ ಅಧ್ಯಕ್ಷರಾಗಿ ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯರಾದ ಹೇಮಂತ್ ಶೆಟ್ಟರ್ ನ್ನು ನೇಮಕಗೊಳಿಸಲಾಗಿದೆ ಎಂದು ತಿಳಿಸಿದರು.

ಸಂಘ ತಾಲೂಕು ಜಿಲ್ಲೆಯ ಸಮುದಾಯದ ಸಂಕಷ್ಟಕ್ಕೆ ಸ್ಪಂದಿಸುವ ಜತೆಗೆ ಪ್ರತಿ ವರ್ಷ ಎಸ್ ಎಸ್ ಎಲ್ ಸಿ, ಪಿಯುಸಿ ಯಲ್ಲಿ ಶೇ.85 ಅಧಿಕ ಅಂಕಗಳಿಸಿದ ಪ್ರತಿಭಾನ್ವಿತರನ್ನು ಸನ್ಮಾನಿಸುವ ಹಾಗೂ ಫೆ,13 ರಂದು ಸಂಸ್ಥಾಪನಾ ದಿನ ಆಚರಿಸುವ ಉದ್ದೇಶ ಹೊಂದಿದೆ ಎಂದ ಅವರು ಸಮಾಜದ ಎಲ್ಲ ವರ್ಗದ ಜನತೆ ಜತೆಗೆ ಸೌಹಾರ್ದಯುತ ಸಂಬಂದ ಹೊಂದಿ ಕಷ್ಟ ಸುಖಕ್ಕೆ ಸ್ಪಂದಿಸುವ ಗುರಿ ಹೊಂದಿದೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ತಾ.ಸಮಾಜದ ಸಿದ್ದಲಿಂಗಪ್ಪ,ಗಿರೀಶ್ ದಾರವಾಡದ,ಚಂದನಾ ದಿವಾಕರ್,ಡಿ.ಕೆ ಪ್ರವೀಣ್,ಪ್ರವೀಣ್ ಹದಡಿ, ಹೇಮಂತ್ ಶೆಟ್ಟರ್,ವೀರೇಶ್ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ
eepredkpl@gmail.com,

ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2025-26/3173 ದಿನಾಂಕ: 12/03/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW- 1, 2, 3 ಮತ್ತು 4ರ ಪ್ರಕಾರ ನಿಯಮ ಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್/ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "kppp.karnataka.gov.in ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2025-26 ನೇ ಸಾಲಿನ, ಮಾನ್ಯ ಮುಖ್ಯ ಮಂತ್ರಿಗಳ ಮೂಲಕಸೌಕರ್ಯ ಅಭಿವೃದ್ಧಿ ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು "kppp.karnataka.gov.in ಪೋರ್ಟಲ್" ಮುಖಾಂತರ ಭಾಗವಹಿಸಬಹುದು. ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ ಆಹ್ವಾನಿಸಲಾಗಿದೆ.

1) ಕುಕನೂರು ತಾಲೂಕಿನ ಮಂಡಲಗೇರಿ -ಮಾಳೇಕೊಪ್ಪ ರಸ್ತೆ ನಿರ್ಮಾಣ.CALL-3 INDENT NO:21285 ಟೆಂಡರಗಿಟ್ಟ ಮೊತ್ತ ರೂ79.57 ಲಕ್ಷ ,ಇಎಂಡಿ159500.00 6ತಿಂಗಳು

2) ಕುಕನೂರು ತಾಲೂಕಿನ ಮನ್ನಾಪುರ ಗ್ರಾಮದಿಂದ ಹಳ್ಳಿಕೇರಿವರೆಗೆ ರಸ್ತೆ ನಿರ್ಮಾಣ.CALL-2 INDENT NO:21022 ಟೆಂಡರಗಿಟ್ಟ ಮೊತ್ತ ರೂ 127.35 ಲಕ್ಷ ,ಇಎಂಡಿ 191000.00 6ತಿಂಗಳು

ಸಾಮಾನ್ಯ ಸೂಚನೆಗಳು:- 1)ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪಮಾಣ ಪತ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3)ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ kppp.karnataka.gov.in portal ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ ವಿವರ: ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **17.03.2026** ಸಮಯ 10.00 ಗಂಟೆ ನಂತರ ದಿಂದ **26.03.2026** ಸಮಯ 16.00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **17.03.2026** ಸಮಯ 11.00 ಗಂಟೆ ನಂತರ ದಿಂದ: **26.03.2026** ಸಮಯ 16.30 ಗಂಟೆವರೆಗೆ ಟೆಂಡರ್ ತೆರೆಯುವ ದಿನಾಂಕ: **27.03.2026** ಕಚೇರಿ ಸಮಯದಲ್ಲಿ ಕೆಡಬ್ಲೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ ಕೊಪ್ಪಳ.

ಡಿಐಪಿಆರ್/ಕೊಪ್ಪಳ/758/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಯೋಜನಾ ವಿಭಾಗ,
1-11-264 ಎರಡನೇ ಮಹಡಿ ಎ.ಟಿ.ಎಂ. ಸರ್ಕಲ್, ನಿಜಲಿಂಗಪ್ಪ ಕಾಲೋನಿ ರಾಯಚೂರು-584101
e-mail: eekrrdarcr@gmail.com

ಸಂ.:ಕಾನಿಅ/ಯೋ.ವಿ.ರಾ/ಪಿ.ಬಿ/2025-26/935 ದಿನಾಂಕ:13.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ-01

ಕರ್ನಾಟಕ ರಾಜ್ಯದ ರಾಜ್ಯ ಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅಡಿಯಲ್ಲಿ ಮಸ್ಕಿ ವಿಧಾನ ಸಭಾ ಕ್ಷೇತ್ರದ ಕಾಮಗಾರಿಗಳನ್ನು KW-3, KW-4 ಮಾನದಂಡಗಳನ್ನು ಅನುಸರಿಸಿ ಐಟಂ ರೇಟ್ ದರಗಳನ್ನು KPPP ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.

ಟೆಂಡರ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ

1) **E.M.D.**: As per KPPP portal 2) ಟೆಂಡರ್ ಇಂಡೆಂಟ್ ನಂಬರಗಳು: KRRDA/2025-26/RD/WORK_INDENT331, KRRDA/2025-26/RD/WORK_INDENT332, KRRDA/2025-26/RD/WORK_INDENT334, KRRDA/2025-26/RD/WORK_INDENT335, KRRDA/2025-26/RD/WORK_INDENT338, KRRDA/2025-26/RD/WORK_INDENT 339 , 3) **e-procurement portal** ನಲ್ಲಿ ಟೆಂಡರ್ ಬಿಡ್ ದಾಖಲಾತಿಗಳನ್ನು ನೋಡಬಹುದಾದ ದಿನಾಂಕ, **Date of commencement of downloading of bidding document:** 16-03-2026 4) ತಾಂತ್ರಿಕ ಬಿಡ್‌ಗಳನ್ನು **online** ಆನ್‌ಲೈನ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ, **last date to submit bid on E-portal:** 30-03-2026 (17.00 Hours) 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 01-04-2026 (10:30 Hours) 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು. 7) ಟೆಂಡರ್ ಗುತ್ತಿಗೆದಾರರ ದರ್ಜೆ: KPPP ತಂತ್ರಾಂಶದಲ್ಲಿ ಸೂಚಿಸಿದಂತೆ 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ ರಾಯಚೂರು 9) ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡಬಹುದು: https://www. kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಯೋಜನಾ ವಿಭಾಗ, ರಾಯಚೂರು.

DIP/RCR/765/KSMCA/768/2025-26

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ

ಸಿ.ಆರ್.ಮಿಸ್.ನಂ.297/2026

ಅರ್ಜಿದಾರರು: ಶ್ರೀ ಅಬ್ದುಲ್ಲ ಬಿನ್ ಅಬ್ದುಲ್ ರಹಮಾನ್ ಸಾಬ್, ವಯಸ್ಸು ಸುಮಾರು 51 ವರ್ಷ, ವಾಸ: ಸಿದ್ದಿಖಾ ಮಸ್ಜಿದ್ ರಸ್ತೆ, ಬಸವೇಶ್ವರ ಬಡಾವಣೆ, ಮಲೇಬೆನ್ನೂರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ವಿರುದ್ಧ

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು ಹಾಗೂ ಜನನ ಮರಣ ನೋಂದಣಾಧಿಕಾರಿಗಳು, ಪುರಸಭೆ ಕಾರ್ಯಾಲಯ ಮಲೇಬೆನ್ನೂರು.

ಸಾರ್ವಜನಿಕ ನೋಟಿಸ್

ಅರ್ಜಿದಾರರು ತಮ್ಮ ತಾಯಿಯಾದ **ಶ್ರೀಮತಿ ಖುರ್ಷಿದ್ ಬಾನು ಕೋಂ, ಅಬ್ದುಲ್ ರಹಮಾನ್ ಸಾಬ್ ಇವರು ದಿನಾಂಕ:04-04-2024** ರಂದು ಮಲೇಬೆನ್ನೂರು ಪಟ್ಟಣದ ಸಿದ್ದಿಖಾ ಮಸ್ಜಿದ್ ರಸ್ತೆ, ಬಸವೇಶ್ವರ ಬಡಾವಣೆಯ ಅವರ ಸ್ವಗೃಹದಲ್ಲಿ ಮರಣ ಹೊಂದಿದ್ದ ಅಂಶವನ್ನು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರ ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿ ಕುರಿತು ಯಾರದ್ದಾದರೂ ತಕರಾರಿದ್ದಲ್ಲಿ **ದಿನಾಂಕ:28-04-2026 ರಂದು ಬೆಳಿಗ್ಗೆ 11 ಗಂಟೆಗೆ** ತಾವಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ಅಹವಾಲು ಸಲ್ಲಿಸಬಹುದು. ಇಲ್ಲದಿದ್ದರೆ ಅರ್ಜಿಯನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ:12-03-2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು.
ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಹರಿಹರ

ಅರ್ಜಿದಾರರ ಪರ ವಕೀಲರು
ಶಿವಕುಮಾರ ಈ ಕಲಾಲ್

ಪೌರಾಡಳಿತ ಇಲಾಖೆ
ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ - 582117
(ಜಿಲ್ಲೆ: ಗದಗ, ರಾಜ್ಯ: ಕರ್ನಾಟಕ)

ಸಂ:ಪಪಂಮು/ತಾಂ.ವಿ./ಯು.ಆಯ್.ಡಿ.ಎಸ್.ಎಸ್.ಎಂ.ಟಿ./ಟೆಂಡರ್/ವಹಿ-/2025-26
ದಿನಾಂಕ:-13-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ **"ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್"** ಪದ್ಧತಿಯಲ್ಲಿ 10ನೇ ಹಣಕಾಸು, 12ನೇ ಹಣಕಾಸು ಯು.ಆಯ್.ಡಿ.ಎಸ್.ಎಸ್.ಎಂ.ಟಿ. ಹಾಗೂ ಎಸ್.ಎಫ್.ಸಿ. ಅನುದಾನದಡಿ ನಿರ್ಮಿಸಿದ ವಾಣಿಜ್ಯ ಮಳಿಗೆಗಳ ಮಾಸಿಕ ಬಾಡಿಗೆ ಮೊತ್ತದ ಅನುದಾನದಡಿ **ಇಂಡೆಂಟ್ ನಂಬರ್‌ಗಳ ಸಂಖ್ಯೆಗಳು**-DMA/2025-26/BD/WORK_INDENT42311ನೇದ್ದರ **ವಿವಿಧ ಭಾಗಗಳಲ್ಲಿರುವ ಮಳಿಗೆಗಳ** ರಿಪೇರಿ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ.1/2/3 ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ ದಾಖಲೆಗಳಿಗಾಗಿ **http://kppp.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1) ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 23-03-2026 ಸಂಜೆ:4.00 ಗಂಟೆಗೆ**
2) ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಬಿಡ್ ತೆರೆಯುವ **ದಿನಾಂಕ: 24-03-2026 ಸಂಜೆ:4:30 ಗಂಟೆಗೆ**

ನಿಗದಿ ಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಇ.ಎಂ.ಡಿ. ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್ http://www.mulagundatown.mrc.gov.in ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/-
(ಶ್ರೀ.ಮಂಜುನಾಥ ಪಿ ಗುಳೇದ)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ ಮುಳಗುಂದ

ಸಹಿ/-
(ಶ್ರೀನಿವಾಸಮೂರ್ತಿ ಕುಲಕರ್ಣಿ)
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಮುಳಗುಂದ
ತಹಶೀಲ್ದಾರ ಹಾಗೂ ತಾಲೂಕಾ ದಂಡಾಧಿಕಾರಿಗಳು ಗದಗ

ವಾ.ಸಾ.ಇ/ಗದಗ/707/ದೇಶಪಾಂಡೆಪಬ್ಲಿಸಿಟಿ/2025-26

ಶ್ರೀ ಮಾರಿಕಾಂಬ ದೇವಿ ನ್ಯಾಸ ಪ್ರತಿಷ್ಠಾನ
ಜೆ.ಸಿ.ರಸ್ತೆ, ಸಾಗರ-577401, ಶಿವಮೊಗ್ಗ ಜಿಲ್ಲೆ.

ಮೊ.ಸಂ: 6363335875 GST No:29AAZTS1553M1ZF

ಕ್ರ.ಸಂ.: ದಿನಾಂಕ: 16-03-2026

ಅಮ್ಯೂಸ್‌ಮೆಂಟ್ ಪಾರ್ಕ್ ಜಾಗದ ಟೆಂಡರ್ ಪ್ರಕಟಣೆ

ದಿನಾಂಕ:22.03.2026 ರಿಂದ ಪ್ರಾರಂಭವಾಗುವ ಶ್ರೀ ಮಹಾಗಣಪತಿ ದೇವರ ಜಾತ್ರೆಯಲ್ಲಿ ಅಮ್ಯೂಸ್‌ಮೆಂಟ್‌ಪಾರ್ಕ್ ನಡೆಸಲು ನಿಗದಿತ ಜಾಗದ ಟೆಂಡರ್‌ನ್ನು ಕರೆಯಲಾಗಿದ್ದು ಷರತ್ತುಗಳು ಈ ಕೆಳಗಿನಂತಿದೆ.

ಷರತ್ತುಗಳು:-1)ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವವರು 500/- ರೂ ಗಳನ್ನು ಕಟ್ಟಿ ಅರ್ಜಿ ಫಾರಂನ್ನು ಪಡೆಯತಕ್ಕದ್ದು. ಈ ಮೊತ್ತವನ್ನು ಹಿಂತಿರುಗಿಸಲಾಗುವುದಿಲ್ಲ, 2)ಟೆಂಡರ್‌ನಲ್ಲಿ ಭಾಗವಹಿಸುವವರು1,00,000/-(ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು EMDಇಡತಕ್ಕದ್ದು. ಇ.ಎಂ.ಡಿ ಮೊತ್ತವನ್ನು ನಗದು, ಡಿ.ಡಿ (Demond droft) ಹಾಗೂ RTGS ಮೂಲಕವು ಪಾವ್ತಿಸಬಹುದಾಗಿದೆ. ಯಶಸ್ವಿ ಬಿಡ್ಡುದಾರರನ್ನು ಹೊರತು ಪಡಿಸಿ ಉಳಿದವರಿಗೆ ಠೇವಣಿ ಮೊತ್ತವನ್ನು ಹಿಂತಿರುಗಿಸಲಾಗುವುದು. 3)ಸಮಿತಿಯವರು ನಿಗದಿಪಡಿಸಿರುವಂತೆ ಬಿಡ್ ಮಾಡುವ ಬಿಡ್ಡುದಾರರು ಕನಿಷ್ಟ ದರ ರೂ.5,00,000/- ಮೇಲ್ಪಟ್ಟು ಬಿಡ್ ಮಾಡತಕ್ಕದ್ದು, 4)ಯಶಸ್ವಿ ಬಿಡ್ಡುದಾರರು ಅಮ್ಯೂಸ್‌ಮೆಂಟ್ ನಡೆಸುವ ಸ್ಥಳದಲ್ಲಿ ಜೂಜು, ಜುಗಾರಿ, ಇತರೆ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುವಂತಿಲ್ಲ. 5)ಸಮಿತಿಯು ನಿಗದಿಪಡಿಸಿದ ಜಾಗವನ್ನು ಹೊರತುಪಡಿಸಿ ಉಳಿದ ಜಾಗವನ್ನು ಬಳಸುವಂತಿಲ್ಲ. 6)ಯಶಸ್ವಿ ಟೆಂಡರ್‌ದಾರರು ಟೆಂಡರ್‌ನ ಮೊತ್ತಕ್ಕೆ 18% ಜಿ.ಎಸ್.ಟಿ ಯನ್ನು ಪ್ರತ್ಯೇಕವಾಗಿ ನೀಡತಕ್ಕದ್ದು. (ಜಿ.ಎಸ್.ಟಿ ಯಲ್ಲಿ ನೋಂದಾಯಿತರಾಗಿದ್ದಲ್ಲಿ ಜಿ.ಎಸ್.ಟಿ ನಂಬರ್ ನೀಡಿದ್ದಲ್ಲಿ ಟ್ಯಾಕ್ಸ ಮರು ಪಡೆಯಬಹುದಾಗಿದೆ. (Input credit) 7)ಯಶಸ್ವಿ ಬಿಡ್ಡುದಾರರು ಬಿಡ್ಡಿನ ಸಂಪೂರ್ಣ ಮೊತ್ತವನ್ನು (ಜಿ.ಎಸ್.ಟಿ ಸೇರಿ) ದಿನಾಂಕ: **20.03.2026ನೇ ಮದ್ಯಾಹ್ನ 12 ಗಂಟೆಯ** ಒಳಗಾಗಿ ಸಂಪೂರ್ಣ ಮೊತ್ತವನ್ನು ಜಮಾ ಮಾಡತಕ್ಕದ್ದು. 8)ಟೆಂಡರ್‌ದಾರರು ದಿನಾಂಕ: 18.03.2026ರ ಬುಧವಾರದಂದು ಸಂಜೆ 4 ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದು. ಅದೇ ದಿನ ಸಂಜೆ 5 ಗಂಟೆಗೆ ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ತೆರೆಯಲಾಗುವುದು. 9)ಲಕೋಟೆ ಟೆಂಡರ್ ಹಾಗೂ ತೆರದ ಹರಾಜು ಪ್ರಕ್ರಿಯೆ ನಡೆಸಲಾಗುವುದು. 10)ಯಶಸ್ವಿ ಟೆಂಡರ್‌ದಾರರ ಟೆಂಡರ್‌ನ್ನು ಒಪ್ಪುವ ಹಾಗು ತಿರಸ್ಕರಿಸುವ ಹಕ್ಕು ಸಮಿತಿಯದ್ದಾಗಿರುತ್ತದೆ. 11)ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸತಕ್ಕದ್ದು.

ಸಹಿ/- ಆಡಳಿತ ಮಂಡಳಿ
ಶ್ರೀ ಮಾರಿಕಾಂಬ ದೇವಿ ನ್ಯಾಸ ಪ್ರತಿಷ್ಠಾನ, ಜೆ.ಸಿ.ರಸ್ತೆ, ಸಾಗರ - 577401
ಹೆಚ್ಚಿನ ಮಾಹಿತಿಗೆ: 6363335875

ಮಾನ್ಯ1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. ಶಿವಮೊಗ್ಗ

ಪಿ ಮತ್ತು ಎಸ್.ಸಿ. ಸಂಖ್ಯೆ : 08/2024

ಅರ್ಜಿದಾರರು: 1)ಶ್ರೀಮತಿ ರಜನಿ ಅಶೋಕ್ ಕೋಂ ಲೇಟ್ ಟಿ.ಪಿ.ಅಶೋಕ್ ಕುಮಾರ್ ವಯಸ್ಸು ಸುಮಾರು 68ವರ್ಷ,2)ಟಿ.ಎ.ಸಂದೀಪ್‌ಬಿನ್ ಲೇಟ್‌ಟಿ.ಪಿ.ಅಶೋಕ್‌ಕುಮಾರ್ ಪಾಲುದಾರರು.ವಯಸ್ಸು ಸುಮಾರು 53ವರ್ಷ.ಪಾಲುದಾರರು,ಲಕ್ಷ್ಮಿ ಫೈನಾನ್ಸಿಯರ್ (ರಿ) ಇಬ್ಬರ ವಾಸ: ಅರುಣೋದಯ, ಶರಾವತಿನಗರ, ಶಿವಮೊಗ್ಗ.3)ಶ್ರೀಮತಿ ಲಕ್ಷ್ಮೀ ಸತ್ಯನಾರಾಯಣ ಕೋಂ ಲೇಟ್ ಟಿ.ಪಿ.ಸತ್ಯನಾರಾಯಣ.ವಯಸ್ಸು ಸುಮಾರು 65 ವರ್ಷ,4)ಶ್ರೀಮತಿ ಮಾಲಬಿನ್ ಲೇಟ್ ಟಿ.ಪಿ. ಸತ್ಯನಾರಾಯಣ, ವಯಸ್ಸು ಸುಮಾರು 40 ವರ್ಷ. 5)ಬದರಿನಾಥ್ ಬಿನ್ ಲೇಟ್ ಟಿ.ಪಿ.ಸತ್ಯನಾರಾಯಣ, ವಯಸ್ಸು ಸುಮಾರು 45 ವರ್ಷ, ವಾಸ: 3 ರಿಂದ 5 ರ ವಾಸ: ಕೋಟೆ ರಸ್ತೆ, ಶಿವಮೊಗ್ಗ, ಕರ್ನಾಟಕ.

ವಿರುದ್ಧ

ಎದುರುದಾರರು: 1)ಆಥರೈಸ್‌ಡ್ ಸಿಗ್ನೆಟರ್ ಹಾಂಕ್‌ಕಾಂಗ್ ಮತ್ತು ಶಾಂಗ್ ಹೈಬ್ಯಾಂಕಿಂಗ್ ಕಾರ್ಪೋರೇಷನ್ ಲಿಮಿಟೆಡ್, ಕಸ್ಟೋಡಿಯನ್ ಸರ್ವಿಸ್, ಮಾರಡಿಯಾ ಪ್ಲಾಜಾ ಸಿ.ಜಿ.ರಸ್ತೆ, ಅಹಮದಾಬಾದ್- 380006. 2)ರಿಜಿಸ್ಟ್ರಾರ್ ಮತ್ತು ಷೇರ್ ವರ್ಗಾವಣೆ ಏಜೆಂಟ್ ಟಿ.ಎಸ್.ಆರ್.ಧರಶಾ ಕನ್ಸಲ್‌ಟಿಂಗ್ ಲಿಮಿಟೆಡ್.ಸಿ-101,247,ಎಲ್.ಬಿ. ಎಸ್.ಮಾರ್ಗ, ವಿಕೋರಲಿ (ವೆಸ್ಟ್ ಮುಂಬಯಿ) ಮಹಾರಾಷ್ಟ್ರ-400083.

ಪತ್ರಿಕಾ ಪ್ರಕಟಣೆ

1 ರಿಂದ 5ನೇ ಅರ್ಜಿದಾರರು ದಿವಂಗತ ಅಶೋಕ್ ಕುಮಾರ್ ಮತ್ತು ಸತ್ಯನಾರಾಯಣ ಟಿ.ಪಿ.ಅವರ ಕುಟುಂಬದವರಾಗಿದ್ದು, ಟಿ.ಪಿ.ಅಶೋಕ್ ಕುಮಾರ್ ದಿನಾಂಕ: 07-04-2023 ಮತ್ತು ಟಿ.ಪಿ. ಸತ್ಯನಾರಾಯಣ, ದಿನಾಂಕ:20-02-2013 ರಂದು ಮೃತಪಟ್ಟಿರುತ್ತಾರೆ. ಇವರ ಜೀವಿತಾವಧಿಯಲ್ಲಿ ಟ್ರೆಂಟ್ ಕಂಪನಿಯ 1500 ಷೇರುಗಳನ್ನು ಹೊಂದಿದ್ದು, ಫೋಲಿಯೋ ನಂ ಟಿ, 0001785 ಮತ್ತು ಷೇರ್ ನಂ. 744051 ರಿಂದ 745550 ಆಗಿರುತ್ತದೆ.

ಮೇಲ್ಕಂಡ ಷೇರುಗಳನ್ನು ಟಿ.ಎ.ಸಂದೀಪ್ ಇವರ ಹೆಸರಿಗೆ ವರ್ಗಾಯಿಸಲು ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ. ಮತ್ತು ಈ ಪೈಕಿ 150 ಷೇರುಗಳ ನಂ.13061993-13062042=50 ಷೇರುಗಳ ನಂ.13062043-13062092-50 ಷೇರುಗಳು ಮತ್ತು 13062093-13062142=50 ಷೇರುಗಳು ಅರ್ಜಿದಾರರಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಸದರಿ ಷೇರುಗಳನ್ನು 1ನೇ ಎದುರುದಾರರಿಗೆ ವರ್ಗಾವಣೆ ಮಾಡದಂತೆ ಅರ್ಜಿಯಲ್ಲಿ ಕೋರಿರುತ್ತಾರೆ.ಈ ಮೇಲ್ಕಂಡ ಷೇರುಗಳನ್ನು ನನ್ನ ಕಕ್ಷಿದಾರರ ಟಿ.ಎ. ಸಂದೀಪ್ ಬಿನ್ ಅಶೋಕ್ ಕುಮಾರ್ ಇವರ ಹೆಸರಿಗೆ ವರ್ಗಾಯಿಸಲುಅರ್ಜಿದಾರರ ಸಂಖ್ಯೆ: 1,3,4,5 ಇವರ ಅಭ್ಯಂತರವಿಲ್ಲವೆಂದು /ಆಕ್ಷೇಪಣೆ ಇಲ್ಲವೆಂದು ಅರ್ಜಿಯಲ್ಲಿ ತಿಳಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಪರಿಹಾರವನ್ನು ಕೋರಿ 1,3,4,5ನೇ ಅರ್ಜಿದಾರರು ಮೇಲ್ಕಂಡ ನ್ಯಾಯಾಲಯದಲ್ಲಿ ಸಕ್ಷೇಷನ್ ಸರ್ಟಿಫಿಕೇಟ್ ಕೋರಿ ಅರ್ಜಿ ದಾಖಲಿಸಿರುತ್ತಾರೆ. ಸದರಿ ಅರ್ಜಿಯ ಬಾಬು ವಿಚಾರಣೆ **ದಿನಾಂಕ: 21-04-2026 ರಂದು ಬೆಳಿಗ್ಗೆ 11.00 ಘಂಟೆಗೆ** ಇರುತ್ತದೆ. ಈ ಸಂಬಂಧ ಹಿತಾಸಕ್ತಿ ಹಾಗೂ ವಾರಸುದಾರರು ಯಾರಾದರೂ ಇದ್ದಲ್ಲಿ ಮತ್ತು ಈ ಬಗ್ಗೆ ಯಾರದ್ದಾದರೂ ತಕರಾರು ಇದ್ದಲ್ಲಿ ಮೇಲ್ಕಂಡ ದಿನಾಂಕದಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಅಹವಾಲು ಅಥವಾ ತಕರಾರನ್ನು ಸಲ್ಲಿಸಬಹುದು. ತಪ್ಪಿದಲ್ಲಿ ಯಾರದ್ದೂ ತಂಟೆ, ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿದಾರರಿಗೆ ಸಕ್ಷೇಷನ್ ಸರ್ಟಿಫಿಕೇಟ್ ಪಡೆಯಲು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಅರ್ಜಿದಾರರ ಪರ ವಕೀಲರು
ಹೆಚ್.ರವಿಶಂಕರ್ ಮತ್ತು
ರಾಕೇಶ್ ರಾಮ್ ಎಸ್.ಆರ್.
ವೇದ ಜನನಿ, ಶಂಕರ ಕಾಲೋನಿ,
ಶಂಕರಮಠ ರಸ್ತೆ, ವಕೀಲರು, ಶಿವಮೊಗ್ಗ.
ದಿನಾಂಕ:16-03-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಸಿ.ಜೆ.ಎಂ. ಶಿವಮೊಗ್ಗ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ

ಪಿ ಮತ್ತು ಎಸ್.ಸಿ. ನಂ : 12/2026

ಅರ್ಜಿದಾರರು: 1)ಕೆ.ಎನ್.ಮಹೇಶ್ವರಪ್ಪ ಬಿನ್ ದಿ|| ಕೆ.ನಾಗೇಶಪ್ಪ, ವಯಸ್ಸು 56 ವರ್ಷ, 2) ಕೆ.ಎನ್.ಬಸವರಾಜಪ್ಪ ಬಿನ್ ದಿ|| ಕೆ.ನಾಗೇಶಪ್ಪ, ವಯಸ್ಸು 53 ವರ್ಷ, ವಾಸ: ಶ್ರೀ ಬಸವಣ್ಣನ ಬೀದಿ, ಕೊಮ್ಮನಾಳು ಗ್ರಾಮ, ಹೊಳಲೂರು ಹೋಬಳಿ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ.

ವಿರುದ್ಧ

ಎದುರುದಾರರು: ಇಲ್ಲ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು ತಮ್ಮ ತಂದೆ ದಿ|| ಕೆ.ನಾಗೇಶಪ್ಪ ಬಿನ್ ಚೆನ್ನಪ್ಪ, ಕೊಮ್ಮನಾಳು ಗ್ರಾಮ ಹೊಳಲೂರು ಹೋಬಳಿ, ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ. ರವರು ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಅವರ ಜೀವಿತ ಕಾಲದಲ್ಲಿ ಅಂದರೆ **ದಿನಾಂಕ:24-12-210** ರಂದು ಬರೆಯಿಸಿಟ್ಟ ವಿಲ್ ಯಾನೆ ಮರಣ ಶಾಸನ ಪತ್ರದ ಮೇಲೆ ಪ್ರೊಬೇಟ್‌ಗೆ ಆದೇಶ ಕೋರಿ ಮಾನ್ಯ ಒಂದನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿರುತ್ತಾರೆ. ಕೆ.ನಾಗೇಶಪ್ಪ ಬಿನ್ ಚೆನ್ನಪ್ಪ ಇವರು **ದಿನಾಂಕ:22-03-2021** ರಂದು ಮರಣ ಹೊಂದಿದ್ದು, ಈ ಪ್ರಕರಣದಲ್ಲಿ ಅರ್ಜಿದಾರರು ಪ್ರೊಬೇಟ್ ಆದೇಶ ಪಡೆಯುವ ಸಂಬಂಧ ಸಲ್ಲಿಸಿದ ಅರ್ಜಿಗೆ ಯಾರಾದರೂ ಅವಶ್ಯಕ ಪಾರ್ಟಿಗಳು ಇದ್ದಲ್ಲಿ ಅಥವಾ ಆಕ್ಷೇಪಣೆಗಳು ಇದ್ದಲ್ಲಿ ಮಾನ್ಯ ನ್ಯಾಯಾಲಯದ ಮುದ್ದತ್ತು **ದಿನಾಂಕ:30-04-2026** ರಂದು ಇದ್ದು, ಖುದ್ದಾಗಿ ಅಥವಾ ನಿಯೋಗಿಯ ಮೂಲಕವಾಗಲೀ ಹಾಜರಾಗಲು ತಿಳಿಸಲಾಗಿದೆ.

ಷೆಡ್ಯೂಲ್: ವಿಲ್ ಪ್ರಕಾರ ಮೊದಲನೇ ಅರ್ಜಿದಾರ ಕೆ.ಎನ್.ಮಹೇಶ್ವರಪ್ಪನಿಗೆ ಬಂದ ಒಟ್ಟು ಜಮೀನು 2 ಎಕರೆ 1 ಗುಂಟೆ ತರಿ, ಎಲ್ಲಾ ಜಮೀನುಗಳು ಶಿವಮೊಗ್ಗ ತಾಲ್ಲೂಕು, ಹೊಳಲೂರು ಹೋಬಳಿ,ಬನ್ನಿಕೆರೆ ಗ್ರಾಮದಲ್ಲಿರುತ್ತವೆ. 1) ಸ.ನಂ.64/1ರಲ್ಲಿ 2 ಎಕರೆ 7 ಗುಂಟೆ ತರಿ ಜಮೀನು ಇದ್ದು, ಇದರಲ್ಲಿ 1 ಎಕರೆ 4 ಗುಂಟೆ ತರಿ ಜಮೀನು, ಪೂರ್ವಕ್ಕೆ: ಭೋಜಪ್ಪ ಬಿನ್ ಬಸಪ್ಪನವರ ಜಮೀನು, ಪಶ್ಚಿಮಕ್ಕೆ : ಬಸವರಾಜಪ್ಪನ ಜಮೀನು, ಉತ್ತರಕ್ಕೆ: ಚಂದ್ರಪ್ಪ ಬಿನ್ ಶಂಕರಪ್ಪನ ಜಮೀನು, ದಕ್ಷಿಣಕ್ಕೆ: ಭೋಜಪ್ಪ ಬಿನ್ ಬಸಪ್ಪನ ಜಮೀನು. 2)ಸ.ನಂ.37ರಲ್ಲಿ 18 ಗುಂಟೆ ತರಿ ಜಮೀನು: ಪೂರ್ವಕ್ಕೆ: ಹಾಲೇಶಪ್ಪ ಬಿನ್ ರುದ್ರಪ್ಪನ ಜಮೀನು, ಪಶ್ಚಿಮಕ್ಕೆ : ಈರಪ್ಪ ಬಿನ್ ಚಂದ್ರಪ್ಪನ ಜಮೀನು, ಉತ್ತರಕ್ಕೆ: ಅಣ್ಣಪ್ಪ ಬಿನ್ ಧರ್ಮಪ್ಪನ ಜಮೀನು, ದಕ್ಷಿಣಕ್ಕೆ : ಸ.ನಂ.32/2ಎ ಜಮೀನು. 3) ಸ.ನಂ.36/2ಎ ನಲ್ಲಿ 10 ಗುಂಟೆ ತರಿ ಜಮೀನು: ಪೂರ್ವಕ್ಕೆ: ಹಾಲೇಶಪ್ಪ ಬಿನ್ ರುದ್ರಪ್ಪನ ಜಮೀನು, ಪಶ್ಚಿಮಕ್ಕೆ: ಜಯಪ್ಪ ಬಿನ್ ಬಸಪ್ಪನ ಜಮೀನು, ಉತ್ತರಕ್ಕೆ: ಸ.ನಂ.37ರ ಜಮೀನು, ದಕ್ಷಿಣಕ್ಕೆ: ಶಿವಪ್ಪ ಬಿನ್ ಮುರುಡಪ್ಪನ ಜಮೀನು. 4)ಸ.ನಂ.38ರಲ್ಲಿ 18ಗುಂಟೆ ತರಿ ಜಮೀನು ಇದ್ದು, 9 ಗುಂಟೆ ತರಿ ಜಮೀನು: ಪೂರ್ವಕ್ಕೆ: ಈರಪ್ಪನ ಜಮೀನು, ಪಶ್ಚಿಮಕ್ಕೆ: ಬಸವರಾಜಪ್ಪನ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ : ಹಾಲೇಶಪ್ಪ ಬಿನ್ ರುದ್ರಪ್ಪನ ಜಮೀನು. ಮತ್ತು 2ನೇ ಅರ್ಜಿದಾರ ಕೆ.ಎನ್.ಬಸವರಾಜಪ್ಪನಿಗೆ ಒಟ್ಟು **1 ಎಕರೆ 32ಗುಂಟೆ ತರಿ ಜಮೀನು: ಎಲ್ಲಾ ಜಮೀನುಗಳು ಶಿವಮೊಗ್ಗ ತಾಲ್ಲೂಕು, ಹೊಳಲೂರು ಹೋಬಳಿ, ಬನ್ನಿಕೆರೆ ಗ್ರಾಮದಲ್ಲಿರುತ್ತವೆ.**1) ಸ.ನಂ.64/1ರಲ್ಲಿ 2 ಎಕರೆ 7ಗುಂಟೆ ಜಮೀನು ಇದ್ದು, ಇದರಲ್ಲಿ 1 ಎಕರೆ 3ಗುಂಟೆ ತರಿ ಜಮೀನು: ಪೂರ್ವಕ್ಕೆ: ಮಹೇಶ್ವರಪ್ಪನ ಆಸ್ತಿ, ಪಶ್ಚಿಮಕ್ಕೆ: ಈಶ್ವರಪ್ಪ ಬಿನ್ ಬಸಪ್ಪನ ಜಮೀನು, ಉತ್ತರಕ್ಕೆ: ರುದ್ರೇಶ ಬಿನ್ ಶಂಕರಪ್ಪನ ಜಮೀನು, ದಕ್ಷಿಣಕ್ಕೆ: ಭೋಜಪ್ಪ ಬಿನ್ ಬಸಪ್ಪನ ಜಮೀನು. 2)ಸ.ನಂ.38ರಲ್ಲಿ 18 ಗುಂಟೆ ಜಮೀನಿದ್ದು, ಇದರಲ್ಲಿ 9 ಗುಂಟೆ ತರಿ ಜಮೀನು: ಪೂರ್ವಕ್ಕೆ: ಮಹೇಶ್ವರಪ್ಪನ ಆಸ್ತಿ, ಪಶ್ಚಿಮಕ್ಕೆ: ನಂಜುಂಡಪ್ಪ ಬಿನ್ ರುದ್ರಪ್ಪನ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಹಾಲೇಶಪ್ಪ ಬಿನ್ ರುದ್ರಪ್ಪನ ಜಮೀನು, 3)ಸ.ನಂ.42 ರಲ್ಲಿ 20 ಗುಂಟೆ ತರಿ ಜಮೀನು: ಪೂರ್ವಕ್ಕೆ: ಮಹೇಶ್ವರಪ್ಪನ ಆಸ್ತಿ, ಪಶ್ಚಿಮಕ್ಕೆ: ಚಂದ್ರಪ್ಪ ಬಿನ್ ಧರ್ಮಪ್ಪನ ಜಮೀನು, ಉತ್ತರಕ್ಕೆ: ಧರ್ಮಪ್ಪನ ಜಮೀನು, ದಕ್ಷಿಣಕ್ಕೆ: ಈರಪ್ಪ ಬಿನ್ ಚಂದ್ರಪ್ಪನ ಜಮೀನು.

ಅರ್ಜಿದಾರರ ಪರ ನ್ಯಾಯವಾದಿ
ಕೆ.ಶೇಖರಪ್ಪ, ಬಿ.ಎ.ಎಲ್‌ಎಲ್‌ಬಿ (ಸ್ಪೆಷಲ್)
ಶಿವಮೊಗ್ಗ
ದಿನಾಂಕ:12-03-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಮುಖ್ಯ ಲಿಪಿಕಾಧಿಕಾರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಶಿವಮೊಗ್ಗ

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ದಾಮನಪಾ/ಕಂಶಾ/ಇತರೆ/ಸಿಆರ್/20/2019-20 ದಿನಾಂಕ: 13-03-2026

ಬಹಿರಂಗ ಹರಾಜು ಪ್ರಕಟಣೆ-02

ಈ ಮೂಲಕ ನಗರದ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ಮಹಾನಗರ ಪಾಲಿಕೆ ಮಾಲೀಕತ್ವದ ಈ ಕೆಳಕಂಡ ಮಳಿಗೆಗಳ ಕರಾರು ಅವಧಿ ಮುಕ್ತಾಯಗೊಂಡ ಮಳಿಗೆಗಳನ್ನು, ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/301/ಜಿಇಎಲ್/2017, ದಿ: 19-07-2019 ರೀತ್ಯಾ ಮತ್ತು ದಿನಾಂಕ: 01-12-2022ರ ದಾವಣಗೆರೆ ಮಹಾನಗರಪಾಲಿಕೆಯ ತೆರಿಗೆ, ಹಣಕಾಸು ನಿರ್ಧರಣೆ ಮತ್ತು ಮೇಲ್ಮನವಿ ಸ್ಥಾಯಿ ಸಮಿತಿ ಸಭೆಯ ನಡಾವಳಿ ಸಂಖ್ಯೆ:06. ಮತ್ತು ದಿನಾಂಕ: 09-02-2023 ರಂದು ಸಾಮಾನ್ಯ ಸಭೆಯ ನಡಾವಳಿ ವಿಷಯ ಸಂಖ್ಯೆ:03 ರಂತೆ ಮತ್ತು ಮಾನ್ಯ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಾ ನಂ.ಜಿ.ನ.ಕೋ.ದಾ(2)/ಸಿಆರ್/757/2022-23 ದಿನಾಂಕ:06-03-2023 ರಲ್ಲಿ ಮಂಜೂರಾತಿ ಆದೇಶದಂತೆ ಮರು ಹರಾಜು ಮಾಡಲು ತೀರ್ಮಾನಿಸಲಾಗಿರುತ್ತದೆ.

ಅದರಂತೆ ಈ ಕೆಳಕಂಡ ಖಾಲಿ ಇರುವ ಮಳಿಗೆಗಳನ್ನು ದಿನಾಂಕ:23-12-2025 ರಂತೆ ಪ್ರಕಟಣೆ ನೀಡಿ ದಿನಾಂಕ: 23-01-2026 ರಂದು ಹರಾಜು ಮಾಡಲಾಗಿದ್ದು ವಿಲೇವಾರಿ ಆಗಿರುವುದಿಲ್ಲ. ಪ್ರಯುಕ್ತ ಒಟ್ಟು 31 ಮಳಿಗೆಗಳನ್ನು ಮರು ಹರಾಜು ಮಾಡಲು ಕ್ರಮವಹಿಸಬೇಕಾಗಿರುತ್ತದೆ.

ಪ್ರಯುಕ್ತ ಸದರಿ ಮಳಿಗೆಗಳನ್ನು ಮತ್ತೊಮ್ಮೆ ಹರಾಜು ಮಾಡಲು ತೀರ್ಮಾನಿಸಲಾಗಿದ್ದು, ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಮಾಹೆಯಾನ ಬಾಡಿಗೆ ಮತ್ತು ಠೇವಣಿಯನ್ನು ನಿಗಧಿಪಡಿಸಿರುತ್ತದೆ. ಸದರಿ ಮಳಿಗೆಗಳ ಕರಾರು ಅವಧಿಯು 12 ವರ್ಷಗಳಿಗೆ ಸೀಮಿತವಾಗಿರುತ್ತದೆ. ಬಾಡಿಗೆಯನ್ನು ಪ್ರತಿ 03 ವರ್ಷಗಳಿಗೊಮ್ಮೆ ಶೇ.10 ರಷ್ಟು ಹೆಚ್ಚಿಸಲಾಗುವುದು ಮಾತ್ರವಲ್ಲದೇ ಹರಾಜು ಷರತ್ತುಗಳಿಗೊಳಪಟ್ಟು ದಾವಣಗೆರೆ ಮಹಾನಗರಪಾಲಿಕೆ ಮಾಲೀಕತ್ವದ ಈ ಕೆಳಕಂಡ ಮಳಿಗೆಗಳನ್ನು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿಯೇ ಮತ್ತು ನಿಗಧಿಪಡಿಸಿದ ದಿನಾಂಕಗಳಂದು ಬೆಳಗ್ಗೆ 11 ಗಂಟೆಗೆ ಸಮಯಕ್ಕೆ ಮಾಸಿಕ ಬಾಡಿಗೆ ಆಧಾರದ ಮೇಲೆ ಪಾಲಿಕೆಯ ಮಾನ್ಯ ಆಯುಕ್ತರವರು ಅಥವಾ ಅವರು ಸೂಚಿಸಿದ ಅಧಿಕಾರಿಗಳ ಸಮಕ್ಷಮದಲ್ಲಿ ಬಹಿರಂಗ ಹರಾಜನ್ನು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಮಾಡಲಾಗುವುದು.

ಹರಾಜಿನಲ್ಲಿ ಭಾಗವಹಿಸುವವರು ಹರಾಜು ನಡೆಯುವ ಹಿಂದಿನ ದಿನ ಸಂಜೆ 5.00 ಗಂಟೆಯೊಳಗಾಗಿ ಈ ಪ್ರಕಟಣೆಯಲ್ಲಿ ವಿವರಿಸಿರುವಂತೆ ನಿಗಧಿಪಡಿಸಿದ ಠೇವಣಿ ಮೊತ್ತವನ್ನೇ ಮುಂಗಡ ಠೇವಣಿ ಮೊತ್ತವಾಗಿ ಬ್ಯಾಂಕ್‌ನ ಡಿ.ಡಿ ಮೂಲಕ (ನಗದು/ಚೆಕ್ ಅವಕಾಶವಿರುವುದಿಲ್ಲ) ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ ಇವರ ಹೆಸರಿಗೆ ಪಾವತಿಸಿ ಪಾಲಿಕೆಯ ಕಂದಾಯ ಶಾಖೆಯಿಂದ ನೀಡುವ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಟೋಕನ್ ಪಡೆಯತಕ್ಕದ್ದು.

ಹೆಚ್ಚಿನ ವಿವರಗಳಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಮುಖ್ಯ ಕಛೇರಿಯ ಮಳಿಗೆ ಶಾಖೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ. ಮೀಸಲಾತಿ ಮಳಿಗೆಗಳನ್ನು ಪಡೆಯಲು ಇಚ್ಛಿಸುವವರು (ಪ.ಜಾ / ಪ.ಪಂ. ಮತ್ತು ವಿಕಲಚೇತನರು ಅಂದರೆ ಶೇ. 50%ಕ್ಕಿಂತ ಹೆಚ್ಚಾಗಿ ಅಂಗವಿಕಲತೆ ಹೊಂದಿರುವವರು) ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ದೃಢೀಕೃತ ಪ್ರಮಾಣ ಪತ್ರವನ್ನು ಹರಾಜಿಗೆ ಮುಂಚಿತವಾಗಿ ಅರ್ಜಿ ನಮೂನೆಯಲ್ಲಿ ಸಲ್ಲಿಸುವುದು, ಇನ್ನುಳಿದ ಷರತ್ತುಗಳನ್ನು ಹರಾಜಿನ ಸಮಯದಲ್ಲಿ ಓದಿ ಹೇಳಲಾಗುವುದು.

ಮಳಿಗೆ ಸಂಕೀರ್ಣ: ಕೆ.ಟಿ.ಜೆ ನಗರ ಐ.ಡಿ.ಎಸ್.ಎಂ.ಟಿ ಮಳಿಗೆ ಸಂಕೀರ್ಣ

ಕ್ರ.ಸಂ.	ಹರಾಜು ದಿನಾಂಕ	ಮಳಿಗೆ ಸಂಖ್ಯೆ	ಮೀಸಲಾತಿ	ನಿಗಧಿಪಡಿಸಿದ ಠೇವಣಿ ಮೊತ್ತ ರೂ.	ನಿಗಧಿಪಡಿಸಿದ ಬಾಡಿಗೆ ಮೊತ್ತ ರೂ.
1	ದಿನಾಂಕ: 18-04-2026	1	ಸಾಮಾನ್ಯ	69148	5480
2		2	ಸಾಮಾನ್ಯ	43071	3413
3		3	ಎಸ್.ಸಿ	43071	3413
4		4	ಸಾಮಾನ್ಯ	43071	3413
5		25	ಸಾಮಾನ್ಯ	47202	3741
6		27	ಎಸ್.ಸಿ	47202	3741
7		28	ಸಾಮಾನ್ಯ	47202	3741
8		29	ಅಂಗವಿಕಲ	47202	3741
9		30	ಸಾಮಾನ್ಯ	47202	3741

ಮಳಿಗೆ ಸಂಕೀರ್ಣ: ಬಾರ್‌ಲೈನ್ ರೋಡ್ ಮಟನ್ ಸ್ಟಾಲ್ ಮಳಿಗೆ ಸಂಕೀರ್ಣದ ಮಳಿಗೆಗಳು

ಕ್ರ.ಸಂ.	ಹರಾಜು ದಿನಾಂಕ	ಮಳಿಗೆ ಸಂಖ್ಯೆ	ಮೀಸಲಾತಿ	ನಿಗಧಿಪಡಿಸಿದ ಠೇವಣಿ ಮೊತ್ತ ರೂ.	ನಿಗಧಿಪಡಿಸಿದ ಬಾಡಿಗೆ ಮೊತ್ತ ರೂ.
10	ದಿನಾಂಕ: 18-04-2026	1	ಸಾಮಾನ್ಯ	42289	3965
11		2	ಎಸ್.ಸಿ	42289	3965
12		4	ಸಾಮಾನ್ಯ	42289	3965
13		5	ಸಾಮಾನ್ಯ	42289	3965
14		6	ಸಾಮಾನ್ಯ	42289	3965
15		7	ಸಾಮಾನ್ಯ	42289	3965
16		8	ಸಾಮಾನ್ಯ	42289	3965
17		9	ಎಸ್.ಸಿ	42289	3965
18		10	ಸಾಮಾನ್ಯ	42289	3965
19		15	ಸಾಮಾನ್ಯ	42289	3965
20		17	ಸಾಮಾನ್ಯ	42289	3965
21		18	ಸಾಮಾನ್ಯ	42289	3965
22		21	ಸಾಮಾನ್ಯ	42289	3965

ಮಳಿಗೆ ಸಂಕೀರ್ಣ: ಬಾರ್‌ಲೈನ್ ರೋಡ್ ಮಟನ್ ಸ್ಟಾಲ್ ಮಳಿಗೆ ಸಂಕೀರ್ಣದ ಮಳಿಗೆಗಳು

ಕ್ರ.ಸಂ.	ಹರಾಜು ದಿನಾಂಕ	ಮಳಿಗೆ ಸಂಖ್ಯೆ	ಮೀಸಲಾತಿ	ನಿಗಧಿಪಡಿಸಿದ ಠೇವಣಿ ಮೊತ್ತ ರೂ.	ನಿಗಧಿಪಡಿಸಿದ ಬಾಡಿಗೆ ಮೊತ್ತ ರೂ.
23	ದಿನಾಂಕ: 18-04-2026	3	ಸಾಮಾನ್ಯ	42289	3965
24		11	ಸಾಮಾನ್ಯ	42289	3965
25		12	ಸಾಮಾನ್ಯ	42289	3965
26		13	ಸಾಮಾನ್ಯ	42289	3965
27		16	ಎಸ್.ಸಿ	42289	3965
28		19	ಎಸ್.ಸಿ	42289	3965
29		20	ಸಾಮಾನ್ಯ	42289	3965
30		22	ಸಾಮಾನ್ಯ	42289	3965
31		23	ಅಂಗವಿಕಲ	42289	3965

ಷರತ್ತುಗಳು

1 ಮಹಾನಗರಪಾಲಿಕೆ ಮಾಲೀಕತ್ವದ ಮಳಿಗೆಗಳನ್ನು ಹರಾಜಿನಲ್ಲಿ ಪಡೆದಿರುವ ಮಳಿಗೆ ಬಾಡಿಗೆದಾರರು ಮತ್ತು ಅವಲಂಭಿತ ಕುಟುಂಬ ಸದಸ್ಯರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
2 ಈ ಹಿಂದಿನ ಬಾಡಿಗೆದಾರರು ಮಳಿಗೆ ಬಾಡಿಗೆ ಬಾಕಿ ಉಳಿಸಿಕೊಂಡಿದ್ದಲ್ಲಿ ಅವರಾಗಲೀ ಅಥವಾ ಅವರ ಕುಟುಂಬದ ಸದಸ್ಯರಾಗಲಿ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
3 ಹರಾಜಿನಲ್ಲಿ ಭಾಗವಹಿಸುವವರು ಹರಾಜು ನಡೆಯುವ ಹಿಂದಿನ ದಿನ ಸಂಜೆ 5.00 ಗಂಟೆಯೊಳಗಾಗಿ ವಿವರಿಸಿದಂತೆ ಮುಂಗಡ ಠೇವಣಿ ಮೊತ್ತವನ್ನು ಬ್ಯಾಂಕ್‌ನ ಡಿ.ಡಿ ಮೂಲಕ (ನಗದು/ಚೆಕ್ ಅವಕಾಶವಿರುವುದಿಲ್ಲ) ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ ಇವರ ಹೆಸರಿಗೆ ಪಾವತಿಸಿ ಪಾಲಿಕೆಯ ಮುಖ್ಯ ಕಛೇರಿಯ ಮಳಿಗೆ ಶಾಖೆಯಿಂದ ನೀಡುವ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಟೋಕನ್ ಪಡೆಯತಕ್ಕದು.
4 ಮೀಸಲಾತಿ ಮಳಿಗೆಗಳನ್ನು ಪಡೆಯಲು ಇಚ್ಛಿಸುವವರು (ಪ.ಜಾ/ಪ.ಪಂ ಮತ್ತು ವಿಕಲಚೇತನರು ಅಂದರೆ ಶೇ.50%ಕ್ಕಿಂತ ಹೆಚ್ಚಾಗಿ ಅಂಗವಿಕಲತೆ ಹೊಂದಿರುವವರು) ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ದೃಢೀಕೃತ ಪ್ರಮಾಣ ಪತ್ರವನ್ನು ಹರಾಜಿಗೆ ಮುಂಚಿತವಾಗಿ ಅರ್ಜಿ ನಮೂನೆಯಲ್ಲಿ ಸಲ್ಲಿಸುವುದು. ಸುಳ್ಳು ದಾಖಲೆ ನೀಡಿದಲ್ಲಿ, ಒಂದು ಪಕ್ಷ ಹರಾಜು ಇಸ್ತಿಯಾರ್‌ನಲ್ಲಿ ಯಶಸ್ವಿಯಾಗಿದ್ದರೂ ಮುಂಗಡ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಪಡಿಸಲಾಗುವುದು.
5 ಯಶಸ್ವಿ ಬಿಡ್‌ದಾರರು, ಹರಾಜು ಆದ ದಿನಾಂಕದಿಂದ 02 ವಾರದ ಒಳಗಾಗಿ ಬಾಕಿ ಠೇವಣಿ ಮೊತ್ತವನ್ನು ಪಾವತಿಸತಕ್ಕದ್ದು. ಇಲ್ಲವಾದಲ್ಲಿ ಮುಂಗಡ ಠೇವಣಿ ಮೊತ್ತವನ್ನು ಮುಟ್ಟಗೋಲು ಹಾಕಿಕೊಂಡು ಮರು ಹರಾಜು ಕರೆಯಲಾಗುವುದು.
6 ಮಾನ್ಯ ಜಿಲ್ಲಾಧಿಕಾರಿಗಳಿಂದ ಹರಾಜು ಅನುಮೋದನೆಯಾದ ನಂತರ ಮಹಾನಗರ ಪಾಲಿಕೆಗೆ ಕರಾರು ಪತ್ರವನ್ನು ನೋಂದಣಿ ಮಾಡಿಕೊಡುವುದು ಮತ್ತು ಮಳಿಗೆಯನ್ನು ಹರಾಜಿನಲ್ಲಿ ಪಡೆದ ನಂತರ ಮಳಿಗೆ ಬೇಡವೆಂದು ತಿರಸ್ಕರಿಸುವಂತಿಲ್ಲ. ಇಲ್ಲವಾದಲ್ಲಿ ಮುಂಗಡ ಠೇವಣಿ ಮೊತ್ತವನ್ನು ಮುಟ್ಟಗೋಲು ಹಾಕಿಕೊಂಡು ಮರು ಹರಾಜು ಕರೆಯಲಾಗುವುದು.
7 ಯಶಸ್ವಿ ಬಿಡ್‌ದಾರರು ಅಂತಿಮವಾಗಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಹರಾಜು ಸ್ಥಿರೀಕರಣ ಆದ ನಂತರ ಕರಾರು ಮಾಡಿಕೊಡತಕ್ಕದ್ದು ಹಾಗೂ ಸದರಿಯವರು ಮುಂದೆ ಆಗಿಂದಾಗ್ಗೆ ಸರ್ಕಾರದಿಂದ ಹೊರಡಿಸಬಹುದಾದ ಸುತ್ತೋಲೆಗಳು/ಆದೇಶಗಳನ್ನು ಹಾಗೂ ಮಹಾನಗರಪಾಲಿಕೆ ವಿಧಿಸಬಹುದಾದ ಷರತ್ತುಗಳನ್ನು ಪರಿಪಾಲಿಸಲು ಬದ್ಧರಿರತಕ್ಕದ್ದು. ಮಳಿಗೆಯ ಸುಣ್ಣ-ಬಣ್ಣ, ದುರಸ್ಥಿಗಳನ್ನು ಬಾಡಿಗೆದಾರರೇ ಸ್ವಂತ ಖರ್ಚಿನಿಂದ ಮಾಡಿಸಿಕೊಳ್ಳತಕ್ಕದ್ದು.
8 ಮಳಿಗೆಯ ಬಾಡಿಗೆ ಪರವಾನಗಿ ಗುತ್ತಿಗೆ ಅವಧಿಯು 12 ವರ್ಷಗಳಾಗಿದ್ದು, ಬಿಡ್‌ದಾರರು ಪಾವತಿಸಿದ ಠೇವಣಿ ಮೊತ್ತಕ್ಕೆ ಯಾವುದೇ ರೀತಿಯ ಬಡ್ಡಿ ಪಾವತಿಸಲಾಗುವುದಿಲ್ಲ.
9 ಮಳಿಗೆ ಬಾಡಿಗೆಯು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಾಗೂ ಇನ್ನಿತರೆ ತೆರಿಗೆಗಳನ್ನೊಳಗೊಂಡಿದ್ದು, ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ಬಾಡಿಗೆಯನ್ನು ಪಾವತಿಸತಕ್ಕದ್ದು. ತಪ್ಪಿದಲ್ಲಿ ಪ್ರತಿ ಮಾಹೆಯಾನ ಶೇ.2% ರಷ್ಟುದಂಡ ವಿಧಿಸಲಾಗುವುದು. ಅಲ್ಲದೇ ಪ್ರತಿ 03 ವರ್ಷಗಳಿಗೊಮ್ಮೆ ಶೇ. 10% ರಷ್ಟು ಬಾಡಿಗೆ ಹೆಚ್ಚಿಸುವ ಷರತ್ತಿಗೊಳಪಟ್ಟಿರುತ್ತದೆ. ಮಾರಣಾಂತಿಕ ಖಾಯಿಲೆಯಿಂದ ಕಾಲವತ್ಯಾಸವಾದಲ್ಲಿ ಬಾಡಿಗೆಯಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ.
10 ನಿರಂತರವಾಗಿ 06 ತಿಂಗಳವರೆಗೆ ಬಾಡಿಗೆ ಮೊತ್ತವನ್ನು ಮಹಾನಗರಪಾಲಿಕೆಗೆ ಪಾವತಿಸದಿದ್ದಲ್ಲಿ ಅಥವಾ ಮಳಿಗೆಯನ್ನು ಮರುಗುತ್ತಿಗೆ/ಒಳ ಬಾಡಿಗೆಗೆ ನೀಡಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಕರಾರು ಪತ್ರವನ್ನು ರದ್ದುಪಡಿಸಿ ಮಳಿಗೆಯನ್ನು ಮಹಾನಗರ ಪಾಲಿಕೆಯ ವಶಕ್ಕೆ ಪಡೆದುಕೊಳ್ಳುವ ಅಧಿಕಾರ ಮಹಾನಗರಪಾಲಿಕೆ ಆಯುಕ್ತರು ಕಾಯ್ದಿರಿಸಿಕೊಂಡಿರುತ್ತಾರೆ.
11 ಮಳಿಗೆಯಲ್ಲಿ ಯಾವುದೇ ರೀತಿಯ ಸ್ಫೋಟಕ ವಸ್ತುಗಳು, ಮದ್ಯ, ಮಾಂಸಮಾರಾಟ (ಮಟನ್ ಮಾರ್ಕೆಟ್ ಹೊರತಾಗಿ) ಇತ್ಯಾದಿ ಮಾರಾಟ ಮಾಡತಕ್ಕದ್ದಲ್ಲ ಹಾಗೂ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸತಕ್ಕದ್ದಲ್ಲ. ಅಲ್ಲದೇ ಸಂಬಂಧಿತ ಪ್ರಾಧಿಕಾರಗಳಿಂದ ಪರವಾನಿಗೆ ಪಡೆಯದೇ ವ್ಯಾಪಾರ ವಹಿವಾಟು ಮಾಡುವಂತಿಲ್ಲ.
12 ಮಹಾನಗರ ಪಾಲಿಕೆಯ ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಇತರೆ ಅಧಿಕಾರಿ/ಸಿಬ್ಬಂಧಿ ವರ್ಗದವರು ಯಾವುದೇ ಸಮಯದಲ್ಲಿ ಮುನ್ಸೂಚನೆ ನೀಡದೆ ಮಳಿಗೆಗೆ ಪ್ರವೇಶಿಸಿ ಪರಿಶೀಲನೆ ನಡೆಸುವ ಅಧಿಕಾರ ಹೊಂದಿರುತ್ತಾರೆ.
13 ಮಳಿಗೆಯ ವಿದ್ಯುತ್ ಸಂಪರ್ಕದ ಬಿಲ್ ಮತ್ತು ನೀರಿನ ದರಗಳನ್ನು ಪ್ರತಿ ತಿಂಗಳು ತಪ್ಪದೇ ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಬೇಕು ಹಾಗೂ ಕಟ್ಟಡಕ್ಕೆ ಹೆಚ್ಚುವರಿಯಾಗಿ ವಿದ್ಯುತ್ ಬಳಕೆ ಮಾಡಬೇಕಾದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಮಂಜೂರಾತಿ ಪಡೆದುಕೊಳ್ಳತಕ್ಕದ್ದು.
14 ಮಳಿಗೆಯನ್ನು ನಿರಂತರವಾಗಿ ನಿರ್ವಹಣೆ ಮಾಡತಕ್ಕದ್ದು. ಗೋಡೌನ್ ರೂಪದಲ್ಲಿ ನಿರಂತರವಾಗಿ ಬಾಗಿಲು ಹಾಕಿರುವ ಪ್ರಕರಣ ಕಂಡು ಬಂದಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ, ವಶಕ್ಕೆ ಪಡೆಯಲಾಗುವುದು.
15 ಗುತ್ತಿಗೆ ಅವಧಿಯು ಮುಗಿದ ತಕ್ಷಣವೇ ಮಳಿಗೆಯನ್ನು ಸುಸ್ಥಿತಿಯಲ್ಲಿರುವಂತೆ ಮಹಾನಗರಪಾಲಿಕೆಯ ಸ್ವಾಧೀನಕ್ಕೆ ನೀಡಲು ಅಥವಾ ಒಂದು ವೇಳೆ ಸದರಿ ಮಳಿಗೆಯ ಯಾವುದೇ ಭಾಗ ಶಿಥಿಲಗೊಂಡಿದ್ದಲ್ಲಿ ಖುದ್ದಾಗಿ ಸ್ವಂತ ಖರ್ಚಿನಿಂದ ದುರಸ್ಥಿಪಡಿಸಿ ಮಹಾನಗರಪಾಲಿಕೆ ಸ್ವಾಧೀನಕ್ಕೆ ನೀಡತಕ್ಕದ್ದು.
16 ಮಳಿಗೆಯ ಬಾಡಿಗೆಯನ್ನು ಮಹಾನಗರಪಾಲಿಕೆಗೆ ಬಾಡಿಗೆ ಪಾವತಿಸುವ ಅಥವಾ ಮಳಿಗೆಯನ್ನು ತೆರವುಗೊಳಿಸುವ ಸಂಬಂಧ ಯಾವುದೇ ತಕರಾರು ವ್ಯಕ್ತಪಡಿಸತಕ್ಕದ್ದಲ್ಲ ಮತ್ತು ಯಾವುದೇ ಪರಿಹಾರ ಕೇಳತಕ್ಕದ್ದಲ್ಲ. ಅಲ್ಲದೇ ಈ ಬಗ್ಗೆ ಪಾಲಿಕೆಯ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ದಾವೆ ವಗೈರೆ ಹೂಡುವಂತಿಲ್ಲವೆಂಬ ನಿಬಂಧನೆಗೆ ಬದ್ಧರಿರತಕ್ಕದ್ದು.
17 ಮೇಲ್ಕಾಣಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿರುವುದು ತಿಳಿದು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಬಾಡಿಗೆ ಕರಾರನ್ನು ರದ್ದುಪಡಿಸಿ ಮಳಿಗೆಯನ್ನು ಸ್ವಾಧೀನಕ್ಕೆ ಪಡೆದುಕೊಳ್ಳಲು ಆಯುಕ್ತರು, ಮಹಾನಗರ ಪಾಲಿಕೆ ದಾವಣಗೆರೆ ಇವರು ಅಧಿಕಾರ ಹೊಂದಿರುತ್ತಾರೆ.
18 ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಬಾಡಿಗೆದಾರರು ಸರ್ಕಾರದ ಸುತ್ತೋಲೆಯನ್ವಯ "Right of first Refusal"ನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದ್ದು, ಪೂರ್ಣ ಬಾಕಿ ಬಾಡಿಗೆ ಪಾವತಿಸಿದಲ್ಲಿ ಮಾತ್ರವೇ ಅವಕಾಶ ನೀಡಲಾಗುವುದು. ಆದ್ದರಿಂದ ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವಾಗ ಅಂತಹ ಬಾಡಿಗೆದಾರರಿಗೆ ಸಾಮಾನ್ಯ ಹರಾಜು ಪ್ರಕ್ರಿಯೆಯಲ್ಲಿಅಂತಿಮ ಬಿಡ್ ಮೊತ್ತಕ್ಕೆ "Right of first Refusal" ರಂತೆ ಶೇ 5 ರಷ್ಟು ಹೆಚ್ಚಿಗೆ ನಿಗಧಿಪಡಿಸಿ ಮಳಿಗೆ ಬಾಡಿಗೆ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗುವುದು. ಸದರಿ ಬಿಡ್ ಮೊತ್ತಕ್ಕೆ ಶೇ 5 ರಷ್ಟು ಹೆಚ್ಚಿಗೆ ನಿಗದಿಪಡಿಸಿದ ಬಿಡ್ ಮೊತ್ತವನ್ನು ಪಾವತಿಸಿ ಅಂಗಡಿ ಬಾಡಿಗೆ ಪಡೆಯಲು ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಬಾಡಿಗೆದಾರರು ಒಪ್ಪದಿದ್ದಲ್ಲಿ ಸಾಮಾನ್ಯ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ ಯಶಸ್ವಿಯಾದ ಅಂತಿಮ ಬಿಡ್‌ದಾರರಿಗೆ ಮಳಿಗೆಯನ್ನು ಬಾಡಿಗೆಗೆ ನೀಡುವುದು.

ಹರಾಜಿನ ಷರತ್ತುಗಳನ್ನು ಬದಲಾಯಿಸುವ ಮತ್ತು ರದ್ದುಪಡಿಸುವ ಅಧಿಕಾರ ಮಹಾನಗರಪಾಲಿಕೆ ಆಯುಕ್ತರಿಗೆ ಕಾಯ್ದಿರಿಸಿದೆ.

ವಾಸಾಇ/ದಾವಣಗೆರೆ/820/ಕೆಎಸ್‌ಎಂಸಿಎ/2025-26 ಸಹಿ/- ಆಯುಕ್ತರು, ಮಹಾನಗರ ಪಾಲಿಕೆ ದಾವಣಗೆರೆ

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ನಾನು ವಿಜ್ಞಾನಿ ತರಬೇತಿ ಕಾರ್ಯಾಗಾರದಲ್ಲಿ ಸಂಸದ ಬಿ.ವೈ. ರಾಘವೇಂದ್ರ

ಬಜೆಟ್‌ನಲ್ಲಿ ಆಸ್ಟ್ರೋ-ಟೂರಿಸಂಗೆ ಪ್ರೋತ್ಸಾಹ

ಶಿವಮೊಗ್ಗ: ಕೇಂದ್ರ ಹಣಕಾಸು ಸಚಿವರು 2026-27ನೇ ಸಾಲಿನ ಆಯವ್ಯಯದಲ್ಲಿ ಆಸ್ಟ್ರೋ-ಟೂರಿಸಂ (ಖಗೋಳ ಪ್ರವಾಸೋದ್ಯಮ) ಪ್ರೋತ್ಸಾಹಿಸಲು ವಿಶೇಷ ಯೋಜನೆ ಘೋಷಿಸಿದ್ದಾರೆ. ಇದು ಕೇವಲ ಪ್ರವಾಸೋದ್ಯಮವಲ್ಲ, ನಮ್ಮ ಯುವ ಪೀಳಿಗೆಗೆ ವಿಜ್ಞಾನ ಮತ್ತು ಬ್ರಹ್ಮಾಂಡದ ಅರಿವು ಮೂಡಿಸುವ ಒಂದು ಮಹತ್ವದ ಹೆಜ್ಜೆಯಾಗಿದೆ ಎಂದು ಸಂಸದ ಬಿ.ವೈ. ರಾಘವೇಂದ್ರ ತಿಳಿಸಿದರು.

ಜಿಲ್ಲಾ ಪಂಚಾಯಿತಿ ವತಿಯಿಂದ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ಗ್ರಂಥಾಲಯ ಮೇಲ್ವಿಚಾರಕರಿಗಾಗಿ ಮಲ್ಲಿಗೇನಹಳ್ಳಿಯ ಸನ್ನಿಧಿ ಸೆಂಟರ್ ಫಾರ್ ಪ್ಯಾಸ್ಟರಲ್ ರಿನಿವಲ್ ಚರ್ಚ್‌ನಲ್ಲಿ ಏರ್ಪಡಿಸಿದ್ದ ನಾನು ವಿಜ್ಞಾನಿ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಇಂದು ಮಾನಸಿಕವಾಗಿ ಮೊಬೈಲ್ ಮತ್ತು ಆನ್‌ಲೈನ್ ವ್ಯಾಮೋಹಕ್ಕೆ ಒಳಗಾಗಿದ್ದಾರೆ. 2030 ರವೇಳೆಗೆ ನಮ್ಮ ದೇಶದ ಶೇ.65 ರಷ್ಟು ಯುವ ಪೀಳಿಗೆ ಮೊಬೈಲ್ ಬಳಕೆಯಿಂದ ಮಾನಸಿಕ ಅಸಮತೋಲನ ಎದುರಿಸಲಿದ್ದು, ಮುಂದಿನ ದಿನಗಳಲ್ಲಿ ಅವರುಗಳಿಗೆ ಮಾನಸಿಕ ತೊಳಲಾಟದಿಂದ ಹೊರಬರಲು ನರರೋಗ ತಜ್ಞರು ಮತ್ತು ಮಾನಸಿಕ ವೈದ್ಯರ ಅವಶ್ಯಕತೆ ಇದೆ. ಅಂಕಿ ಅಂಶಗಳ ಪ್ರಕಾರ ಮಾನಸಿಕ ಮತ್ತು ನರರೋಗ ತಜ್ಞರು 2 ಲಕ್ಷ ಜನಕ್ಕೆ ಒಬ್ಬರಂತೆ ಇರುವುದನ್ನು ಗಮನಿಸಬಹುದಾಗಿದೆ ಎಂದರು.



ವಿದ್ಯಾರ್ಥಿಗಳಲ್ಲಿನ ವೈಜ್ಞಾನಿಕ ಮತ್ತು ಶೈಕ್ಷಣಿಕ ಪ್ರತಿಭೆಯ ಅನಾವರಣಕ್ಕೆ ಇದು ಸೂಕ್ತ ವೇದಿಕೆಯಾಗಿದೆ. ಗ್ರಾಮೀಣ ಗ್ರಂಥಾಲಯ-ಜ್ಞಾನ ಕೇಂದ್ರಗಳನ್ನು ವಿಜ್ಞಾನ ಕಲಿಕೆಯ ಕೇಂದ್ರಗಳನ್ನಾಗಿ ಪರಿವರ್ತಿಸುವ ಇಂತಹ ಕಾರ್ಯಗಳಿಂದ ಗ್ರಾಮೀಣ ಯುವ ಪೀಳಿಗೆಯು ವಿಜ್ಞಾನದ ಕಡೆಗೆ ಹೆಚ್ಚು ಆಸಕ್ತಿ ಹೊಂದುವಂತಾಗಲಿ ಎಂದು ಹೇಳಿದರು.

ಜಿಪಂ ಸಿಇಒ ಹೇಮಂತ್ ಎನ್‌ಮಾತನಾಡಿ, ನಮ್ಮ ಊರು ನಮ್ಮ ಬೇರು ಎಂಬ ತತ್ವವನ್ನು ಇಟ್ಟುಕೊಂಡು ಇಂದು ಜಿಲ್ಲೆಯ ಗ್ರಂಥಪಾಲಕರು ಹವ್ಯಾಸಿ ವಿಜ್ಞಾನಿಗಳಾಗಿ ನಾನು ವಿಜ್ಞಾನಿ ಎಂಬ ವಿಜ್ಞಾನ ಮತ್ತು ಖಗೋಳ ವಿಜ್ಞಾನ ಕಾರ್ಯಾಗಾರವನ್ನು ಯಶಸ್ವಿಯಾಗಿ ಆರಂಭಿಸುವ ಮೂಲಕ ವೈಜ್ಞಾನಿಕ ಮನೋಭಾವವನ್ನು ಬೆಳೆಸುವಲ್ಲಿ ಪ್ರಮುಖ ಹೆಜ್ಜೆ ಇಡಲಾಗಿದೆ ಎಂದು ತಿಳಿಸಿದರು.

ಈ ಪ್ರಾಯೋಗಿಕ ಅನುಭವದಲ್ಲಿ ಗ್ರಂಥಾಪಾಲಕರು ತಮ್ಮದೇ ಆದ ದೂರದರ್ಶಕಗಳನ್ನು ವಿನ್ಯಾಸಗೊಳಿಸಿ ತಯಾರಿಸಿದ್ದಾರೆ. ಇವುಗಳ ಮೂಲಕ ಗ್ರಹಗಳು ಮತ್ತು ಉಪ ಗ್ರಹಗಳನ್ನು ವೀಕ್ಷಿಸಬಹುದು ಎಂದು ಹೇಳಿದರು. ಮುಂದಿನ ಭವಿಷ್ಯದ ಭಾಗವಾಗಿ ಶಿವಮೊಗ್ಗ ಜಿಲ್ಲೆಯಾದ್ಯಂತ ವಿಜ್ಞಾನ ಕ್ಲಬ್‌ಗಳನ್ನು ಸ್ಥಾಪಿಸಲಾಗುವುದು. ವಿದ್ಯಾರ್ಥಿಗಳು ಮತ್ತು ಗ್ರಾಮೀಣ ಸಮುದಾಯಗಳು ಬ್ರಹ್ಮಾಂಡದ ಅದ್ಭುತಗಳನ್ನು ಅನ್ವೇಷಿಸಲು ಮತ್ತು ವೈಜ್ಞಾನಿಕ ಕುತೂಹಲವನ್ನು ಬೆಳೆಸಲು ಮಾರ್ಗದರ್ಶನ ನೀಡುತ್ತಾರೆ ಎಂಬ ಭರವಸೆಯನ್ನು ವ್ಯಕ್ತಪಡಿಸಿದರು.


ಕಾರ್ಯಕ್ರಮದಲ್ಲಿ ಸನ್ನಿಧಿ ಸೆಂಟರ್ ಫಾರ್ ಪ್ಯಾಸ್ಟರಲ್ ರಿನೀವಲ್ ಚರ್ಚ್ ಮುಖ್ಯಸ್ಥ ಫಾ. ಪಿಂಟೋ, ಜಿ.ಪಂ ಉಪ ಕಾರ್ಯದರ್ಶಿ ಸುಜಾತ, ವಿಜ್ಞಾನಿಗಳು, ಗ್ರಂಥಪಾಲಕರು ಉಪಸ್ಥಿತರಿದ್ದರು.

> **ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಅವರು ಸಹ ರಾಮೇಶ್ವರಂನ ಒಂದು ಚಿಕ್ಕ ಹಳ್ಳಿಯಿಂದ ಬೆಳೆದು ಬಂದು ವಿಜ್ಞಾನ ಕಡೆಗೆ ಹೆಚ್ಚು ಆಸಕ್ತಿ ಹೊಂದಿ ಹಲವಾರು ಕೊಡುಗೆಗಳನ್ನು ದೇಶಕ್ಕೆ ನೀಡಿ ದೇಶದ ಉನ್ನತ ಹುದ್ದೆಯನ್ನು ಅಲಂಕರಿಸಿದರು.**
> ■ ಬಿ.ವೈ. ರಾಘವೇಂದ್ರ, ಸಂಸದ

ಲೋಕಸಭೆಯಲ್ಲಿ ಸಂಸದ ಬಿ.ವೈ. ರಾಘವೇಂದ್ರ ಪ್ರಸ್ತಾಪ

ರೈಲ್ವೆ ಮಾರ್ಗಗಳ ಅನುಷ್ಠಾನಕ್ಕೆ ಆಗ್ರಹ

ಶಿವಮೊಗ್ಗ: 2026-27ರ ಕೇಂದ್ರ ಬಜೆಟ್‌ನಲ್ಲಿ ರೈಲ್ವೆ ಇಲಾಖೆ ಬೇಡಿಕೆಗಳ ಕುರಿತು ಲೋಕಸಭೆಯಲ್ಲಿ ಸೋಮವಾರ ಸಂಸದ ಬಿ.ವೈ. ರಾಘವೇಂದ್ರ ಪ್ರಸ್ತಾಪಿಸಿದರು.



ಹೊಸ ರೈಲ್ವೆ ಮಾರ್ಗಗಳಾದ ಮಲೆನಾಡು ಮತ್ತು ಕರಾವಳಿ ಯನ್ನು ಸಂಪರ್ಕಿಸುವತಾಳಗುಪ್ಪ-ಹೊನ್ನಾವರ, ಶಿವಮೊಗ್ಗ- ತೀರ್ಥಹಳ್ಳಿ- ಶೃಂಗೇರಿ- ಮಂಗಳೂರು ಹಾಗೂ ಶಿವಮೊಗ್ಗ- ಚಿಕ್ಕಮಗಳೂರು ಮಾರ್ಗಗಳ ಅನುಷ್ಠಾನಕ್ಕೆ ಆಗ್ರಹಿಸಿದರು.

ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರು ಯೋಜನೆ: ಈ ಯೋಜನೆಯ ಶಿಕಾರಿಪುರ-ರಾಣೆಬೆನ್ನೂರು ನಡುವಿನ ಟೆಂಡರ್ ಪ್ರಕ್ರಿಯೆಯನ್ನು ಕೂಡಲೇ ಆರಂಭಿಸಲು ಮತ್ತು ಕಾಮಗಾರಿಯನ್ನು ತ್ವರಿತಗೊಳಿಸಲು ಕೋರಿದರು.

ಕೋಟೆಗಂಗೂರು ಟರ್ಮಿನಲ್: ಶಿವಮೊಗ್ಗವನ್ನು ಪ್ರಮುಖ ರೈಲ್ವೆ ಹಬ್ ಆಗಿ ರೂಪಿಸಲು ಕೋಟೆಗಂಗೂರು ಕೋಚಿಂಗ್ ಟರ್ಮಿನಲ್‌ನ 2ನೇ ಹಂತದ ಕಾಮಗಾರಿಗೆ (ಪಿಟ್ ಲೈನ್ ಮತ್ತು ಕೋಚ್ ವಾಷಿಂಗ್ ಪ್ಲಾಂಟ್) ಆದ್ಯತೆ ನೀಡುವಂತೆ ಒತ್ತಾಯಿಸಿದರು.

ಬೀರೂರು-ಶಿವಮೊಗ್ಗ ರೈಲ್ವೆ ದ್ವಿಪಥ: ಶಿವಮೊಗ್ಗ ಮತ್ತು ಬೆಂಗಳೂರು ನಡುವೆ ವೇಗದ ಸಂಪರ್ಕಕ್ಕಾಗಿ 63 ಕಿ.ಮೀ ದ್ವಿಪಥ ಯೋಜನೆಗೆ ಶೀಘ್ರ ಆಡಳಿತಾತ್ಮಕ ಅನುಮೋದನೆ ನೀಡಲು ಮನವಿ ಮಾಡಿದರು.

ಕರ್ನಾಟಕಕ್ಕೆ ಐತಿಹಾಸಿಕ ಅನುದಾನ: 2014ಕ್ಕೂ ಮೊದಲು ಸರಾಸರಿ 835 ಕೋಟಿ ಪಡೆಯುತ್ತಿದ್ದ ಕರ್ನಾಟಕಕ್ಕೆ ಈ ಬಜೆಟ್‌ನಲ್ಲಿ ದಾಖಲೆಯ 7,748 ಕೋಟಿ ಅನುದಾನ ಲಭಿಸಿದೆ. ಇದು ಶೇ. 900 ರಷ್ಟು (9 ಪಟ್ಟು) ಹೆಚ್ಚಳವಾಗಿದೆ.

ಈ ರೈಲ್ವೆ ಯೋಜನೆಗಳು ನಮ್ಮ ಮಲೆನಾಡಿನ ಪರಿಸರ ಪ್ರವಾಸೋದ್ಯಮ, ಅಧ್ಯಾತ್ಮಿಕ ಪ್ರವಾಸೋದ್ಯಮ ಮತ್ತು ಆರ್ಥಿಕತೆಯನ್ನು ಬಲಪಡಿಸಲಿವೆ. ವಿಕಸಿತ ಶಿವಮೊಗ್ಗದ ಮೂಲಕ ವಿಕಸಿತ ಭಾರತ ನಿರ್ಮಾಣ ಮಾಡುವುದು ನಮ್ಮ ಸಂಕಲ್ಪ ಎಂದು ತಿಳಿಸಿದರು.

ವಸತಿ ಸಚಿವರ ಸಭೆಯಲ್ಲಿ ಶಾಸಕ ಎಸ್.ಎನ್. ಚನ್ನಬಸಪ್ಪ ಮನವಿ

ಹಕ್ಕುಪತ್ರ ತಾಂತ್ರಿಕ ಅಡಚಣೆ ನಿವಾರಿಸಿ

ಶಿವಮೊಗ್ಗ : ನಗರದ 6 ಘೋಷಿತ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲು ಇರುವ ತಾಂತ್ರಿಕ ಅಡೆತಡೆಗಳನ್ನು ತಕ್ಷಣ ನಿವಾರಿಸುವಂತೆ ಶಾಸಕ ಎಸ್.ಎನ್. ಚನ್ನಬಸಪ್ಪ ವಸತಿ ಸಚಿವರಿಗೆ ಒತ್ತಾಯಿಸಿದರು.



ಇತ್ತೀಚೆಗೆ ನಡೆದ ಅಧಿವೇಶನದಲ್ಲಿ ಶಾಸಕ ಚನ್ನಬಸಪ್ಪ ಈ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದರು. ಈ ಹಿನ್ನೆಲೆಯಲ್ಲಿ ಸಭಾಧ್ಯಕ್ಷರ ಸೂಚನೆಯಂತೆ ಸೋಮವಾರ ವಿಧಾನಸೌಧದಲ್ಲಿ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ನೇತೃತ್ವದಲ್ಲಿ ವಿಶೇಷ ಸಭೆ ನಡೆಯಿತು. ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯ ಖರಾಬು ಕಟ್ಟೆ, ಕೆರೆ ಅಂಗಳ ಹಾಗೂ ಸರ್ಕಾರಿ ಜಮೀನು ಗಳಲ್ಲಿ ದಶಕಗಳಿಂದ ನೆಲೆಸಿರುವ ಕುಟುಂಬಗಳಿಗೆ ಕಾನೂನುಬದ್ಧ ಭದ್ರತೆ ಒದಗಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು.

ಸಭೆಯಲ್ಲಿ ಉಪಸ್ಥಿತರಿದ್ದ ಶಿವಮೊಗ್ಗ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಅವರು, ಜಮೀನು ಲಭ್ಯತೆ ಮತ್ತು ವರ್ಗಾವಣೆ ಪ್ರಕ್ರಿಯೆಯಲ್ಲಿರುವ ಕಾನೂನು ತೊಡಕುಗಳ ಬಗ್ಗೆ ಸಚಿವರಿಗೆ ಮನವರಿಕೆ ಮಾಡಿಕೊಟ್ಟರು. ಆಶ್ರಯ ಯೋಜನೆಯಡಿ ಮನೆಗಳ ನಿರ್ಮಾಣ ಮತ್ತು ಹಕ್ಕುಪತ್ರ ವಿತರಣೆಗೆ ಆದ್ಯತೆ ನೀಡುವಂತೆ ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು.

ವಸತಿ ಇಲಾಖೆಯ ರಾಜ್ಯ ಮಟ್ಟದ ಅಧಿಕಾರಿಗಳು ಹಾಗೂ ಕೊಳಗೇರಿ ಮಂಡಳಿಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಬಡವರಿಗೆ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಬದ್ಧವಾಗಿರಬೇಕು ಎಂದು ಮನವಿ ಮಾಡಿದರು.

ವಿಧಾನ ಪರಿಷತ್‌ನಲ್ಲಿ ಸದಸ್ಯ ಡಿ.ಎಸ್. ಅರುಣ್ ಒತ್ತಾಯ

ಕುವೆಂಪು ವಿವಿ ವಿರುದ್ಧ ಆರೋಪ: ಸರ್ಕಾರ ಮಧ್ಯಪ್ರವೇಶಿಸಲಿ

ಶಿವಮೊಗ್ಗ : ಕುವೆಂಪು ವಿಶ್ವವಿದ್ಯಾಲಯದ ಆಡಳಿತದಲ್ಲಿ ಉಂಟಾಗಿರುವ ಗೊಂದಲಗಳು ಹಾಗೂ ಕುಲಸಚಿವರ ವಿರುದ್ಧ ಕೇಳಿಬರುತ್ತಿರುವ ಭ್ರಷ್ಟಾಚಾರ ಆರೋಪಗಳ ಬಗ್ಗೆ ರಾಜ್ಯ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಬೇಕು ಎಂದು ಪರಿಷತ್ ಸದಸ್ಯ ಡಿ.ಎಸ್.ಅರುಣ್ ಒತ್ತಾಯಿಸಿದರು.



ವಿಧಾನ ಪರಿಷತ್ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಮಲೆನಾಡು ಭಾಗದ ಹಾಗೂ ಶಿವಮೊಗ್ಗ ಜಿಲ್ಲೆಯ ಹೆಮ್ಮೆಯಾಗಿರುವ ಕುವೆಂಪು ವಿಶ್ವವಿದ್ಯಾಲಯ ಗೌರವ ಮತ್ತು ಘನತೆಗೆ ಧಕ್ಕೆಯಾಗುವಂತಹ ಬೆಳವಣಿಗೆ ನಡೆದಿದೆ. ಕುವೆಂಪು ವಿಶ್ವವಿದ್ಯಾಲದ ಕುಲಸಚಿವರ ವಿರುದ್ಧ ವಿವಿಧ ಹಗರಣಗಳು ಭ್ರಷ್ಟಾಚಾರ ಮತ್ತು ಕರ್ತವ್ಯ ಲೋಪದಂತಹ ಗಂಭೀರ ಆರೋಪಗಳು ಕೇಳಿಬಂದಿರುವುದು ಅತ್ಯಂತ ಚಿಂತಾಜನಕ ವಿಷಯ. ಅಲ್ಲದೆ, ಕುಲಸಚಿವರು ಹಾಗೂ ಕುಲಪತಿಗಳ ನಡುವೆ ಹೊಂದಾಣಿಕೆ ಕೊರತೆ ಇರುವುದು ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆ ಮತ್ತು ಶೈಕ್ಷಣಿಕ ವಾತಾವರಣದ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಆತಂಕ ವ್ಯಕ್ತಪಡಿಸಿದರು.

ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಕುವೆಂಪು ವಿಶ್ವವಿದ್ಯಾಲಯದ ಘನತೆ ಮತ್ತು ವಿಶ್ವಾಸವನ್ನು ಕಾಪಾಡುವುದು ಅತ್ಯಂತ ಅಗತ್ಯವಾಗಿದೆ. ಯಾವುದೇ ರೀತಿಯ ಗೊಂದಲ ಮತ್ತು ಆರೋಪಗಳು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಶಿಕ್ಷಣ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುವುದನ್ನು ತಪ್ಪಿಸಲು ರಾಜ್ಯ ಸರ್ಕಾರ ತಕ್ಷಣ ಸ್ಪಷ್ಟ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಿಷಯದ ಕುರಿತು ಉನ್ನತ ಶಿಕ್ಷಣ ಸಚಿವರು ತಕ್ಷಣ ಗಮನ ಹರಿಸಿ, ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಜೊತೆಗೆ ವಿಶ್ವವಿದ್ಯಾಲಯದ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಶಿಸ್ತನ್ನು ಕಾಪಾಡಿ ಸಂಸ್ಥೆಯ ಗೌರವವನ್ನು ಉಳಿಸಬೇಕೆಂದು ಒತ್ತಾಯಿಸಿದರು.

ಉನ್ನತ ಶಿಕ್ಷಣ ಸಚಿವರು ಪ್ರತಿಕ್ರಿಯಿಸಿ, ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ತಕ್ಷಣ ಅಗತ್ಯ ಕ್ರಮ ಕೈಗೊಂಡು ಸಂಬಂಧಿಸಿದ ಅಧಿಕಾರಿಯನ್ನು ವರ್ಗಾವಣೆ ಮಾಡಲು ನಿರ್ದೇಶನ ನೀಡುತ್ತೇನೆ ಎಂದು ಭರವಸೆ ನೀಡಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಶಿವಮೊಗ್ಗ : ಇನ್ನರ್‌ವ್ಹೀಲ್ ಶಿವಮೊಗ್ಗ ಉತ್ತರದ ವತಿಯಿಂದ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ತಮ್ಮ ಜೀವನದಲ್ಲಿ ಸಾಧನೆಗೈದ ಹಾಗೂ ನಿಸ್ವಾರ್ಥ ಸೇವೆ ಸಲ್ಲಿಸಿದ ಸ್ತ್ರೀ ರೋಗ ತಜ್ಞೆ ಡಾ. ವಿಮಲಾ ಬಾಯಿ, ಮಹಿಳೆಯರನ್ನು ಆರ್ಥಿಕವಾಗಿ ಸದೃಢ ಮಾಡಿದ ಶಿವಲೀಲಾ ಮತ್ತು ಕುಟುಂಬವು ಆರ್ಥಿಕವಾಗಿ ಕುಸಿದಾಗ ತಮ್ಮ ಅಡುಗೆಯ ದುಡಿಮೆಯಿಂದ ಕುಟುಂಬಕ್ಕೆ ಆಸರೆಯಾದ ಆಶಾ ಎ ಕಿಣಿ ಅವರ ಸಾಧನೆ ಗುರುತಿಸಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಮಹಿಳೆಯರಿಗೆ ಫ್ಯಾಷನ್ ಶೋ ಮತ್ತು ಸಾಂಪ್ರದಾಯಿಕ ಧಿರಿಸು ಧರಿಸುವ ಸ್ಪರ್ಧೆ ಏರ್ಪಡಿಸುವ ಮೂಲಕ ಅನೇಕ ವಿನೋದದ ಆಟಗಳನ್ನು ಆಡಿಸಿ, ವಿಜೇತರಿಗೆ ಬಹುಮಾನ ನೀಡಲಾಯಿತು.

ಶಾಂತಾ ಶೆಟ್ಟಿಗೆ ವೀರ ವನಿತೆ ಪ್ರಶಸ್ತಿ

ಶಿವಮೊಗ್ಗ: ಹಲವಾರು ಸಂಘ ಸಂಸ್ಥೆಯಲ್ಲೇ ನಿಸ್ವಾರ್ಥವಾಗಿ ಸಮಾಜಮುಖಿಯಾಗಿ ಸೇವೆ ಸಲ್ಲಿಸುತ್ತಿರುವ ಕಲಾವಿದೆ, ನಿರೂಪಕಿ ಹಾಗೂ ಚಿರಂತನ ಯೋಗ ಸಂಗೀತ ಟ್ರಸ್ಟ್ ಸಂಸ್ಥಾಪಕಿ ಶಾಂತಾ ಶೆಟ್ಟಿ ಅವರಿಗೆ ಬೆಂಗಳೂರಿನ ಹೈದರ್ ಪಾರ್ಕ್ ಹೋಟೆಲ್‌ನಲ್ಲಿ ಪ್ರತಿಷ್ಠಿತ ಚಿತ್ರಸಂತೆ ಸಂಸ್ಥೆ ವತಿಯಿಂದ ಸಾಮಾಜಿಕ ಸೇವೆಗಾಗಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಪಾರಿತೋಷಕ ಹಾಗೂ ಪ್ರಶಸ್ತಿ ಪತ್ರವನ್ನು ಚಲನಚಿತ್ರ ನಟಿ ತಾರಾ ಹಾಗೂ ಗಿರೀಶ್ ಗೌಡ ಮತ್ತು ಚಿತ್ರಸಂತೆ ತಂಡದವರು ನೀಡಿ ಗೌರವಿಸಿದರು.

